1959


...ಇಂಡಸ್ಟ್ರಿಯಲ್ಸ್ ಎಂಡ್ ಬಿಜ್ನೆಸ್
ಮಂಗಳೂರು ೧. ದ. ಕ.

ಅಮ್ಮೆಂಬಳ ಶಂಕರ ನಾರಾಯಣ ನಾವಡ

[illegible]

[illegible]
[illegible]

ಪರಾಮರ್ಶೆಗಾಗಿ



ಎದೆಯ ಹೊಲವಿದ ಗೇದು ಹಸನಿಸಿ
ವಿದಿತ ವಾಙ್ಮಯದಮರ ಬೀಜವ
ಮೊದಲು ಬಿತ್ತಿದೆ ಪಿತನೆ ಪುಣ್ಯ ಪುರಾಣ *ಪ್ರವಚನದಿ
ಉದಕವೆರೆದರು ಗುರುಗಳೆನಿಬರೊ
ಸದಯರವರಿಗೆ ನಮಿಸಿ ಬೆಳಸಿನ
ಮೊದಲ ಕದಿರಿದ ಪಿತನೆ ನಿನ್ನಯ ಪದಕೆ ಅರ್ಪಿಸುವೆ.

To Sri. Ammembala Shankaranarayana Navada
With the best Compliments of the Author + the publishers
Sd/–

ಶ್ರೀ ರಾಮಾಶ್ವಮೇಧದ

ರಸತರಂಗಗಳು

ಏರ್ಯ ಲಕ್ಷ್ಮೀನಾರಾಯಣ ಆಳ್ವ

1959

ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್
ಮಂಗಳೂರು ೧. ದ. ಕ.

ಮೊದಲನೆಯ ಮುದ್ರಣ. ೧೦೦೦

ಬೆಲೆ: ಸಾಮಾನ್ಯ ಪ್ರತಿ ರೂ. 2=25.
ಉತ್ತಮ ಪ್ರತಿ ರೂ. 3=00.

PRINTED AT THE BASEL MISSION PRESS, MANGALORE

ಮುನ್ನುಡಿ

ನಮ್ಮಲ್ಲಿ ಮದುಮಗನಿಗೆ ಮುಂಡಾಸು ಕಟ್ಟುವುದು ಸಮೀಪಬಂಧುಗಳ ಮರ್ಯಾದೆ. ಮಿತ್ರ ಶ್ರೀ ಆಳ್ವರು ನನಗೆ ಆ ಸ್ಥಾನವನ್ನು ಕೊಟ್ಟು ಗೌರವಿಸಿ, ನನ್ನಲ್ಲಿ ಅವರಿಗಿರುವ ಆತ್ಮೀಯತೆಯನ್ನು ಪ್ರಕಟಿಸಿದ್ದಾರೆ. ಇದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಈ ಕಸಬಿನಲ್ಲಿ ನೈಪುಣ್ಯವಂತಿರಲಿ, ಒಂದಿಷ್ಟು ಪೂರ್ವಾಭ್ಯಾಸವೂ ಇಲ್ಲದವನು ನಾನಾದರೂ, ಈ ಚೆಲುವಿನ ದಿಬ್ಬಣವು ಹೊರಡುತ್ತಿರುವ ಶುಭಗಳಿಗೆಯಲ್ಲಿ ಒಲ್ಲೆನೆಂಬ ಅಪಸ್ವರವನ್ನು ನುಡಿಯಲಾರದೆ, ಕೈಬೆವರೊರಸತೊಡಗಿದ್ದೇನೆ. ಈ ಅಂಜಿಕೆಯೊಳಗೂ ನನಗೆ ಧೈರ್ಯವನ್ನು ಕೊಡುತ್ತಿರುವುದು ಯಾವುದೆಂದರೆ— ಈ ರೂಪದ ಈ ಗುಣದ ಈ ಸಿರಿಯ ವರನಿಗೆ, ಮುಂಡಾಸು ಹೇಗಾದರೂ, ಕನ್ನಡ ಬಾಂಧವರ ಸಂಭ್ರಮದ ಸ್ವಾಗತವು ದೊರೆತೇ ದೊರೆಯುತ್ತದೆ; ಮತ್ತು ಅದಕ್ಕಿಂತ ಮೇಲಾಗಿ ಕನ್ನಡ ವಧುವಿನ ಗಾಢಪ್ರೇಮವು ಮೀಸಲಾಗಿ ಕಾದು ಕುಳಿತಿದೆ ಎಂಬ ಪೂರ್ಣ ಭರವಸೆ.

ಕಾವ್ಯವಿಮರ್ಶೆ ಅಥವಾ ಸಮಾಲೋಚನೆ ಎಂಬ ಸಾಹಿತ್ಯರಚನೆ ನಮ್ಮ ಮಟ್ಟಿಗೆ ಇತ್ತೀಚೆಯದು ಎಂದರೆ ತಪ್ಪಾಗಲಾರದು. ಈ ಶತಕದ ಆರಂಭದಲ್ಲಿ ವಿಮರ್ಶೆ ಎಂದರೆ ಕಾವ್ಯದ ರೂಪರೇಖೆಯ ಪರಿಚಯ, ಪರಂಪರಾಗತ ಲಕ್ಷಣ ಲಕ್ಷ್ಯ ಸಮನ್ವಯ, ಕೆಲವು ಅಲಂಕಾರ ಸರಸೋಕ್ತಿಗಳ ಉದ್ಧರಣ, ರಸೋಜ್ವಲ ಸ್ಥಾನಗಳ ನಿರ್ದೇಶನ, ಕೊನೆಗೆ ಒಂದೆರಡು ಪ್ರಶಂಸೆಯ ಮುದ್ರೆಗಳು— ಅದು ಕೂಡ ಕಟ್ಟಳೆಯ ಕೆಲವು ಕಟ್ಟುನುಡಿಗಳಲ್ಲಿ. ಉದಾ:— ಮೃದುಪದಪುಂಜರಂಜಿತವಾಗಿಯೂ ನಿರರ್ಗಳವಾಗಿಯೂ ಗಂಭೀರವಾಗಿಯೂ ದೇಶ್ಯಪದಭೂಯಿಷ್ಠವಾಗಿಯೂ ಇತ್ಯಾದಿ. ಇಷ್ಟರಲ್ಲಿ ವಿಮರ್ಶೆ ಸಫಲವೆಂದೆನಿಸುತ್ತಿತ್ತು.

ಕಾಲ ಬದಲಾಯಿತು. ಹೊಸ ವಿಮರ್ಶಕರು ತಲೆಯೆತ್ತಿದರು. ಹೊಸ ಬರವಣಿಗೆಗಳನ್ನು ಮೆಚ್ಚಿ ಸಾವಯವವಾಗಿ ಕೊಂಡಾಡಲು ಮುದ್ದುಮುದ್ದಾದ ನುಡಿಗಳನ್ನು ಬಳಸಿದರು:— ನಯ, ಬಲ, ಓಟ, ಸೆಳ್ತೆ, ನಿರಿಗೆ, ಇಂಪು, ತಂಪು, ಸೊಂಪು; ಓಘ, ವೀರ್ಯ— ಇತ್ಯಾದಿ. ಆದರೆ ವಿಮರ್ಶೆಯ ಲಕ್ಷ್ಯದಲ್ಲಿ ಮೂಲಭೂತವಾದ ಬದಲಾವಣೆ ಬಹುಕಾಲದ ವರೆಗೆ ಕಂಡುಬರಲಿಲ್ಲ.

ಅದೇನು ಕರ್ಮಧರ್ಮ ಸಂಯೋಗವೋ! ಹೊಸಗನ್ನಡ ಕುಂತೀದೇವಿ ಹೆತ್ತ ಕರ್ಣ ಮುದ್ದಣ ಹೇಗೆ ನವಯುಗದ ಚೊಚ್ಚಲ ಕಾವ್ಯವನ್ನು ಬರೆಯು

ವಂತಾಯಿತೋ, ಹಾಗೆಯೇ ಅವನ ಕುರಿತು ಸಹೃದಯರು ಬರೆದು ಪ್ರಕಟಿಸಿದ 'ಮುದ್ದಣ' ಎಂಬ ಪುಸ್ತಕವು ನವವಿಮರ್ಶೆಯ ಮಾರ್ಗವನ್ನು ಕನ್ನಡನಾಡಿಗೆಲ್ಲ ತೋರಿಸಿ ಕೊಡುವಂತಾಯಿತು. ಅದಕ್ಕೆ ಮೊದಲು ಆ ಮಾದರಿಯ ವಿಮರ್ಶೆ ಅಲ್ಲೊಂದು ಇಲ್ಲೊಂದು ಎಸಳು ಬಿಟ್ಟಿರಬಹುದು, ಇಲ್ಲವೆಂದಲ್ಲ; ಆದರೆ ಅವು ಒಂದು ಗೊಂಚಲಾಗಿ ಅರಳಿ ಕನ್ನಡದ ಕಣ್ಮನಗಳನ್ನು ಅಪಹರಿಸಿರಲಿಲ್ಲ. ಅಲ್ಲಿಂದ ವಿಮರ್ಶೆಯ ಹೊಸಕಾಲ ಆರಂಭವಾಯಿತೆನ್ನಬಹುದು.

ಈ ಹೊಸ ವಿಮರ್ಶನಪದ್ಧತಿಯಲ್ಲಿ ಕನ್ನಡ ಜನ ಕಂಡುಕೊಂಡ ಅಪೂರ್ವವಾದ ವಿಶೇಷವೆಂದರೆ—ಕಾವ್ಯವನ್ನೂ ಕವಿಯನ್ನೂ ಒಟ್ಟಿಗೆ ಕಾಣುವ ಪ್ರಯತ್ನ; ಎಂದೋ ಕಣ್ಮರೆಯಾದ ಆ ಕಲಾಪುರುಷನ ಆತ್ಮೀಯ ಸಹವಾಸ.

ಮತ್ತೆ ಕಾಲಿಟ್ಟಿತು 'ಪ್ರಶಸ್ತಿ' ಗಳ ಯುಗ: ರನ್ನಪ್ರಶಸ್ತಿ, ಲಕ್ಷ್ಮೀಶಪ್ರಶಸ್ತಿ, ಕುಮಾರವ್ಯಾಸ ಪ್ರಶಸ್ತಿ ಇತ್ಯಾದಿ. ಕನ್ನಡ ಕವಿಕುಲ ಗುರುವೆಂದು ಕೀರ್ತಿಸಲ್ಪಡುವ ಪಂಪನಿಗಾಗಿ 'ನಾಡೋಜಪಂಪ' ಎಂಬ ಸ್ವತಂತ್ರ ಗ್ರಂಥವೇ ಬರೆಯಲ್ಪಟ್ಟಿತು. ಇವೆಲ್ಲವುಗಳಿಂದಾಗಿ ಆದ ಕೆಲವು ಹಿತಾಹಿತ ಪರಿಣಾಮಗಳು:—ಒಬ್ಬ ಕವಿಯ ಎಲ್ಲ ರಚನೆಗಳನ್ನು ಸಮಗ್ರವಾಗಿ ಅಭ್ಯಾಸ ಮಾಡುವ, ಪರಾಮರ್ಶಿಸುವ, ಬೆಲೆಗಟ್ಟುವ ಪ್ರಯತ್ನ; ಕಾವ್ಯದಲ್ಲಿ ಕವಿಯನ್ನು ಕಾಣುವ ಪ್ರಯತ್ನದ ಫಲವಾಗಿ ಕವಿಗೂ ಕಾವ್ಯಕ್ಕೂ ಸಂಪೂರ್ಣ ಅಭೇದೋಪಚಾರ; ಸ್ವದೇಶ ಪರದೇಶಗಳ ಕವಿಗಳೊಡನೆ—ಕಾವ್ಯಗಳೊಡನೆ ಅಲ್ಲ—ಈ ಕವಿಯ ತುಲನೆ; ಕಾವ್ಯವನ್ನು ಓದದೆಯೂ ಪ್ರಶಸ್ತಿಯನ್ನು ಮಾತ್ರ ಓದಿ ಕಾವ್ಯದ ಕುರಿತು ಉಪನ್ಯಾಸ ಮಾಡುವ ವೈದುಷ್ಯ; ಕಾವ್ಯವನ್ನು ಕಾಣದವರಲ್ಲಿಯೂ ಕವಿಯ ಕುರಿತು ಅಭಿಮಾನದ ಆವೇಶ.

ಕಾವ್ಯವಿಮರ್ಶೆ ಎಂಬುದು ಕವಿಪ್ರಶಂಸೆಮಾತ್ರವಾಗಿ, ಪ್ರಪಂಚದ ಮಹಾಮಹಾಕವಿಗಳ ಸಾಲಿನಲ್ಲಿ ನಮ್ಮ ಕವಿಗಳನ್ನು ಕುಳ್ಳಿರಿಸುವ ಪ್ರಯತ್ನಮಾತ್ರವಾಗಿ, ಪರಿಣಮಿಸುತ್ತಿರುವುದನ್ನು ಕಂಡು ಬೇಸರಗೊಂಡ—ಕೆರಳಿದ ಎಂದರೂ ಸರಿ—ಕೆಲವರು, ಎಲ್ಲ ಮಹಾಕಾವ್ಯಗಳಲ್ಲೂ ಇದ್ದೇ ಇರುವ ದೋಷಗಳ ಕಡೆಗೆ, ಕೊರತೆಗಳ ಕಡೆಗೆ, ಊನಕಾಂತಿಯ ಭಾಗಗಳ ಕಡೆಗೆ ತೀಕ್ಷ್ಣವಾದ ದೃಷ್ಟಿಯನ್ನು ಹರಿಸತೊಡಗಿದರು. ದೋಷಗಳ, ದೋಷಾಭಾಸಗಳ ನಿರ್ದಾಕ್ಷಿಣ್ಯವಾದ ಉದ್ಘಾಟನ ರೂಪವಾದ ವಿಮರ್ಶಲೇಖನಗಳು ಪ್ರಕಟವಾಗತೊಡಗಿದವು. ಜನರ ಅಭಿಮಾನ ಗೌರವಗಳ ಅಟ್ಟವೇರಿದ್ದ ನಮ್ಮ ಹಳೆಯ ಕವಿಗಳನ್ನು ಈ ವಿಮರ್ಶಕಜಡ್ಜರು ತಮ್ಮ ಮುಂದೆ ಕೈಕಟ್ಟಿ ನಿಲ್ಲಿಸಿ, ಅವರ ಕಾವ್ಯಗಳ 'ಸರ್ವೆ' ಮಾಡಿ, ತಮಗೆ ಪರಿಚಯವಿರುವ ಪ್ರಪಂಚದ ಕವಿಗಳಿ

ಗೆಲ್ಲ ಸಾಕ್ಷಿ 'ಸಮ್ಮನ್ಸು' ಕಳಿಸಿ ತರಿಸಿ, ವಿಚಾರಣೆ ಮಾಡಿ ತೀರ್ಪುಕೊಡತೊಡಗಿದರು. ಆಯಾ ಕವಿಯ ಕಾವ್ಯಾಭ್ಯಾಸವನ್ನು ಚೆನ್ನಾಗಿ ಮಾಡದೆ, ಬರಿಯ ಅಭಿಮಾನದಿಂದ ಉಬ್ಬಿದ್ದ ನಮ್ಮ ಜನಕ್ಕೆ ನಮ್ಮ ಕವಿಗಳ ಪರವಾಗಿ ವಾದಿಸುವ ಒಳ್ಳೆಯ ವಕೀಲರು ಸಹ ದೊರೆಯಲಿಲ್ಲ! ಪರಿಣಾಮವಾಗಿ ನಮ್ಮ ಹೆಚ್ಚಿನ ಕವಿಗಳಿಗೆ ಶುದ್ಧನ್ಯಾಯ, ಪೂರ್ಣನ್ಯಾಯ ದೊರಕಲಿಲ್ಲ. ಖಚಿತವಾಗಿ ಬರೆಯಲ್ಪಟ್ಟ ಕಾನೂನುಗಳಿಗೆ ಬದ್ಧವಾದ ಕೋರ್ಟುಗಳಲ್ಲಾದರೂ, ಎಂತಹ ಪ್ರಾಮಾಣಿಕ ಜಡ್ಜನಿದ್ದರೂ, ಎಂತಹ ನಿಪುಣ ವಕೀಲರಿದ್ದರೂ ಎಲ್ಲಾ ಸಂದರ್ಭಗಳಲ್ಲಿ ಪೂರ್ಣನ್ಯಾಯ ದೊರಕುವುದಿಲ್ಲವೆಂಬುದು ಲೋಕಾನುಭವ. ಜಡ್ಜನೂ ಅಪೂರ್ಣ ಮಾನವ! ಹೀಗಿರುವಲ್ಲಿ, ಸಾಹಿತ್ಯವಿಮರ್ಶೆಯ ಕಾನೂನುಗಳು ಏನೆಂದು ಖಚಿತವಾಗಿ ಸರ್ವಮಾನ್ಯವಾಗಿ ಸಾರ್ವದೇಶಿಕವಾಗಿ ಸಾರ್ವಕಾಲಿಕವಾಗಿ ಯಾರೂ ಹೇಳುವಂತಿಲ್ಲದಿರುವ ಸಾಹಿತ್ಯ ಲೋಕದಲ್ಲಿ, ಮಾನವ ಸಾಮಾನ್ಯ ಸ್ವಭಾವದೊಡನೆ ಸಂಸ್ಕಾರಭೇದ ರುಚಿಭೇದಗಳೂ ನಿಯಮಗಳ ತಳಹದಿಯಾಗಿರುವ ಕಲಾಲೋಕದಲ್ಲಿ, ವಿಮರ್ಶಕಜಡ್ಜರ ತೀರ್ಪುಗಳಲ್ಲಿ ಅನ್ಯಾಯ ಸೇರುವುದು ಸ್ವಾಭಾವಿಕ. ಕೆಲವು ವೇಳೆ ನ್ಯಾಯವೇ ಶುದ್ಧ ಅನ್ಯಾಯವಾಗಿ ಪರಿಣಮಿಸುವುದು ಸಹ ಸಂಭವನೀಯ. ಆದರೆ ಈ ಸಂಕಟ ಬರುವುದು ಯಾವಾಗ?—ವಿಮರ್ಶಕನು ಜಡ್ಜನ ಪೀಠವನ್ನೇರಿದಾಗ ಮಾತ್ರ.

ವಿಮರ್ಶಕನ ಸ್ಥಾನ ಜಡ್ಜನದಲ್ಲವಾದರೆ ಮತ್ತೆ ಯಾರದು, ಸ್ತುತಿಪಾಠಕನದೋ? ವಕೀಲನದೋ? ದಲಾಲನದೋ?—ಎಂದರೆ ಯಾರದೂ ಅಲ್ಲ, ಅವನದೇ. ವಿಮರ್ಶಕನ ನೆಲೆ ವಿಮರ್ಶಕನದೇ.

ವಿಮರ್ಶೆ ಎಂದರೆ ಪರಾಮರ್ಶ, 'ಪರಾಂಬರಿಸುವಿಕೆ'; ಮುಟ್ಟಿ ನೋಡಿ ತಿಳಿದುಕೊಳ್ಳುವಿಕೆ. 'ಸಮಾಲೋಚನೆ' (ಚೆನ್ನಾಗಿ ನೋಡುವಿಕೆ) ಎಂದರೂ ಇದೇ. 'ವಿಮರ್ಶೆ'ಯ ಈ ಸರಳವಾದ ಅರ್ಥವನ್ನು ಮುಂದಿಟ್ಟುಮಾಡಿಕೊಂಡರೆ ವಿಮರ್ಶಕನ ನೆಲೆ ಯಾವುದೆಂಬುದರಲ್ಲಿ ಸಂದೇಹಕ್ಕೆ ಎಡೆಯಿರಲಾರದು. ಒಂದು ಕಾವ್ಯವನ್ನು ನಾವು ಎಷ್ಟು ಹತ್ತಿರದಿಂದ, ಎಷ್ಟು ಸೂಕ್ಷ್ಮವಾಗಿ, ಎಷ್ಟು ಆಳದ ವರೆಗೆ ಮುಟ್ಟಿ ನೋಡುತ್ತೇವೆಯೋ ಅಷ್ಟಷ್ಟು ನಮ್ಮ ವಿಮರ್ಶೆಯ ಯಥಾರ್ಥತೆ ಹೆಚ್ಚುತ್ತದೆ. ವಿಮರ್ಶಕರ ಈ 'ವಿಮರ್ಶನ' ತಾರತಮ್ಯದಿಂದಾಗಿ ಅವರವರ 'ಗ್ರಹಿಕೆ' ಯಲ್ಲಿ ತಾರತಮ್ಯವುಂಟಾಗುತ್ತದೆ. ಆ ತಾರತಮ್ಯಾನುಸಾರವಾಗಿ ಪ್ರಾಮಾಣಿಕವಾಗಿಯೂ ಮತಭೇದಗಳಾಗುವುದು ಸಹಜವೇ. ವಿಮರ್ಶಕನು ತನ್ನ ಶಕ್ತಿ, ತನ್ನ ಪ್ರಯತ್ನ ಇವುಗಳಿಗನುರೂಪವಾಗಿ ತನಗೆ ದೊರೆತ 'ಕಾವ್ಯದರ್ಶನ'ವನ್ನೇ ಪ್ರದರ್ಶಿಸಬಲ್ಲನು. ಯಾವನಿಗೆ ಕಾವ್ಯದ

ಅಂತರಾಳವನ್ನು ಪ್ರವೇಶಿಸಿ, ಅಲ್ಲಿ ಅಡಗಿರುವ ಕವಿಹೃದಯವನ್ನು ಕಾಣುವ ಇಚ್ಛೆ, ಕುತೂಹಲ, ಶಕ್ತಿ, ಪ್ರಯತ್ನಗಳು ಇವೆಯೋ ಅವನೇ ನಿಜವಾದ ವಿಮರ್ಶೆಯನ್ನು ಮಾಡಬಲ್ಲನು. ಈ 'ಸಾಧನೆ' ಇಲ್ಲದೆ ಮಾಡುವ ವಿಮರ್ಶೆ ಬರಿಯ ವಾಗಾಡಂಬರ. ಕವಿಯ ಹೃದಯದೊಡನೆ ಸ್ಪಂದಿಸಬಲ್ಲ ಹೃದಯವನ್ನು ಹುಟ್ಟಿನಿಂದಲೆಯೋ ಅಭ್ಯಾಸದಿಂದಲೋ ಪಡೆದಿರುವವನೇ ಸಹೃದಯನು. ಸಹೃದಯತೆ ಎಂದರೆ ಕೆಲವರು ಭಾವಿಸುವಂತೆ ಕವಿಯಲ್ಲಿ ಕರುಣೆಯೋ ಕೃಪೆಯೋ ಪಕ್ಷಪಾತವೋ ಅಲ್ಲ. ಸಹೃದಯತೆಯ ಪ್ರಯತ್ನದಿಂದ ಲಭ್ಯವಾಗುವ 'ಕವಿಹೃದಯ' ಜ್ಞಾನವು ಪ್ರಾಮಾಣಿಕವಾದ ವಿಮರ್ಶೆಯ ಮೂಲಭೂತ ಆವಶ್ಯಕತೆ. ಔಚಿತ್ಯವಿಚಾರ, ಪಾಂಡಿತ್ಯ, ವಿಶಾಲವಾದ ಕಾವ್ಯಲೋಕ ಪರಿಚಯ, ತರ್ಕ-ನೈಪುಣ್ಯ, ಸರಸವಾಕ್ಯನಿರ್ಮಾಣಚಾತುರಿ ಇತ್ಯಾದಿಗಳಲ್ಲಿ ಕೆಲವು ಅದಕ್ಕೆ ಪರಿಕರಗಳು, ಕೆಲವು ಭೂಷಣಗಳು, ಅಷ್ಟೆ.

ಅದೇನು ಮುದ್ದಣನ ಭಾಗಧೇಯವೋ, ಈ ಕಾಲದ ನಮ್ಮ ವಿಮರ್ಶನ ಮಾರ್ಗದ ಇನ್ನೊಂದು ತಿರುವಿಗೂ ಅವನೇ ನಿಮಿತ್ತವಾದಂತಿದೆ! ಅವನ ರಾಮಾಶ್ವಮೇಧವೇ ಇಲ್ಲಿರುವ ಅಪೂರ್ವವಾದ ಸರಸವಿಮರ್ಶೆ ಗ್ರಂಥದ ವಿಷಯವಾಗಿದೆ. ಕಾವ್ಯಾರಸಾನುಭವದಲ್ಲಿ ಮುಳುಗಿ ಕವಿಹೃದಯವನ್ನು ಕಂಡು ಧನ್ಯವಾದ ಒಂದು ಪ್ರಸನ್ನ ನಿರ್ಮಲ ವಿಮರ್ಶೆ ಇಲ್ಲಿ ಮೇಲೆದ್ದು ಬಂದು ನಗುನಗುತ್ತಿದೆ. ಇದು ಒಬ್ಬ ತರುಣ ಕಾವ್ಯೋಪಾಸಕನ ಪ್ರಥಮ ಪ್ರಯತ್ನವೆಂದು ನಮಗೆ ತಿಳಿದಾಗ ನಮ್ಮಲ್ಲಿ ಪ್ರೀತಿವಿಸ್ಮಯಗಳು ಉಕ್ಕಿ ಇವನ ಗೆಯ್ಮೆ ಇದಕ್ಕೆ ಹತ್ತಾಗಿ ಬೆಳೆಯಲಿ ಎಂದು ಹರಸುತ್ತವೆ. ಇದು ನಮಗೆ ಕಂಡು ಬಳಕೆಯಾಗಿರುವ 'ಪ್ರಶಸ್ತಿ'ಗಳ ಅಥವಾ ಇತರ ವಿಮರ್ಶೆಗಳ ಮಾದರಿಯಲ್ಲಿಲ್ಲ. ಇದರಲ್ಲಿ ಅತಿಯಿಲ್ಲ, ಅವಜ್ಞೆಯಿಲ್ಲ, ಅಹಂಭಾವವಿಲ್ಲ, ಅಸಹನೆಯಿಲ್ಲ, ಮತ್ಸರವಿಲ್ಲ, ದೂಷಣೆಯಿಲ್ಲ, ಪೂರ್ವಗ್ರಹವಿಲ್ಲ. ಇಲ್ಲಿ ವಿಮರ್ಶಕನು ಕಾವ್ಯಾನುಭವದಿಂದ ತನಗೊದಗಿದ ಬಣ್ಣ ಬಣ್ಣದ ಆನಂದಲಹರಿಗಳನ್ನು ಒಂದೊಂದಾಗಿ ತೆಗೆತೆಗೆದು ನಮ್ಮ ಚಿತ್ತಭಿತ್ತಿಗೆ ಎಸೆಯುತ್ತ ಹೋಗುತ್ತಾನೆ; ಪರಿಣಾಮವಾಗಿ, ನಿಬಂಧವನ್ನು ನಾವು ಓದಿ ಮುಗಿಸಿದಾಗ ನಮ್ಮ ಹೃದಯದಲ್ಲಿ ಸುಬದ್ಧವಾದ ಒಂದು 'ರಸಚಿತ್ರ' ನಿಂತಿರುವಂತೆ ಭಾಸವಾಗುತ್ತದೆ.

ಇಂತಿದ್ದರೂ ಇದು ರಸಾವೇಶದ ಬರಿಯ ಒಂದು ಆಲಾಪವೋ ಒಂದು ಉದ್ಗಾರರೂಪವೋ ಆಗಿರುವುದಿಲ್ಲ. ವಿಚಾರ, ವಿಶ್ಲೇಷಣ, ತತ್ತ್ವಾನ್ವೇಷಣ, ಅಂತರಂಗ ಬಹಿರಂಗ ಪರೀಕ್ಷಣ, ತುಲನ, ಖಂಡನ, ಮಂಡನ ಇತ್ಯಾದಿ ವಿಷಯ ಪ್ರತಿಪಾದನ ವ್ಯಾಪಾರವೆಲ್ಲ ಯುಕ್ತವಾದ ಆಯಾ ಸ್ಥಾನದಲ್ಲಿ ಹಿತ

ವಾಗಿ ಸಮರಸವಾಗಿದೆ. ವಿಮರ್ಶಕನು ಇತರ ವಿಮರ್ಶಕರ ಅಭಿಪ್ರಾಯಗಳನ್ನು ಬಹಳ ಗೌರವಬುದ್ಧಿಯಿಂದ ತಕ್ಕಡಿಯಲ್ಲಿಟ್ಟು ತೂಗಿದ್ದಾನೆ; ಈ ವಿಷಯದಲ್ಲಿ ಬರೆದವರೆಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡಿದ್ದಾನೆ, ಮಥಿಸಿದ್ದಾನೆ. ತನಗೆ ಸಮುಚಿತ, ಸಮ್ಮತ ಎಂದು ಕಂಡವುಗಳನ್ನು ತೆರೆಗೈಗಳಿಂದ ಸ್ವಾಗತಿಸಿ ಸ್ವೀಕರಿಸಿದ್ದಾನೆ. ತನಗೆ ಸರಿಕಾಣದವುಗಳನ್ನು ಬಹಳ ಸಭ್ಯವಾಗಿ ನಿರಾಕರಿಸಿದ್ದಾನೆ. ಆದರೆ ಇಲ್ಲಿ ವಿಮರ್ಶಕನ ಪ್ರಧಾನಲಕ್ಷ್ಯವು ಸ್ವಾಭಿಪ್ರಾಯ ಪ್ರದರ್ಶನವಲ್ಲ; ಕವಿಭಾವಾವಿಷ್ಕರಣವೇ ಅವನ ನೇರವಾದ ಗುರಿ. ಈ ವಿಮರ್ಶೆ ಧೋರಣೆ ಮನೋಜ್ಞವೂ ಅನುಕರಣೀಯವೂ ಆಗಿದೆ ಎಂದು ಮುಕ್ತ ಕಂಠದಿಂದ ಹೇಳಬಯಸುತ್ತೇನೆ.

ಶ್ರೀ ಆಳ್ವರು ತಮ್ಮ ಈ ಗ್ರಂಥದ ಮೊದಲನೇ ನಿಬಂಧದಲ್ಲಿ—ಯಾವುದು ಮುದ್ದಣನ ಕೀರ್ತಿಯ ಕಾಮಧೇನುವೋ, ಯಾವುದು ಎಲ್ಲ ವಿಮರ್ಶಕರ ಏಕಾಭಿಪ್ರಾಯದಂತೆ ಸಾಹಿತ್ಯಲೋಕದಲ್ಲಿ ಅನುಪಮವೋ, ಆ ಮುದ್ದಣ ಮನೋರಮೆಯರ ಸಂವಾದ ಗೀತಕ್ಕೆ ಸುಂದರವಾದ ವಾದ್ಯಮೇಳವನ್ನೊದಗಿಸಿ ರಸಿಕಲೋಕಕ್ಕೆ ನೀಡುವ ಅದೊಂದು ಶ್ಲಾಘ್ಯವಾದ ಕಲೆಗಾರಿಕೆಯನ್ನು ಬಿತ್ತರಿಸಿದ್ದಾರೆ; ರಾಮಾಶ್ವಮೇಧದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ ಆ ಅಮರ ದಂಪತಿಗಳನ್ನು ನಮ್ಮ ಕಣ್ಣ ಮುಂದಿನ ರಂಗಮಂಟಪಕ್ಕೆ ಆದರದಿಂದ ಬರಮಾಡಿಸಿ, ಅವರಿಂದ ನಿರಂತರವಾದ ಒಂದು ಅಪೂರ್ವ ಸರಸ ಏಕಾಂಕವನ್ನು ಆಡಿಸಿದ್ದಾರೆ. ಈ ನಿಬಂಧವನ್ನು ಓದುತ್ತ ಹೋದಂತೆ, ಅದು ವಿಮರ್ಶೆ ಎಂಬುದೇ ನಮಗೆ ಮರೆತುಹೋಗುತ್ತದೆ. ಆ ಪವಿತ್ರಾತ್ಮಗಳಿಗೆ ಇವರ ಈ 'ಸೇವೆ'ಯಿಂದ ಖಂಡಿತವಾಗಿಯೂ ಕೃತಾರ್ಥತೆಯ ಅನುಭವವಾಗದಿರದು. ಆಳ್ವರ ಈ ನಿಬಂಧವನ್ನು ಅವಲೋಕಿಸುವಲ್ಲಿ, ಪವಿತ್ರ ಚರಿತ್ರಗಳ ಸಮಾಲೋಚನೆಯ ಕುರಿತು ಕವಿವರ್ಯ ಠಾಕೂರರು ಆಡಿದ ಮಾತುಗಳನ್ನು ನೆನವರಿಕೆ ಮಾಡಿಕೊಳ್ಳಬಹುದು. "ಪೂಜೆಯ ಆವೇಗದಿಂದ ಮಿಶ್ರಿತವಾದ ಈ ತೆರದ ವ್ಯಾಖ್ಯಾನವೇ ನಮ್ಮ ಮತದ ಪ್ರಕಾರ ಸರಿಯಾದ ಸಮಾಲೋಚನೆ. ಈ ಉಪಾಯದಿಂದಲೇ ಒಂದು ಹೃದಯದ ಭಕ್ತಿಯು ಮತ್ತೊಂದು ಹೃದಯದಲ್ಲಿ ಸಂಚಾರಿತವಾಗುವುದು. ಆದರೆ ಈಗಿನ ಕಾಲದ ಸಮಾಲೋಚನೆಯು ಬಜಾರಿನ ದರವನ್ನು ಪ್ರಮಾಣವಾಗಿಟ್ಟುಕೊಂಡಿರುತ್ತದೆ. ಏಕೆಂದರೆ ಈಗ ಸಾಹಿತ್ಯವು ಸಂತೆಯ ದಿನಸು..............ಯಥಾರ್ಥ ಸಮಾಲೋಚನೆಯು ಪೂಜೆ, ಸಮಾಲೋಚಕನು ಪೂಜಾರಿ; ಭಕ್ತಿಯಿಂದ ಹೊರಸೂಸುವ ವಿಸ್ಮಯವನ್ನು ವ್ಯಕ್ತಮಾಡುವುದು ಮಾತ್ರವೇ ಆತನ ಕರ್ತವ್ಯ ಎಂದು ನಾವು ಹೇಳುತ್ತೇವೆ". ಮೇಲಿನ

ಮಾತುಗಳಲ್ಲಿ ಬಂದಿರುವ ಪೂಜೆ ಎಂಬ ಶಬ್ದಕ್ಕೆ ಕಾವ್ಯಾರಾಧನೆ ಎಂಬುದೇ ಅರ್ಥ. ಅಲ್ಲಿ ಬಂದಿರುವ ಭಕ್ತಿ ಎಂಬುದನ್ನು ಬೇಕಾದರೆ ರಸಾವೇಶವೆಂದೋ ಆನಂದವೆಂದೋ ಮಾರ್ಪಡಿಸಿಕೊಂಡು ಆಳ್ವರ ಈ ನಿಬಂಧಕ್ಕೆ ಅನ್ವಯಿಸಿ ನೋಡಬಹುದು.

ರಾಮಾಶ್ವಮೇಧ ಕಾವ್ಯದ (ಸೀತಾಪರಿತ್ಯಾಗದ) ರಾಮನ ಚಿತ್ರಣದ ಕುರಿತು ಕವಿಯನ್ನು ಪ್ರಬಲವಾಗಿ ಆಕ್ಷೇಪಿಸುವ ವಿಮರ್ಶಕರು ಒಂದು ವಿಷಯವನ್ನು ಮರೆತೇ ಬಿಡುತ್ತಾರೆ. ಕಾವ್ಯದಲ್ಲಿ 'ಮುದ್ದಣ'ನೆಂದರೆ ಯಾರು, 'ಮನೋರಮೆ' ಎಂದರೆ ಯಾರು ಎಂಬುದನ್ನು ವಿಚಾರಿಸುವ ಗೊಡವೆಗೇ ಅವರು ಹೋಗುವುದಿಲ್ಲ. ವಾಸ್ತವಿಕ ಪ್ರಪಂಚದಲ್ಲಿ ಮುದ್ದಣನೆಂದರೂ ಲಕ್ಷ್ಮೀನಾರಾಯಣಕವಿ ಎಂದರೂ ಒಬ್ಬನೇ; ಮನೋರಮೆ ಎಂದರೆ ಕಮಲಾಬಾಯಿಯ ಇನ್ನೊಂದು ಹೆಸರೂ ಇರಬಹುದು. ಆದರೆ ಕಾವ್ಯದಲ್ಲಿ ಬರುವ ಮುದ್ದಣ ಮನೋರಮೆಯರೆಂದರೆ ಲಕ್ಷ್ಮೀನಾರಾಯಣಕವಿಯ ಸುಸಂಸ್ಕೃತವಾದ 'ಆತ್ಮ'ವೇ ಪಡೆದ 'ಪರ್ಯಾಯ ಇರ್ಮೆಯ'. ಆ ಒಂದು ಆತ್ಮವೇ ಮುದ್ದಣ ಮನೋರಮೆ ಎಂಬ ಎರಡು ಹೆಸರು ತಾಳಿ, ರಾಮಸೀತೆಯರ ಕರುಣಕಥೆಯನ್ನು ಹೇಳುತ್ತದೆ, ಕೇಳುತ್ತದೆ, ಅನುಭವಿಸುತ್ತದೆ, ಆಕ್ಷೇಪಿಸುತ್ತದೆ, ವಿಮರ್ಶಿಸುತ್ತದೆ. ರಾಮನ ಆ ಭಾಗದ ಕಥೆಯನ್ನೇ ತಪ್ಪಿಸಿಕೊಳ್ಳಲು ಮರೆಮಾಡಲು ಮುಂದೂಡಲು ಎಳಸುವ ಮುದ್ದಣನ 'ವಿಫಲ' ಪ್ರಯತ್ನಗಳು, ಮನೋರಮೆಯ ಬಾಯಿಂದ ಹೊರಡುವ ಉದ್ಗಾರಗಳು, ಸೀತಾಪರಿತ್ಯಾಗಕ್ಕೆ ಹಿಂದಿನ ಮತ್ತು ಮುಂದಿನ ರಾಮನ 'ಛಾಯೆ'ಗಳು—ಇವೆಲ್ಲ ಬಣ್ಣಗಳ ಪರಸ್ಪರ ಪೂರಣದಿಂದ ಉನ್ಮೀಲಿಸುವ ಆ ರಾಮಚಿತ್ರವನ್ನು ಕಂಡರೆ ಆಕ್ಷೇಪಗಳ ಆಟೋಪವೆಲ್ಲ ಮಾಯವಾಗಿ ಅವು ದೀನವಾಗುತ್ತವೆ. ಕವಿಹೃದಯವನ್ನು ಪ್ರವೇಶಿಸಬಲ್ಲ ವಿಮರ್ಶಕನಿಗೆ ಮಾತ್ರ ಗೋಚರವಾಗುವ ಆ ಚಿತ್ರವನ್ನು ಕನ್ನಡ ಲೋಕಕ್ಕೆ ಆಳ್ವರು ಇಲ್ಲಿ ಅನಾವರಣ ಮಾಡಿದ್ದಾರೆ. ಅದನ್ನು ಕನ್ನಡಿಗರು ಕಣ್ಣರಳಿಸಿ ನೋಡಬೇಕಾಗಿದೆ.

ಇದೇನು 'ವಾಲಗ' ಸುರುವಾಯಿತು? ಕೊಂಬು ಕೇಳಿತು! ಮುಂಡಾಸಿನ ಒಂದು ಸೆರಗು ಸುತ್ತದೆ ಜೋಲುತ್ತಲೇ ಉಳಿದಿದೆ! ಓ, ಇನ್ನು ತಡಮಾಡುವಂತಿಲ್ಲ. ಏನು ಮಾಡಲಿ? ಇಷ್ಟಕ್ಕೇ ಬಿಟ್ಟುಬಿಡುತ್ತೇನೆ; ಇದೂ ಒಂದು ಅಂದವೆನಿಸಲಿ! "ಕಿಮಿವ ಹಿ ಮಧುರಾಣಾಂ ಮಂಡನಂ ನಾಕೃತೀನಾಂ?" ಸರಿ, ಹೊರಡೋಣ.

ಮಂಗಳೂರು,
ತಾ. ೧೭—೧೧—೧೯೫೯.

ಸೇಡಿಯಾಪು ಕೃಷ್ಣಭಟ್ಟ.

ಓದುಗರೊಡನೆ ಎರಡು ಮಾತು

ಒಲವಿನ ಗೆಳೆಯರೇ,

ಇದು ನನ್ನ ಮೊದಲ ಕೃತಿ. ಇದನ್ನು ನಿಮ್ಮ ಕೈಗೀಯುತ್ತಾ ಒಂದೆರಡು ಮಾತುಗಳನ್ನು ಆತ್ಮೀಯವಾಗಿ ಆಡಲು ಹೃದಯ ಬಯಸುತ್ತಿದೆ.

ನಿಮಗೆ ಗೊತ್ತು ಮುದ್ದಣ ಆಧುನಿಕ ಕನ್ನಡ ಸಾಹಿತ್ಯದ ಶ್ರೀಕಾರ ಬರೆಯುವ ಪುಣ್ಯಪಡೆದ ಧನ್ಯಕವಿ; 'ಇಂದಿನ ಕನ್ನಡ ಸಾಹಿತ್ಯವನ್ನು ಸುಗ್ಗಿಸಿದ ಕಳರುತಿಯ ಕೋಗಿಲೆ'; ಇಂದಿನ ಜನರ ಒಲವು ನಿಲವುಗಳನ್ನೂ, ಸಾಹಿತ್ಯದ ಸ್ಥಿತಿಗತಿಗಳನ್ನೂ ಅರ್ಧಶತಮಾನಕ್ಕೂ ಹಿಂದೆಯೇ ಅರಿತು "ಪದ್ಯಂ ವಧ್ಯಂ, ಗದ್ಯಂ ಹೃದ್ಯಂ" ಎಂದು ಭವಿಷ್ಯ ನುಡಿದ ಕಾಲಜ್ಞಾನಿ; ಕನ್ನಡ ಸಾಹಿತ್ಯ ಲೋಕಕ್ಕೆ ಶೃಂಗಾರ ಹಾಸ್ಯಗಳ ಶುಭ್ರ ಸುಂದರವೂ ಸ್ವಚ್ಛ ಮಧುರವೂ ಆದ ಮಂಜುಳರವದ ರಸಗಂಗೆಯನ್ನು ಇಳಿಸಿ ತಂದ ಭಗೀರಥ. ಇಲ್ಲಿ ಆತನ ಪರಿಣತ ಕೃತಿ ರಾಮಾಶ್ವಮೇಧದಲ್ಲಿ ನಾನು ಕಂಡ, ಉಂಡ ಸೊಗಸಿನ ಉಣಿಸಿನ ಕೆಲ ವಂಶವನ್ನು ನಿಮಗೂ ಬಡಿಸಿಟ್ಟಿದ್ದೇನೆ. ನೀವು ಇದನ್ನು ಸವಿದು ಮೂಲ ಕಾವ್ಯದ ಸೊಗಸನ್ನು ಆಸ್ವಾದಿಸಬಲ್ಲಿರಾದರೆ ನಾನು ಕೃತಕೃತ್ಯ. ಆಗ ನಾನೂ ಮುದ್ದಣನಂತೆ "ಎಂತುಂ ನಿಮಗೆ ಸೊಗಸಾಯ್ತಲೆ, ಇದುವೆ ಪರಮಾನಂದಮೆನಗೆ" ಎಂದೇನು.

ಅದು ಬಿಟ್ಟು ನಿಮಗೆ ಈ ಪಾಕ ರುಚಿಸದೆ ಹೋದರೆ ಅದಕ್ಕೆ ಕಾರಣ ಈ ಕೈಗೆ ಕುಶಲತೆ ಕಡಿಮೆಯಾದುದೇ ಹೊರತು ರಾಮಾಶ್ವಮೇಧದಲ್ಲಿ ರಸದ ಕೊರತೆಯಾದುದಲ್ಲ. ಆಗ ನಾನು ಬಯಸುವುದಿಷ್ಟೆ:– ಈ ಪಾಕ ನಿಮಗೆ ರುಚಿಸದಿದ್ದರೆ ಹೋಗಲಿ. ಇದನ್ನು ಕಂಡು ರಾಮಾಶ್ವಮೇಧವನ್ನು ಕೂಲಂಕಷವಾಗಿ ಓದುವ ಕುತೂಹಲವಾದರೂ ನಿಮ್ಮಲ್ಲಿ ಕೆರಳಲಿ ಸಾಕು; ಅಷ್ಟರಿಂದಲೇ ನನ್ನ ಪರಿಶ್ರಮ ಸಾರ್ಥಕಹೊಂದುತ್ತದೆ. ಏಕೆಂದರೆ ನಿಮ್ಮ ಕುತೂಹಲ ಬಲಿತು ಆ ಕಾವ್ಯವನ್ನು ಓದಿದರೆ ಅರಿತೇ ಅರಿಯುವಿರಿ ಕಾವ್ಯ ರಾಮಾಶ್ವಮೇಧ ರಸದ ಮಡು, ಕವಿ ಮುದ್ದಣ ರಸಋಷಿ ಎಂಬುದನ್ನು. ನೀವು ಇಷ್ಟು ಅರಿತರೆ ನನಗೆ ಎಷ್ಟೋ ಸಾಕು. ನನ್ನ ಈ ಕೆಲಸಕ್ಕೆ ಇದಕ್ಕಿಂತ ಹೆಚ್ಚಿನ ಫಲ ಏನು ತಾನೇ ಬಯಸಬಹುದು?

ಸೂಕ್ಷ್ಮದರ್ಶಿಗಳೇ! ರಾಮಾಶ್ವಮೇಧ ಲೇಸವೂ ದೋಷವಿಲ್ಲದ ಸರ್ವಾಂಗ ಸುಂದರ ಕೃತಿಯೆಂದು ನಾನೇನೂ ಹೇಳುತ್ತಿಲ್ಲ. ನೀವು ಬಲ್ಲಿರಿ ಆದಿಕವಿ ವಾಲ್ಮೀಕಿಯ ಕಾವ್ಯದಲ್ಲೂ ಅಭಾವ ಹುಡುಕಿದ್ದಾರೆ. ಮಹಾಕವಿ ಕಾಲಿದಾಸನ ಕೃತಿಗಳಲ್ಲೂ ಕೊರತೆ ಕಂಡಿದ್ದಾರೆ. ಭಾಸ, ಭವಭೂತಿ, ಬಾಣರಂತಹ ಉದ್ದಾಮ ಪ್ರತಿಭಾಶಾಲಿಗಳ ರಚನೆಗಳಲ್ಲೂ ತಪ್ಪನ್ನು ಎತ್ತಿತೋರಿಸಿದ್ದಾರೆ. ವಿಶ್ವವಿಖ್ಯಾತ ಶೇಕ್ಸ್‌ಪಿಯರನ ಬರಹಗಳಲ್ಲೂ ಊನ ನೋಡಿದ್ದಾರೆ. ಇದನ್ನು ತಿಳಿದೂ ನಮ್ಮ ಕನ್ನಡದ ಮುದ್ದುಕವಿ ಮುದ್ದಣನ ಕಾವ್ಯ ರಾಮಾಶ್ವಮೇಧ ಎಲ್ಲ ದೃಷ್ಟಿಗಳಿಂದಲೂ ಪರಿಪೂರ್ಣತೆ ಪಡೆದಿದೆ ಎನ್ನುವುದು ಸತ್ಯದೂರವಾದ ಅಂಧಾಭಿಮಾನದ ಮಿಥ್ಯಾಲಾಪ ಮಾತ್ರವಲ್ಲದೆ ಮತ್ತೇನಾದೀತು? ಹೀಗಿದ್ದರೂ ರಾಮಾಶ್ವಮೇಧದಲ್ಲಿ ರಸಸ್ಯಂದಿಗಳಾದ ಅನೇಕ ವಿಚಾರಗಳು ತುಂಬಿವೆ; ಅದು ಪರಿಪೂರ್ಣತೆಯ ಹಾದಿಯಲ್ಲಿ ಬಹುದೂರ ಕ್ರಮಿಸಿರುವ ಒಂದು ಸುಂದರ ಗದ್ಯಕಾವ್ಯ, ಅನೇಕ ವಿಚಾರಗಳಲ್ಲಿ ಹೊಸಹಾದಿಯನ್ನು ಹಾಕಿಕೊಟ್ಟ ಒಂದು ಕ್ರಾಂತಿಕಾರಿ ಕೃತಿ ಎಂಬುದನ್ನು ನಿಸ್ಸಂಕೋಚವಾಗಿ ಎದೆ ತಟ್ಟಿ ಹೇಳಬಲ್ಲೆ.

ಮತಿವಂತರೇ! ತೃಪ್ತಿ ಮುಕ್ತಾಯದ ಲಕ್ಷಣ; ಅತೃಪ್ತಿ ಪ್ರಗತಿಯ ಗುಣ. ಬೆಳವಣಿಗೆ ಬೇಕು ಎಂದು ಬಯಸುವವ ಸದಾ ಸಾತ್ವಿಕ ಅತೃಪ್ತಿಯನ್ನು ಹೊಂದಿರಲೇ ಬೇಕು. ಈ ದೃಷ್ಟಿಯಿಂದ ರಾಮಾಶ್ವಮೇಧದ ಕುರಿತು ನಾನೂ ಅತೃಪ್ತನೇ ಸರಿ! ಆದರೂ ಇದು ರಸರುಚಿಗಳ ಸಂಚಯ. ಇಲ್ಲಿ ನನ್ನ ಕೆಲಸ ಗುಣಗ್ರಹಣ.

ವಿಚಾರಶೀಲರೇ! ಹೀಗೆ ಗುಣಗ್ರಹಣದ ಕಾಲದಲ್ಲಿ ಕೆಲವೆಡೆ ಹಿರಿಯರ ಹಲವು ಅಭಿಪ್ರಾಯಗಳು ನನ್ನ ವಿಚಾರಗಳಿಗೆ ಭಿನ್ನವಾಗಿದ್ದುದು ಕಂಡು ಬಂತು. ಅವನ್ನು ಹಾಗೆಯೇ ಇಲ್ಲಿ ವ್ಯಕ್ತಪಡಿಸಿದ್ದೇನೆ. ಹೀಗೆ ಮಾಡುವಾಗ ನನ್ನ ಇತಿಮಿತಿಗಳನ್ನು ತಿಳಿದೇ ಇರುವೆ. ಆದರೂ ಕಂಡ ಸತ್ಯವನ್ನು ಅರುಹದಿರುವುದು, ಅಂತರಂಗ ಒಪ್ಪದುದಕ್ಕೆ ಒಡಂಬಡುವುದು ಆತ್ಮದ್ರೋಹವಾಗದೆ? ಆತ್ಮದ್ರೋಹ ಸಾಹಿತ್ಯಮಂದಿರದಲ್ಲಿ ಹೊಲೆ. ಎಂದೇ ನನ್ನ ಅಭಿಪ್ರಾಯಗಳನ್ನು ಇಲ್ಲಿ ವಿನಯದೊಡನೆ ನಿರೂಪಿಸಿದ್ದೇನೆ. ಹೀಗೆ ನಿರೂಪಿಸುವಾಗ ಎಲ್ಲಿಯಾದರೂ ಖಂಡನೆ ನಡೆದಿದ್ದರೆ ಅದು ಔದ್ಧತ್ಯವೆಂದು ಭಾವಿಸದಿರಿ. ಅದು ಅಲ್ಲಿ ಅನಿವಾರ್ಯವಾಗಿತ್ತೆಂಬುದನ್ನು ನೀವು ತಿಳಿಯುವಿರೆಂಬ ವಿಶ್ವಾಸ ನನಗಿದೆ. ಎಂದೇ ಆ ಹಿರಿಯರೂ ನನ್ನನ್ನು ಕ್ಷಮಿಸುವರು ಎಂದು ನಂಬಿದ್ದೇನೆ.

ಆತ್ಮೀಯರೇ! ಈ ಸಂಗ್ರಹದಲ್ಲಿರುವ "ರಸಿಕ ಮುದ್ದಣ-ಮುಗುದೆ ಮನೋರಮೆ" ಎಂಬ ಲೇಖನ ಐದಾರು ವರ್ಷಗಳ ಹಿಂದೆ ಮಿತ್ರ ಮುನಿಪಾಲ ರಾಜು ಅವರ ಒತ್ತಾಯಕ್ಕೆ ಕಟ್ಟುಬಿದ್ದು ಬರೆದುದು. ಆ ಲೇಖನವನ್ನು ಅವರು ತಾವು ಸಂಪಾದಿಸಿದ್ದ "ನೆನಹು" ಎಂಬ ಮುದ್ದಣ ಸ್ಮಾರಕ ಗ್ರಂಥದಲ್ಲಿ ಪ್ರಕಟಿಸಿದರು. ಅವರಿಗೆ ನಾನು ಋಣಿ. ಆಗ ಆ ಲೇಖನವನ್ನು ಓದಿ ಹಲವರು ಆಪ್ತರೂ ಗೆಳೆಯರೂ, ಹಿರಿಯರೂ ಪ್ರಶಂಸೆಯ ನಾಲ್ಕು ಮಾತು ಆಡಿದರು. ನಾಡಿನ ಕೆಲವು ಪತ್ರಿಕೆಗಳೂ ಪ್ರೋತ್ಸಾಹದ ಎರಡು ಸಾಲು ಬರೆದುವು. ಹುಬ್ಬಳ್ಳಿಯ ಕರ್ಮವೀರವಂತೂ (೨೪—೫—೬೪) "ಪುನರ್ಮುದ್ರಣಕ್ಕೆ ಯೋಗ್ಯವಾಗಿದೆ" ಎಂದು ಬರೆದು ನನ್ನಲ್ಲಿ ಬೀಜರೂಪವಾಗಿದ್ದ ಬಯಕೆಗೆ ನೀರೆರೆಯಿತು. ಬೆಂಗಳೂರಿನ ಪ್ರಕಾಶಕ ಮಿತ್ರರೋರ್ವರು ಆ ಲೇಖನ ಒಂದನ್ನೆ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಲು ಮುಂದೆ ಬಂದರು. ಆದರೂ ಅದೇಕೊ ಇಷ್ಟು ಪ್ರೋತ್ಸಾಹ ದೊರೆತರೂ ಒಮ್ಮೆ ಮುದ್ರಣವಾಗಿದ್ದ ಅದೊಂದೇ ಲೇಖನವನ್ನು ಪುಸ್ತಕ ರೂಪದಲ್ಲಿ ಪುನರ್ಮುದ್ರಣಗೊಳಿಸಲು ನನ್ನ ಮನಸ್ಸು ಒಪ್ಪಲಿಲ್ಲ. ಅದಕ್ಕೆ ಜೊತೆಯಾಗಿ ಈಗ ಮತ್ತೆ ಮೂರು ಲೇಖನಗಳು ಕೂಡಿಕೊಂಡು ಇದೊಂದು ಪುಸ್ತಕ ರೂಪದಲ್ಲಿ ಹೊರಬರಲು ಇನಿತು ಕಾಲ ಕಳೆಯಿತು. "ರಸಿಕ ಮುದ್ದಣ—ಮುಗುದೆ ಮನೋರಮೆ" ಲೇಖನದಲ್ಲಿ ಹಿಂದೆ ವಿಸ್ತಾರ ಭಯದಿಂದ ಬಿಟ್ಟಿದ್ದ ಕೆಲಭಾಗಗಳನ್ನು ಈಗ ಕೂಡಿಸಿಕೊಂಡಿದ್ದೇನೆ. ಅಲ್ಲದೆ ಕೆಲವೆಡೆ ಚಿಕ್ಕ ಪುಟ್ಟ ಬದಲಾವಣೆಗಳೂ ಆಗಿವೆ.

ಗೌರವಾರ್ಹರೇ! ನಾನು ಇಲ್ಲಿ ಸ್ಮರಿಸಬೇಕಾದವರಲ್ಲಿ ಮೊದಲನೆಯವರು ಶ್ರೀ ಸೇಡಿಯಾಪು ಕೃಷ್ಣ ಭಟ್ಟ, ವಿದ್ವಾನ್ ಅವರು. ಇನ್ನು ತನ್ನಿಂದ ಪರಿಶ್ರಮ ಪಡಲಾಗದು ಎಂದು ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನಿಂದ ನಿವೃತ್ತಿಹೊಂದಿ ವಿಶ್ರಾಂತಿ ಪಡೆಯುತ್ತಿರುವ ಆ ಹಿರಿಯರಲ್ಲಿ ನಾನು ಭಯಶಂಕೆಗಳಿಂದಲೇ ನನ್ನ ಲೇಖನಗಳ ಕರಡನ್ನು ಹಿಡಕೊಂಡು ಹೋಗಿದ್ದೆ. ಆದರೆ ಅವರು ತೋರಿದ ಪ್ರೀತಿ, ವಿಶ್ವಾಸ, ಆತ್ಮೀಯತೆಗಳಿಂದ ಆ ಭಯಶಂಕೆಗಳು ಎಲ್ಲಿ ಹೋದುವೊ! ಅವರ ಅಗಾಧ ಪಾಂಡಿತ್ಯ, ಆ ಪಾಂಡಿತ್ಯಕ್ಕೆ ಮಿರುಗುಕೊಡುವ ನಿರಹಂಕೃತಿ, ಆ ನಿರಹಂಕೃತಿಗೆ ಜನ್ಮವಿತ್ತ ಪ್ರೇಮಪೂರಿತ ಹೃದಯ, ಆ ಪ್ರೇಮಪೂರಿತ ಹೃದಯದ ವ್ಯಕ್ತರೂಪವಾಗಿ ಕಿರಿಯರನ್ನು ಹುರಿದುಂಬಿಸುವ ವಿಶಾಲ ಮನೋಭಾವ ಇವುಗಳನ್ನು ಕಂಡು ನಾನು ಮುಗ್ಧನಾಗಿ

ಹೋದೆ. ಅವರು ಬೆನ್ನುತಟ್ಟದಿರುತ್ತಿದ್ದರೆ ನನಗೆ ಈಗ ಕೂಡಾ ಈ ಲೇಖನಗಳನ್ನು ಅಚ್ಚಿನ ಮನೆಗೆ ಕಳುಹಿಸುವ ಲವಲವಿಕೆಯಿರಲಿಲ್ಲ. ಅವರು ನನಗಾಗಿ ಪಟ್ಟ ಪರಿಶ್ರಮ ಒಂದೆರಡು ಬಗೆಯದಲ್ಲ. ಲೇಖನಗಳನ್ನು ಆಮೂಲಾಗ್ರವಾಗಿ ಓದಿನೋಡಿ ಅಮೂಲ್ಯ ಸಲಹೆ ಸೂಚನೆಗಳನ್ನು ಕೊಡುವಲ್ಲಿ, ವಾಲ್ಮೀಕಿ ಕಾಲಿದಾಸರ ಕೃತಿಗಳ ಸೀತಾಪರಿತ್ಯಾಗದ ಭಾಗಕ್ಕೆ ಸಂಬಂಧಪಟ್ಟ ಭಾಗಗಳನ್ನು ಓದಿ ಅರ್ಥವಿಸುವಲ್ಲಿ, ಮುನ್ನುಡಿ ಬರೆಯುವಲ್ಲಿ—ಹೀಗೆ ಇನ್ನು ದುಡಿಯಲಾರೆನೆಂದು ಹಣ ಬರುತ್ತಿರುವ ಕೆಲಸವನ್ನು ತಾನಾಗಿಯೇ ಬಿಟ್ಟು ವಿಶ್ರಾಂತಿ ಪಡೆಯುತ್ತಿರುವ ಆ ಹಿರಿಯರು ಈ ಕಿರಿಯನಿಗಾಗಿ ಪಟ್ಟ ಪರಿಶ್ರಮವನ್ನು ಕಂಡು ನಾನು ಬೆರಗಾಗಿ ಹೋಗಿದ್ದೇನೆ. ಇದನ್ನು ಭಾವಿಸುವಾಗ ಆ ಹಿರಿಯರ ಮುಂದೆ ನನ್ನ ಹೃದಯ ಭಕ್ತಿಕೃತಜ್ಞತೆಗಳಿಂದ ತಲೆಬಾಗುತ್ತದೆ. ಅವರ ಈ ಪ್ರೀತಿಯ ಋಣ ಬಾಯಿಬಿಟ್ಟು ಹೇಳಿ, ಕಾಗದದಲ್ಲಿ ಬರೆದು ಸಮಾಧಾನಪಟ್ಟುಕೊಳ್ಳುವಂತಹದಲ್ಲ. ಅಂತರಂಗದಲ್ಲಿ ಬಚ್ಚಿಟ್ಟುಕೊಂಡು ಸದಾ ಸವಿಯುವಂತಹುದು.

ನಾನು ಇಲ್ಲಿ ಹೆಸರೆತ್ತಿ ಹೇಳಬೇಕಾದ ಮತ್ತೊಂದು ವ್ಯಕ್ತಿ ವಿದ್ವಾನ್ ಶ್ರೀ ಎದುರ್ಕಳ ಶಂಭು ಭಟ್ಟರು. ಅವರ ಮಾತು ಎಷ್ಟು ಮಿದುವೊ ನಡೆ ಅಷ್ಟೇ ನಯ. ಸಾತ್ವಿಕತೆ ಹೇಗಿರುತ್ತದೆ ಎಂದರೆ ಅವರನ್ನು ತೋರಿಸಬಹುದು. ಇಲ್ಲದೆ ಹೋದರೆ ಈ ಕಿರಿಯನ ಕೃತಿಯ ಅಚ್ಚಿನ ಕರಡನ್ನು ತಿದ್ದುವ ಹೊಣೆಯನ್ನು ಅವರು ಆನಂದದಿಂದ ಮೌನವಾಗಿ ವಹಿಸಿಕೊಳ್ಳುತ್ತಿರಲಿಲ್ಲ. ಅವರ ಈ ಋಣ ಭಾರದಿಂದ ನಾನು ಮುಳುಗಿದ್ದರೂ ಅವರ ನಡವಳಿಕೆಯಲ್ಲಿ ಅವರೇ ನನಗೆ ಋಣಿಯೊ ಅನ್ನಿಸುತ್ತದೆ. ದೊಡ್ಡ ಹೃದಯದ ಗುಣ ಅಲ್ಲಿ ಕಾಣಿಸುತ್ತದೆ.

ನಾನು ನೆನಪಿಸಬೇಕಾದ ಇನ್ನೊಂದು ವ್ಯಕ್ತಿ ಶ್ರೀ ಪಿ. ಕೆ. ನಾರಾಯಣ ವಿದ್ವಾನ್ ಅವರು. ಅವರನ್ನು ನೆನೆಯುವಾಗಲೆಲ್ಲಾ 'ಮನೆ ನೋಡಾ ಬಡವರು, ಮನನೋಡಾ ಸಂಪನ್ನರು' ಎಂದ ಶರಣರ ಮಾತು ನೆನಪಿಗೆ ಬರುತ್ತದೆ. ಅವರು ಇಂದು ಎಂದಲ್ಲ ಎಂದಿನಿಂದಲೂ "ಬರೆಯಿರಿ ಬರೆಯಿರಿ" ಎಂದು ನನ್ನನ್ನು ಒಲುಮೆಯಿಂದ ಒತ್ತಾಯಿಸುತ್ತಾ ಬಂದವರು. ಈ ಲೇಖನಗಳ ಪ್ರಕಾಶನದಲ್ಲೂ. ಅವರ ಉತ್ತೇಜನ ಬಹು ಮುಖ್ಯ ಪಾತ್ರವಹಿಸಿದೆ.

ಇನ್ನು ನನ್ನ ಬರಹಗಳನ್ನು ಓದಿ ಯಾವಾಗಲೂ ಪ್ರೋತ್ಸಾಹಿಸುತ್ತಿರುವ ಅನೇಕ ಬಂಧುಗಳನ್ನೂ, ಗೆಳೆಯರನ್ನೂ, ಹಿರಿಯರನ್ನೂ ಈ ಸಂದರ್ಭದಲ್ಲಿ

ನಾನು ಅಂತಃಕರಣ ಪೂರ್ವಕವಾಗಿ ಸ್ಮರಿಸುತ್ತೇನೆ ಅವರ ಪ್ರೀತಿ ಪ್ರೋತ್ಸಾಹ ಗಳೇ ನನ್ನ ಲೇಖನಿಯ ಬಲ.

ಈ ಲೇಖನಗಳನ್ನು ಒರೆಯುವಲ್ಲಿ ನಾಡಿನ ಅನೇಕ ಹಿರಿಯ ಬರಹಗಾರರ ಬರಹಗಳು ನನಗೆ ನೆರವಾಗಿವೆ. ಹೀಗೆ ಪ್ರತ್ಯಕ್ಷ ನೆರವಾದ ಪುಸ್ತಕ ಮತ್ತು ಲೇಖನಗಳನ್ನೂ ಅವನ್ನು ಒರೆದ ಲೇಖಕರ ಹೆಸರುಗಳನ್ನೂ ನಾನು ಅಲ್ಲಲ್ಲಿಯೆ ಅಡಿ ಟಿಪ್ಪಣಿಯಲ್ಲಿ ನಮೂದಿಸಿರುತ್ತೇನೆ. ಅಲ್ಲಿ ನಮೂದಿಸದಿರುವ ಎಷ್ಟೋ ಹಿರಿಯರ ಬರಹಗಳೂ ನನಗೆ ಅಪ್ರತ್ಯಕ್ಷವಾಗಿ ಉಪಯುಕ್ತವಾಗಿವೆ. ಹೀಗೆ ಇಲ್ಲಿ ನಮೂದಿಸಿರುವ ಮತ್ತು ನಮೂದಿಸದಿರುವ ಎಲ್ಲ ಹಿರಿಯರಿಗೂ ನಾನು ಅತ್ಯಂತ ಋಣಿ.

ಈ ಪುಸ್ತಕದ ಪ್ರಕಾಶಕರಾದ ಶ್ರೀ. ಯು ಗೋಪಾಲಕೃಷ್ಣ ಭಟ್ಟ ಬಿ. ಎ. ಇವರ ಮತ್ತು ನನ್ನ ಸ್ನೇಹ ಬಹಳ ಹಳೆಯದೇನೂ ಅಲ್ಲ. ಆದರೂ ಅದರ ಆಳ ದಿಂದಾಗಿ ಈ ಸ್ನೇಹ ಕಾಲದ ಪರಿಮಿತಿಯನ್ನೇ ಮರೆತಿದೆ. ಎಂದೇ, ಏನೂ ಲಾಭದಾಯಕವಲ್ಲದ ಈ ಪುಸ್ತಕದ ಪ್ರಕಾಶನಕ್ಕೆ ಅವರು ಹಿಂದು ಮುಂದು ನೋಡದೆ ಮುಂದೆ ಬಂದಿದ್ದಾರೆ. ಅವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

ಒಮ್ಮೆ ಸೊಗಸಾದ ಮುದ್ರಣಕ್ಕೆ ಮಂಗಳೂರು ಮುದ್ರಣ ಎಂಬ ಹೆಸರಿ ದ್ದರೆ ಅದಕ್ಕೆ ಕಾರಣ ಇಲ್ಲಿಯ ಬಾಸೆಲ್ ಮಿಶನ್ ಪ್ರೆಸ್ಸಿನವರು. ಈ ಪ್ರೆಸ್ಸಿನ ಮೆನೇಜರರೂ ಕೆಲಸಗಾರ ಬಂಧುಗಳೂ ಈ ಪುಸ್ತಕದ ಮುದ್ರಣದ ಸೊಗಸಿ ಗಾಗಿ ಕಷ್ಟಪಟ್ಟು ದುಡಿದಿದ್ದಾರೆ. ಅವರಿಗೆ ನಾನು ಕೃತಜ್ಞ.

ಸಹೃದಯರೇ! ಕೊನೆಯದಾಗಿ ಈ ಪುಸ್ತಕವನ್ನು ಓದಲು ಕೈಗೆತ್ತಿಕೊಂಡಿ ರುವ ನಿಮಗಿದೋ ನನ್ನ ಅನಂತ ವಂದನೆಗಳು.

ನಿಮ್ಮ

ಬಂಟ್ವಾಳ,
ದ. ಕನ್ನಡ. }

ಏರ್ಯ ಲಕ್ಷ್ಮೀನಾರಾಯಣ ಆಳ್ವ.

ಪರಿವಿಡಿ

ರಸಿಕ ಮುದ್ದಣ
ಮುಗುದೆ ಮನೋರಮೆ

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವಽನೆ ನಾವು
ಆದಕು ಇದಕು ಎದಕು.

—ಅಂಬಿಕಾತನಯುದತ್ತ.

"ರಾಮಾಶ್ವಮೇಧ" ಕನ್ನಡ ಸಾಹಿತ್ಯದ ಆಗಸದಲ್ಲಿ ನಿರಂತರವಾಗಿ, ಚಿರಂತನವಾಗಿ, ಉಜ್ವಲವಾಗಿ ಬೆಳಗುವ ಬೆರಳೆಣಿಕೆಯ ಕೃತಿಗಳಲ್ಲಿ ಒಂದು. 'ಸಂಸ್ಕೃತದ ಬಾಣಭಟ್ಟನಂತೆ ಕನ್ನಡದ ಗದ್ಯ ವಿಧಾತನಾದ' ನಂದಳಿಕೆ ಲಕ್ಷ್ಮೀನಾರಾಯಣ ಅದರ ಕರ್ತೃ. ರಾಮಾಶ್ವಮೇಧದಲ್ಲಿ "ಮುದ್ದಣ" ಎಂಬುದು ಇವನ ಕಾವ್ಯನಾಮ. ಇವನು ಇದು ಮಾತ್ರವಲ್ಲದೆ "ಅದ್ಭುತ ರಾಮಾಯಣ" ಎಂಬ ಇನ್ನೊಂದು ಗದ್ಯ ಕಾವ್ಯವನ್ನು "ತಿರುಳ್ಗನ್ನಡಿಗನಡಿದಾವರೆಯ ಬಂಡುಣಿಗಳಪ್ಪ ಕನ್ನಡಗಬ್ಬಿಗರ ಮನೆಯೂಳಿಗದವನೊರ್ವಂ ಕನ್ನಡಿಗಂ" ಎಂಬ ಕಾವ್ಯನಾಮದಿಂದಲೂ, "ಶ್ರೀರಾಮ ಪಟ್ಟಾಭಿಷೇಕ" ಎಂಬ ವಾರ್ಧಕ ಷಟ್ಪದಿಯ ಪದ್ಯಕಾವ್ಯವನ್ನು "ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ" ಎಂಬ ಕಾವ್ಯನಾಮದಿಂದಲೂ, "ರತ್ನಾವತೀ ಕಲ್ಯಾಣ" ಮತ್ತು "ಕುಮಾರ ವಿಜಯ"ಗಳೆಂಬ ಯಕ್ಷಗಾನ ಪ್ರಬಂಧಗಳನ್ನು ನಿಜನಾಮದಿಂದಲೂ ರಚಿಸಿರುತ್ತಾನೆ. "ಜೋ ಜೋ" ಎಂಬ ಈತನ ಸಂಶೋಧನಾತ್ಮಕ ಲೇಖನ "ಚಕ್ರಧಾರಿ" ಎಂಬ ಹೆಸರಿನಲ್ಲಿ ಮಂಗಳೂರಿನ "ಸುವಾಸಿನಿ" ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದಲ್ಲದೆ "ಗೋದಾವರಿ" ಎಂಬ ಕಾದಂಬರಿಯೊಂದನ್ನು ಅರ್ಧಮರ್ಧ ಬರೆದಿದ್ದ. ಇನ್ನು ಕೆಲವನ್ನು ಬರೆಯುವ ಯೋಚನೆ ಮಾಡಿದ್ದ. ಆದರೆ ವಿಧಿಯು ಮಧ್ಯದಲ್ಲೇ ಈತನನ್ನು ತುತ್ತುಗೊಂಡು ಎಲ್ಲ ಯೋಚನೆ ಯೋಜನೆಗಳಿಗೆ ಪೂರ್ಣವಿರಾಮ ಹಾಕಿತು.

ರಾಮಾಶ್ವಮೇಧ ಇವುಗಳಲ್ಲೆಲ್ಲ ಶ್ರೇಷ್ಠವಾದುದು; ಜನರ ಮೆಚ್ಚಿಗೆ ಪಡೆದುದು. ಪಂಪನ "ಭಾರತ", ರನ್ನನ "ಗದಾಯುದ್ಧ", ನಾಗವರ್ಮನ "ಕಾದಂಬರಿ" ಇತ್ಯಾದಿ ಗ್ರಂಥಗಳೆಲ್ಲ ಪಂಡಿತರಿಂದ ಪ್ರಶಂಸೆ ಪಡೆದಿದ್ದರೂ ಸಾಮಾನ್ಯರಿಂದ ದೂರವಾಗಿಯೇ ಇವೆ. ಆದರೆ ಮುದ್ದಣನ ರಾಮಾಶ್ವಮೇಧದ ಬಗೆ ಬೇರೆ. ಅದು ಪಂಡಿತ ಪಾಮರರಿಬ್ಬರಿಂದಲೂ ಹೊಗಳಿಸಿಕೊಂಡಿದೆ. ಆಧುನಿಕ ರಸಿಕರ ಮನಸ್ಸನ್ನೂ ಸೂರೆಗೊಂಡಿದೆ.

ಹಳತು ಕತೆ, ಹಳೆಯ ಭಾಷೆ; ಆದರೂ ಅದರ ಹೊಳಪು ಹೊಸತು. ಅದರ ನಿತ್ಯ ನೂತನತೆ, ಸದಾ ರಂಜಕತೆಗಳ ಗುಟ್ಟು ಆ ಕತೆಯ "ಚೌಕಟ್ಟಾ"ದ ಮುದ್ದಣ-ಮನೋರಮೆಯರ ರಸಪೂರ್ಣ ಸರಸ ಸಂಭಾಷಣೆ ಯಲ್ಲಿದೆ. ರಾಮಾಶ್ವಮೇಧವನ್ನು ಒಮ್ಮೆಯೂ ಪೂರ್ತಿಯಾಗಿ ಓದದ ಕನ್ನಡದ ಸಾಮಾನ್ಯ ಓದುಗ ಕೂಡಾ ಅದರ ನಡುನಡುವೆ 'ರನ್ನವಣಿಯಂ ಪೊನ್ನಿಂ ಬಿಗಿದಂತೆಸೆವ' ಮುದ್ದಣ-ಮನೋರಮೆಯರ ಸರಸಸಲ್ಲಾಪವನ್ನು ಹಲವಾರು ಬಾರಿ ಓದದೆ ಇಲ್ಲ; ಮೆಲುಕುಹಾಕದಿಲ್ಲ. ಓದಿದನಿತುಸಲವೂ ಹೊಸತೊಂದು ಆನಂದದಿಂದ— ಪವಿತ್ರವೂ ಮಧುರವೂ ಆದ ಆನಂದದಿಂದ ಎದೆದುಂಬಿಕೊಳ್ಳದಿಲ್ಲ. 'ಬಲ್ಸೊಗಸು, ಬಲ್ಸೊಗಸು' 'ಮುಂತಿಲ್ಲ, ಪಿಂತಿಲ್ಲ' ಎನ್ನದಿಲ್ಲ.

ರಾಮಾಶ್ವಮೇಧದ ನಡುನಡುವೆ ಬರುವ ಈ ಸಂಭಾಷಣೆಗಳು "ಕಬ್ಬಿಗರ ಬಲ್ಲಹ ಮುದ್ದಣ"ನ ಬರಿಯ ಕಲ್ಪನೆಯ ಮಾತುಗಳಾಗಿದ್ದರೆ ಅವುಗಳಲ್ಲಿ ಅನಿತೊಂದು ಜೀವಕಳೆ ತುಂಬಿ ಬರುತ್ತಿದ್ದಿಲ್ಲ. ಎಷ್ಟಾದರೂ ಸತ್ಯದ ಸಾರ ದುಂಬದೆ, ಕವಿಯ ಕಲ್ಪನೆಯ ಕುಂಚ ಬಣ್ಣಬಳಿದ ಕಾಗದದ ಹೂವುಗಳಾಗು ತ್ತಿದ್ದುವು. ಸ್ವಲ್ಪ ಕಾಲ ಕಳೆದೊಡನೆಯೇ ಬಣ್ಣ ಮಾಸಿ, ಅವುಗಳ ನಿಸ್ಸಾರತೆ, ನಿರ್ಜೀವತೆ ಎದ್ದು ಕಾಣುತ್ತಿತ್ತು. ಅವು ಹಾಗಾಗದೆ ಸಜೀವವಾಗಿದ್ದು ನಾವು ಓದುತ್ತಾ ಹೋದಂತೆ ನಮ್ಮ ಹೃದಯದಲ್ಲಿ ರಸಾವಿರ್ಭಾವವನ್ನುಂಟು ಮಾಡುತ್ತಾ, ಅವುಗಳಲ್ಲೇ ತನ್ಮಯಗೊಳಿಸಿ, ತಾದಾತ್ಮ್ಯರಾಗುವಂತೆ ಮಾಡುವ ಶಕ್ತಿ ಅವುಗಳ ಹಿಂದಿರುವ ಜೀವಂತತನದಲ್ಲಿದೆ; ವಾಸ್ತವಿಕತೆಯಲ್ಲಿದೆ.

ಈ ವಾಸ್ತವಿಕತೆ ಲಕ್ಷ್ಮೀನಾರಾಯಣ ಮತ್ತು ಅವನ ಧರ್ಮಪತ್ನಿ ಕಮಲಾಬಾಯಿಯವರ ಸಂಸಾರ ಜೀವನದಿಂದಲೇ ಸ್ಫುರಿಸಿದೆ. ಶ್ರೀ ಹುರುಳಿ ಭೀಮರಾಯರು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಪ್ರಕಟವಾದ "ಮುದ್ದಣ" ಗ್ರಂಥದಲ್ಲಿನ "ಕವಿಯ ನೆನಪು" ಎಂಬ ತಮ್ಮ ಲೇಖನದಲ್ಲಿ ಒಂದೆಡೆ "ರಾಮಾಶ್ವಮೇಧವನ್ನು ಕವಿ ಎಲ್ಲಿಯಾದರೂ, ಯಾವಾಗಲಾದರೂ, ಏತರ ಆಧಾರದಿಂದಲಾದರೂ ಬರೆದಿರಲಿ, ಸಂಸಾರಚಿತ್ರದಲ್ಲಿ ನಿಜವಾದ 'ಮುದ್ದಣ-ಮನೋರಮೆ' ಯಾರೆಂದರೆ ಈ ಗಂಡ ಹೆಂಡಿರೆ— ಕವಿ ಮತ್ತು ಆತನ ಹೆಂಡತಿ. ಮನೆಗೆ ಬಂದ ಹೊಸದರಲ್ಲಿ ಮುಗ್ಧೆಯಾದ ಆ ಚಿಕ್ಕವಳನ್ನು, ಬೇಕುಬೇಕೆಂದೇ ಕೆಣಕಿ, ರೇಗಿಸಿ, ಅಳಿಸಿ, ನಗಿಸಿದುದನ್ನು ನಾನು ಕಂಡಿದ್ದೇನೆ. ಬಳಿಕ, ಕೊಂಚ ಕಾಲ ಕಳೆದ ಮೇಲೆ ಆಕೆಯೇ "ಮನೋರಮೆ"ಯಂತೆ ಈ "ಮುದ್ದಣ"ನಿಗೆ ಉತ್ತರ

ಕೊಡುವುದನ್ನೂ ಕೇಳಿದ್ದೇನೆ" ಎಂದು ಬರೆದಿದ್ದಾರೆ. ಹೀಗೆ ಆ ಸತಿಪತಿಯರ
ಜೀವನದ ನೆಲದಲ್ಲಿ ಬೇರುಬಿಟ್ಟು ಅಲ್ಲಿಂದ ಸಾರವನ್ನು ಹೀರಿಕೊಂಡುದರಿಂದಲೇ
ಕಾವ್ಯದ ಈ ಸಂಭಾಷಣೆ ಸಾಹಿತ್ಯದ ಆಗಸದಲ್ಲಿ ಇಂದೂ ಜೀವಂತವಾಗಿ
ತಲೆದೂಗುತ್ತಿದೆ. ಎಂದೆಂದೂ ಬಾಡದ ಚೈತನ್ಯ ಪಡೆದಿದೆ. ಈ ಪರಿಯಾಗಿ
ಮರ್ತ್ಯದ ಎರಡು ಗಂಡು ಹೆಣ್ಣುಗಳು ಸಾಹಿತ್ಯಲೋಕದಲ್ಲಿ ಆವಿರ್ಭವಿಸಿ
ಅಮರ್ತ್ಯರಾಗಿದ್ದಾರೆ. ಮಣ್ಣಿನ ಕಾಳಿಕೆಯನ್ನು ಕಾವ್ಯದ ಪರುಷಮಣಿಯ
ಸ್ಪರ್ಶದಿಂದ ಕಳೆದು ಕಾಲಾತೀತರಾಗಿ ಕಳಕಳಿಸುತ್ತಿದ್ದಾರೆ.

ಗದ್ಯಕಾವ್ಯವಾದ ರಾಮಾಶ್ವಮೇಧ ಮಳೆಗಾಲದ ವರ್ಣನೆಯಿಂದ
ಪ್ರಾರಂಭವಾಗಿದೆ. ಆ ವರ್ಣನೆ ಕೊನೆಗೊಂಡ ಬಳಿಕ ಹೀಗೆ ಮುಂದೆ ಸಾಗಿದೆ
"ಈ ತೆರದಿ ಕಾಡುಂ ನಾಡುಂ ಮನೋಜ್ಞಮಾಗೆ ಸಂಪ್ರಾಪ್ತಮಾದ ವರ್ಷಾ
ಕಾಲದೊಳೊಂದು ದೆವಸಂ ಬೈಗುಂಬೊಳ್ತಿನೊಳೆಂದಿನಂತಿರೋಲಗಂ ಪರಿಯೆ
ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊರಮಟ್ಟು ನೆರೆವೀದಿವಿಡಿದು
ಪೊರೆವೀಡಿಂಗೈತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆಳ್ದು
ಇದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕೈವಿಡಿದೊಳಚೌಕಿಗುಯ್ದು
ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿ
ವೊಡಿತ್ತು ಉಪಚರಿಸುತಿರ್ದಳ್. ಈಯುಪಚಾರದಿನಾತನ ಪಸಿವುಂ ಬಳಲ್ಕೆಯುಂ
ಮುಡಿಯೆ ಕೆಳದಿ ನರುದಂಬುಲಮಂ ಸವಿಯಲ್ಕೆಂದು ಮಡಿದೀಯುತುಂ" ಹೀಗೆ
ದಿನದ ದುಡಿತದಿಂದ ಬಳಲಿ, ಹಸಿವು, ಬಾಯಾರಿಕೆಗಳಿಂದ ಉತ್ಸಾಹಹೀನನಾದ
ಪತಿಯನ್ನು ಶ್ರದ್ಧೆ ಪ್ರೇಮಗಳಿಂದ ಸೇವಿಸಿ ಆತನಲ್ಲಿ ನವೋಲ್ಲಾಸ ತುಂಬಿದ ಬಳಿಕ
ಕುಶಲ ಗೃಹಿಣಿಯಂತೆ ಮನೋರಮೆ ತನ್ನ ಅಂತರಂಗದ ಬಯಕೆಯನ್ನು ಮೆಲ್ಲನೆ
ಮೆಲ್ನುಡಿಯಿಂದ ಹೊರಗೆಡಹುತ್ತಾಳೆ. "ನೋಳ್ಪುದೀಪಗಲ್ಗಳೆಂತೊ ಪಿರಿಯವು.
ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ
ಬೇಸತ್ತುದು. ಅಂತದರಿನೇನಾನುಮೊಂದು ನಲ್ಗತೆಯಂ ಪೇಳ!"

ಮೊದಲೇ ಮುದ್ದಿನ ಮಡದಿ. ಈಗಲಂತೂ ಆಕೆಯ ಶ್ರದ್ಧೆತುಂಬಿದ
ಸೇವೆ, ಒಲವು ತುಂಬಿದ ಮಾತು ಇವು ಮುದ್ದಣನ ಮನವನ್ನು ಸೂರೆಗೊಂಡಿವೆ.
ಇಂತಹ ಸ್ಥಿತಿಯಲ್ಲಿ ಮನೋರಮೆ ಏನು ಕೇಳಿದರೂ ಕೊಡುವ ಮನಸ್ಥಿತಿ
ಯಲ್ಲಿದ್ದಾನೆ ಮುದ್ದಣ. ಅಂತಿರುವಾಗ ಒಂದು ಕತೆ ಹೇಳು ಎಂದರೆ ಹೇಳ
ದಿರುವನೇನು? "ಪ್ರಾಣೇಶ್ವರೀ!" ಎಂದು ಮಡದಿಯನ್ನು ಸಂಬೋಧಿಸಿ "ತಡೆ

ಯೇಂ! ಇನಿತೊಂದು ಬಯಕೆ ತಲೆದೋರೆ ಆವ ಗಹನಂ?" ಎಂದಿದ್ದಾನೆ. ಆದರೆ ಹೇಳಬೇಕಾದ ಕತೆ ಯಾವುದು? ಇದನ್ನು ಆಕೆಯಿಂದಲೇ ಅರಿಯುವುದು ಉಚಿತ ತಾನೆ ಎಂದೇ ಮುಂದುವರಿಸಿ "ಆದೊಡಮಾವ ನಲ್ಗತೆಯಂ ಪೇಳ್ವೆಂ? ಏಂ ಭೋಜಪ್ರಬಂಧಂ? ವಿಕ್ರಮ ವಿಜಯಂ? ಮಹಾವೀರ ಚರಿತಂ?" ಎಂದು ಕೇಳಿದ್ದಾನೆ.

"ಇಸ್ಸಿ! ಇವರೊಳೆನಗಳ್ಕರಿಲ್ಲಂ" ಎಂದು ಒಮ್ಮೆಲೇ ಉತ್ತರಿಸಿದ್ದಾಳೆ ಮನೋರಮೆ. ಆ ಸರಳ ಹೆಣ್ಣುಜೀವಕ್ಕೆ ಮತ್ತೇನು ಬೇಕಾಗಿದೆ? ಕೇಳಿ! "ಉಳಿದೊಡಮುಳಿದೊಡಂ ಬಟ್ಟೆದೋರಿಪ ರಸಭರಿತಂ ಚರಿತಮೈಸೆ." ಮುದ್ದಣ ಹೇಳಿದುದು ಬಟ್ಟೆದೋರಿಪ ರಸಭರಿತಚರಿತ ಹೌದೊ ಅಲ್ಲವೊ ಎಂಬುದನ್ನು ಭಾವಿಸುವ ಗೊಡವೆಗೂ ಆಕೆ ಹೋಗಿಲ್ಲ. ಅದು ಆಕೆಗೆ ಬೇಕಾಗಿಯೂ ಇಲ್ಲ. ಆಕೆಗೆ ಬೇಕಾದುದು ಆಕೆಯ ಅರಿವಿನ ಪ್ರಪಂಚದೊಳಗಿನ ಕತೆ. ಭೋಜ, ವಿಕ್ರಮ, ಮಹಾವೀರರನ್ನು ಅವಳೇನು ಬಲ್ಲಳು.

ಮನೋರಮೆ "ರಸಭರಿತ" ಎಂದಳಲ್ಲಾ. ಆ ಮಾತನ್ನು ಹಿಡಿದು ಮುದ್ದಣ ಮುಂದುವರಿಸುತ್ತಾನೆ. "ನಿನಗಾವ ರಸದೊಳಿಷ್ಟಂ? ಶೃಂಗಾರ ರಸದೊಳೇ? ವೀರರಸದೊಳೇ? ಹಾಸ್ಯರಸದೊಳೇ?" ಮಡದಿಗೆ ರುಚಿಸುವ ರಸ ಯಾವುದೆಂದು ತಿಳಿದು ಕತೆ ಆಯ್ಕೆಮಾಡೋಣ ಎಂಬ ಯೋಚನೆ ಆತನದು.

ಆದರೆ ಮನೋರಮೆಯ ಉತ್ತರ ಮಾತ್ರ ಆತನಿಗೆ ಯಾವ ಹಾದಿಯನ್ನೂ ತೋರಿಸಿಕೊಟ್ಟಿಲ್ಲ. "ಆವ ರಸದೊಳೆಂದೊಡೇಂ? ನವರಸದೊಳಂ."

ಈಗ ಹೇಳಬೇಕಾದ ಕತೆ ಯಾವುದೆಂದು ನಿರ್ಣಯಿಸಲು ಆತನಿಗೆ ಅಸಾಧ್ಯವಾಗಿದೆ. ಎಂದೇ ಆಕೆಯೊಡನೆ ನೇರವಾಗಿ ಕೇಳುತ್ತಿದ್ದಾನೆ "ಅಂತಿರೆ ಮತ್ತಮಾಕತೆ ಯಾವುದು?"

"ರಾಮಾಯಣದೊಳೇನಾನುಮೊಂದು." ಆಕೆಯ ಉತ್ತರ ಈಗ ಸ್ವಲ್ಪ ಬೆಳಕು ಚೆಲ್ಲಿದೆ.

"ಅಂತೆಯೆ ಅಕ್ಕೆ. ಸೀತಾಸ್ವಯಂವರಮಂ ಪೇಳ್ವೆಂ." ಎಂದಿದ್ದಾನೆ ಮುದ್ದಣ ಒಂದು ನಿರ್ಧಾರಕ್ಕೆ ಬಂದು.

ಆದರೆ ಹೆಣ್ಣು ಆತನಿಗೆ ಬಿಡುಗಡೆಗೊಟ್ಟಿಲ್ಲ. "ಅಂ ಮುನ್ನಮೆ ಕೇಳ್ದಿರ್ಪೆ ನಲ್ಲೆ!" ಎಂದು ಆತನನ್ನು ಪುನಃ ಸಮಸ್ಯೆಯ ಸುಳಿಗೆ ನೂಕಿದ್ದಾಳೆ!

"ಏಂ ಸೀತಾಪಹರಣಕಥನದೊಳ್ ಬಯಕೆಯೆ?" ಗಂಡು ಈ ಬಾರಿ ಪ್ರಶ್ನ ಚಿಹ್ನೆಯಲ್ಲೇ ನಿಲ್ಲಿಸಿದೆ ಮಾತನ್ನು.

"ಊಃ! ಆನೊಲ್ಲೆಂ." ಹೆಣ್ಣಿನ ನೇರ ಉತ್ತರ.

"ಮೇಣಾವ ನಲ್ಗತೆಯಂ ಪೇಳ್ವೆನೋ?" ಗಂಡು ಈಗ ಬೇಸರಗೊಂಡು ಮಾರ್ನುಡಿದಿದೆ.

"ಇಂತೇಕುಸಿರ್ವಯ್?" ಎಂದಿದ್ದಾಳೆ ಮನೋರಮೆ. ಮುಂದುವರಿಸಿ "ನಾಡೊಳೆನಿತ್ತೊ ರಾಮಾಯಣಂಗಳೊಳವು. ನೀಂ ಕೇಳ್ವುದರೊಳೊಂದಂ ಸಲ್ಮೆ ದೋರೆ ಕಂಡುಪೇಳ್ವುದು," ಎಂದಿದ್ದಾಳೆ.

ಈಗ ಮುದ್ದಣನೂ ಊಹಿಸಿ, ಭಾವಿಸಿ, ಕೇಳಿ, ಹೇಳಿ ಬೇಡವೆನ್ನಿಸಿಕೊಳ್ಳಲು ಸಿದ್ಧನಿಲ್ಲ. "ನೀನೆ ಒಂದನಾಯ್ದುಕೊಳ್ವುದು."

ಪತಿಯನ್ನು ಇಷ್ಟು ದಣಿಸಿದ ಬಳಿಕ, ಆತನ ಊಹೆಗೆ ಇಷ್ಟು ಕೆಲಸ ಕೊಟ್ಟ ಬಳಿಕ, ಈಗ ಮನೋರಮೆಯೇ ಬಾಯಿಬಿಟ್ಟು ಹೃದಯದಿಚ್ಛೆಯನ್ನು ಹೊರಗೆಡಹಿದ್ದಾಳೆ "ಶ್ರೀರಾಮಂ ಅಶ್ವಮೇಧಮಂ ಕೈಕೊಂಡನೆಂಬರಲ್ತೆ ಆ ಕತೆಯೆ ಅಕ್ಕುಂ."

"ಈಗಳರಿತೆಂ; ಶೇಷರಾಮಾಯಣಮಂ ಪೇಳ್ವುದೆಂಬೆಯ?" ಎಂದಿದ್ದಾನೆ ಮುದ್ದಣ ಬಿಡುಗಡೆಯ ನಿಟ್ಟುಸಿರು ಬಿಟ್ಟು.

"ಅಪ್ಪುದಪ್ಪುದು. ಆದೊಡೆ ಮುನ್ನಮಾರಾರ್ಗಿದನೊರೆದರ್?" ಎಂದು ಕೇಳಿದ್ದಾಳೆ ಮನೋರಮೆ.

"ಮುನ್ನಂ ಶೇಷಂ ವಾತ್ಸ್ಯಾಯನಂಗೆ ಪೇಳ್ದನದನೆಯೆ ನಿನಗೆ ಬಿತ್ತರಿಪೆಂ" ಎಂದು ಮುದ್ದಣ ತನ್ನ ಶಂಕೆಯೊಂದನ್ನು ಹೊರಗೆಡಹುತ್ತಾನೆ "ಆದೊಡೆ ಬಲ್ಗತೆ ಕಣಾ! ಒಂದೆರಳ್ದಿವಸಕ್ಕೆ ಮುಡಿಯದು."

ಮಳೆಗಾಲ ಒಂದೇ ದಿವಸದಲ್ಲಿ ಮುಗಿದು ಹೋಗುತ್ತದೇನು? ನಿತ್ಯವೂ ಇಂದಿನಂತೆಯೇ ಹಗಲು ರಾತ್ರಿ ಎಡೆಬಿಡದೆ ಸುರಿಯುತ್ತಿರುವ ಬಲ್ಸೋನೆಯಿಂದ ಮನೋರಮೆಯ ಮನವು ಬೇಸರಿಸುತ್ತಾ ಇರಲಾರದೇನು? ಅದಕ್ಕಾಗಿಯೇ ಮನೋರಮೆಗೆ ಒಂದೆರಳ್ದಿವಸಕ್ಕೆ ಮುಗಿಯದ ಬಲ್ಗತೆಯೇ ಬೇಕಾಗಿದೆ. "ಇರ್ಕೆ. ಓರೊಂದು ದೆವಸಮಿನಿಸಿನಿಸಂಪೇಳ್ದೊಡೇಂ?" ಎಂದು ಹೇಳಿ, ಈ ಯೋಜನೆಗೆ ಮುದ್ದಣನ ಯೋಜನೆಯೇನು ಎಂಬುದನ್ನು ಅರಿಯಬಯಸಿದ್ದಾಳೆ ಆಕೆ.

"ಅಕ್ಕುಂ." ಎಂದು ಮುದ್ದಣ ತನ್ನ ಸಮ್ಮತಿಯನ್ನು ಸೂಚಿಸಿದ್ದಾನೆ. ಆದರೆ ಇನ್ನೂ ಒಂದು ಸಮಸ್ಯೆ ಪರಿಹಾರವಾಗಬೇಕಾಗಿದೆ ಆತನಿಗೆ. ಅದಕ್ಕಾಗಿ ಕೇಳುತ್ತಿದ್ದಾನೆ "ಆವ ಧಾಟಿಯೊಳ್ ಪೇಳ್ವೆಂ; ಪದ್ಯದೊಳ್ ಪೇಳ್ವೆನೋ? ಗದ್ಯದೊಳ್ ಪೇಳ್ವೆನೋ?"

ಮನೋರಮೆಯ ಸಾಮಾನ್ಯ ಮತಿಗೆ ಪದ್ಯ ಎಟಕದ ದ್ರಾಕ್ಷೆ; ಹುಳಿ. "ಪದ್ಯಂ ವಧ್ಯಂ; ಗದ್ಯಂ ಹೃದ್ಯಂ. ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು." ಎಂದಿದ್ದಾಳೆ.

ಮುದ್ದಣನಂತಹ ಪಂಡಿತಶ್ರೇಷ್ಠನಿಗೆ, ರಸಿಕ ಕಲಾವಿದನಿಗೆ, ಅರಿತ ಜೀವಕ್ಕೆ ಮನೋರಮೆಯ ಮಾತು ಕೇಳಿ ನಗೆ ಹೇಗೆತಾನೇ ಹುಟ್ಟದಿದ್ದೀತು? ತನ್ನ ಮಿತಿಯಲ್ಲೇ ಅತಿಯನ್ನು ಕಾಣುವ ಆ ಹೆಣ್ಣು ಹೃದಯದ ಬಗ್ಗೆ ಪ್ರೇಮ, ಕರುಣೆಗಳು ಉಕ್ಕಿಬಂದು ಮುಗುಳುನಗೆಯ ರೂಪುದಾಳುತ್ತವೆ. ತನ್ನ ರುಚಿಯನ್ನು ಹೇಳುವ ಬದಲು ತನ್ನ ರುಚಿಯಿಂದ ಲೋಕದ ರುಚಿಯನ್ನೇ ಅಳೆಯ ಹೊರಟ ಮಡದಿಗೆ ಹೇಳುತ್ತಾನೆ "ಅದಂತಿರ್ಕೆ." ಆಕೆಯ ಒಲವು ಗೊತ್ತಾಯಿತು. ಆ ಕುರಿತು ಅಷ್ಟೇ ಸಾಕು.

ಆದರೆ ಆತನಿಗೆ ಈಗ 'ತನ್ನತ್ತೆಯ ಮಗಳೊಡನೆ' ನಗೆಯಾಡಬೇಕಾಗಿದೆ. ಎಲ್ಲ ರಸಗಳನ್ನೂ ಬಯಸಿದ್ದ ತನ್ನವಳಿಗೆ ಶೃಂಗಾರರಸದೌತಣವನ್ನು ಮೊದಲು ಮಾಡಿಸಬೇಕಾಗಿದೆ! ಆತನ ರಸಿಕ ಚೇತನ ಎಚ್ಚತ್ತು ಸತಿಯೊಡನೆ ಸರಸವಾಡ ಬಯಸಿದೆ. ತನ್ನ 'ನಿಚ್ಚದ ಪೂಜೆಯ ಕಟ್ಟೆಚ್ಚಿನ ಪ್ರಾಣಲಿಂಗದೊಡನೆ'—'ಚೆನ್ನ ಪೊನ್ನರಸಿ'ಯೊಡನೆ ನನ್ನಿಯಾಡಲಿಚ್ಛಿಸಿದೆ. ಬಣ್ಣಬಣ್ಣದ ಮಾತಿನ ಸೇತುಕಟ್ಟಿ—ಇಂದ್ರಧನುವಿನಂತಹ ಸಪ್ತವರ್ಣದ ಸೇತುಕಟ್ಟಿ ಒಲವಿನ ಲೋಕಕ್ಕೆ ಪಯಣಗೈಯಲೆಳಸಿದೆ. ಅದಕ್ಕೆ ಪೀಠಿಕೆ ಹಾಕುತ್ತಿದ್ದಾನೆ. "ಇಂತಪ್ಪ ನಲ್ಲತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮುಂ ಪೊನ್ನಕಂಠಿಕೆಯಂ ಮೆಚ್ಚನೀವರ್. ನೀನೀವುದೇಂ?"

ಮನದಿನಿಯನ ಮಾತಿನಿಂದ ಮನೋರಮೆಯ ಮುಖದಲ್ಲೂ ಮುಗುಳು ಮಲ್ಲಿಗೆಯಂತಹ ಪರಿಶುದ್ಧ, ಪರಿಶುಭ್ರ ನಗೆ ಅರಳಬೇಕು. ಬೆಳಗಿನ ಎಳೆ ಸೂರ್ಯನ ರಶ್ಮಿಯಿಂದ ಸಾಮಾನ್ಯ ಮಂಜಿನ ಹನಿಯೂ ಸಾವಿರವರ್ಣದ ಸ್ವರ್ಗವನ್ನು ನಿರ್ಮಿಸುವಂತೆ ಮುದ್ದಣನ ಪ್ರಬುದ್ಧ ಚೇತನದ ಸಂಸರ್ಗದಿಂದ ಮನೋರಮೆಯ ಮುಗ್ಧ ಚೇತನವೂ ರಸಪೂರ್ಣವಾಗಿ ಮಾಗುತ್ತಾ ಹೋಗುತ್ತಿರು

ವುದನ್ನು ನಾವು ಕಾಣುತ್ತೇವೆ. ಆಕೆಯೂ ಮುದ್ದಣನ ಮಾತಿಗೆ ಮಾತು ಜೋಡಿಸುತ್ತಾ ಹೋಗಿ ಕೊನೆಗೆ ರಸಿಕತೆಯಲ್ಲಿ ಆತನಿಗೆ ಸರಿದೊರೆಯಾಗಿ ನಿಲ್ಲು ವುದನ್ನೂ ನಾವು ಮುಂದೆ ನೋಡುತ್ತೇವೆ. ಪತಿಯ ಮಾತಿನಿಂದ ರಸಾರ್ದ್ರವಾದ ಆಕೆಯ ಹೃದಯದಾಳದಿಂದ ಹೊರಹೊರಡುವ ಮಾತು ರಸಿಕರಿಗೆ ಬಂಗಾರದ ಗಣಿಯಾಗಿದೆ—"ಪೆರತೇಂ? ಎನ್ನನೆ ನಾನೀವೆಂ."

ನಮ್ಮಂತಹ ಸಾಮಾನ್ಯರೆಲ್ಲರೂ ಮನೋರಮೆಯ ಈ ಮಾತು ಕೇಳಿ ಹಿಗ್ಗಿ ಬೀಗಿಹೋಗುತ್ತಿದ್ದೆವು. ಆ ಮಾತಿನ ರೀತಿಗೂ, ಅದರಲ್ಲಿ ತುಂಬಿ ತುಳುಕುತ್ತಿರುವ ಪ್ರೀತಿಗೂ ಮಾರುಹೋಗಿ "ಹಾಂ! ಸರಿ." ಎಂದು ಕತೆಹೇಳಲು ಮೊದಲಿಡುತ್ತಿದ್ದೆವು. ಆದರೆ ರಸಿಕಾಗ್ರಣಿ ಮುದ್ದಣ ಮಾತ್ರ ಇಷ್ಟರಲ್ಲೇ ಸೋತಿಲ್ಲ. ಆತ ಚತುರತೆ ಯನ್ನು ಚತುರತೆಯಿಂದಲೇ ಎದುರಿಸಿದ್ದಾನೆ. ಪ್ರೀತಿಯನ್ನು ಪ್ರೀತಿಯಿಂದಲೇ ಎದುರುಗೊಂಡಿದ್ದಾನೆ. ಆದರೆ ಕೌತುಕದ ವಿಚಾರವೆಂದರೆ ಆ ಎರಡನ್ನೂ ಒಂದ ರಲ್ಲೇ ಸಮ್ಮಿಳಿತಗೊಳಿಸಿದ್ದಾನೆ. ಆತನ ಉತ್ತರ ಕೇಳಿ "ಬಲ್ಗಡುಸುಗಾರ್ತಿಯೈಸೆ! ಅರಿಯಾ ಮುನ್ನಮೆ ನಿನ್ನ ತಾಯ್ತಂದೆವಿರೆನಗಿತ್ತರೆಂಬುದಂ?"

ಮನೋರಮೆಯ ಹೃತ್ತಂತಿಯನ್ನು ಮುದ್ದಣನ ಇನಿವಾತಿನ ಬೆರಳು ಮೃದುವಾಗಿ ಮಿಾಟಿ ಅವರ್ಣನೀಯ ರಾಗವನ್ನು ಹೊರಡಿಸಿಯದೆ. ಅದರ ಮಂಜುಲ ದನಿ ಆಕೆಯನ್ನೇ ಪರವಶಗೊಳಿಸಿದೆ. ಆಕೆಯ ತನುಮನಗಳು ಮಧುರ ಭಾವದಿಂದ ಪುಳಕಿತಗೊಂಡಿವೆ. ಆದರೂ ಆಕೆ ಅದನ್ನು ತೋರಿಸಿಕೊಳ್ಳುತ್ತಿಲ್ಲ. ತೋರಿಸಿಕೊಂಡರೆ ಏನು ಚಂದ! "ಇದೇತರ ನುಡಿ! ಪೋಕೆ. ಆಂ ಪರಾಧೀನೆ ಗಡ!" ಎಂದು ಆಕೆ ಉಡುಗೊರೆಯ ವಿಚಾರವಾಗಿ ಜಾಣ್ಮೆಯಿಂದಲೇ ಉತ್ತರಿಸು ತ್ತಾಳೆ. "ಪುರಾಣಮನೋದಿದಿಂ ಬಳಿಯಮಲ್ತೆ ದಕ್ಷಿಣೆಯನೀವುದು. ಅರಮನೆ ಯವರುಂ ಕಬ್ಬಮಂ ಕಂಡಲ್ತೆ ಕಜ್ಜಳಿಯನಿತ್ತರ್. ಆನುಂ ಕತೆಯಂ ಕೇಳ್ದು ಸೊಗಸಾಗೆ ಬಲ್ಲಂತೆ ಸನ್ಮಾನಿಸುವೆಂ." ಮನೋರಮೆಯೂ ಚಾತುರ್ಯದಲ್ಲಿ ಹಿಂದೆ ಬಿದ್ದಿಲ್ಲ; ಎಷ್ಟು ಉಪಾಯದಿಂದ ಮುದ್ದಣನ ಬಾಯಿಮುಚ್ಚಿಸಿದ್ದಾಳೆ.

ಮುದ್ದಣ ಸೋತಿದ್ದಾನೆ. ಆದರೂ ಅಲ್ಲಿ ಸೋಲಿನ ನೋವಿಲ್ಲ. ಬದಲು ಆನಂದವಿದೆ. ತನ್ನವಳ ಜಾಣ್ಮೆ ಕಂಡು ಮೆಚ್ಚಿಗೆ ಇದೆ. "ಒಳ್ಳಿತೊಳ್ಳಿತು! ಕತೆಯ ನಾಲಿಸಿ ಬಳಿಕ್ಕಮೀಯೆನೆಂದೊಡೆ ಬಿಡೆಂ ನೋಳ್ಪೆಂ."

"ಆನುಂ ನೋಳ್ಪೆಂ ಕತೆಯ ಪುರುಳೆಂತಿರ್ಕುಮೆಂದು." ಪ್ರಾಯಶಃ ಕೈ

ಯೆತ್ತಿ, ಹುಬ್ಬುಹಾರಿಸಿ, ಮುಗುಳುನಕ್ಕೇ ಹೇಳಿರಬೇಕು ಈ ಮಾತನ್ನು ಮನೋರಮೆ. ಇಲ್ಲಿಯೂ ಆಕೆಯದೇ ಮೇಲುಗೈ.

ಸರಿ, ಮುದ್ದಣ ಕತೆಹೇಳಲು ಮೊದಲಿಟ್ಟಿದ್ದಾನೆ. "ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರಮಣಿಮಕುಟತಟಘಟಿತ—"

"ಓಓ! ತಡೆ! ತಡೆ!" ಎಂದು ಅರ್ಧದಲ್ಲೇ ನಿಲ್ಲಿಸಿದ್ದಾಳೆ ಮುದ್ದಣನನ್ನು. ಕಾರ್ಗಾಲದಲ್ಲಿ ಒಂದರಹಿಂದೊಂದು ಗುಡುಗುಡಿಸುವ ಸಿಡಿಲರವದಂತೆ ಇದೇನಪ್ಪಾ ಶಬ್ದಗಳ ತಾಕಲಾಟ ನಡಿಸಿದ್ದಾನೆ ಎಂದು ಮನೋರಮೆ ಅವಾಕ್ಕಾಗಿದ್ದಾಳೆ. ಅರ್ಥತಿಳಿಯದೆ ಬೆಪ್ಪಾಗಿದ್ದಾಳೆ. ರಾಮಚಂದ್ರನ ಕತೆಯ ಹೇಳೆಂದರೆ ಸುರೇಂದ್ರ ನರೇಂದ್ರರ ಕುರಿತು ಹೇಳಹೊರಟಿರುವನಲ್ಲಾ ನಲ್ಲ!—ಇದು ಅವಳ ಮನದ ಮಾತು. ಹಾಗೆಂದೇ ಕೇಳುತ್ತಿದ್ದಾಳೆ "ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯ ಪೇಳೆನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇಳ್ವುದೇಂ?" ಇಲ್ಲೂ ಆಕೆಯ ರಸಿಕತೆ ಮಾಯವಾಗಿಲ್ಲ. ಎಂದೇ ಮುದ್ದಣನನ್ನು ಚುಚ್ಚಿದ್ದಾಳೆ "ಸಾಲ್ಗುಂ ಸಾಲ್ಗುಂ. ಇಂತೆರ್ದೆಗೊಳ್ಳ ಕತೆಗೆಂತುಡುಗೊರೆಯಂಗೆಯ್ವೆನೋ!"

ಸಂಸ್ಕೃತವರಿಯದೆ ಬೆಪ್ಪಾದ ತನ್ನಿನಿಯಳ ಮಾತುಗಳನ್ನು ಕೇಳಿ ನಗೆಯ ಬದಲು ಕರುಣೆ ಪ್ರೇಮಗಳು ತಲೆದೋರಿವೆ ಮುದ್ದಣನಲ್ಲಿ. "ನಲ್ನುಡಿಯಿದು ರಮಣಿ! ಕಜಂಗಳಾಣೆ. ಅಲ್ತು ಬಸದಿಯಿಂದ್ರರ ಕತೆಯಲ್ತು; ರಾಮಚಂದ್ರನ ಕತೆಯನೆ ಪೊಗಳ್ದು ಪೇಳ್ವುದಿದು ಸಕ್ಕದದೊಂದು ಚೆಲ್ವು."

ಈಗ ಮನೋರಮೆಗೆ ನಿಜದ ಅರಿವಾಗಿದೆ. ತನ್ನ ಅಜ್ಞಾನವು ತಿಳಿದಿದೆ. ಆದರೆ ಆ ಅಜ್ಞಾನಕ್ಕಾಗಿ ಆಕೆ ನಾಚಿಕೊಂಡಿಲ್ಲ. ನಾಚಿಕೊಳ್ಳುವುದಾದರೂ ಯಾರೊಡನೆ? ಅಜ್ಞಾನವೇ ಮಧುರವಾಗಿರುವಲ್ಲಿ ನಾಚಿಕೊಳ್ಳುವುದಾದರೂ ಯಾಕೆ? "ಲೇಸು, ಲೇಸು! ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು; ಕನ್ನಡದ ಸೊಗಸನರಿಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ ಪೇಳ್ವುದು ಗಡ!" ಎಂದಿದ್ದಾಳೆ ಸರಳವಾಗಿ ಎದೆ ಬಿಚ್ಚಿ.

"ಅಪ್ಪೊಡಿನ್ನೆಂತೊ ಒರೆವೆಂ?" ಎಂಬ ಮುದ್ದಣನ ಪ್ರಶ್ನೆಗೆ ಮನೋರಮೆ ಕೊಟ್ಟ ಮಾರುತ್ತರ ನೋಡಿ "ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಳ್ವುದು." ಹೇಳುತ್ತಾ, ಹೇಳುತ್ತಾ ಆಕೆಗೆ ಕನ್ನಡದ ಬಗೆಗೆ ತನ್ನ ಕನ್ನಡದ ಕುರಿತು ಒಲವು ಉಕ್ಕೇರಿದೆ; "ಕನ್ನಡಂ ಕತ್ತುರಿಯಲ್ತೆ" ಎಂದು ಅಭಿಮಾನದಿಂದ ಸಗರ್ವಳಾಗಿಯೇ ಹೇಳುತ್ತಾಳೆ.

ಮುದ್ದಣ ಅದನ್ನು ಒಪ್ಪಿಕೊಂಡು 'ರನ್ನವಣಿಯುಂ ಪೊನ್ನಿಂ ಬಿಗಿದಂತೆ', 'ಕರ್ಮಣಿಸರದೊಳ್ ಚೆಂಬವಳಮುಂ ಕೋದಂತೆ' ನಡುನಡುವೆ ಸಕ್ಕದದ ನಲ್ನುಡಿ ಸೇರಿಸಿ 'ರಸವೊಸರೆ, ಲಕ್ಕಣಂ ಮಿಕ್ಕಿರೆ ತಿರುಳ್ಗನ್ನಡದೊಳೆ ಕತೆಯನುಸಿರ್ದಂ.'

* * *

ಹೇಳಬೇಕಾದ ಕಥೆ, ಕಥೆಯ ಧಾಟಿ, ನಿರೂಪಿಸುವ ಭಾಷೆ, ಅದರ ರೀತಿ ನೀತಿಗಳನ್ನು ಅರಿತುಕೊಂಡ ಮೇಲೆ "ಕೇಳೆಲೆ ಬಾಲೆ! ಬಾಲೇಂದುಫಾಲೆ!" ಎಂದು ಮುದ್ದಣ ಕತೆಹೇಳಲು ವೊದಲಿಟ್ಟಿದ್ದಾನೆ. ರಾಮಚಂದ್ರನ ಹುಟ್ಟು, ಆತನ ಪಟ್ಟಗಳಾದ ಮೇಲೆ ರಾಮನ ಗುಣಗಾನ ನಡೆದು ಮುಂದೆ ರಾಮರಾಜ್ಯದ ವರ್ಣನೆಗೆ ಪ್ರಾರಂಭಿಸಿದ್ದಾನೆ. ಹಲವು ಬಗೆಯಿಂದ ರಾಮರಾಜ್ಯವನ್ನು ವರ್ಣಿಸಿ ಕೊನೆಗೆ "ಮನೋಹರೆ! ಮನೋರಮೆ! ಇಚ್ಛಾರ್ಭಸಿರನಾಲಗೆಯಿರ್ದುಮಿಾ ರಾಮ ರಾಜ್ಯವಂ ಸೇಸಂ ಬಣ್ಣಿಸಲಾರ್ತನಿಲ್ಲಂ; ಇಂತಿರೆ ಗಾಂಪಂ ಕಾಲುರಿಚನೆನಗಳವೆ!" ಎಂದಿದ್ದಾನೆ.

ಮುದ್ದಣ ಹೀಗೆ ಹೇಳಿದ್ದಾನೇನೋ ನಿಜ; ಆದರೆ ರಾಮರಾಜ್ಯದ ಕುರಿತಾದ ಹೊಗಳಿಕೆಯ ವಿವರಣೆಯನ್ನು ಕೊನೆಗೊಳಿಸಿಲ್ಲ. ಬಣ್ಣನೆಯ ಬಳ್ಳಿ ಕೊನೆಗಾಣದೆ ಕೊನರುತ್ತಲೇ ನಡೆದಿದೆ. "ನೋಡ!", "ನೋಳ್ಪುದು ನೋಳ್ಪುದಿತ್ತಲ್", "ಇವೆಕೊಳ್", "ಇದೆ", "ಓ! ಓ!", "ಇದೆಕೊಳಿದೆಕೊಳ್", "ನಡೆ! ಪೋಪಂ. ಓ! ಇದೆ ಇದೆ!" ಎನ್ನುತ್ತಾ ಕಂಡುದನೆಲ್ಲಾ ಬಣ್ಣಿಸುತ್ತಾ ಸಾಗಿದ್ದಾನೆ. "ಈಗ ಳಿತ್ತಲ್ ಕೇರಿಗಳಂ ನೋಳ್ಪುದು" ಎಂದು ಮುದ್ದಣ ಹಳ್ಳಿಕಾಡುಗಳನ್ನು ಮುಗಿಸಿ ನಗರದ ವರ್ಣನೆಗೆ ವೊದಲಿಡತೊಡಗಿದ್ದಾನೆ.

ಇದನ್ನೆಲ್ಲ ಕೇಳುತ್ತಾ ಮನೋರಮೆಗೆ ಆಶ್ಚರ್ಯವೂ ಬೇಸರವೂ ಆಗಿದೆ. ತನ್ನಿಂದೇನು ಸೇಸನಿಂದಲೂ ಸಾಗದು ಎಂದುದನ್ನೇ ಮತ್ತೂ ಮತ್ತೂ ವಿಸ್ತರಿಸುತ್ತಾ ದಣಿವುಕಾಣದೆ ಹೇಳುತ್ತಾ ಸಾಗಿರುವ ಪತಿಯನ್ನು ಕಂಡು ಆಶ್ಚರ್ಯ; ಕಥೆಯನ್ನು ಒತ್ತಟ್ಟಿಗೆ ಬಿಟ್ಟು ಪಾಂಡಿತ್ಯ ಪ್ರದರ್ಶನಕ್ಕೆ ತೊಡಗಿರುವುದನ್ನು ಕಂಡು ಬೇಸರ. ಆಕೆಗೆ ಬೇಕಾದುದು ಕಥೆ. ಬೇಸರ ಕಳೆಯಲೆಂದು ಕಥೆ. ಈ ಅಲಂಕಾರ, ಉಪಮೆ, ರೂಪಕಗಳ ಜಂಜಾಟವಲ್ಲ. ಇವು ಮನೋರಮೆಯ ಪಾಲಿಗೆ ಮಳೆಗಾಲದ ಜಿನುಗು ಮಳೆಗಿಂತಲೂ ಹೆಚ್ಚು ಬೇಸರತರುವ ವಿಚಾರ. "ರಮಣ! ಇದೇಂ ನೋಳ್ಪುದು ನೋಳ್ಪುದೆಂದು ಪೊಳೆಯಂ ಬೆಳೆಯನಾವುದಂ ಬಣ್ಣಿಸಲ್ ಪೋಪಯ್!

ಮೇಣುಂ ತೋರಿದಪುದೆತ್ತಣಿನಿದುಂ?" ಎಂದು ಬಣ್ಣನೆಯ ಭರದಲ್ಲಿ ಮೈಮರೆತಿರುವ ಪತಿಯನ್ನು ಎಚ್ಚರಿಸಿದ್ದಾಳೆ.

ಮುದ್ದಣ ತಡವರಿಸಿಲ್ಲ. "ಎನ್ನರಸಿ! ಪೆರತಾವುದು ಮಲ್ತು; ಅಯೋಧ್ಯಾ ನಗರದ ಬಣ್ಣನೆಯ್ಯೆಸೆ!"

ಮನೋರಮೆಗೆ ಆನಂದವಾಗಿದೆ. ಆಣ್ಮನ ಮರವೆಯನ್ನು ಎತ್ತಿ ಹೇಳುವ ಸರ್ತಿ ತನ್ನದೆಂದು. ಅದು ಪ್ರಿಯವಾದ ಹೆಮ್ಮೆಯೂ ಹೌದು. ಆ ಭಾವದಿಂದಲೇ ಆಕೆ ಆತನಿಗೆ ನೆನವರಿಕೆ ಮಾಡಿಕೊಡುತ್ತಿದ್ದಾಳೆ "ಆಗಳೆ ಪೇಳ್ದೆಯಲ್ತೆ ತನ್ನಿಂ ಮುಡಿಯದೆಂದು."

"ಅಪ್ಪುದಪ್ಪುದು! ತಪ್ಪೇಂ?" ಮುದ್ದಣನದು ಶಂಕೆಗಾಣದ ಉತ್ತರ.

ಮನೋರಮೆಗೆ ಒಮ್ಮೆಲೇ ಆಗಸದಿಂದ ಬಿದ್ದಂತಾಗಿದೆ. "ಅಂತಾದೊಡೇಂ ಕನಸೊ? ನನಸೊ?"

ನಗೆಚಾಟಿಕೆ ಮಾಡಲು ಎಲ್ಲಿ ಅವಕಾಶ ಸಿಗುತ್ತದೆ ಎಂದು ಹೊಂಚು ಹಾಕುತ್ತಿರುವ ಮುದ್ದಣನಿಗೆ ಇದೊಂದು ಸುವರ್ಣ ಸಂಧಿ! ಆಕೆಯನ್ನು ಮರುಳು ಮಾಡಿ ಅದರಿಂದ ಆನಂದ ಪಡೆಯುವ ಆತನ ಹಂಬಲಕ್ಕೆ ಇದೊಂದು ಸುಸಂದರ್ಭ! ಇದನ್ನೆಂತು ಬರಿದೆ ಹೋಗಗೊಟ್ಟೀತು ಮುದ್ದಣನ ರಸಿಕತೆ. ತೋರಿಕೆಗೆ ಮುಗ್ಧನಾಗಿಯೇ ಉತ್ತರಿಸುತ್ತಾನೆ "ಇದೇತರ ನುಡಿ ರಮಣಿ!"

ಮನೋರಮೆಯ ಆಶ್ಚರ್ಯಕ್ಕೆ ಇತಿ ಮಿತಿಯಿಲ್ಲ. ಇದು ಅರಿವೊ ಮರವೊ ಎಂಬುದು ಆಕೆಗೆ ಅರಿಯದಾಗಿದೆ. "ಅಲ್ಲದೊಡೀಗಳೆ ಎನಗೊರ್ಮೆ ನೆಲನಂ ಮತ್ತೊರ್ಮೆ ಪೊಲನಂ ತೋರಿ ಬಣ್ಣಿಪುದೇಂ?"

ಮನೋರಮೆಯನ್ನು ಇನ್ನೂ ಕುಣಿಸೋಣ, ದಣಿಸೋಣ, ಹಾಗೆ ಅಂದ ನೋಡೋಣ ಎಂಬ ಉಲ್ಲಸಿತ ಮನಃಸ್ಥಿತಿಯಲ್ಲಿದ್ದಾನೆ ಮುದ್ದಣ. "ಅಲ್ತಲ್ತು; ಈ ಬಣ್ಣನೆಯನಾಂ ಪೇಳ್ವುದುಮಲ್ತು ನೀಂ ಕೇಳ್ವುದುಮಲ್ತು." ಎಂದು ಆತ ಜೋಲಿ ಹೊಡೆಯುತ್ತಿರುವ ಮನೋರಮೆಯ ಮತಿಗೆ ಇನ್ನೊಂದು ಹೊಡೆತ ಹಾಕಿದ್ದಾನೆ.

ಮನೋರಮೆ ನಿಂತ ನೆಲವೇ ಕುಸಿದಿದೆ. ಮುದ್ದಣನ ಸಮಸ್ಯಾತ್ಮಕ ಮಾತುಗಳ ಸುಳಿಯಲ್ಲಿ ಸಿಕ್ಕು ಆಕೆಯ ಮತಿಗೆ ಹಿಂದು ಮುಂದು ಅರಿಯದಾಗಿದೆ. ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತೆನಿಸಿದೆ. ಇದು ಬಿಡಿಸಲಾಗದ ಸಮಸ್ಯೆಯ ಸುಳಿ. ಎಲ್ಲಿಗೆಂದೋ ಈಸು ಬಿದ್ದವಳು ಮುದ್ದಣನ ಮಾತಿನ ಪ್ರವಾಹಕ್ಕೆ ತೇಲಿ ಬಂದು ಈ

ಸುಳಿಯಲ್ಲಿ ಸಿಕ್ಕು ಬಿದ್ದಿದ್ದಾಳೆ. ಹಿಂದು ಮುಂದು ಕಾಣದಲ್ಲಿ ವ್ಯರ್ಥ ತೊಳಲಾಡುವುದಕ್ಕಿಂತ ಶರಣಾಗುವುದೇ ಮೇಲೆಂಬ ವ್ಯವಹಾರಜ್ಞತೆಯಿಂದ ಈಗ ಆಕೆ ಪತಿಯನ್ನೇ ಮರೆಹೊಕ್ಕಿದ್ದಾಳೆ—"ಎನ್ನೊಡೆಯ! ಸಂದೆಯಮಿನ್ನುಂ ಪೋದುದಿಲ್ಲಂ." ಇಲ್ಲಿ ಆಕೆ ಮುದ್ದಣನನ್ನು "ಎನ್ನೊಡೆಯ" ಎಂದುದು ಎಷ್ಟು ಅರ್ಥಪೂರ್ಣವಾಗಿದೆ!

ತನ್ನನ್ನು ತಿದ್ದಹೊರಟು, ಮುಗ್ಗರಿಸಿ ಬಿದ್ದು ಈಗ ತನಗೇ ಶರಣಾಗಿರುವ ಸತಿಗೆ ಹೆಮ್ಮೆಯೊಡನೆ "ಆದೊಡಾಲಿಸು!" ಎಂದು ಮುದ್ದಣ ಮುಂದುವರಿಸಿದ್ದಾನೆ. "ಶ್ರೀ ರಾಮಚಂದ್ರಮನಂತರಸುಗೆಯ್ಯುತ್ತಿರಲೊಡಮೊರ್ಮೆ ದರ್ಶನಾರ್ಥಮಗಸ್ತ್ಯಂ ನಿಜಶಿಷ್ಯಂಬೆರಸಯೋಧ್ಯೆಗೈತರ್ಪ ಪದನೊಳ್ ಬಣ್ಣಿಸಿ ಪೇಳ್ದ ನುಡಿಗಳಿವು. ಅದನೆ ಕಂಡುಗಮಂ ಬಳ್ಳದೊಳಳೆದೆನ್ನೈಸೆ!".

"ಓಹೋ! ಈಗಳರಿತೆಂ." ಎಂದಿದ್ದಾಳೆ ಮನೋರಮೆ. ಹಾದಿಯ ಸುಳುವು ಗೊತ್ತಾಯಿತು. ಈಗ ಹಿಂದನ್ನು ಮರೆತು ಮುಂದನರಿವ ಕುತೂಹಲದಲ್ಲಿದೆ ಆಕೆಯ ಮನ. ಈ ಸುತ್ತು ಸುರುಳಿಯು ಬಿಚ್ಚುತ್ತಾ ಹೋಗುವಾಗ ಏನು ಕೌತುಕ ಕಾದಿದೆಯೋ, ಸೌಂದರ್ಯ ಸೂಸುವುದೊ, ಆನಂದ ಉಕ್ಕುವುದೊ ನೋಡೋಣ ಎಂಬೆಣಿಕೆಯಿಂದ ಆಕೆಯ ಮನ ನೆಗೆದು ನಿಂತ ಕುದುರೆಯಾಗಿದೆ. "ಮುಂತೇಂ ಮುಂತೇಂ?" ಎಂದಿದ್ದಾಳೆ ತಡೆಯದಾತುರದಿಂದ.

ಮನೋರಮೆಯ ಮನ ನೆಗೆದು ನಿಂತಿತೋ ಮುದ್ದಣ ಕಡಿವಾಣ ಹಾಕಿಯೇ ತೀರುತ್ತಾನೆಂಬುದು ಸ್ಪಷ್ಟ! ಈಗಲೋ ಆತ ಜಿಪುಣಾಗ್ರೇಸರ. ಕಿವಿ ಕರಕರಿಸುವಷ್ಟು ಮಾತುಗಳನ್ನು ಬಣ್ಣನೆಗೆ ವ್ಯಯಿಸಿದ್ದವ, ಮತ್ತೂ ವ್ಯಯಿಸ ಬಯಸಿದ್ದವ ಇನ್ನು ಒಂದು ಮಾತನ್ನೂ ಅದಕ್ಕೆ ಖರ್ಚು ಮಾಡಲಾರ. ಆತನೇ ವರ್ಣಿಸಲೆಳಸಿದ್ದ ಕೇರಿಗಳಂತೂ ಎತ್ತಹೋದುವೊ! "ಪ್ರಿಯೆ! ಈ ಪರಿಯೊಳೋರೊಂದೆಡೆಯಂ ಶಿಷ್ಯಂಗೆ ತೋರಿಸುತುಂ ಕುಂಭೋದ್ಭವಂ ಶ್ರೀ ರಾಮನೋಲಗಕೆ ಬರುತುಮಿರ್ದಂ." ಈ ಕುರಿತು ಇಲ್ಲಿಗೇ ಪೂರ್ಣವಿರಾಮ!

ಮುದ್ದಣನ ಸವಿಗಾರಿಕೆಗೆ ನೇರ ಹಾದಿ ಸಲ್ಲದು. ಹಾಗೆಂದು ಆತನ ಬಳಸುದಾರಿ ಬೇಸರ ತರಿಸುವಂತಹುದಲ್ಲ. ಹೆಜ್ಜೆ ಹೆಜ್ಜೆಗೂ ಸೌಂದರ್ಯ ಸೂಸುವಂತಹುದು; ಆನಂದದಾಯಕವಾದುದು; ಕೌತುಕಪೂರ್ಣವಾದುದು. "ಮುಂತೇಂ? ಮುಂತೇಂ?" ಎಂದು ತವಕಿಸಿ ಮುನ್ನಡೆಸುವಂತಹ ಪ್ರಿಯವಾದ ಸುತ್ತುದಾರಿ. ಹೀಗಿರುವಲ್ಲಿ ದಾರಿ ನೇರವಾಗಿ ಬೇಗ ಕೊನೆಗೊಂಡರೇ ವ್ಯಸನ.

ಇನ್ನಷ್ಟು ಬೆಳೆಸಾಗಿರಬಾರದಿತ್ತೇ ಎಂದು ಆಶೆ ಪಡುವಷ್ಟು ಮಧುರವಾದುದು ಆತನ ಹಾದಿ. ಅಷ್ಟು ರಸಪೂರ್ಣವಾದುದು ಹೇಳುವ ರೀತಿ.

ಸೀತಾ ಪರಿತ್ಯಾಗದ ಕತೆ ಹೇಳಬೇಕಾದರೆ ಅಶ್ವಮೇಧದ ಕತೆಯಿಂದಲೇ ಪ್ರಾರಂಭಿಸುತ್ತಾನೆ ಮುದ್ದಣ. ಹೇಳುವ ಬಗೆ ಮನೋರಮೆಯ ಕುತೂಹಲವನ್ನು ಕೆರಳಿಸುತ್ತದೆ. ಸರಿ ಆಕೆಯ ಕುತೂಹಲವನ್ನು ತಣಿಸಲೆಂದು ಹಿನ್ನೆಲೆಯನ್ನು ಹೇಳುತ್ತಾನೆ. ಹೀಗೆ ಸೀತಾಪರಿತ್ಯಾಗದ ಕತೆ— "ರಾಮಾಶ್ವಮೇಧ"ದ ಮುಖ್ಯ ಭಾಗ ನಿರೂಪಿಸಲ್ಪಡುತ್ತದೆ.

ರಾವಣ ಕುಂಭಕರ್ಣಾದ್ಯರ ಹತ್ಯೆಯ ಪಾತಕ ಕಳೆಯಲೆಂದು ಅಗಸ್ತ್ಯನ ಉಪದೇಶದಂತೆ ರಾಮ ಅಶ್ವಮೇಧವನ್ನು ಮಾಡಲು ನಿರ್ಧರಿಸುತ್ತಾನೆ. 'ಬಸಂತಂಗೆ ನಡುಜವ್ವನಂ ಬರೆವರೆ ಕಾಣುತೆ ವಸಿಷ್ಠಂ. ರಾಘವಂಗೆ— "ಇದೀಗಳ್ ಸಮಯಂ ಯಾಜ್ಞೀಯಾಶ್ವಮಂ ಪೂಜಿಸಲ್ಕೆ, ದಿಗ್ದೇಶಂಗಳಿಂ ಕಪ್ಪಕಾಣ್ಕೆಗಳಂ ತರಲ್ಕೆ, ನೆರೆದ ವಿಪ್ರಸಂದೋಹಮಂ ದಾನಂಗಳಿಂ ಸಮ್ಮಾನಿಸಲ್ಕೆ. ಅಂತರಿಂ ನೀಂ ಪೊನ್ನಸೀತೆವೆರಸು ವ್ರತವನಪ್ಪುಕೆಯ್ವುದೆಂದೆಚ್ಚರಿಸಿದಂ."

ಮುದ್ದಣನ ಕೊನೆಯ ಮಾತು ಮನೋರಮೆಯ ಕಿವಿಗೆ ಬಿತ್ತೊ ಆಕೆಯ ಕೌತುಕಕ್ಕೆ ಎಲ್ಲೆ ಮಿತಿಯಿಲ್ಲ. ಎಲ್ಲಿಲ್ಲದ ಅಚ್ಚರಿ. "ರಮಣ! ಇಂತಿದೇಂ ಪೊನ್ನ ಸೀತೆಯೆಂಬೈ? ರನ್ನ ಸೀತೆಯೆತ್ತವೋದಳ್?" ಎಂದು ಒಮ್ಮೆಲೆ ಕೇಳಿದ್ದಾಳೆ. ಆ ಹೆಣ್ಣುಹೃದಯ ಸೀತೆಯು ಇಲ್ಲದಿರುವಿಕೆಗೆ ಕಾರಣವನ್ನು ಅದರ ಸಾಮಾನ್ಯ ಬುದ್ಧಿಯಿಂದಲೇ ಊಹಿಸಿದೆ "ಜನಕಂ ಜನಕಂ ಕರೆದುಯ್ದಿರ್ದನೇಂ?" (ಶಿವಮೊಗ್ಗೆಯಂತಹ ದೂರದ ಊರಿನಲ್ಲಿ ತವರು ಮನೆಯಿರುವ ಆಕೆಗೆ—ಅದೂ ಬಸ್ಸು ಚಲಾವಣೆಯಿಲ್ಲದ ಆ ದಿನಗಳಲ್ಲಿ ಸೀತೆಯ ಇಲ್ಲದಿರುವಿಕೆಗೆ ಕಾರಣ ಆಕೆ ತವರು ಮನೆಯಲ್ಲಿರುವುದರಿಂದಲೇ ಎಂದು ಊಹಿಸಿದುದು ಮನೋರಮೆಯ ಅಂತರಂಗದ ಆಶೆಗೆ ಎಷ್ಟು ಚೆನ್ನಾಗಿ ಬೆಳಕು ಚೆಲ್ಲುತ್ತಿದೆ!) ಆದರೂ ದಿಗ್ದೇಶಗಳಿಂದ ಜನರು ನೆರೆಯುವ ಇಂತಹ ಮಹಾಸಂಭ್ರಮದ ಕಾಲದಲ್ಲಿ, ಇಷ್ಟು ಹಿರಿದಾದ ವ್ರತದ ಸಮಯದಲ್ಲಿ ಮಡದಿಯನ್ನು ಕರೆಯಿಸಿಕೊಳ್ಳದಿರುವುದೇ ಎಂದು ಆಕೆಯ ಯೋಚನೆ. ಹಾಗೆಂದೇ ಕೇಳುತ್ತಾಳೆ "ಅಂತಿರೆಯುಂ ಮಗುಳ್ದುಂ ಕರೆಯಿಸಿ ಕೊಳ್ಳುದಲ್ತೆ ನೋಂಪಿಗೆ."

"ಓ! ಮರೆತೆನೀಯಿರವಂ ಪೇಳಲ್ಕೆ." ಎಂದು ಮುದ್ದಣ ಸೀತಾಪರಿತ್ಯಾಗದ ಕತೆ ಹೇಳಲು ಮೊದಲಿಡುತ್ತಾನೆ.

* * * * *

ಹೀಗೆ ಕೆಲವೊಮ್ಮೆ ಒಲವಿನ ನಿರ್ಮುಕ್ತ, ನಿರ್ಮಲ ಆಗಸದಲ್ಲಿ ಸ್ವಚ್ಛಂದವಾಗಿ, ಸಂತಸದಿಂದ ಚಿಲಿಪಿಲಿ ಗುಟ್ಟುತ್ತಾ ಪ್ರಪಂಚವನ್ನೇ ಮರೆತು ರೆಕ್ಕೆಬಿಚ್ಚಿ, ರೆಕ್ಕೆಗೆರೆಕ್ಕೆ ಹಚ್ಚಿ ವಿಹರಿಸುತ್ತಿರುವ ಮುದ್ದಣ ಮನೋರಮೆಯರನ್ನು ಕಂಡರೆ ಕೆಲವೊಮ್ಮೆ ಕತೆಯಲ್ಲಿ ತನ್ಮಯರಾಗಿ ಅದರಲ್ಲಿನ ದುಃಖಶೋಕಗಳಲ್ಲಿ ತಾವೂ ಭಾಗಿಗಳಾಗಿ ಕಣ್ಣೀರು ಮಿಡಿಯುತ್ತಿರುವ ಮುದ್ದಣ ಮನೋರಮೆಯರನ್ನು ಕಾಣುತ್ತೇವೆ.

ಮುದ್ದಣ ಕತೆ ಹೇಳುತ್ತಾ ಲಕ್ಷ್ಮಣ ಸೀತೆಯನ್ನು ಋಷ್ಯಾಶ್ರಮಕ್ಕೆಂದು ರಥದಲ್ಲಿ ಕುಳ್ಳಿರಿಸಿ ಕರೆದುಕೊಂಡು ಹೋಗಿ, ಗಂಗಾನದಿಯ ದಡದಲ್ಲಿ ರಥ ವಿಳಿದು ಪಾರೋಡದಲ್ಲಿ ಕುಳಿತು ನದಿಯನ್ನು ಉತ್ತರಿಸಿ ಮುಂದೆ ಕಾಲ್ನಡೆಯಲ್ಲಿ 'ನಡೆನಡೆದು ಬಲ್ದೂರಂಬೋಗಿ ನಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳಣ್ಣನ ಕಟ್ಬಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುಳಿಸಿ ಪೋದಂ' ಎಂದು ಆ ಕತೆಯನ್ನು ಕೊನೆಗೊಳಿಸಿದಾಗ ಮನೋರಮೆಯ ಮೃದುಹೃದಯ ಆ ಸನ್ನಿವೇಶದ ದುರ್ಭರ ದುಃಖದಿಂದ ಉಮ್ಮಳಗೊಂಡಿದೆ. ನೀರ್ಗೊಳಗಳಾದ ಕಣ್ಣುಗಳಿಂದ ನೀರು ಧಾರೆ ಧಾರೆಯಾಗಿ ಹರಿಯುತ್ತಿರುವಂತೆಯೇ ಆಕೆ ಹೇಳುತ್ತಾಳೆ "ಆಃ! ಎನ್ನೊಡೆಯ! ನೀನುಮೆಂತು ಕಲ್ಮನನಾದಯ್ ಒರ್ತಡವೆಯೆ ದೇವಿಯಂ ಕಾರಡವಿಯೊಳುಳಿದು ಲಕ್ಷ್ಮಣಂ ಪೋದನೆಂಬೊಡೆ! ಮೈದುನಂಗಮಾದೊಡಮೆಂತು ಮನಮಾದುದೋ! ಮೇಣೆಂತು ದೇವಿಯರ್ಗೆ ಕಾವಲಿರದೆ ಪೋದನೋ! ತೊರೆದು ಪೋಪನ್ನಂ ಸೀತೆಯೇನೆಂದು ಮರುಗಿದಳೋ!" ಮನೋರಮೆಯ ಹೃದಯ ಶೋಕಾಕುಲವಾಗಿದೆ; ದುಃಖ ಭಾರವನ್ನು ಸಹಿಸಲಾರದಾಗಿದೆ. ಆ ಹೆಣ್ಣು ಜೀವ ಯುಗಯುಗಗಳ ಹಿಂದಿನ ಇನ್ನೊಂದು ಹೆಣ್ಣು ಜೀವದ ಅಭ್ರಭೇದಿ ವೇದನೆಯನ್ನು ತನ್ನದೋ ಎಂಬಂತೆ ಅನುಭವಿಸುತ್ತಿದೆ! ಆ ಒಂದು ಅನುಭವದಿಂದ ಸಮಸ್ತ ನಾರೀಪ್ರಪಂಚದ ವೇದನಾಮಯ ಇತಿಹಾಸವೇ ಮನೋರಮೆಯ ಕಣ್ಣ ಮುಂದೆ ಚಿತ್ರಿತವಾಗಿದೆ. ಆಕೆಯ ಹೃದಯದಾಳದಿಂದ ಹೊರಡುವ ಉದ್ಗಾರ ಕೇಳಿ "ಅಕ್ಕಟಾ! ಪೆಣ್ಗಳೊಂದು ಬಾಳ್ತೆ ಬಾಳ್ತೆಯೆ!"

ಮುದ್ದಣನ ಮನವೂ ವ್ಯಥೆಯಿಂದ ತಳಮಳಿಸುತ್ತಿದೆ. ಆತನ ದಾರ್ಶನಿಕ ಕವಿಕಣ್ಣು ಕಾಲದ ತೆರೆಗಳನ್ನು ಸರಿಸಿ, ತ್ರೇತಾಯುಗದ ದುಃಖ ವೇದನೆಗಳ ಪರಾಕಾಷ್ಠೆಯ ಒಂದು ಅಮರ ಸನ್ನಿವೇಶವನ್ನು ಇಂದಿನದೋ ಎಂಬಂತೆ ಕಂಡು ಅನುಭವಿಸುತ್ತಿದೆ. ಆತನೂ ತುಂಬಿ ಹರಿಯುತ್ತಿರುವ ಕಣ್ಣೀರನ್ನು ಬೆರಳುಗಳಿಂದ

ಮಿಡಿಯುತ್ತಾ "ಪ್ರಾಣೇಶ್ವರೀ! ಈ ಇರವನೇನೆಂದು ಪೇಳ್ವೆನೊ? ಅಳಲ್ ಕೊರಲ ನೌಂಕುಗುಂ. ಮುಂಗತೆಯನಾನುಂ ಪೇಳ್ವೆಂ." ಎನ್ನುತ್ತಾನೆ. ಆತನಿಗೆ ಆ ಕತೆಯನ್ನು ದುಃಖಾವೇಗದಿಂದ ಮುಂದುವರಿಸುವುದೇ ಅಸಾಧ್ಯವಾಗಿದೆ.

ಆದರೆ ಮನೋರಮೆಯ ಅಂತರಂಗಕ್ಕೆ ಈಗ ಸೀತೆಯೇ ಸರ್ವಸ್ವವಾಗಿದ್ದಾಳೆ. ಅಪಮಾನ, ದುಃಖ, ವೇದನೆಗಳ ಹಿಮಾಲಯವೇ ಸೀತೆಯ ಮೇಲೆ ಜರಿದು ಬಿದ್ದಿರುವಾಗ ಬೇರೆ ಕತೆ ಕೇಳುವುದಾದರೂ ಹೇಗೆ? ಬೆಳಕಿನ ಒಂದು ಸೂಕ್ಷ್ಮಾತಿಸೂಕ್ಷ್ಮ ಕಿರಣವೂ ಇಲ್ಲದ ಸೀತೆಯ ಇಂದು ಮುಂದಿಗೆ ಹೇಗೆ ಹೆಜ್ಜೆಯಿಡಬಲ್ಲುದು. ಈ ವಿಚಾರವೇ ಮನೋರಮೆಯ ಮನವನ್ನೆಲ್ಲ ವ್ಯಾಪಿಸಿದೆ. "ಪೆಣ್ಣೊಡಲತ್ತೆ! ಎಂತು ಸೈರಿಪೆಂ. ಸೀತೆ ಏನಾದಳ್, ಪೇಳ್" ಎಂದು ಬೇಡುತ್ತಿದ್ದಾಳೆ.

ಮನೋರಮೆಯ ಬೇಡಿಕೆಯೂ ನ್ಯಾಯವಾದುದು. ಅದನ್ನು ಅಲ್ಲಗಳೆಯುವುದು ಅಸಾಧ್ಯವಾಗಿದೆ ಮುದ್ದಣನಿಗೆ. ಆ ಕತೆ ಹೇಳ ಹೊರಟರೆ ದುಃಖ ಉಕ್ಕಿ ಬಂದು ಕೊರಳನೌಂಕಿದರೂ ಹೇಳದೆ ವಿಧಿಯಿಲ್ಲವಾಗಿದೆ. ನಿಡಿಯುಸಿರು ಬಿಟ್ಟು ಆ ಕತೆಯನ್ನು ಹೇಳಲು ಮನಸ್ಸನ್ನು ಸಿದ್ಧಗೊಳಿಸಿ "ಆಯ್ತು, ಕೇಳ್" ಎಂದು ಮುಂದಿನ ಕತೆಯನ್ನು ಹೇಳಲು ತೊಡಗುತ್ತಾನೆ.

ಮುಂದೆ ಎರಡೆಡೆಗಳಲ್ಲಿ 'ಹುಬ್ಬು ಗಂಟಿಕ್ಕಿ ಹಲ್ಲು ಕಡಿದು, ಕ್ರೋಧದಿಂದ ಬುಸುಗುಟ್ಟುವ' ಮನೋರಮೆಯನ್ನು ಕಾಣುತ್ತೇವೆ. ಅಲ್ಲಿ ಆಕೆಯ ಮುಗ್ಧತೆ ಅನ್ಯಾಯದಿದಿರು ಉದ್ರಿಕ್ತವಾಗಿ ಸೆಟೆದು ನಿಂತಿದೆ; ಕಟುವಾಗಿದೆ. ತಿರಸ್ಕಾರವು ಹೂಂಕರಿಸಿ ಹೊರಹೊಮ್ಮುತ್ತಿದೆ.

ಲಕ್ಷ್ಮಣ ಸೀತೆಯನ್ನು ಕಟ್ಟರಣ್ಯಕ್ಕೆ ಕರೆತಂದು, ಅಣ್ಣನ ಆಣತಿಯನ್ನು ಆಕೆಗೆ ತಿಳುಹಿದಾಗ, 'ಮುಂಗಾರ ಸಿಡಿಲ ಮೊಳಗಂ ಕೇಳ್ದು ಸುರುಂಟುವಣಂಬೆಯ ತಿಟ್ಟದಂತೆ, ನೆಟ್ಟನೆ ಬೀಸುವ ಬಿರುಗಾಳಿಯ ಪೊಯ್ಲಿಗರೆಮುರಿದು ಬಾಡುವ ಕಪ್ಪುರವಾಳೆಯಂತೆ' ದುಃಖದ ದುರ್ಭರ ಆಘಾತದಿಂದ ಒಮ್ಮೆಲೆ ನಿಶ್ಚೇಷ್ಟಿತೆಯಾಗಿ ಬಿದ್ದು ಮತ್ತೆ ಲಕ್ಷ್ಮಣನ ಶೈತ್ಯೋಪಚಾರದಿಂದ ಅರಿವುಗೊಂಡು ದುಃಖಿಸಿದ ಬಗೆಯನ್ನೂ ಮುಂದೆ ಆಕೆ ಲಕ್ಷ್ಮಣನನ್ನೇ ಸಂತವಿಸಿದ ರೀತಿಯನ್ನೂ ವಿಸ್ತಾರವಾಗಿ ವಿವರಿಸಿ, ಕೊನೆಗೆ ಲಕ್ಷ್ಮಣನು 'ಗಾಳಿಗೆ ಮಾರೊಡ್ಡಿ ಪೋಪ ಪತಾಕೆಯ ಕೌಸುಂಭಾಂಬರದಂತಿರೆ ಮನಂ ಪಿಂದುಳಿಯೆ ನಡೆವಟ್ಟೆಯೆನೆ ಪಲವುಂ ಪಂಬಲೊಂದು ದಂದುಗಂ ಬೆಟ್ಟಿತಾಗೆ ಬೀಳ್ಕೊಂಡಂ' ಎಂದು ಆ ಕತೆಯನ್ನು ಮುದ್ದಣ

ಅಲ್ಲೇ ನಿಲ್ಲಿಸಿ ಹೀಗೆ ಮುಂದುವರಿಸುತ್ತಾನೆ—"ಅತ್ತಲಯೋಧ್ಯಾನಗರಿಯೊಳ್ ಜನ್ನಗುದುರೆಯಂ . . . . ."

ಮುದ್ದಣನ ಈ ಮಾತುಗಳನ್ನು ಕೇಳಿದ ಕೂಡಲೇ ಸಿಡಿಮದ್ದಿಗೆ ಬೆಂಕಿ ಬಿದ್ದಂತೆ ಮನೋರಮೆಯ ಕ್ರೋಧ ಒಮ್ಮೆಲೆ ಭುಗ್ಗೆಂದು ಹೊರಹೊಮ್ಮಿ ಸಿಡಿದಿದೆ. "ಸುಡು ಸುಡು ನಿನ್ನ ಜನ್ನಗುದುರೆಯಂ! ಆ ಕತೆಗೀಗಳೆ ಪೊಳ್ತೇ?" ಎಂದಿದ್ದಾಳೆ. ನಿಜ. ಅತ್ತ ಸೀತೆ ಅನಾಥಳಾಗಿ—ಎಲ್ಲ ದೃಷ್ಟಿಗಳಿಂದಲೂ ಅನಾಥಳಾಗಿ, ಅಗತಿಕಳಾಗಿ, ತೊಟ್ಟು ಕಳಚಿದ ಮೊಗ್ಗಿನಂತೆ ನಿರಾಧಾರಳಾಗಿ, ನಿರ್ಜಲಳಾಗಿ, ಅಪವಾದದ ಪರ್ವತವನ್ನೇ ಹೊತ್ತುಕೊಂಡು ಘೋರಕಾನನದ ಮಧ್ಯೆ ರೋದಿಸುತ್ತಿರಲು ಆಯೋಧ್ಯಾನಗರಿಯ ಜನ್ನಗುದುರೆಯ ಕತೆ ಹೇಳ ಹೊರಟರೆ ಸಿಟ್ಟು ಯಾರಿಗೆ ತಾನೇ ಬಾರದಿದ್ದೀತು. "ಸೀತೆಯೇನಾದಳೆಂತಿರ್ದಳೆಂದು ಪೇಳಯ್" ಮನೋರಮೆಗೆ ಬೇಕಾದುದು ಇದು.

ಆ ಭಾವದ, ಆವೇಗದ ಅರ್ಥ ಮುದ್ದಣನಿಗೂ ಆಗಿದೆ. ಎಂದೇ "ಬಾಲೇ! ಬಯ್ಯಾಯ್ತು" ಎಂದು ಸೀತೆಯ ವಿಚಾರವನ್ನೇ ಮುಂದುವರಿಸುತ್ತಾನೆ.

* * * *

ಲಕ್ಷ್ಮಣನು ಅಯೋಧ್ಯೆಗೆ ಹಿಂತಿರುಗಿದ ಬಳಿಕ ಸೀತೆ ಆ ಕಟ್ಟರಣ್ಯದಲ್ಲಿ ರೋದಿಸುತ್ತಾ ರಾಮಧ್ಯಾನದೊಳಿದ್ದ ಸಮಯಕ್ಕೆ ಅಲ್ಲಿ ವಾಲ್ಮೀಕಿ ಮುನಿ ಬಂದು, ಆಕೆಯನ್ನು ಕಂಡು, ನುಡಿಸಿ, ಸೀತೆಯೆಂದರಿತು ತನ್ನಾಶ್ರಮಕ್ಕೆ ಕರೆದೊಯ್ಯುತ್ತಾನೆ. ಆಶ್ರಮಕ್ಕೆ ಬಂದ ಆಕೆ 'ಮುನಿ ತೋರಿದೆಲೆವನೆಯಂ ಆಶ್ರಮವಾಸಿಗಳ್ ಪೊಗಳೆ ದೇವರ್ಕಳ್ ಕೊಂಡಾಡೆ ಬಂದು ಪ್ರವೇಶಿಸಿ ಮುನಿಯ ಪಾಲನೆಯೊಳ್ ಸೊಗದಿನಿರ್ದಳ್' ಎಂದು ಮುದ್ದಣ ಸೀತೆಯ ವಿಚಾರವನ್ನು ಅಲ್ಲಿ ಕೊನೆಗೊಳಿಸಿ ಅಯೋಧ್ಯೆಯ ವಿಚಾರವನ್ನು ಮತ್ತೆ ಮೊದಲಿಡುತ್ತಾನೆ. "ಎನ್ನ ಕೊಂಡಾಟದ ಬಾಳ್ವಣಮೆ! ಇಂತು ಭೂಜಾತೆ ಪ್ರಾಚೇತಸನೊಲ್ಮೆಗಾಪಿಂ ಪುಣ್ಯಾಶ್ರಮದೊಳಿರ್ಪಿನಮಿತ್ತಲ್ ಸಾಕೇತ ನಗರದೊಳ್ ಸೀತಾರಾಮಂ ತನ್ನ ಬಿರ್ದಿನ . . . . . "

ರಾಮನನ್ನು 'ಸೀತಾರಾಮ' ಎಂದು ಮುದ್ದಣ ಹೇಳಿದುದನ್ನು ಕೇಳಿದುದೇ ತಡ ಮನೋರಮೆಯ ಅಂತರಂಗದಲ್ಲಿ ಕ್ರೋಧ ತಿರಸ್ಕಾರಗಳು ಜೊತೆಜೊತೆಯಾಗಿಯೇ ನೆಗೆದು ನಿಂತಿವೆ. ನಿರ್ದೋಷಳೂ ಪಾವನಸ್ವರೂಪೆಯೂ ಆದ

ಸೀತೆಯನ್ನು ನಿಷ್ಕಾರಣವಾಗಿ ನಿಷ್ಕರುಣೆಯಿಂದ, ಕಟುಕನಂತೆ ಕಾಡಿಗಟ್ಟಿಯೂ ರಾಮನಿಗೆ 'ಸೀತಾರಾಮ'ನೆಂದು ಕರೆಯಿಸಿಕೊಳ್ಳುವ ಅರ್ಹತೆ ಇದೆಯೇನು? ಅದು ಬಿಟ್ಟು ರಾಮನೆಂದು ಹೇಳಿಸಿಕೊಳ್ಳುವ ಯೋಗ್ಯತೆಯಾದರೂ ಇದೆಯೇನು? ಕಟುವಾಗಿಯೇ ಪತಿಯೊಡನೆ ಕೇಳುತ್ತಿದ್ದಾಳೆ "ನಲ್ಲ! ಏನಾತೊ? ಸೀತೆಯನಂತುಳಿದುಮೇತರ ಸೀತಾರಾಮಂ. ಪೋ! ಮಾಣ್! ಅವಂಗಿನ್ನೆತ್ತಣ ಸೀತೆ? ಅಪ್ಪೊಡಿನ್ನಾಕಲ್ಲೆರ್ದೆಯಂ ರಾಮನೊ? ಭೀಮನೊ? ಏನ್?"

ಮುದ್ದಣನ ಪ್ರಬುದ್ಧ ಬುದ್ಧಿಗೆ ಹಿಂದುಮುಂದಿನ ವಿಚಾರಗಳ ಅರಿವಿದೆ. ಕರ್ತವ್ಯ, ಧರ್ಮಗಳ ಪಾಲನೆಗಾಗಿ ರಾಮ ಹಿಂದೊಮ್ಮೆ ತನ್ನನ್ನು ತಾನೇ ಕಾಡಿಗಟ್ಟಿಕೊಂಡಿದ್ದ. ಇಂದು ಅವೇ ಕರ್ತವ್ಯ ಧರ್ಮಗಳ ವೇದಿಕೆಯ ಮೇಲೆ ಸೀತೆಯನ್ನು ಬಲಿಕೊಡಬೇಕಾಗಿ ಬಂತು. ಸೀತೆ–ತನ್ನ ಅರ್ಧಾಂಗಿ ಕುಸುಮ ಕೋಮಲ ಪಾವನ ಸ್ವರೂಪೆಯನ್ನು ನಿರ್ದೋಷಿ, ನಿರ್ವಿಕಾರಳೆಂಬುದನ್ನು ಅರಿತೂ ಕಾನನಕ್ಕೆ ಕಳುಹದೆ ನಿರ್ವಾಹವಿಲ್ಲದೆ ಹಾಗೆಸಗಿದ್ದಾನೆ. ಸೀತೆಯನ್ನು ಕಾನನಕ್ಕೆ ಕಳುಹುವಾಗ ರಾಮನ ಮನದ ವೇದನೆ ಎಂತಹುದು ಎಂಬುದನ್ನು ಮುದ್ದಣ ಬಲ್ಲ. ಒಳಗೆ ಲಾವಾರಸ ಕುದಿಯುತ್ತಿದ್ದರೂ ಮೌನವಾಗಿ, ಗಂಭೀರವಾಗಿ, ಶಾಂತವಾಗಿರುವ ಪರ್ವತ ಶಿಖರದಂತೆ ಪ್ರಕ್ಷುಬ್ಧ ಅಂತರಂಗದ ರಾಮ ಮುಗಿಲು ಮುಟ್ಟುವ ವೇದನೆಯೊಡನೆ, ರಾಮನಾಗಿ ಅಲ್ಲ ರಾಜನಾಗಿ—ರಾಜನ ಕರ್ತವ್ಯ ಪಾಲನೆಗಾಗಿ, ಧರ್ಮದ ಕೈಯು ಆತನ ಬಾಯಿಯನ್ನು ಮುಚ್ಚಿರಲು ಮೌನಿಯಾಗಿ ಸೀತೆಯನ್ನು—ತನ್ನ ಪ್ರಾಣದ ಪ್ರಾಣವನ್ನು ಲಕ್ಷ್ಮಣನ ಕೂಡೆ ಕಾಡಿಗೆ ಕಳುಹಿಸಿದ್ದ. ಸೀತೆ ಅರಮನೆಯ ಬಾಗಿಲು ದಾಟಿದುದೇ ತಡ ಕಟ್ಟಿದ ಕಟ್ಟೆಯನ್ನು ಒಡೆದು ಶೋಕ ಭೋರೆಂದು ಮೊರೆಮೊರೆದು ಹರಿದಿತ್ತು. ಹೊತ್ತು ಕಳೆದಂತೆ ಅದು ನೂರ್ಮಡಿಯಾಗಿ, ಸಾವಿರ ಮಡಿಯಾಗಿ ಬೆಳೆದುದೂ ಮುದ್ದಣನಿಗೆ ತಿಳಿದಿದೆ. ಹಾಗೆಂದೇ ಮುದ್ದಣ ಹೇಳುತ್ತಾನೆ "ಎನ್ನ ಕೈಗಳಸಮೆ! ಇಂತುಮೆಂಬರೆ! ಶ್ರೀರಾಮಂ ಕಲ್ಲೆರ್ದೆಯನೆ! ಆಃ! ಬಳಿಕಮಾತನ ಪ್ರಳಾಪಮಂ ನೀಂ ಕೇಳ್ದುದಿಲ್ಲಂ."

ಮುದ್ದಣನ ಈ ಸಮಾಧಾನದ ಮಾತುಗಳು ಮನೋರಮೆಯ ಕ್ರೋಧ-ತಿರಸ್ಕಾರಗಳ ಬೆಂಕಿಗೆ ಬಿದ್ದ ಆಜ್ಯವಾಗಿದೆ. ಬೆಂಕಿ ಇನ್ನೂ ಪ್ರಜ್ವಲಿಸಿದೆ. "ಏಂ ತಾನೆ ತಲೆವೊಯ್ದುಂ ಮರುಗಿದನೆ?" ಎಂದಿದ್ದಾಳೆ. ಎಂತಹ ಚುಚ್ಚು ಮಾತು; ಚಾಟಿಯೇಟಿನಂತಿದೆ.

ಮನೋರಮೆಗೆ ವಿಚಾರವನ್ನು ಬಿಡಿಸಿ ಹೇಳಬೇಕಾಗಿದೆ. ಅದಲ್ಲದೆ ಆಕೆಯ ಕೋಪ ಕಡಿಮೆಯಾಗುವಂತಿಲ್ಲ; ತಿರಸ್ಕಾರ ಕೊನೆಗೊಳ್ಳುವಂತಿಲ್ಲ. ಆ ಯೋಚನೆಯಿಂದಲೇ ಮುದ್ದಣ ತಿಳಿಸಿ ಹೇಳುತ್ತಾನೆ "ರಾಮಂ ತಲೆವ್ರೊಯ್ದುನೇಂ? ತಾಂ ಯಶೋಧನನಪ್ಪಿನಂ ಲೋಕಾಪವಾದಭೀತಿಗಡವಿಗಟ್ಟಿದನಲ್ಲದರಸಿಯೊಳೇಂ ಪಗೆಯೆ?"

ಧರ್ಮ ಕರ್ಮಗಳ ಮಾತು ಮನೋರಮೆಗೆ ತಿಳಿಯದು. ಪಗೆಯೊ ದಗೆಯೊ ಆಕೆಗೆ ಅರಿಯದು. ಪತಿಯು ಸತಿಯನ್ನು ನಡೆಯಿಸಿಕೊಳ್ಳುವ ಬಗೆ ಇದಲ್ಲ. ಇದು ಕಟುಕನ ನೀತಿ. ಅದರಲ್ಲೂ ಸೀತೆಯಂತಹ ಜಗದ್ವಂದ್ಯೆಯ, ಪಾವನೆಯ ಬಗೆಗೆ ಈ ರೀತಿ ಎಂತೂ ಸಲ್ಲುವುದಲ್ಲ. ಇಷ್ಟು ಮನೋರಮೆ ತಿಳಿದಿದ್ದಾಳೆ. ಈ ದೃಷ್ಟಿಯಿಂದ ರಾಮ ಅಕ್ಷಮ್ಯ ಅಪರಾಧಿ. ಸೀತೆ ನಿರಪರಾಧಿನಿ. ಬಲಿಪಶು. "ಪಗೆಯೇಂ ನಗೆಯೇಂ? ಬಡವೆಯೊರ್ವಳ್ ಕಾಡಿಂಗಾದಳ್ಳೆಸೆ?"

ಮುದ್ದಣ ಮತ್ತೂ ಸಮಾಧಾನಪಡಿಸುತ್ತಾನೆ ಮನೋರಮೆಯನ್ನು "ಇಂತಿದನೆ ನೆನೆನೆನೆದಳುಂಬಂ ಪಲುಂಬಿದಂ."

ಮನೋರಮೆಯ ಕ್ರೋಧ, ತಿರಸ್ಕಾರಗಳು ವ್ಯಂಗ್ಯದ ರೂಪುದಾಳಿವೆ. ಕೇಳುತ್ತಾಳೆ "ಏಂ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ?" ಈ ವ್ಯಂಗ್ಯದ ಹಿಂದೆ ಅದಮ್ಯ ವೇದನೆಯ ಅಪಾರ ಸಾಗರವೆ ಅಡಗಿದೆ.

ಆಕೆಯನ್ನು ಸಮಾಧಾನಪಡಿಸುವ ಯಾವ ಹಾದಿಯೂ ಉಳಿದಿಲ್ಲ ಮುದ್ದಣನಿಗೆ. ಹೇಗೆ ಹೇಳಿದರೂ ಆಕೆ ಒಪ್ಪುತ್ತಿಲ್ಲ. ಈಗ ಉಳಿದಿರುವುದು ಒಂದೇ ದಾರಿ. ಗಂಡಸಿನ ದಾರಿ! ಗಂಡನ ದಾರಿ!! ಕೊನೆಗೆ ಅದನ್ನೇ ಉಪಯೋಗಿಸುತ್ತಾನೆ. "ಪರಿಹಾಸಂ ಸಾಲ್ಗುಂ ಕೇಳ್" ಹೀಗೆ ಅಧಿಕಾರವಾಣಿಯಿಂದ ಹೇಳಿ ಕತೆಯನ್ನು ಮುಂದುವರಿಸುತ್ತಾನೆ.

ಕಥೆ ಮುಂದುವರಿಯುತ್ತದೆ. ಅಶ್ವಮೇಧದ ಕುದುರೆ ಮುಂದುವರಿದಂತೆ ವನಕಾನನಗಳ ವರ್ಣನೆ, ಯುದ್ಧದ ಬಣ್ಣನೆ ಇವುಗಳನ್ನೇ ಹೇಳಿ ಹೇಳಿ ಮುದ್ದಣನಿಗೂ, ಕೇಳಿ ಕೇಳಿ ಮನೋರಮೆಗೂ ಬೇಸತ್ತಿದೆ. ಆ ಜಡವನ್ನು ಕಳೆಯಲೆಂದೇ ಇಬ್ಬರೂ ಕೂಡಿ ಶೃಂಗಾರದ ಸರಸ್ಸಿನಲ್ಲಿ ಹಾಸ್ಯದ ಹರಿಗೋಲನ್ನು ತೇಲಬಿಡುತ್ತಾರೆ.

ಕತೆ ಹೇಳುತ್ತಿರುವಂತೆಯೇ ಮುದ್ದಣ ಮುದ್ದಿನ ಮಡದಿ ಮನೋರಮೆಯನ್ನು "ದೇವೀ!" ಎಂದು ಸಂಬೋಧಿಸುತ್ತಾನೆ. ಅದು ತನ್ನನ್ನೇ ಕುರಿತಾದ

ಸಂಬೋಧನೆ ಎಂಬುದರ ಅರಿವಿದ್ದರೂ ಮನೋರಮೆ "ಆವ ದೇವಿ! ಶ್ರೀದೇವಿ ಏಂ ಭೂದೇವಿ!" ಎಂದು ಕೇಳಿ ಮುದ್ದಣನ ಮನವನ್ನು ಕತೆಯ ಕಾಡಿನಿಂದ ಒಲ್ಮೆಯ ವೃಂದಾವನದೆಡೆಗೆ ಕೈಹಿಡಿದು ಕರೆದೊಯ್ಯುತ್ತಾಳೆ. ಅಲ್ಲಿ ಸ್ವಲ್ಪ ಹೊತ್ತು ನಕ್ಕು ನಲಿಯೋಣ ಎಂಬ ಬಯಕೆ ಆಕೆಯದು.

ಸತಿಪತಿಯರಲ್ಲಿ ಮಾತಿಗೆ ಮಾತು ಕೂಡಿ ಪ್ರೇಮ, ಪರಿಹಾಸಗಳ ಸರ ಮಾಲೆಯಾಗಿ ಮುಂದುವರಿಯುತ್ತದೆ ಸಂಭಾಷಣೆ. ಒಂದೊಂದು ಮಾತಿಗೂ ಮಲ್ಲಿಗೆ ಸುರಿಯುತ್ತದೆ. ಅದರ ಹಿತವಾದ ಪರಿಮಳ ಕೇಳುವವರನ್ನೂ ತಲೆ ದೂಗಿಸಿ ಮೈಮರೆಸುತ್ತದೆ. ಆ ಪರಿಮಳವನ್ನು ಆಸ್ವಾದಿಸುತ್ತಾ ಹೋದಂತೆಲ್ಲ ಈ ನೆಲದ್ದಲ್ಲ ಈ ಪರಿಮಳ ಎನಿಸುತ್ತದೆ. 'ಮಂಗಳ ಲೋಕದ ಅಂಗಳದಿಂದ' ಮಂದ ಗಾಳಿಯಲ್ಲಿ ತೇಲಿ ಬಂದಿದೆ ಈ ಪರಿಮಳ ಎಂಬ ಭಾವನೆ ಹುಟ್ಟುತ್ತದೆ.

ಮನೋರಮೆ ಮುದ್ದಣರು "ರತಿದೇವಿ" "ಕಾಮದೇವ"ರೆಂದು ಪರಸ್ಪರ ಹೆಸರಿಸಿಕೊಳ್ಳುತ್ತಾರೆ.

ಈಗ ಮನೋರಮೆಗೆ ತನ್ನನ್ನು ಮುದ್ದಣನಿಂದ ಹೊಗಳಿಸಿಕೊಳ್ಳಬೇಕೆಂದು ಅಂತರಂಗದ ಆಶೆ. ಅದು ಚಾಪಲ್ಯವೂ ಹೌದು. ಮಾತ್ರವಲ್ಲ ಹಾಗೆ ಹೊಗಳಿಸಿ ಕೊಳ್ಳುತ್ತಾ ಆತನನ್ನು ಸೋಲಿಸ ಬೇಕು. ಆ ಹಿತವಾದ ಸೋಲಿನಿಂದಲೇ ನಗು ಹುಟ್ಟಿಸಿ ತಾನೂ ಸಕ್ಕು ಪತಿಯನ್ನೂ ನಗಿಸಬೇಕೆಂಬ ಬಯಕೆ ಆಕೆಯದು. ಅದಕ್ಕಾಗಿಯೇ "ಎಲೆ ಮದನಮೋಹನರಾಜ! ಅಂತಿರ್ಪೊಡೆ ನೀಂ ಪೇಳ್ದ ರತಿ ಯನೆ ಬಣ್ಣಿಸಿ ಪೊಗಳ್, ನೋಳ್ಪೆಂ" ಎನ್ನುತ್ತಾಳೆ ಮನೋರಮೆ.

ಮುದ್ದಣನಿಗೂ ಅದೇ ಬೇಕಾಗಿದೆ. ಆದರೂ "ಓ! ಎತರ ಮಾತೊ! ಎನ್ನಳವೆ?" ಎಂದು ಹಿಂದೆ ಸರಿಯಲು ಯತ್ನಿಸುವಂತೆ ನಟಿಸುತ್ತಾನೆ.

ಮನೋರಮೆ ಎಲ್ಲಿ ಬಿಡುತ್ತಾಳೆ? "ಆಃ! ರತಿಯಂ ಬಣ್ಣಿಸಲ್ಕೆ ಸಲ್ಲದ ನೀನೇತರ ಕಾಮದೇವಂ!" ಎಂದು ಸವಾಲು ಹಾಕುತ್ತಾಳೆ.

ಮುದ್ದಣನ ಅಭಿಮಾನವನ್ನು ಕೆಣಕಿದಂತಾಗಿದೆ. "ಅಂತಪ್ಪೊಡೆ ಸಲ್ವೆಂ ಸಲ್ವೆಂ. ಕಾಮದೇವನೆಂಬೊಂದು ಬಿರುದಂ ಪಡೆದುಮಾರೆನೆ? ತೆಗಳ್ವರಿರ್ಕೆ! ಇದೆ ಇದೆ ತೊಡಂಗಿದೆಂ" ಎಂದು ತನ್ನ ಮೋಹದರಗಿಳಿ ಮನಮೋಹನೆ ಮನೋ ರಮೆಯನ್ನು ಬಣ್ಣಿಸತೊಡಗುತ್ತಾನೆ "ಅಸಿದೊಡಲ ಪೂಗಣ್ಣ ಪೆಣ್; ಸಸಿಮೊಗದ ಕಿಸುವಾಯ ಪುಸಿನಡುವಿನರಸಿ; ಮಿಡಿಮೊಲೆಯ ಪಿಡಿನಡೆಯ ಜಡೆಯುದ್ದೆಯ ನೀರೆ, ಬೆಟ್ಟು . . . .

ಮನೋರಮೆಯ ಹೃದಯ ಸಂತಸದಿಂದ ಉಬ್ಬಿದೆ. ಆದರೆ ಅಷ್ಟೇ ಸಾಕೇನು? ಸಾಲದು. ಇನ್ನೂ ಬೇಕಾಗಿದೆ. ಕುಡಿದಷ್ಟೂ ಬೇಕೆನಿಸುವ ಈ ಅಮೃತಪಾನ—ಒಲವಿನ ಸಲ್ಲಾಪ—ಮತ್ತೂ ಬೇಕಾಗಿದೆ. ಈ ಎಲ್ಲ ಅರ್ಥ ಗಳನ್ನು ತುಂಬಿಕೊಂಡು ಅರೆನೋಟದಿಂದ ಅಣ್ಮನನ್ನು ನೋಡುತ್ತಾ "ಆಃ! ಕಬ್ಬಿಗರ್ಗೆ ನೀಂ ಕಲ್ಲಾಯ್ತನಕ್ಕುಂ ಎಂದುಂ ಕಾಣದರೊಂದು ಪಾಂಗಿ ನಿಂ ಪೇಳ್ದ ಪೊಚ್ಚರದ ನಿನ್ನೀ ಬಣ್ಣನೆಯ ನುಡಿಗೇನೆಂಬೆನೊ! ಒಡಲಸಿದೇಂ? ಮೊಗದೊಳೇತರ ಸಸಿ, ಕಣ್ಣೊಳೇತರ ಪೂ, ನಡುವಿನೊಳೇಂ ಪುಸಿ! ಎಂದು ಬಾಯಂ ಕಿಸಿದಳ್. ಜಡೆಯಂ ಬಿದಿರ್ಚಲ್ಕೇಂ ದೆವ್ವಮಾಳ್ದುದೆ? ಪೋ, ನೀಂ ಕಾಮನಲ್ತು; ಭೀಮಂ" ಎಂದು ತನಗಿನ್ನೂ ಹೊಗಳಿಸಿಕೊಳ್ಳುವ ಆಶೆಯಿದೆ ಎಂಬುದನ್ನು ಅವ್ಯಕ್ತವಾಗಿ ವ್ಯಕ್ತಪಡಿಸಿದ್ದಾಳೆ!

ಮುದ್ದಣನೇನು ಮೂಢನೇ? ಆತನಿಗೆ ಆ ಮಾತಿನ ಅಂತರಾಳ ತಿಳಿಯ ದಿರುತ್ತದೆಯೆ? ಆ ಮಾತಿನ ತೂತಿನ ಮೂಲಕ ಮನೋರಮೆಯ ಅಂತರಂಗದ ನಿಚ್ಚಳ ದರ್ಶನವಾಗಿದೆ ಆತನಿಗೆ. ಆದರೂ ಅವಸರ ಮಾಡುತ್ತಿಲ್ಲ. ತನ್ನ ರತಿ ಯನ್ನು—ಮಡದಿ ಮನೋರಮೆಯನ್ನು ಬಣ್ಣಿಸಲು ವಾಕ್ಸಿದ್ಧಿಯನ್ನು ದಯಪಾಲಿ ಸುವಂತೆ ಸರಸ್ವತಿಯನ್ನು ಪ್ರಾರ್ಥಿಸಿ, ಹೊಗಳಲು ಮೊದಲಿಡುತ್ತಾನೆ "ಮಾಕಾ ಳಿಯ ಮೈವೊಗರ್ಗೆ . . . "

"ನಿನ್ನ ರತಿಯಂ ಬಣ್ಣಿಪೊಂದು ಸಂಧಿಯೊಳ್ ಮಾಕಾಳಿಯೊಳೇಂ ಕಜ್ಜಂ?" ಎಂದು ಮೊದಲ ಶಬ್ದದಲ್ಲೇ ತಡೆದಿದ್ದಾಳೆ ಮನೋರಮೆ.

ಓ! ಪ್ರಾರಂಭದಲ್ಲೇ ವಿಘ್ನಬಂದಿದೆ! ಇನ್ನು ವಿಘ್ನಗಳು ಬಾರದಂತೆ ವಿಘ್ನವಿನಾ ಶಕ ವಿನಾಯಕನನ್ನು ಪ್ರಾರ್ಥಿಸಬೇಕಾಗಿದೆ! ಅದಕ್ಕಾಗಿ ಮುದ್ದಣ ತನ್ನ ಮಡದಿ ಯನ್ನು ಬಣ್ಣಿಸುವಾಗ ಎಡರುತೊಡರುಗಳು ಬಾರದಂತೆ ಕಾಯಬೇಕಾಗಿ 'ಎಡರ್ಗೇಡಿ'ಯನ್ನು ಬೇಡಿಕೊಳ್ಳುತ್ತಾನೆ. ಹಾಗೆ ಎಡರುತೊಡರುಗಳು ಬಾರ ದಂತೆ ಕಾವುದಕ್ಕಾಗಿ ಹೊಟ್ಟೆಬಾಕ ಬೆನಕನಿಗೆ ಏನಾದರೂ ಅರ್ಪಿಸಬೇಡವೇನು! ಮುದ್ದಣ ಅರ್ಪಿಸುವುದೇನು? ಕೇಳಿ "......ಇನಿತೊಂದು ಮೇಲಸೊಡರ್ಚಿದೆ ಯಪ್ಪೊಡೆ ಆ ಬಣ್ಣನೆಯ ಪೊಗಳ್ಕೆಯ ಪಾಡಿಂಗೊಲ್ವೆನ್ನೀಮಡದಿ ಕೂರ್ಮೆಯಿ ನೆನಗೆ ತಿನವಡಿಸುವಾಪಸುಗೆಯ ಚಕ್ಕುಲಿಯುಂ ಗಾರಿಗೆಯುಂ ಪುರಿಗಡಲೆಯನವಲಂ ಕರ್ಬುಂ ತೇಂಗಾಯಂ ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ." ಗಣಪತಿಗೆ ತಾನು ಅರ್ಪಿಸಲಿರುವ ತಿಂಡಿತಿನಸುಗಳನ್ನು ಹೆಸರಿಸುತ್ತಾ ಮನೋ

ರಮೆ ತನಗೆ ತಿನವಡಿಸಬೇಕಾದ ತಿಂಡಿತಿನಸುಗಳ ಯಾದಿಯನ್ನೇ ಬಿಚ್ಚುತ್ತಾನೆ ಮುದ್ದಣ.

ಈಗ ಮನೋರಮೆ ಮುದ್ದಣ ಬೀಸಿದ ಬಲೆಯಲ್ಲಿ ಒಂದು ದೃಷ್ಟಿಯಿಂದ ಸಿಕ್ಕುಬಿದ್ದಿದ್ದಾಳೆ. ಎಂತಹ ಮಾಟಗಾರಿಕೆಯಿಂದ ಬಲೆಬೀಸಿದ್ದಾನೆ ಪತಿ! ಸತಿಗೆ ಇದು ಅರಿವಾಗಿದೆ. ಇದರಿಂದ ಹೇಗಾದರೂ ನುಸುಳಿಕೊಳ್ಳಬೇಕಾಗಿದೆ. "ನಿನ್ನ ಬೆನಕಂ ಒರ್ವನೆ ವಾಯೊಳೆಂತುಣ್ಗುಂ" ಇದು ಅವಳ ಪ್ರಶ್ನೆ.

ಮುದ್ದಣ ನೇರವಾಗಿ ಉತ್ತರಿಸುತ್ತಾನೆ "ಏಂ! ರಮಣಿ ದೇವರುಣ್ಬರೆ! ಉಣ್ಬೊಡಂತೆಂಬೆನೆ?"

ಅಬ್ಬಾ ಈ ಗಂಡೇ! "ಮೇಣೊರ್ವನೆ ತಿನಲ್ ಬಗೆವಾ!" ಹೆಣ್ಣು ಬೆರಗುವಟ್ಟಿದೆ!

ಹೆಣ್ಣನ್ನು ಮಾತಿನ ಜಾಲದಲ್ಲಿ ಸಿಲುಕಿಸಿ ತನ್ನ ಇಚ್ಛೆಯನ್ನು ಸಾಧಿಸಿ ಕೊಳ್ಳಬೇಕಾಗಿದೆ ಗಂಡಿಗೆ "ನೀನೀವುದೇಂ ದಿಟಂ."

ಹೆಣ್ಣು ಬಹಳಷ್ಟು ಹೆಡ್ಡಳಾಗಿಲ್ಲ. ಈ ಹಾದಿಯಿಂದ ಗಂಡು ಆಕೆಯನ್ನು ಯಾವ ಕೋಟೆಗೆ ಸಾಗಿಸಿ ಸೆರೆಹಾಕಿ ತನ್ನ ಇಷ್ಟಾರ್ಥವನ್ನು ಸಾಧಿಸಬಯಸು ತ್ತಿದೆಯೋ ಅಲ್ಲಿಂದ ತಪ್ಪಿಸಿಕೊಳ್ಳಬಲ್ಲ ರಾಜಮಾರ್ಗ ಒಂದರ ಅರಿವಿದ್ದೇ ಹೆಣ್ಣು ಅರಿಯದವರಂತೆ ನಟಿಸುತ್ತಾ ಈ ಹಾದಿಹಿಡಿದು ಸಾಗಿದೆ. "ಎತ್ತಾನು ಮಿತ್ತೊಡೇಂಗೆಯ್ವೆಯ್."

ರಸಿಕ ಗಂಡು ಹಾಸ್ಯದೊಡನೆ ಎಲ್ಲವನ್ನೂ ದಕ್ಕಿಸಿಕೊಳ್ಳುವ ಹವಣಿ ನಲ್ಲಿದೆ. "ಇಸ್ಸಿ! ಅನಿತ್ತು ಭಕ್ಷ್ಯಮನೊರ್ವನೆ ನುಂಗಲಾಂ ರಾವೆ? ಚಕ್ಕುಲಿ ಗಾರಿಗೆಗಳ್ ಕಾಮದೇವಂಗೆ; ಅವಲುಂ ಪುರಿಗಡಲೆಯುಂ ಮುದ್ದಣಂಗೆ; ಕಬ್ಬು ಕಬ್ಬಿಗಂಗೆ; ತೇಂಗಾಯೆನಗೈಸೆ!"

ಹೆಣ್ಣು ಬೆರಗಾಗಿದೆ. ಇರವನ್ನು ಮರೆತಲ್ಲ ಅರಿತೇ! "ನೀಂ ಜಾಣಂ. ನಿನ್ನ ರತಿದೇವಿಗೇಂ?"

"ತಾನೆ ಒಲ್ದೀವ ದೇವಿಗಾವುದರೊಳಾಸೆಯೊ?" ಎಂತಹ ಯುಕ್ತಿಯ ಹಾದಿ ಹಿಡಿದಿದೆ ಗಂಡು!

ಮಾತಿಗೊಂದು ಮಾತು ದೊರಕಿದೆ ಹೆಣ್ಣಿಗೂ, "ಅಂತಿರೆಯುಂ ಮನೋ ರಮೆಗೇಂ?"

ಗಂಡು ಒಮ್ಮೆಲೆ ಎಚ್ಚರಗೊಂಡಂತೆ ನಟಿಸಿದೆ. "ಓವೊ! ರತಿಯಂ ಒಣ್ಣಿಪೊಂದು ಬೆಸನದೊಳ್ ಮನೋರಮೆಯಂ ಮರೆದುಳಿದೆಂ." ಆದರೆ ಈ ನೆನಕೆ ಹೆಣ್ಣಿಗೆ ಏನೇನೂ ಸಹಾಯಕವಾಗಿಲ್ಲ. ಹಾಸ್ಯಕ್ಕೆ ಗುರಿಯಾಗಿದೆ ಹೆಣ್ಣು. "ಅಕ್ಕೆ! ಕರ್ಬಿನ ಸಿವುರುಂ ಮುಗ್ಗಿದ ಗಾರಿಗೆವುಡಿಯುಂ ಮನೋರಮೆಗಿರ್ಕೆ."

"ನೀಂ ಬಲ್ಲಡುಸುಗಾರಂ, ಸಾಜಂ." ಇದು ಹೆಣ್ಣಿನ ಉದ್ಗಾರ. ಗಂಡಿನ ಕವಡು ಬಗೆ ಹೆಣ್ಣಿಗೆ ಆಶ್ಚರ್ಯವನ್ನುಂಟುಮಾಡಿದೆ. ಆದರೆ ಅದರಲ್ಲಿನ ಹಾಸ್ಯಮಾತ್ರ ಆನಂದವನ್ನೊದಗಿಸಿದೆ. ಹೆಣ್ಣು ಜಾಣ್ಮೆಯಿಂದ ಜಾರಿಕೊಂಡಿದೆ. "ನೀಂ ಮನದೊಳೆ ಮಂಡಿಗೆಯನುಂಡಂತಾಯ್ತು." ಗಂಡಿನದು ಕನಸಿನ ಗೋಪುರ ಮಾತ್ರ ಎಂಬುದನ್ನು ಎತ್ತಿ ಹೇಳಿದೆ ಹೆಣ್ಣು. ಆದರೂ ಗಂಡಿನ ಹೊಸ ಬಣ್ಣನೆಯನ್ನು ಕೇಳುವ ಕುತೂಹಲ ಮಾತ್ರ ಇನ್ನೂ ಕೊನೆಗೊಂಡಿಲ್ಲ. "ಈಗಳಿಂ ಕೇಳ್ವೆಂ ರತಿಯ ಪೊಸಬಣ್ಣನೆಯಂ."

ಈಗ ಗಂಡಿನ ಹಾದಿ ವಕ್ರ; ಕುಟಿಲ. ಮುಗ್ಧೆ ಹೆಣ್ಣಿಗೆ ಒಳ ಅರ್ಥ ಅರಿವಾಗದಂತೆ "ಮಿಂದ ಮರಗೂಳನೊಂದು ಮೆಯ್ವೊಗರ್, ಸಿಂಗರದ ಮಲೆನಾಡಿಗನೊಂದು ಭಂಗಿಯ ಮೊಗಂ, ಇರುಳ್ಗಣ್ಣಂಗೆಂತಂತೊಪ್ಪುವ ಒಟ್ಟ ನುಣ್ಗಣ್" ಎಂದು ಹೊಗಳುವ ಹೆಸರಲ್ಲಿ ವ್ಯಂಗಾರ್ಥದ ಮಾತುಗಳಿಂದ ಆಕೆಯನ್ನು ಹಾಸ್ಯ ಮಾಡುತ್ತಾನೆ.

ಹೆಣ್ಣು ವಿವರಗಳನ್ನು ಕೇಳಿ ತಿಳಿದಿದ್ದಾಳೆ; ಅವಳಿಗೆ ಈಗ ಪತಿಯು ತನ್ನನ್ನು, ತನ್ನ ರೂಪವನ್ನು ಕುರಿತು ಹಾಸ್ಯಮಾಡುತ್ತಿದ್ದಾನೆ ಎಂಬುದು ನಿಚ್ಚಳವಾಗಿ ತಿಳಿದಿದೆ "ಆಃ! ಕಾಮದೇವರ ದೇವ! ಈಗಳೀಗಳರಿತೆಂ." ಎಂದಿದ್ದಾಳೆ. ಈಗ ಆತನ ಕೊಂಕಿಗೆ ಈಕೆಯದೂ ಕೊಂಕು. ವ್ಯಂಗ್ಯವಾಗಿ ಹೇಳುತ್ತಿದ್ದಾಳೆ "ನೀಂ ಬಣ್ಣಸೆಯೊಳೆರಡನೆಯ ಬೊಮ್ಮಂ ನಿಕ್ಕುವಂ ಎನ್ನೀ ಜೋಲ್ಮುಡಿಯ ಪೂಸರದಾಣೆ!" ಸಹಾಸ್ಯದಿಂದ ಮುಂದುವರಿಸಿದ್ದಾಳೆ "ನಿನಗಾವ ಭಕ್ಷ್ಯದೊಳಿಷ್ಟಂ? ಪೂರಣಗಡುಬನೀವೆನೊ? ಚಕ್ಕುಲಿಯುಂ?"

ಗಂಡಿಗೆ ಹೆಣ್ಣನ್ನು ಇನ್ನಷ್ಟು ಎಡಿಸೋಣ ಎಂದು ಆಶೆ. "ಇರಿರ್! ಸೈತು ಬೈತಿಡು ಮಾದೇವಿಯ ಕಡೆವೊಳ್ತಿನೊಂದು ಪಡಿವರಿಜಾಗೆ ಮೆರೆವೆನ್ನ ರತಿದೇವಿಯುನಡಿವಿಡಿದು ಮುಡಿವರೆಗಂ ಬಣ್ಣಿಸದ ಮುನ್ನಮಿನಿತೊಂದು ಬೇಗದಿನೊಲ್ಲಾ!" ಹೆಣ್ಣಿಗೆ ಮಾತಿನ ಒಳಗು ಅರಿಯಲಾರದೆಂದು ತಿಳಿದಂತಿದೆ ಗಂಡು.

ಆದರೆ ಹೆಣ್ಣು ಎಷ್ಟು ಜಾಣ್ಮೆಯಿಂದ ಉತ್ತರಿಸಿದೆ "ಮುನ್ನೀರ ನೀರ ಸವಿವೊಂದು ಬಗೆಯೊಳ್ ಕೊಡನ ಕುವರನಂತಿರೆ ಬಲ್ಗಡಲನೆ ಕುಡಿವೊಡಕ್ಕುಮೆ? ಒರ್ಪನಿ ಸಾಲದೆ?" ಗಂಡಿನ ಜಾಣ್ಮೆಯನ್ನು ಚತುರವಾದ ಒಂದೇ ಮಾತಿನಿಂದ ಕುಕ್ಕರಿಸಿಬಿಟ್ಟಿದ್ದಾಳೆ.

ಈಗ ಗಂಡಿಗೂ ಹಾಸ್ಯ ಸಾಕು ಎನಿಸಿದೆ. ಏಕೆಂದರೆ ಅದು ಈಗ ಇಲ್ಲಿ ಸಡೆಯದ ನಾಣ್ಯ, "ಟೊಕ ಟೊಕ." ಎಂದೇ "ಅತಿಪ್ರಸಂಗಂ ಸಾಲ್ಗುಂ" ಎಂದು ಕತೆ ಮುಂದುವರಿಸಿದ್ದಾನೆ.

* * * * *

ಕತೆ ಹೇಳುತ್ತಾ ಹೇಳುತ್ತಾ ಮುದ್ದಣ ಮನೋರಮೆಯನ್ನು "ಸಕಲ ಗುಣಸಂಪನ್ನೆ! ಏಕಗುಣ ಹೀನೆ!" ಎನ್ನುತ್ತಾನೆ.

ಮನೋರಮೆಗೆ ಅಚ್ಚರಿ "ಅಬ್ಬಾ ಎನ್ನ ಗುಣದೊಳಾವುದೊ ಒಂದು ಹೀನಂ!" ಎಂದು.

"ನಲ್ಗತೆಯಂ ಪೇಳ್ವರ ಕಣ್ಗೆ ಕಟ್ಟಿದಿರೊಳ್ ಪುರುಳನರಿಯದ ಗಾವಿಲ್ಪನ ಕಾಡವರಂತಿರೆ ನಿದ್ದೆಯ ಜಿಂಪಿಂ ತೂಂಕಡಿಪ ನಿನತೊಂದು ಗುಣಂ ಹೀನಂ!" ಹಾಡಿಹಾಡಿಯೆಂದು ಒತ್ತಾಯದಿಂದ ಹಾಡಿಸಿದ ಗಾಯನಗಾರನಿದಿರಲ್ಲೇ ನಾವು ಹರಟೆಹೊಡೆಯಹತ್ತಿದರೆ ಆತನಿಗೆ ಹೇಗೆನಿಸೀತು? ಆ ಭಾವ ಮುದ್ದಣನದು.

ಆದರೆ ಮನೋರಮೆ ತನ್ನ ಗುಣಹೀನತೆಯ ತಪ್ಪನ್ನು ಮುದ್ದಣನ ಮೇಲೆಯೇ ಹೊರಿಸುತ್ತಾಳೆ. ಸತ್ಯವನ್ನು ಅಪ್ರಿಯವಾದರೂ ಪ್ರಿಯನ ಮುಂದೆಯೇ ಹೇಳುವ ಸಾಹಸ ಮಾಡಿದ್ದಾಳೆ. "ತೂಂಕಡಿಸದೇವೆನೋ? ಕಿವಿಗಳ್ಗೆ ಪುರುಳಮರದ ಗುರ್ದಿನಾಟದ ಬರುರಗಳೆಯ ನಿಡುಗತೆಗೆ."

"ನಿನಗೇಂ ವೀರರಸಂ ಮೆಚ್ಚದೆ?" ಎಂದಿದ್ದಾನೆ ಮುದ್ದಣ.

ರಸವೊ ರಾಗವೊ ಆಕೆಗೆ ಅರಿಯದು. ಆಕೆಗೆ ಬೇಕಾದುದು ಕಿವಿಗೆ ಇಂಪಾಗಿ, ಹೃದಯಕ್ಕೆ ತಂಪನೀಯಬಲ್ಲ ನಲ್ಗತೆಗಳು. "ಮೆಚ್ಚು ಮುಚ್ಚ ನರಿಯೆಂ ಎರ್ದೆವುಗುವ ಪೊಚ್ಚ ಪೊಸ ನಲ್ಗತೆಗಳನೆ ಮೆಚ್ಚುವೆಂ."

ಮುದ್ದಣನಿಗೂ ಆ ಸತ್ಯದ ಅರಿವಾಗಿದೆ. "ಉಂ! ಪೋಕೆ. ಮುಂತೆ ಮುಂತೆ ಚೆಲ್ವಿನ ಒಲ್ಮೊಗಸಿನಯೆ ನಲ್ಗತೆಗಳ್" ಎಂದು ಮನೋರಮೆಯನ್ನು ಸಮಾಧಾನಗೊಳಿಸಿ ಮುಂದಿನ ಕತೆ ಹೇಳತೊಡಗುತ್ತಾನೆ.

* * * * * *

ಒಂದೆಡೆ ಮುದ್ದಣ ಮನೋರಮೆಯನ್ನು "ಓ ಎನ್ನತ್ತೆಯ ಮಗಳೆ! ಮುತ್ತಿನ ಸೆಂಡೆ!" ಎಂದು ಕರೆಯುತ್ತಾನೆ. ಮನದುಂಬಿ, ಎದೆದುಂಬಿ, ಜೀವ ದುಂಬಿ ಕರೆದ ಕಾದಲನ ಆ ಕರೆಯ ಹಿಂದಿರುವ ರಸಿಕತೆಯು ಆಕೆಗೆ ಆಸಂದೋ ನ್ಮತ್ತತೆಯನ್ನು ತಂದಿದೆ. ಆ ಹೆಸರಿನ ನಾವೀನ್ಯದಿಂದ ಆಕೆಗೆ ನಾಚಿಕೆಯಾಗಿದೆ. ಆದರೆ ಹೃದಯಕ್ಕೆ ಭರಿತ ಬಂದಿದೆ. ಎಂದೇ ನಸುಮುನಿಸು ಆಕೆಯ ಮುಖಕ್ಕೆ ಮಂಗಳಾರತಿ ಎತ್ತಿದೆ! ಆ ಮಾದಕಭಾವದೊಡನೆಯೇ ಹೇಳುತ್ತಾಳೆ "ಬರಿವರಿದೆ ಬಣ್ಣಿಸಿ ಬಣ್ಣಿಸಿ ಕರೆಕರೆದು ಕರಕರಿಸದಿರ್; ಎನಗೆ ತಲೆ ನೋವ್ವುದು."

ಮುದ್ದಣನಿಗೆ ಒಳಗಿನ ಗುಟ್ಟು ತಿಳಿದಿಲ್ಲ. ತನ್ನ ಕತೆ ಮನೋರಮೆಗೆ ಸೊಗಯಿಸಲಿಲ್ಲವೊ ಎಂದು ಭಾವಿಸಿ ಕೇಳುತ್ತಾನೆ "ಅಂತದೇತರಿನರಸಿ?"

ಈಗ ಎಲ್ಲಿ ತನ್ನ ಅಂತರಂಗದ ಗುಟ್ಟು ಬಯಲಾಗುವುದೋ ಎಂಬ ಹುಚ್ಚು ಹೆದರಿಕೆ ಮನೋರಮೆಗೆ. ಅದನ್ನು ನಾಚಿಕೆಯೆಂದರೂ ಸರಿ. ಹಾಗೆಂದೇ ಇನಿಯನ ಮನ ಈ ಕಡೆಗೆ ಹರಿಯದೆ ಕತೆಯೆಡೆಗೆ ಸರಿಯಲಿ ಎಂದು ಯೋಚಿಸಿ ಹೇಳುತ್ತಾಳೆ "ಅಡಿಮುಡಿಯಿಲ್ಲದ ನಿನ್ನ ಕತೆಗೆ."

ಆಕೆಯ ಯುಕ್ತಿ ಸಫಲವಾಗಿದೆ. ಮುದ್ದಣನ ಮನ ಸುಲಭದಲ್ಲೇ ಕತೆಯೆಡೆಗೆ ಸಾಗಿದೆ. "ಆಃ! ಎನ್ನ ಬಿತ್ತರದ ಬಣ್ಣನೆಯ ನಲ್ಗತೆಯೊಳೇನಡಿ ಮುಡಿಯ ಕೊರತೆ? ಸವಿಸ್ತರಂ ನಿರವಿಸಿದೆನಲ್ತೆ." ಪಾಪ! ಮುದ್ದಣ ಮನೋ ರಮೆಯ ಮಾತು ಸಹಜವೆಂದೇ ಬಗೆದಿದ್ದಾನೆ!

ಮನೋರಮೆಯ ಯುಕ್ತಿ ಸಫಲವಾಗಿದೆ ನಿಜ. ಆದರೆ ಈಗ ಮುದ್ದಣ ಈ ಪ್ರಶ್ನೆಗೆ ಏನಾದರೂ ಉತ್ತರಿಸಬೇಕು ತಾನೆ! ಇದಕ್ಕೆ ಆಕೆ ಸನ್ನದ್ಧಳಾಗಿರ ಲಿಲ್ಲ. ಆದರೂ ಯೋಚಿಸಿ ಉತ್ತರಿಸುತ್ತಾಳೆ "ಎಂತೆಂತೊ ತೊಡಂಕಿ ಬೆದಂಕಿ ಪೇಳ್ದೊ ಡಾಯ್ತೆ? ನಿಡುಗತೆಯ ನಿರಿಗೆಯ ಕೂಟಂ ಕೇಳ್ವರ್ಗೆ ಮನಕ್ಕೆ ಬಾರ ದೊಡಕ್ಕುಮೆ?" ಎಳೆ ಎಳೆಯೂ ಸುಂದರವಾಗಿರದಿದ್ದರೆ, ಅವುಗಳಿಗೆ ಪರಸ್ಪರ ಪೂರಕತೆ, ಹೊಂದಾಣಿಕೆ ಇರದಿದ್ದರೆ ವಿಸ್ತಾರದಿಂದ ಯಾವುದಕ್ಕೂ ಸೊಗಸು ಬರಲಾರದು ತಾನೆ? ಹೀಗೆ ಉತ್ತರಿಸಿ ನುಸುಳಿಕೊಂಡಿದ್ದಾಳೆ. ಬಿಡುಗಡೆಯ ನಿಟ್ಟುಸಿರು ಬಿಟ್ಟಿದ್ದಾಳೆ. ಪಾಪ!

ಮುದ್ದಣನಿಗೆ ಆಶ್ಚರ್ಯ. ತನ್ನಕತೆಯಲ್ಲಿ ಕೊರತೆಯೆಲ್ಲಿ ಎಂದು ತಿಳಿಯುವ ಹಂಬಲ. "ಇರಿರ್! ಆಂ ಬಿತ್ತರಿಸಿದ ನಲ್ಗತೆಯೊಳ್ ನಿರಿಗೆಯ ಕೂಟಂ

ಮಾಟೆನಿಸದುಂಟೆ? ನೀನೆ ಪೇಳ್." ಮನೋರಮೆಯನ್ನು ಪರೀಕ್ಷಿಸೋಣ ಎಂಬ ಯೋಚನೆಯೂ ಆಗಿರಬಹುದು.

ಈಗ ಪುನಃ ಸಿಕ್ಕಿಕೊಂಡಿದ್ದಾಳೆ ಮನೋರಮೆ. 'ನಿರಿಗೆಯ ಕೂಟಂ ಮಾಟೆನಿಸದುದೆಲ್ಲಿ' ಎಂಬುದನ್ನು ಆಕೆ ಗಮನಕೊಟ್ಟು ಗುರುತಿಸಿಕೊಂಡಿದ್ದರೆ ತಾನೇ! ಏನೋ ನೆನಪಿಗೆ ಸುಳಿದುದನ್ನು, ಬಾಯಿಗೆ ಬಂದುದನ್ನು ಹೇಳಿಬಿಡುತ್ತಾಳೆ. "ಸುಭುಜಭೂಭುಜಂ ತನ್ನಂ ಮುನ್ನಮೊರ್ವ ಮುನಿ ಪೊಯ್ದನೊ ಬಯ್ದನೊ ಎಂದು ಶತ್ರುಹನೊಳ್ ಗೋಣಗಿದನಲ್ತೆ."

"ಮುನಿ ಪೊಯ್ದನೆಂದಲ್ತು, ಬಯ್ದನೆಂದೆ ಪೇಳ್ದನಕ್ಕುಂ" ಎಂದು ಮುದ್ದಣ ಆಕೆಯ ನೆನಪನ್ನು ಸರಿಪಡಿಸುತ್ತಾನೆ.

"ಏಕೊ ಪೇಳನೆ?" ಹೇಗಾದರೂ ಒಮ್ಮೆ ಈ ಸುಳಿಯಿಂದ ತಪ್ಪಿಸಿಕೊಳ್ಳ ಬೇಕಲ್ಲ!

"ಆನರಿವೆನೆ? ಕತೆಯೊಳಿರ್ಕುಂ" ಮುದ್ದಣ ಮನೋರಮೆಯನ್ನು ಮಗು ವಾಗಿ ಮಾಡಲೆಳಸಿದ್ದಾನೆ.

"ಅದನೆ ನಿರವಿಸು" ಮನೋರಮೆ ದಡ ಸೇರಿದ್ದಾಳೆ! ಆದರೆ ಮುದ್ದಣ ಮಾತ್ರ ಪ್ರವಾಹದಲ್ಲಿ ಬಿದ್ದಿದ್ದಾನೆ!

"ಓ! ಓ! ಇನಿತೊಂದು ವಿಷಯಮಂ ಪೇಳದುದರಿಂ ಬೇಸರಾಯ್ತೆ. ಈಗಳೆ ಬಿತ್ತರಿಪೆಂ." ಮುದ್ದಣ ಎಷ್ಟು ಸುಲಭದಲ್ಲಿ ಸೋತಿದ್ದಾನೆ! ಈಗ ಮನೋರಮೆಗೆ, ಮುನಿ ಬಯ್ದ ವಿಚಾರವನ್ನು ತಿಳಿಸಹೊರಟಿದ್ದಾನೆ. "ಈ ಧರಣೀಮಂಡಲ......"

ಹೆಣ್ಣು ಒಮ್ಮೆ ಗೆದ್ದಳೊ ಈಗ ಆ ವಿಜಯೋನ್ಮತ್ತತೆಯಲ್ಲಿ ಗಂಡನ್ನು ಇನ್ನೂ ಬಗ್ಗುಬಡೆಯುವ ಚಪಲದಲ್ಲಿದ್ದಾಳೆ. ಅಪರೂಪವಾಗಿ ಸಿಗುವ ಇಂತಹ ಸಂದರ್ಭಗಳನ್ನೂ ಬಿಟ್ಟರೆ ಮನೋರಮೆ ಮುದ್ದಣನ ಪತ್ನಿಯಾದಾಳೇ! "ಬಣ್ಣನೆಯ ಧರಣೀಮಂಡಲಗಳೇಕೆ? ಒಂದುಳಿಯದಂತು ತಿರುಳನೆ ಕೂಡಿ ಪೇಳ್ವೈ." ಚಾಟಿಯೇಟಿನಂತಿದೆ ವಿಮರ್ಶೆ.

ಪಾಪ! "ಆಯ್ತಾಯ್ತು" ಎಂದು ಮುದ್ದಣ ತಿರುಳನೆ ಕೂಡಿ ಹೇಳಲು ಉಪಕ್ರಮಿಸಿದ್ದಾನೆ!

* * * * * *

ಕತೆ ಮುಂದೆ ಸಾಗುತ್ತಿದೆ '......ರಾಘವನ ಯಜ್ಞತುರಂಗಮುಂ ಅರಣ್ಯಕ ನೆಂಬೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದುಂ; ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳಪೊಕ್ಕು ಮುನಿಗೆರಗಿದರ್. ಆಗಳರಣ್ಯಕ ನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ'ದನೆಂದು ಮುದ್ದಣ ಹೇಳಿದಾಗ ಮನೋರಮೆಗೆ ಎಲ್ಲಿಲ್ಲದ ಅಚ್ಚರಿ. "ಎನ್ನ ಚೆನ್ನಿಗ! ಆತಿಥ್ಯಮೆಂದೊಡೇಂ? ಬರಿದೆ ಬಾಯುಪಚಾರಮೆ?" ಇದು ಅವಳ ಪ್ರಶ್ನೆ.

ಈ ಪ್ರಶ್ನೆಗೆ ಮುದ್ದಣ "ಅಲ್ತಲ್ತು; ಬಾಯುಪಚಾರಮಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂಳನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೈದು, ಒಡನಿರ್ದು ನುಡಿದು ನಡೆದು ಮನ್ನಿಪುದು" ಎಂದಾಗ ಮಾತ್ರ ಮನೋರಮೆಯ ಆಶ್ಚರ್ಯ ಮುಗಿಲು ಮುಟ್ಟಿದೆ.

"ಶತ್ರುಘ್ನನ ಸಾಯಿರ ಸಾಯಿರ ಲೆಕ್ಕದಿನಿವಿರಿದು ಪಡೆಗರಣ್ಯಕಂ ಕೂಳ್ನೀರಿತ್ತು ಸಮ್ಮಾನಿಸಿದನೆ?" ಎಂದು ಉದ್ಗರಿಸಿದ್ದಾಳೆ ಮನೋರಮೆ.

ಮುನಿಗಳ ಜಪದ, ತಪದ, ಮಂತ್ರದ ಬಲ್ಮೆ ಬಲುಹಿರಿದು. ಏಕಾಕ್ಷರಿಯಿಂದ ಷಡಕ್ಷರಿಗಳ ವರೆಗೆ ಮಂತ್ರಗಳಿವೆ. ಅವು ಮುನಿಗಳಿಗೆ ಬೇಡಿದುದನ್ನು ತಂದೀಯುತ್ತವೆ ಎಂದು ವಿವರಿಸಿ ಹೇಳುತ್ತಾನೆ ಮುದ್ದಣ.

"ಓ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಂ ಪೆರತೊಂದರ ಗೊಡವೆಯಿಲ್ಲದಿರ್ಕುಂ ತಾಪಸರ್" ಎನ್ನುತ್ತಾಳೆ ಮನೋರಮೆ.

"ಅಪ್ಪುದಪ್ಪುದು, ತಪ್ಪೇಂ?" ಎಂದಿದ್ದಾನೆ ಮುದ್ದಣ ಮನೋರಮೆಯ ಮನ ಯಾವ ಹಾದಿ ಹಿಡಿದಿದೆ ಎಂಬುದನರಿಯದೆ.

ಈಗ ಮನೋರಮೆಗೆ ತಮ್ಮ ಬಡತನದ ನೆನಹಾಗಿದೆ. ನಾಲ್ಕು ಜನ ಅತಿಥಿಗಳು ಬಂದರೂ ಉಪಚರಿಸಲು ಕಷ್ಟಪಡಬೇಕಾದ ತಮ್ಮ ಬಾಳ ಸಮಸ್ಯೆ ಕಣ್ಣ ಮುಂದೆ ನಿಂದಿದೆ. ಸಂಸಾರದ ಗೊಡವೆಯನ್ನೇ ತೊರೆದ ತವಸಿಗಳೂ ಸಾವಿರ ಸಾವಿರ ಅತಿಥಿ ಅಭ್ಯಾಗತರನ್ನು ಕೂಳ್ನೀರಿತ್ತು ಸಮ್ಮಾನಿಸಬಲ್ಲವರಾಗಿರುವಾಗ ತಮ್ಮಂತಹ ಸಂಸಾರಿಗಳ ಸ್ಥಿತಿ ಹೀಗಿರುವುದೇ? ಇದು ಅವಳ ಚಿಂತೆ. ಅಪ್ರಯೋಜಕ ವಾಳ್ಗತೆಯ ಕಬ್ಬವನ್ನು ಬರೆಯುತ್ತಾ ವ್ಯರ್ಥವಾಗಿ ಹೊತ್ತು ಕಳೆವ ಬದಲು ಪತಿ ಅಂತಹ ಹಿರಿಯ ತಪಸ್ವಿಗಳಿಂದ ಉಪದೇಶಪಡೆದರಾಗದೆ? ಅದರಿಂದ ಬಾಳು ವ್ಯಥೆಯಿಲ್ಲದೆ ಸರಾಗವಾಗಿ ಸಾಗೀತಲ್ಲ ಎಂಬ ಯೋಚನೆ ಆ ಹೆಣ್ಣು ಹೃದಯದ್ದು. ಎಂದೇ ಮಾತು ಸ್ವಲ್ಪ ಕಹಿಯಾಗಿಯೇ ಹೊರಡುತ್ತದೆ "ನಿನ್ನನ್ನರಪ್ಪ ಕಬ್ಬಿಗರ್

ಮನೆವಾಳ್ತೆಯೊಳಿನಿಸೊಂದುಂ ಗೊಡವೆಗೊಳ್ಳದೆ ಕೆಮ್ಮ ಕೆಮ್ಮನೆ ಪಾಳ್ಗತೆಯ ಕಬ್ಬದೊಳೇವೊಳ್ತುಂ ಬೆಮೆಗೊಂಡಿರ್ಪರಲೇ? ಅವರ್ಗೇಂ ಬಟ್ಟೆಯೊ! ಉಣಲೇಂ, ತಿನಲೇಂ? ಅಂತಿರೊಂದು ಜಪಮುಂ ಪಿರಿದವಸಿಗಳತ್ತಣಿನುಪದೇಶಂಗೊಂಡೊಡಾಗದೆ!"

ಮಡದಿಯ ಈ ಮಾತು ಮುದ್ದಣನ ಮನವನ್ನು ಆಳವಾಗಿ ಚುಚ್ಚಿರಬೇಕು. ತನ್ನ ಕೊರತೆಯನ್ನೇ ಕುರಿತಾದ ಈ ಮಾತು ಸತ್ಯವೂ ಹೌದು. ಆದರೆ ರಸಿಕ ಶಿಖಾಮಣಿ ಮುದ್ದಣ ಮಾತ್ರ ತನ್ನ ಕೊರತೆಯನ್ನೇ ತನ್ನ ನಗೆಗೊಂದು ವಸ್ತುವಾಗಿಸಿಕೊಳ್ಳುತ್ತಾನೆ. ಹಾಗೆ ಮಾಡಿ ತನ್ನ ವಿನೋದಪ್ರಿಯತೆಯನ್ನು ಮೆರೆಸಿದ್ದಾನೆ. ಕಾವ್ಯಲೋಕದಲ್ಲೇ—ಪ್ರಾಯಶಃ ಸಮಸ್ತ ಪ್ರಪಂಚದ ಕಾವ್ಯಲೋಕದಲ್ಲೇ ಆತನ ಈ ಮಟ್ಟ ಬೇರಾರಿಗೂ ಮುಟ್ಟಲಾಗದ ಮಟ್ಟ. ಅಲ್ಲಿ ಆವನೊಬ್ಬನ ಹೊರತು ಬೇರಾರನ್ನೂ ನಾವು ಕಂಡಿಲ್ಲ. ಇಲ್ಲಿ ಮುದ್ದಣ ಮನೋರಮೆಯನ್ನು ನಗಿಸಿ ತಾನೂ ನಕ್ಕಿದ್ದಾನೆ. ಆದರೆ ಬುದ್ಧಿಶಾಲಿ ಓದುಗನ ಕಣ್ಣಿಗೆ ಮಾತ್ರ 'ನಗುವ ಆ ತುಟಿಗಳೊಂದಿಗೆ ತೊಯ್ದ ಕಣ್ಣೆವೆ' ಕಾಣಿಸದಿರದು. 'ತುಟಿಯ ಮೇಲಣ ನಗೆಗಿಂತ ಇಲ್ಲಿ ಕಣ್ಣಿನ ತೇವವೇ ಹೆಚ್ಚು. ಆ ತೇವ ಹನಿಗೂಡಿ ಹಳ್ಳವಾಗದಿರಲೆಂದೇ ಭಾವ ನಗೆಯಾಗಿ ಅರಳಿದೆ' ಎಂಬುದು ತಿಳಿಯದಿರದು. ಇಲ್ಲಿ ನಮ್ಮ ತುಟಿಗಳೆಡೆಯಿಂದಲೂ ನಗು ಹೊಮ್ಮಿಹೊಮ್ಮಿ ಬರುತ್ತದೆ. ಬಾಯಿಬಿಟ್ಟು ಪಕ್ಕ ಬಿರಿವಂತೆ ನಗುತ್ತೇವೆ. ಹಾಗೆ ನಗದಿರಲು ಸಾಧ್ಯವೇ ಇಲ್ಲ. ಅದರ ಶಕ್ತಿ ಅಂತಹದು. ಹಾಗೆ ನಗುತ್ತಿರುವಾಗಲೂ ನಮ್ಮ ಹೃದಯ ಮಾತ್ರ ಆರ್ದ್ರವಾಗಿರುತ್ತದೆ. ಕಣ್ಣು ತೇವಗೊಂಡಿರುತ್ತದೆ. ಯಾವುದೋ ಕಾಣದ ಬಾಣ ಹೇಗೋ ಅರಿಯದ ರೀತಿಯಲ್ಲಿ ಎಲ್ಲಿಗೋ ತಿಳಿಯಲಾರದಂತೆ ಚುಚ್ಚಿ ಎಂತಹದೋ ತಿಳಿಸಲಾರದಂತಹ ನೋವು ಆಗುತ್ತಿರುತ್ತದೆ. ಆದರೂ ತುಟಿಗಳು ಬಿರಿದೇ ಇರುತ್ತವೆ! ನಗು ಉಕ್ಕುತ್ತಲೇ ಇರುತ್ತದೆ!

ಮುದ್ದಣ ಮುಗುಳು ನಗೆಯೊಂದಿಗೆ ಪ್ರಾರಂಭಿಸಿದ್ದಾನೆ. "ಏಂ! ಎಮ್ಮವರೊಂದಿಸವಿಗೆ ನಗುವಾ? ಆಃ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊರತೆಯೊ! ತಾನೆ ಬಯಸಿದೊಡಮೆಯನಾಗಳೆ ತಂದೀವ ಮಂತ್ರದ ಜಪದೊಂದು ನೆರಂ ತಮ್ಮೊಳೊಂದಿರದೊಡಲ್ತೆ ಕಾಡ ಜೋಗಿಗಳತ್ತಣಿನುಪದೇಶಂ. ನಾಡಂ ಕಾಡಂ, ಕಾಡಂ ಬೀಡಂಗೆಯ್ವೊಂದು ಪೆರ್ಮೆಯ ಬಲ್ಮೆಯ ಕಬ್ಬಿಗರೇಂ ಕಕ್ಕುಲಿತೆಯ ಮುದುದವಸಿಗಳತ್ತಣಿಂ ಪಿರಿಯರಾಗರೆ! ನುಡಿವರೇನದುವೆ ಪುರುಳ್, ಪಿಡಿವರೇನದುವೆ ತಿರುಳ್!

ಪಲವೇಂ ಕೆಲವೇಂ? ತವೊಮ್ಮೆಂದೆನುಡಿಯ ಬಲ್ಪಿಂ ಮೂಜಗಮುಮನಳಿಯಿಸುವ ಪೊಗಳ್ವ ಕೊಳ್ವಾಳ್ವ ತಾಳ್ವ ತೂಳ್ವ ಪೂಳ್ವ ಪೇಳ್ವ ಬಾಳ್ವ ಸಿಂಗರದ ಬಣ್ಣಗಬ್ಬಿಗರೆಮ್ಮ ತೆರನನಿನ್ನುಂ ನೀನರಿಯಯ್."

ಮನೋರಮೆಗೆ ವಿಸ್ಮಯ. ತಾನು ಏನೋ ಎಂದು ಭಾವಿಸಿದ್ದ ತನ್ನಿನಿಯನಲ್ಲಿ ಇಸಿತು ಶಕ್ತಿ ಅಡಗಿದೆಯೇನು? "ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ?" ಎಂದಿದ್ದಾಳೆ.

"ತಡೆಯೇನಕ್ಕೇಂ!" ಎಷ್ಟು ನಿಸ್ಸಂದಿಗ್ಧವಾಗಿ ನುಡಿಯುತ್ತಿದ್ದಾನೆ! ಈಗ ಒಂದು ಗುರಿಹಿಡಿದು ಸಾಗಿವೆ ಆತನ ಮಾತುಗಳು. ತನ್ನ 'ಚಿತ್ತರದ ಚಿತ್ತರದ ಬೊಂಬೆ!'—'ರಂಬೆ!' ಮನೋರಮೆಗೆ ಅರಿಯದಂತೆಯೇ ನಗುವಿನರಮನೆಯೆಡೆಗೆ ನಡೆಯಿಸಿಕೊಂಡು ಹೋಗುತ್ತಿದ್ದಾನೆ ಆಕೆಯನ್ನು.

ಮನೋರಮೆ ಉತ್ಸಾಹದಿಂದ—ತಡೆಯಲಾರದ ಉತ್ಸಾಹದಿಂದ ಕೇಳುತ್ತಿದ್ದಾಳೆ "ನಿನ್ನೊಳವೊಳವೆ?"

"ಎನ್ನೊಳಿಂತಿದು ಪಾಸುವೊಕ್ಕು". ಮುದ್ದಣನ ಮಾರುತ್ತರ ಅಡೆತಡೆಯಿಲ್ಲದೆ ಬಂದಿದೆ.

ಇದನ್ನು ಕೇಳಿ ಮನೋರಮೆಗೆ ತನ್ನ ಮನೋವಲ್ಲಭನ ಕುರಿತು ಎಲ್ಲಿಲ್ಲದ ಅಭಿಮಾನ. ಆತನಿಗೆ ಇಂತಹ ಅದ್ಭುತ ಮಂತ್ರವು ಸಿದ್ಧಿಸಿರುವುದು ತನಗೀತನಕವೂ ಅರಿಯದಿದೆಯಲ್ಲಾ ಎಂಬ ಬಿಸವಂದ. ಆ ಮಂತ್ರ ಅಣ್ಮನಿಗೆ ಎಂದು, ಹೇಗೆ, ಯಾರಿಂದ ಸಿದ್ಧಿಸಿತು ಎಂಬುದನ್ನು ತಿಳಿಯುವ ಕುತೂಹಲ. "ಆಃ! ನೀನುಂ ಬಲ್ಮೈಮೆಗಾರಂ, ನಿನಗಾರತ್ತಣಿನೆಂದುಪದೇಶವಾಯ್ತು?"

"ಗುರುವತ್ತಣಿನಂದೆಳವೆಯೊಳೆ." ಮುದ್ದಣನದು ಶಂಕೆಗಾಣದ ಉತ್ತರ.

ಮನೋರಮೆಯ ಕುತೂಹಲ ಕುಡಿಜಿಟ್ಟಿದೆ. "ಎನ್ನರೆಯ! ಅದಾವುದೊ ಮಂತ್ರಮೆನ್ನೊಳುಸಿರ?"

ಮನೋರಮೆಯ ಕುತೂಹಲವನ್ನು ಇನ್ನೂ ಕೆರಳಿಸುವ ಯೋಚನೆ ಮುದ್ದಣನದು. ಹಾಗೆಂದೇ ಹಿಂದೇಟು ಹೊಡೆಯುತ್ತಿರುವ. "ಆಃ! ಆಃ! ಒಳ್ಳಿತೊಳ್ಳಿತು!! ಮಂತ್ರಗಡ! ತನಗೊರೆವುದು ಗಡ! ಚಿಃ! ಚಿಃ! ಪೆಣ್ಗಳ್ಗೀಮಂತ್ರೋಪದೇಶಂ ಸಲ್ವುದೆ?"

ಪತಿಗರಿತಿರುವ, ತನ್ನಿಂದೀವರೆಗೂ ಮರೆಮಾಡಿರುವ ಮಹತ್ತರವಾದ ಮಂತ್ರವನ್ನು ಈಗಲಾದರೂ—ಪತಿಗರಿತಿದೆ ಎಂದು ತಿಳಿದ ಮೇಲಾದರೂ ಅರಿಯದಿರು

ವುದೇ? ಮನೋರಮೆ ಮಧುರಭಾಷಿಣಿಯಾಗಿದ್ದಾಳೆ! ಮೆಲ್ಲಮೆಲ್ಲನೇ ಎಲ್ಲವನ್ನೂ ತಿಳಿಯುವ ಹೊಂಚು ಹಾಕಿದ್ದಾಳೆ. "ಆನರಿಯೆನೆ! ನಿನ್ನತ್ತಣಿನುಪದೇಶಂಬೇಡುವೆನೆ! ನೀನಾಗಳೆಂದ ಮಂತ್ರಂಗಳೊಳಾವುದದರ ಪೆಸರೇನೆಂದೆ ಕೇಳ್ದೆಂ." ಎಳೆಎಳೆಯಾಗಿ ಬಿಡಿಸುವ ಯೋಚನೆಯಲ್ಲಿದ್ದಾಳೆ.

ಮುದ್ದಣ ಮನೋರಮೆಯ ಆತುರದ 'ರಬ್ಬರ್ ಬೆಲೂನಿ'ಗೆ ಇನ್ನಷ್ಟು ಗಾಳಿದುಂಬುತ್ತಾನೆ. ಮತ್ತಷ್ಟು ಮೇಲೆ ಹಾರಲಿ, ಅಂದ ನೋಡೋಣ ಎಂಬ ಆಶೆ. "ಆಗಳೆಂದ ಮುನಿಗಳ ಮಂತ್ರಗಳೊಳಲ್ತು. ಎಮ್ಮ ಮಂತ್ರಂಗಳ ಬಗೆ ಬೇರೆ, ಮೂರೆರಡಕ್ಕರದ ಮಂತ್ರಂಗಳೆಮಗಕ್ಕುಮೆ! ಎಮ್ಮತಂತು ಕಿರಿದಲ್ತು ಬಳ್ಪಿರಿದು. ಒಂದಕ್ಕರಮಲ್ತೆರಡಲ್ತು, ಮೂರಲ್ತು, ನಾಲ್ಕೈದಲ್ತು, ಆರುಮಲ್ತು. ಏಳಕ್ಕರದ ಬೀಜಮಂತ್ರಂ. ಅಂತದರಿಂ ಸರ್ವಮಂತ್ರಂಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀ ಮಂತ್ರಮೆಂದು ಪೆಸರ್."

ಮುದ್ದಣನ ಮಾತು ಮನೋರಮೆಯ ಕುತೂಹಲಕ್ಕೆ ಕಚಗುಳಿಯಿಟ್ಟಿದೆ. "ಹಾಹಾ! ಆಮಂತ್ರಕ್ಕಭಿಮಾನಿದೇವತೆಯಾವುದು? ಮುನ್ನಮಾರಿದಂ ಜಪಿಸಿ ಸಿದ್ಧಿಗಂಡರ್?" ಮನೋರಮೆಯ ಪ್ರಶ್ನೆಗಳೂ ಎಷ್ಟು ಕೌಶಲ್ಯಪೂರ್ಣವಾಗಿವೆ! ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ಮೆಲ್ಲಮೆಲ್ಲನೆ ಮುಂದುವರಿಯುತ್ತಿದ್ದಾಳೆ.

"ಪೋಪೋ! ಇಂತಿವರಂ ಕೊಂಡೇಂ ಕಜ್ಜಂ." ಮುದ್ದಣ ಪುನಃ ಹಿಂದೆ ಸರಿಯಹತ್ತಿದ್ದಾನೆ. ಒಮ್ಮೆಲೇ ಸಡಿಲು ಬಿಡುವುದರಲ್ಲೇನು ಸೊಗಸಿದೆ?

ಜಾಣ್ಮೆಯ ಅಸ್ತ್ರ ಹುಸಿಹೋಯಿತೋ, ಈಗ ಮನೋರಮೆ ಹೊಸ ಅಸ್ತ್ರ ತೆಗೆದಿದ್ದಾಳೆ ಬತ್ತಳಿಕೆಯಿಂದ. ಗಂಡಿನ ಮುಂದೆ ಈ ಅಸ್ತ್ರ ಹಿಡಿದು ಹೆಣ್ಣು ಎಂದೂ ಈ ಪ್ರಪಂಚದಲ್ಲಿ ಸೋತಿಲ್ಲ. ಒಲವುದುಂಬಿ ದೀನಳಾಗಿ ಬೇಡಿದ್ದಾಳೆ ಮನೋರಮೆ "ಇರ್ಕೆ, ಕೇಳ್ವೆಂ." ಪ್ರಾಯಶಃ ಕಣ್ಣು ತಿರುಗಿಸಿ, ಕೊರಳು ಕೊಂಕಿಸಿಯೇ ಬೇಡಿರಬೇಕು ಆಕೆ.

ಮುದ್ದಣ ಇದಕ್ಕೆ ಸೋತಿದ್ದಾನೆ! "ಅಂತಾದೊಡೆ ಕೇಳ್ ಪೇಳ್ವೆಂ. ಇಂತೀ ಪೆರ್ಟ್ಟೆ ಮಂತ್ರದಧಿದೇವತೆ ಜ್ಯೇಷ್ಠೆ. ಮುನ್ನಮೀಶ್ವರಂ ತನ್ನೊಂದು ಲೀಲೆಯೊಳ್ ಜಪಿಸಿ ಸಿದ್ಧಿಗೊಂಡನಂತದರಿನಾತನೆ ಋಷಿ." ಹಗ್ಗವನ್ನು ತುಂಡಾಗುವನಿತು ಎಳೆಯಬಾರದು ಎಂಬ ವ್ಯವಹಾರಜ್ಞತೆಯಿಂದ ಸ್ವಲ್ಪ ಸಡಿಲುಬಿಟ್ಟಿದ್ದಾನೆ.

ಸುಳ್ಳಿನ ಸ್ವರ್ಣಮಿರುಗು ಪಡೆದ ಮುದ್ದಣನ ಮಾತುಗಳಲ್ಲಿ ಒಲ್ಲೆನೆಂದರೂ ಬಿಡದ ಮೋಹಕ ಸೆಳೆತವಿದೆ. ಮನೋರಮೆಯ ಹುಚ್ಚು ಹೆಚ್ಚುತ್ತಾ ನಡೆದಿದೆ.

"ಓಓ! ಇಂತುಟೆ ಮಂತ್ರದೊಂದು ಮೈಮೆ? ಎಲೆ ರಮಣ! ನಿನ್ನಡಿಗಳ್ಗೆರಗುವೆಂ. ಎನ್ನತಿನಿತೊಂದು ಬಿನ್ನಪಂ. ಅಂತು ಸಂದ ಸಿದ್ಧಿಯ ಮಂತ್ರಮಾವುದೊ ಕೂರ್ಮೆಯಿಂ ತಿಳಿಯೆ ಪೇಳ್."

ಮುದ್ದಣ ಜಾಣರಲ್ಲಿ ಜಾಣ. "ಆಗಳೆ ಪೇಳ್ದೆನಲ್ತೆ ಸಪ್ತಾಕ್ಷರೀ ಮಂತ್ರ ಮೆಂದು." ಇದು ಪ್ರಶ್ನೆಗೊಂದು ಉತ್ತರ ಅಷ್ಟೆ.

ಜಾಣ್ಮೆ ಮುಗ್ಗರಿಸಿದೆ. ಬೇಡಿಕೆ ಒಂದೇ ಉಳಿದಿರುವ ಹಾದಿ ಮನೋರಮೆಗೆ. ಆ ಹಾದಿಯಿಂದಲೇ ಮುಂದೆ ಸಾಗಿದ್ದಾಳೆ. "ಅಂತು ಪೆಸರನಲ್ತು, ಮೂಲಮನೆ ಕುರಿತೆನ್ನೊಳಾಡಿ ತೋರ."

"ಅಬ್ಬಾ! ಪೆಣ್ಣೇಂ ಗಡುಸುಗಾರ್ತಿಯೊ!" ಮುದ್ದಣ ಬೆಕ್ಕಸಗೊಂಡು ಬೆರಗಾದವನಂತೆ ನಟಿಸಿದ್ದಾನೆ. "ಆಗಳ್ ಪೆಸರೇನೆಂದಳ್; ಈಗಳ್ ಮೂಲಮಂ ಕೇಳ್ವಳ್. ಇನ್ನೇವಳೊ? ಮೂರೆಳೆಯ ಜನ್ನದಾರದಾಣೆ! ಉತ್ತರಿಗೆಯಾಣೆ! ಆಗದಾಗದು. ಕೇಳ್ವುದರ್ಕೆ ಪೇಳ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು!" ಕಡ್ಡಿಮುರಿದಂತೆ ಹೇಳಿದ್ದಾನೆ ಮುದ್ದಣ.

ಮುದ್ದಣ ಹೇಗೆ ಜಾರಿಕೊಂಡರೂ ಮನೋರಮೆ ಬಿಡಬೇಕು ತಾನೆ. "ಕಿವಿಯಿಂ ಕೇಳ್ವುದರೊಳೇಂ ದೋಸಂ? ಅಂತೇರ್ಪಟ್ಟ ವೇದಮನಾದೊಡಮೋ ದುವೆಡೆಯೊಳ್ ಕೇಳದೆ ಪೆಣ್? ನಿನ್ನೊಳಮೇಂ ಜಂಬಮೋ!"

"ವೇದಮಂತ್ರದ ಬಗೆ ಬೇರೆ. ಇದರ ಪರಿ ಬೇರೆ. ಅಜಗಜಾಂತರಂ. ಅದರೊಳಂ 'ಗೂಢಾದ್ಗೂಢತರಂ ಮಂತ್ರಂ' ಎಂದು ಪೇಳ್ದುದುಂಟು. ಅದುಕಾರ ಣಂ ನಾಂ ಪೇಳಲಾಗದು; ನೀಂ ಕೇಳಲುಮಾಗದು." ಎಂದು ಆ ವಿಚಾರಕ್ಕೆ ಬಾಗಿಲಿಕ್ಕಿ ಬೀಗ ಜಡಿದು ಮೂಲಕತೆಯೆಡೆಗೆ ತಿರುಗಿದ್ದಾನೆ ಮುದ್ದಣ "ಮುಂತಣ ಕತೆಯಂ ಕೇಳ್, ಮತ್ತಮರಣ್ಯಕಂ ಶತ್ರುಘ್ನಾದ್ಯರೊಳ್......" ಈ ಠಕ್ಕುತನದಲ್ಲಿ ಎಂತಹ ಸೊಗಸಿದೆ!

ಈಗಲೋ ಮನೋರಮೆಯದು ಸತ್ಯಾಗ್ರಹ. ಕೊಟ್ಟಕೊನೆಯ ಅಸ್ತ್ರ. "ತೆಗೆ ತೆಗೆ! ನಿನ್ನ ಮುಂಗತೆಯಂ ವಿತೆಯಂ. ಅದೇಂ ಮಂತ್ರಮೊ ಕೇಳ್ವೆಂ. ಕೊರ ಲಾಣೆ, ಉಂಗುರದಾಣೆ, ಪೇಳ್ದಲ್ಲದೆ ಬಿಡೆಂ." ಹೀಗೆಂದು ಕೈಮುಗಿದಿದ್ದಾಳೆ ತನ್ನ ಹೃದಯದೇವತೆ—ಮುದ್ದಿನರಸ ಮುದ್ದಣನಿಗೆ. ಇಲ್ಲಿ ಚಲದೊಂದಿಗೆ ವಿನಯವೂ ಇದೆ. ಗಡುಸುತನದೊಂದಿಗೆ ವಿಧೇಯತೆಯೂ ಇದೆ.

"ಏಂ ಚಲವೊ ಚಪಳೆಗೆ! ಪೇಳೆನೆಂದೊಡೆ ಕೇಳಳ್." ಎಂದು ಉದ್ಗರಿಸಿದ್ದಾನೆ ಮುದ್ದಣ. "ಆಃ ಪೆರರೊಳೊರೆದೆವಿಮ್ಮಾಬೀಜಮಂತ್ರಮನೆಂತು ಪೊಲಗಿಡಿಪೆನೋ!" ಎಂದು ವ್ಯಥೆಗೊಂಡವನಂತೆ ನಟಿಸಿದ್ದಾನೆ. "ಚೀ! ಎಳವೆಂಡಿರಕೈಯೊಳ್ಪರ್ದ ಕಬ್ಬಿಗರ ಬಾಳ್ಕೆಯೇ ದೂಷ್ಯಂ." ಓ! ಎಂತಹ ಮಧುರ ಮಾತು, ಪ್ರಿಯವಾದ ಅಪವಾದ! ಹೇಳಲೋ ಹೇಳದಿರಲೋ ಎಂದು ತುಯ್ದಾಡುತ್ತಿರುವ ಮನಸವನ್ನು ಒಂದು ನಿಲುಗಡೆಗೆ ತಲಪಿಸಲೋ ಎಂಬಂತೆ ತುಸು ಹೊತ್ತು ಮೌನದಿಂದಿದ್ದು, ಯೋಚಿಸಿ ಕೊನೆಗೆ ಮಂತ್ರವನ್ನು ಮನೋರಮೆಗೆ ಹೇಳಲು ಸಿದ್ಧನಾಗಿ ಮುದ್ದಣ "ಎಲೆ ಪೆಣ್ಣೆ! ನೀನಾರೊಳಮೆಂದೆಂದಿಗುಮುಸಿರಲ್ವಾರದು. ಜೋಕೆ!" ಎಂದು ಎಚ್ಚರಿಸಿದ್ದಾನೆ. ಎಷ್ಟಾದರೂ 'ಗೂಢಾದ್ಗೂಢತರಂ ಮಂತ್ರಂ' ತಾನೆ!

ಮನೋರಮೆಯ ಉತ್ಸಾಹಕ್ಕೆ ಮಹಾಪೂರ ಬಂದಿದೆ. ಬಹಳಷ್ಟು ಹೊಯ್ದಾಡಿದ ಬಳಿಕ ಆಕೆಯ ಆಶೆ ಕೈಗೂಡಲಿದೆ. ಆ ಭಾವಾವೇಗದೊಡನೆ ಒಂದೇ ಉಸುರಿನಲ್ಲಿ ಉಸುರುತ್ತಿದ್ದಾಳೆ "ಎಂದುಮೆಂತುಮುಸಿರೆನಾಡೆಂ."

"ಅಂತಾದೊಡಿಂತಿದು, ಕೇಳ್. 'ಭ......ವ...'..." ಹೇಳಲಿಕ್ಕೆ ಪ್ರಾರಂಭಿಸಿದವ ಅರ್ಧದಲ್ಲೇ ತಡೆದು "ಪೆರರೊಳಾಡೆನೆಂಬ ನಂಬುಗೈಯಂ ಪೊಯ್" ಎಂದಿದ್ದಾನೆ.

ನಂಬುಗೈಯಂ ಪೊಯ್ವುದೆಂದೇನು, ಈಗ ಏನು ಮಾಡಲೂ ಸಿದ್ಧಳಿದ್ದಾಳೆ ಮನೋರಮೆ. ಆಕೆಯ ತವಕ ತಕಪಕನೆ ಕುದಿಯುವ ಒಲೆಯಲ್ಲಿರುವ ಅನ್ನದ ಅಗುಳಾಗಿದೆ. "ಇದೆ, ಪಿಡಿ ನಂಬುಗೈಯಂ, ನಿನ್ನಾಣೆ, ಕುಲದೈವದಾಣೆ! ಎಂದುಂ ಪೆರವರೊಳೊರೆಯೆಂ."

ಸರಿ ಮನೋರಮೆ ಇನ್ನಾರೊಡನೆಯೂ ಈ ಮಂತ್ರವನ್ನುಸುರುವಳೊ ಎಂಬ ಸಂದೇಹ ಕೊನೆಗೊಂಡು ಮುದ್ದಣ ಮತ್ತೆ ಮಂತ್ರವನ್ನು ಹೇಳಲು ಮೊದಲಿಟ್ಟಿದ್ದಾನೆ.

"ಭವತಿ......ಭಿ......" ಪುನಃ ನಿಂತು ಹೋಗಿದೆ ಮುದ್ದಣನ ಮಂತ್ರ ಅರ್ಧದಲ್ಲೇ! ಸಂಶಯ ತಲೆ ಹಾಕಿದೆ!! ಕುಶಲ ಬಿಲ್ಲುಗಾರನಂತೆ ಮುದ್ದಣ ಮನೋರಮೆಯ ಮನಸ್ಸಿಂಜಿನಿಯನ್ನು ಕೊನೆಯ ಬಾರಿ ಎಳೆದು ಮಾತಿನ ಬಾಣ ಲಕ್ಷ್ಯವಾದ ಹಾಸ್ಯದ ಗೋಲದಲ್ಲಿ ಆಳವಾಗಿ ಇಳಿಯುವಂತೆ ಮಾಡುತ್ತಿದ್ದಾನೆ. "ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮರವೆಯೊಳ್ ಪೆರರೊಡನುಸಿರ್ದು ಗುಟ್ಟಂ ಬಿಟ್ಟೊಡೆಮ್ಮನ್ನರ ಬಾಳ್ ಪಾಳಕ್ಕುಂ." ತಾನು ಕವಿ ಎಂಬ

ದನ್ನು ಹೆಜ್ಜೆಹೆಜ್ಜೆಗೂ ತೋರಿಸಿ ಕೊಡುತ್ತಿದ್ದಾನೆ ಮುದ್ದಣ ತನ್ನ ಮಾತಿನಿಂದ —ಅದೊರಳಡಗಿರುವ ಕಲಾ ಪ್ರೌಢಿಮೆಯಿಂದ.

ಪ್ರಿಯನಿಗೆ ಹೇಗೆ ತಿಳಿಸಿಹೇಳಲಿ? ಎಂತು ನಂಬಿಗೆ ಕೊಡಲಿ? "ಆನೇಂ ಮೋಡಿಯೆ! ಪೋ! ತನ್ನಾಣೆ, ಕಣ್ಣಾಣೆ, ಕೇಳ್ವೆಂ."

ಕೊನೆಗೆ ಹೇಗೂ ಮುದ್ದಣ ಮೂಲ ಮಂತ್ರವನ್ನು ಪೂರ್ಣವಾಗಿ ಹೇಳಲು ಸಿದ್ಧನಾಗಿದ್ದಾನೆ. ಹಾಂ! ಆದರೆ ಅದು ಗುಟ್ಟಿನ ಮಂತ್ರ; ಅತಿ ಗುಟ್ಟಿನದು! ಬೇರಾರೂ ಕೇಳಬಾರದಲ್ಲ? ಅದಕ್ಕಾಗಿ ಮನೋರಮೆಯ ಸನಿಯ ಬಂದಿದ್ದಾನೆ; ಅತಿ ಸನಿಯ. ಈಗ ಹೇಳುತ್ತಿದ್ದಾನೆ ಆ 'ಗೂಢಾದ್ಗೂಢತರ' ಮಂತ್ರವನ್ನು "'ಭವತಿ ಭಿಕ್ಷಾಂ ದೇಹಿ' ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀಮಂತ್ರಂ" ಎಂದು ಪುನಃ ಎಚ್ಚರಿಸುತ್ತಿದ್ದಾನೆ ಮನೋರಮೆಯನ್ನು "ಆರೊಳಾನುಮುಸಿರದಿರ್."

ಮನೋರಮೆ ಒಮ್ಮೆಲೆ ನಗಬಯಸಿದ್ದಾಳೆ ಆ ಪೆರರೊಳಾಡೆನೆಂಬ ನಂಬುಗೈಯಂ ಪೊಯ್ದು ಕೇಳಿದ ಮಂತ್ರವನ್ನು ಕೇಳಿ. ಅಂತಹ ಹಾಸ್ಯರಸಕವಳ ಅದು. ಆದರೆ ನಗು ಮಾತ್ರ ಆ ಭರದಲ್ಲೇ ಹರಿದು ಬಂದಿಲ್ಲ. ತನ್ನ ಸೋಲಿನ ನಾಚಿಕೆ ಒಂದೆಡೆ, ಸತ್ಯದ ಕಹಿ ಇನ್ನೊಂದೆಡೆ ನಗುವನ್ನು ತಡೆದು ನಿಲ್ಲಿಸಿವೆ. ಆದರೂ ತಡೆಗಳನ್ನು ಮೀರಿಯೂ ನಗು ಮೇಲೊಸರಿದೆ. ಆಕೆ ಅದನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. ಆಕೆಯ ಮುಖದ ಮೇಲೆ ಕಂಡ ಅರೆ ಮುನಿಸೇ ಇದಕ್ಕೆ ಸಾಕ್ಷಿ! "ಪೋ ಮಾಣೆಲೆ ರಮಣ! ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆಂ. ಈ ತೆರನ ಮಾಟದ ಕವಡು ನುಡಿಯ ಕೊಂಕೆಂಬುದನರಿಯದಾದೆಂ. ನೀಂ ಕಬ್ಬಿಗನೊ, ಸಬ್ಬವಕಾರನೊ? ನಿನ್ನೀ ಕಬ್ಬದ ಸೊಗಸನೆಮ್ಮನ್ನರಪ್ಪ ಜಾಣೆಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ?" ಬಂಗಾರವೆಂದು ಬಗೆದು ಆನಂದಾತಿರೇಕದಿಂದ ಹೆಕ್ಕಲು ಓಡಿ ಹೋಗಿ ನೋಡುವಾಗ ಅದು ತಾಮ್ರದ ತುಣುಕಾಗಿದೆ. ಬಂಗಾರವೆಂದು ಮರುಳು ಮಾಡಿದವ ನೋಡಿ ನಗುತ್ತಿದ್ದಾನೆ!

ಮುದ್ದಣನಿಗೂ ಇನ್ನು ಪರಿಹಾಸ ಸಾಕೆನಿಸಿದೆ. ಪ್ರಾಯಶಃ ಆತನ ಮಾತಿನ ಮೊನೆ ಅರಿಯದಂತೆ ಆತನನ್ನೇ ಇರಿದಿರಬೇಕು. "ಸಾಲ್ಗುಮೀಪರಿಹಾಸಂ. ಮುಂಗತೆಯಂ ಕೇಳ್" ಎಂದು ಕತೆಯನ್ನು ಮುಂದುವರಿಸತೊಡಗುತ್ತಾನೆ.

* * * * *

ಮುದ್ದಣ ಒಂದೆಡೆ ಮನೋರಮೆಯನ್ನು "ಎಲೆಲೆ ಕಾಮಿನಿ! ಕಾಮುಕಳಾ ನಿಧಾನೆ! ಕಾಮಮದಾಂಧಗಂಧ ಸಿಂಧುರ ಬಂಧುರಯಾನೆ! ಕಾಳೋರಗಕೇ... ..." ಎಂದು ಬಣ್ಣಿಸುತ್ತಿದ್ದಂತೆಯೇ 'ಎನ್ನರಸ್ನ' ಎಂದು ಸಂಬೋಧಿಸಿ ಮನೋರಮೆ ಸಂಭಾಷಣೆಗೆ ಪೀಠಿಕೆ ಹಾಕಿದ್ದಾಳೆ. ಗಂಡ ಹೆಂಡಿರು ಮಾತಿಗೊಂದು ಮಾತು ಸೇರಿಸುತ್ತಾ ರಸದ ಪಾಕ ಸಿದ್ಧಗೊಳಿಸುತ್ತಾರೆ! ಓದುಗರಿಗೆ ಸ್ವಾದಿಷ್ಟವಾದ ಈ ರಸದೌತಣ ಮರೆಯಲಾರದ ಮರೆಯಲಾಗದ ರುಚಿ.

ಮನೋರಮೆಗೆ ಈ ಬಾರಿಯಾದರೂ ಮುದ್ದಣನನ್ನು ಮಾತಿನಲ್ಲಿ ಸೋಲಿಸ ಬೇಕು ಎಂಬ ಹಠ. ಅದಕ್ಕಾಗಿ ಒಂದು ಉಪಾಯ ಯೋಚಿಸಿ ಹೇಳುತ್ತಾಳೆ "ನಾಳೆಗಲ್ತೆ ಕಾಮನ ಕಟ್ಟಾಯದ ಹಬ್ಬಂ."

ಮುದ್ದಣನಿಗೆ ಮನೋರಮೆಯ ಮಾತಿನ ಹೊಲಬು ಅರಿಯದಾಗಿದೆ. ಗಮನವಿಲ್ಲದೆ ಮುಂದುವರಿಯುತ್ತಿದ್ದಾನೆ. ಆ ದಾರಿ ತನ್ನನ್ನು ಮನೋರಮೆ ಕಟ್ಟಿ ಕಾದಿರುವ ಬಲೆಯೆಡೆಗೇ ಸಾಗಿಸುತ್ತಿದೆ ಎಂಬುದನ್ನು ಆತನೇನು ಬಲ್ಲ? "ಓ! ಓ! ಬಂಗಿಯುಂಡಂ ಮುನ್ನುಂಡುದಂ ಮರೆವಂತಿರಾನುಮರಿವುಗೆಟ್ಟೆಂ. ಅಪ್ಪುದಪ್ಪುದು. ಆದೊಡೇಂ; ನಾಳೆಗೆ ಪೂರಣಗಡುಬೊ, ಸೆಂಡಿಗೆಯೊ, ಮಂಡಿಗೆಯೋ ಹೋಳಿಗೆಯೊ, ಸಜ್ಜಿನ ಜಿರ್ದಿನೂಟಕೆ?"

ಮುದ್ದಣನನ್ನೂ ಸ್ವಲ್ಪ ಕುಣಿಸಿ, ದಣಿಸಿ, ಹಾಸ್ಯಮಾಡೋಣ ಎಂಬ ಬಯಕೆ ಆಕೆಯದು. "ನಿನಗೊಂದೆ ಭೀಮಗೆಂತಂತು ತಿಂಬ ಬಯಕೆ."

"ಮತ್ತಮದೇಂ!" ಕೇಳುತ್ತಿದ್ದಾನೆ ಮುದ್ದಣ.

"ನಾಳೆಗೆನಗೊಂದು ನೋಂಪಿ" ಮನೋರಮೆ ಹೇಳುತ್ತಿದ್ದಾಳೆ.

"ಅಂತಪ್ಪೊಡಾನೋಂಪಿಯಿರವೆಂತು? ಬಗೆಯೆಂತು?"

"ಪಿರಿದೇಂ ಸಂಜೆಯೊಳ್ ಮಿಂದು ಮಡಿಯುಟ್ಟು ಕಲ್ಪೋಕ್ತಮಾಗೆ ಕಾಮನಂ ಪವಣಿನರ್ಚಿಪುದೈಸೆ!"

"ನೀನೊರ್ವಳೆಯೆ?" ಮುದ್ದಣ ಬಲೆಗೆ ಬಹಳ ಸನಿಯವಾಗುತ್ತಿದ್ದಾನೆ.

"ನೀನು ಮಾನುಂ" ಎಂದು ಮನೋರಮೆ ಬಲೆಗೆ ಮತ್ತೂ ಸನಿಯ ನೂಕಿದ್ದಾಳೆ.

ಮುಂದೆ ಮನೋರಮೆ ಮಾತಿನಿಂದ ಮಾತು ಹುಟ್ಟಿಸುತ್ತಾ ಬಂದು "ಅಂತಿರೆ ಮುತ್ತಬ್ಬೆ ಪೆತ್ತಂತಿರೊಂದು ಸಂತಸಮೆನಗೀ ನೋಂಪಿಯೊಳ್" ಎಂದು ಮುದ್ದಣನ ಬಾಯಿಯಿಂದ ಬರಿಸಿ ಆತನನ್ನು ತನ್ನ ಬಲೆಯಲ್ಲಿ ಸಂಪೂರ್ಣ ಸಿಕ್ಕಿಸಿ

ಹಾಕಿದ್ದಾಳೆ. ಮುದ್ದಣನಿಗೆ ಈಗಲೂ ತಾನು ಸಿಕ್ಕಿಬಿದ್ದಿರುವುದು ತಿಳಿದಿರುವುದಿಲ್ಲ. ಅದು ತಿಳಿಯುವುದು ಮನೋರಮೆಯ ಮುಂದಿನ ಮಾತುಗಳಿಂದ.

ಮನೋರಮೆಗೆ ಎಲ್ಲಿಲ್ಲದ ಸಂತಸ. ಹಲವಾರು ಸಲ ಮಾತಿನಲ್ಲಿ ತನ್ನನ್ನು ಸೋಲಿಸಿದ್ದ ಪತಿ ಈಗ ತಾನು ಬೀಸಿರುವ ಬಲೆಯಲ್ಲಿ ಸುಲಭದಲ್ಲಿ ಸಿಲುಕಿರುವ ನೆಂಬ ಹೆಮ್ಮೆ. ಅರೆನಗು ಆಕೆಯ ಮುಖವನ್ನು ಬೆಳಗುತ್ತಿರುವಂತೆಯೇ ಹೇಳು ತ್ತಾಳೆ "ಆದೊಡಮಿನಿತೊಂದು ನಿಯಮಂ ಪೊಳ್ತಡೆವಿಡಿದು ಬೈಗುವರೆಗಮುಪವಾಸ ಮಿರಲೇವೇಳ್ಪುದು."

ಮುದ್ದಣನಿಗೆ ಆಶ್ಚರ್ಯ, ಸತಿ ತನ್ನನ್ನು ಸೋಲಿಸಿದ ಬಗೆ ನೋವನ್ನುಂಟು ಮಾಡಿಲ್ಲ. ಬದಲು ಕೌತುಕ ಹುಟ್ಟಿಸಿದೆ. ತನ್ನವಳ ಮಾತಿನ ಮೋಡಿ ಸೊಗಸಿದೆ. ಅಭಿಮಾನವನ್ನುಂಟುಮಾಡಿದೆ. "ಈಗಳಾಂ ಕತ್ತರಿಯೊಳಾದೆಂ" ಎಂದಿದ್ದಾನೆ. ಆದರೆ ಜಾಣ ಮುದ್ದಣ ಮುಂದಿನ ಮಾತುಗಳಲ್ಲಿ ತನ್ನ ಈಗಿನ ಸ್ಥಿತಿಯನ್ನು ಹೇಳುವುದರೊಂದಿಗೇ ಮುಗ್ಧಮನೋರಮೆಯ ಮನವನ್ನು ಕತೆಯೆಡೆಗೆ ಸೆಳೆಯು ತ್ತಾನೆ "ಕಲ್ಲೊಳ್ ಕಾಲ್ಬೆಟ್ಟಿದ ರಾಮನ ಹಯಮೆಂತಂತು ಮನಂ ಮುಂಗೆಟ್ಟುದು. ಅಂತಪ್ಪೊಡೀ ನೋಂಪಿಯನೊಲ್ಲೆಂ."

ಮುದ್ದಣನ ಇಚ್ಛೆ ಫಲಿಸಿದೆ. ಹಾಕಿದ ಗಾಳವನ್ನು ಮೀನು ಕಚ್ಚಿದೆ. ಮನೋರಮೆಯ ಮನ ಇಲ್ಲಿಂದ ಒಮ್ಮೆಲೇ ನೆಗೆದು ಕತೆಯನ್ನು ಹಿಡಿದುಕೊಂಡಿದೆ. "ಅಂತೇಂ! ನಡೆವ ಜನ್ನಗುದುರೆಯೆಂದು ಕಲ್ಲೊಳ್ ಕೀಲಿಸಿದುದು ಪೇಳ!"

ಮನೋರಮೆಯ ಗಮನ ಕತೆಯೆಡೆಗೆ ಹರಿದಿದೆ ಎಂಬುದನರಿತು ಈ ಸಂದ ರ್ಭದ ಸದುಪಯೋಗವನ್ನು ಮುದ್ದಣ ಪಡೆಯುತ್ತಾನೆ. "ಅಪ್ಪೊಡಕ್ಕುಂ. ಆದೊಡಿನಿತೊಂದಂ ನಿನ್ನಂ ಬೇಳ್ಪೆಂ. ನಾಳೆಗುಪವಾಸಮನುಳಿದ ನೋಂಪಿಯನೇ ಪಡಿಸಲೇವೇಳ್ಪುದು."

ಅದು ಇಂದಿನ ಕತೆ ಮುಗಿದ ಬಳಿಕದ—ನಾಳೆಯ ವಿಚಾರ ತಾನೇ. "ನೋಳ್ಪಂ" ಎಂದಿದ್ದಾಳೆ. ಈಗ ಆಕೆಯ ಮನಸ್ಸು ಯಜ್ಞಾಶ್ವದ ಹಿಂದೆ ಪಯಣ ಹೊರಟಿದೆ. ಆ ಕುದುರೆಯ ಝಣಝಣಿಸುವ ಕಿಂಕಿಣಿಗಳಿಂದ ಕೂಡಿದ ಕಾಲು ಗಳನ್ನೇ ಕಾಣುತ್ತಿದೆ ಆಕೆಯ ಕಲ್ಪನೆಯ ಕಣ್ಣುಗಳು. ಆ ಕಾಲುಗಳು ಎಲ್ಲಿ ಹೇಗೆ ಕಲ್ಲೊಳಗೆ ಕೀಲಿಸುತ್ತವೆ ಎಂಬುದನ್ನೇ ಯೋಚಿಸುತ್ತಿದೆ ಆಕೆಯ ಮನ. "ಮುನ್ನಂ ಕತೆಯಂ ಬಿತ್ತರಿಸು" ಎಂದು ಒತ್ತಾಯಿಸುತ್ತಿದ್ದಾಳೆ ಮುದ್ದಣನನ್ನು.

ಮುದ್ದಣ ಮರುದಿನದ ಔತಣದ ನೆನಹಿನಿಂದ ಬಾಯಿ ನೀರು ಸುರಿಸುತ್ತಲೇ ಇರಬಹುದು "ಆಯ್ತಾಯ್ತು ಕೇಳ್!" ಎಂದು ಮುಂದಿನ ಕತೆಯನ್ನು ಹೇಳಲು ಮೊದಲಿಟ್ಟಿದ್ದಾನೆ.

* * * * *

"ಎಲೆಗೆ ರಾಮಾಭಿರಾಮೆ! ಸುಗ್ರೀವೆ! ನೀಲಕುಂತಳೆ! ಕುಮುದನಯನೆ! ಪದ್ಮಗಂಧಿ! ಕೇಸರಿಮಧ್ಯೆ! ಅಂಗದವಿರಾಜಿತೆ!" ಮುದ್ದಣ ಇಂದೇಕೋ ಹರ್ಷೋನ್ಮಾದಿತನಾಗಿದ್ದಾನೆ! ರಾಮನಿಂದ ಮೊದಲಾಗಿ ರಾಮ ಸೈನ್ಯದ ಕಪಿನಾಯಕರ ಹೆಸರಿನಿಂದಲೇ ತನ್ನ–ಕಾಮುಕಲ್ಪವಲ್ಲರಿಯನ್ನು, ಸಿಂಗರದ ಸಿರಿಯನ್ನು ಒಜ್ಜೇರೆಗಣ್ಣಪೆಣ್ ಜೀವಿತೇಶ್ವರಿ ಮನೋರಮೆಯನ್ನು ಬಣ್ಣಿಸಹೊರಟಿದ್ದಾನೆ. ಅನಿರ್ವಚನೀಯ ರಸದ ಸ್ನಿಗ್ಧತೆಯಿಂದ ಆತನ ಹೃದಯ ಮಧುರವಾಗಿದೆ. ಪ್ರಾಯಶಃ ಮುಂದೆ ಬರಲಿರುವ ಪ್ರಿಯವೂ, ಲೋಕೋತ್ತರವೂ ಆದ ಉದ್ವೇಗಪೂರ್ಣ ಘಟನೆಗಳ ನೆನಹಿನಿಂದ ಆತನ ಮನ ಮತ್ತವಾಗಿರಬೇಕು.

ಮುದ್ದಣ ಮುಂದುವರಿಸಿದ್ದಾನೆ. "ಅಂತು ಕುಂಡಲಪುರದಿಂ ತಳರ್ದ ಪೆಳವರ ಕೆಳವರ ಕಣ್ಣಿಲಿ ಮೊಗರ ಗುಡ್ಡರೋರೊಂದು ನಾಡಂ ಕಳಿಕಳಿದು ಬರುವರು ತುಮಿಪುರ್ದುಮಲ್ಲಿ ಮಲ್ಲೀವಲ್ಲೀಕುಂಜಪುಂಜರಂಜಿತಮಾದೊಂದು ಮುನಿಗಳಾಶ್ರಮದ ಪೊರವಳಯದ ತೋಂಟದೊಳಾಟದ ಕಿರುವರೆಯದ ಕುವರರಿರ್ವರದಟಿಂ ತಡೆದು ಪಿಡಿದು ಹಯಮಂ ಕಟ್ಟಿದರ್ ಗಡ!"

ಇದನ್ನು ಕೇಳಿದೊಡನೆ ಮನೋರಮೆ ದಂಗುಬಡಿದು ಹೋಗಿದ್ದಾಳೆ; ತಬ್ಬಿಬ್ಬಾಗಿದ್ದಾಳೆ. ಇದೆಂತಹ ಚೋದ್ಯ! ಅಯೋಧ್ಯೆಯ ಅಧಿಪತಿ ಚಕ್ರಾಧಿಪತಿ ರಘುಜರಾಮನ ಯಜ್ಞಾಶ್ವಕ್ಕೆ ಅದಟಿನ ಬಲ್ಲಾಳ್ತನದ ಬೀರರೂ, ಮಂಡಳೇಶ್ವರರೂ ತಲೆವಾಗಿ, ಕಾಣಿಕೆಯನಿತ್ತು ಶರಣೆನ್ನುತ್ತಿರುವಾಗ ಮುನಿಗಳಾಶ್ರಮದ ಕಿರುವರೆಯದ ಕುವರರಿರ್ವರು ಅದಟಿಂ ತಡೆದು ಪಿಡಿದು ಕಟ್ಟಿದರೆಂದು ಕೇಳಿದರೆ ಆ ಮಕ್ಕಳಿರ್ವರ ಗಂಡೆದೆಯನ್ನು ಕಂಡು ಆಕೆ ಆಶ್ಚರ್ಯಾತಿಶಯದಿಂದ ದಿಙ್ಮೂಢಳಾಗದೆ ಇದ್ದಾಳೆ! ಈ ಘಟನೆಯನ್ನು ಕೇಳಿ ಆಕೆ ಎಷ್ಟು ಭಾವಪರವಶಳಾಗಿರುವಳೆಂದರೆ ತನ್ನಿನಿಯನ ಸನಿಯ ಸರಿದು, ಆತನ ಗಲ್ಲವನ್ನು ಅಲುಗಿಸಿ, ಗಾಢವಾಗಿ ಆಲಿಂಗಿಸಿಕೊಂಡಿದ್ದಾಳೆ! ಆ ವೈಯಾರಿತದಲ್ಲೇ ಕೇಳುತ್ತಿದ್ದಾಳೆ "ಎನ್ನ ಚೆನ್ನರಸ! ಮುನಿಗಳಾಶ್ರಮದ ತರಳರ್ಗೀಬಗೆಯೊಳ್ ನಾಡರಾಯರ ಜನ್ನಗುದುರೆಯಂ ಕಟ್ಟಿ ಕಾದುವೊಂದು ಬಲ್ಪಂ ಕೂರ್ಪುಂ ನೇರ್ಪಟ್ಟುದೆಂತು?" ಈ ಪರಿಯ ಬೀರ

ತನ ತುಂಬಿ ದದಿಟ್ಟಬಾಲಕರಾರೊ? ಇವರ ಹಿಂದು ಮುಂದುಗಳೇನೊ? ಇವರ ಈ ಅಸಮ ಸಾಹಸದ ಪರಿಣಾಮವೇನಾಯಿತೋ ಎಂಬುದನರಿವ ಆತುರದಿಂದ ಒಂದುಸುರಿಗೇ ಪ್ರಶ್ನೆಗಳ ಸರಮಾಲೆಯೇ ಹೊರಬಿದ್ದಿದೆ "ಆರಪ್ಪರೀಕುಮಾರರೇಂ ಗೆಯ್ದರೇನಾದರೆಂತು ಕಾದಿದರ್ ಪೇಳ್? ಅಬ್ಬಾ! ಏಂ ಗಡುಸುಗಾರರೊ!"

ಮನೋರಮೆ 'ಮುಂದೆ' ಎಂದಳೊ ಮುದ್ದಣ 'ಹಿಂದೆ' ಎಂದನೆಂದೆ ಊಹಿಸಬಹುದು. ಆದರೆ ಆ 'ಹಿಂದೆ'ಯ ಹಿಂದೆ ಮನೋರಮೆಯನ್ನು 'ಮುಂದೆ ಮುಂದೆ' ಎಂದು ಹುಚ್ಚುಗಟ್ಟಿಸುವ ಮಾಯೆಯಿದೆ! ಮನೋರಮೆಯ ಕುತೂಹಲ ಕುಡಿಬಿಟ್ಟಿತೋ, ಮುದ್ದಣನಿಗೆ ಅದಕ್ಕೆ ನೀರೆರೆದು ಮತ್ತಷ್ಟು ಪಲ್ಲವಿಸದಿರಲು ಆಗದಿರುವಂತಹ ಚಪಲ! ನೋಡೋಣ ಅದರ ಅಂದ ಚೆಂದ ಎಂಬುದು ಅವನ ರೀತಿ. ಆದರೆ ಅದನ್ನು ಪಲ್ಲವಿಸುವ ಪರಿಮಾತ್ರ ಹೊಸದು. ಅದು ಕಾವ್ಯ ಪ್ರಪಂಚಕ್ಕೆ ಅವನದೇ ಕೊಡುಗೆ. ಅದರಲ್ಲಿ ಎಂದೆಂದೂ ಕುಂದದ ಕಂದದ ಕಳೆ ಯಿದೆ. ಹೊರನೋಟಕ್ಕೆ ಕುತೂಹಲದ ಕುಡಿಯನ್ನು ಚಿವುಟಿದನೆಂದೇ ಕಾಣ ಬೇಕು. ಆಶ್ಚರ್ಯದ ವಿಚಾರವೆಂದರೆ ಒಂದು ಕುಡಿ ಚಿವುಟಿ, ಚಿವುಟಿದಲ್ಲೇ ನೂರು ಕುಡಿ ಚಿಗುರಿಸಬಲ್ಲ ಮಾಟಗಾರಿಕೆ ಅವನದು. ನೋಡಿ ಆತನ ಮಾತಿನ ಮೋಡಿ "ಉಃ! ಪೋಕೆ ಬಾಳ್ಗೆಟ್ಟ ಮಕ್ಕಳಾರಾದೊಡೆಮೇಂ? ಸಾಲ್ಗು ಮಿಾ ಪಾಳ್ಗತೆ; ಕತೆವೇಳ್ದು ಬೇಸತ್ತೆಂ; ಎಂತುಂ ಯಜ್ಞಪರಿಸಮಾಪ್ತಿಗೆಯ್ವೆಂ."

ಮನೋರಮೆಯೂ ಸಾಮಾನ್ಯಳಲ್ಲ. ಆ ರಸಿಕ ಶಿಖಾಮಣಿಯ ಮಡದಿ ತಾನೆ! ಈಗೀಗ ಆಕೆಯೂ ಮಾತಿನ ಕುಶಲ ಕಲೆಯನ್ನು ಕರಗತಮಾಡಿಕೊಂಡಿ ದ್ದಾಳೆ. "ಮುದ್ದುಮೊಗದ ಚೆನ್ನಿಗರಾಯ!" ಎಂದು ಸಂಬೋಧಿಸಿದ್ದಾಳೆ ಮುದ್ದಣ ನನ್ನು. ಎಂತಹ ಮಧುರವಾಗಿದೆ ಕರೆ. ಎಷ್ಟು ಪ್ರಿಯವಾದ ಹೊಗಳಿಕೆ ಬೆರೆತಿದೆ ಅಲ್ಲಿ! ಹೆಣ್ಣಿನ ಮಾತೂ ಎಷ್ಟು ಪರಿಣತವಾಗಿದೆ! ಯಾವ ಗಂಡು ತಾನೆ ಈ ಕರೆ ಯಿಂದ, ಅದರಲ್ಲಿ ಹೊಮ್ಮಿ ಹೊರಸೂಸುವ ಪ್ರಶಂಸೆಯಿಂದ, ತುಂಬಿ ತುಳುಕುವ ಪ್ರೀತಿಯಿಂದ ಹೆಣ್ಣಿಗೆ ಸೋಲದಿರಲು ಸಾಧ್ಯ! ಹೀಗೆ ಪ್ರಿಯಂವದೆಯಾಗಿ ಮನೋ ರಮೆ ಮುಂದುವರಿಸಿದ್ದಾಳೆ "ಆಗದಾಗದು, ತನ್ನಾಣೆ! ಬಾಲಕರ್ ರಣದೊಳ್ ಸೋಲ್ತರೆ? ಗೆಲ್ದರೆ? ಪೇಳಯ್." ಕತೆ ಈಗ ಎಷ್ಟು ಕುತೂಹಲಕಾರಿಯಾದ ಸನ್ನಿವೇಶಕ್ಕೆ ಬಂದಿದೆ! ಒಂದೆಡೆ ಸಾವಿರ ಸಾವಿರ ಸಂಖ್ಯೆಯ ಚಕ್ರಾಧಿಪತಿ ರಾಮ ಚಂದ್ರನ ಪಡೆ, ಮತ್ತೊಂದೆಡೆ ಋಷ್ಯಾಶ್ರಮದ ಎಳೆಯ ವೀರರೀರ್ವರು. ಈ ಹಿಮಾಲಯ ಹುಲ್ಲುಕಡ್ಡಿಗಳೊಳಗಿನ ಹೋಯ್‌ಕೈ! ದೇಶದೇಶಗಳನ್ನೇ ತುತ್ತು

ಗೊಂಡು ಮುಂಬರಿದು ಮೇಲ್ವಾಯ್ದು ಬರುವ ಸಾಗರ ಸದೃಶ ರಾಮಚಂದ್ರನ ಪಡೆಯನ್ನು ಎದುರಿಸಲೆಂದು ಎದೆಗೊಟ್ಟುನಿಂತ ಋಷ್ಯಾಶ್ರಮದ ಈ ಕುವರರ ಎದೆಗಾರಿಕೆ ಎಂತಹದು! 'ನ ಭೂತೋ ನಭವಿಷ್ಯತಿ' ಎಂಬ ಸನ್ನಿವೇಶದಲ್ಲೇ ಪತಿಯು ಹಿಂದೇಟು ಹೊಡೆಯುತ್ತಿರುವನಲ್ಲಾ ಎಂದೇ ಉದ್ಗರಿಸಿದ್ದಾಳೆ "ನಿನಗವೇನಿಂತು ಬೇಸರೊ ಕಾಣೆಂ."

ಇ ದುಮುದ್ದಣನಿಗೆ ಬಯಕೆಯನ್ನು ಸಾಧಿಸಿಕೊಳ್ಳಲು ಯೋಗ್ಯ ಸಂಧಿ. ಕಾದಾಗ ಬಡಿಯದಿರುವವ ಕಮ್ಮಾರನಲ್ಲ. ಸಂಧಿ ಸಿಕ್ಕಾಗ ನಸ್ನಿಯಾಡದಿರುವವ ರಸಿಕನಲ್ಲ. ಮನೋರಮೆ ಮುಂದಿನ ಕತೆಯನ್ನು ಕೇಳಬೇಕೆಂದು ಉತ್ಕಂಠಿತೆಯಾಗಿ ತನ್ನತಾ ಮರೆತಿರುವಾಗಲೇ ಮುದ್ದಣ ತನ್ನ ಇಚ್ಛೆ ಈಡೇರಿಸಿಕೊಳ್ಳುವ ಹೊಂಚುಹಾಕಿದ್ದಾನೆ. "ನೀನುಡುಗೊರೆಯನೀವ್ರದನೇನುಮಂ ಕಾಣೆನುಂತೆ ಪೇಳೆಂದೊಡೆ ಪೇಳ್ವರೆ?"

ಕತೆಯ ಹೊನಲಲ್ಲಿ ಮೈಮರೆತು ತೇಲುತ್ತಿರುವ ಮನೋರಮೆ ಮುದ್ದಣನ ಈ ಮಾತಿನಿಂದ ಥಕ್ಕನೆ ಸಾವರಿಸಿಕೊಂಡಿದ್ದಾಳೆ. ಮೈಮರೆತ ಮರೆಯಾಗಿದೆ; ಚತುರತೆ ಚೇತರಿಸಿಕೊಂಡಿದೆ. ಮುಗ್ಧೆ ಜಾಣೆಗೆ ಶರಣಾಗಿದ್ದಾಳೆ! ಆಕೆ ಕೊಟ್ಟ ಮಾರುತ್ತರ ನಮ್ಮ ಶಾಭಾಸ್ ಪಡೆಯಲು ಅರ್ಹವಾಗಿದೆ. ಗಂಡಿನ ಚಾತುರ್ಯ ನೋಡನೋಡುತ್ತ ಮಣ್ಣುಗೂಡಿದೆ. ವಿಜಯಿ ಭಾವದಿಂದ ನಸುನಗುತ್ತಾ "ಎರೆಯ!" ಎಂದು ಸಂಬೋಧಿಸಿದ್ದಾಳೆ ಪತಿಯನ್ನು. ಎಷ್ಟು ವ್ಯಂಗ್ಯಾರ್ಥ ತುಂಬಿದೆ ಈ ಮಾತಿನಲ್ಲಿ. "ನೀನುಮೆರೆವರೆಂತಂತು ಬೇಡುವಯ" ಎಂದು ಮುಂದುವರಿಸಿದ್ದಾಳೆ. ಇಲ್ಲಿ ಆಕೆ ಪ್ರಿಯ ಎಂಬಂತೆಯೇ ಬೇಡುವವ ಎಂದು ಎರಡೂ ಅರ್ಥಗಳನ್ನು ಜೊತೆಗೂಡಿಸಿ ಮುದ್ದಣನನ್ನು "ಎರೆಯ" ಎಂದು ಕರೆದಿರುವುದು ಈ ಸಂದರ್ಭದಲ್ಲಿ ಪಂಡಿತರೂ ಪ್ರಶಂಸಿಸುವಂತಹದಿದೆ. ನಮ್ಮಂತಹ ಸಾಮಾನ್ಯರಂತೂ ತಲೆದೂಗದಿರಲು ಸಾಧ್ಯವೇ ಇಲ್ಲ. ಮುಂದಿನ ಮಾತೂ ಹಿಂದಿನದಕ್ಕೆ ಪೂರಕವಾಗಿ ಎಷ್ಟು ಯುಕ್ತಿಯುಕ್ತವಾಗಿದೆ ಕೇಳಿ "ಇನ್ನಿ, ಕಾಡಿ ಬೇಡಿಕೊಂಡೊಡೊಂದುಡುಗೊರೆಯೆ? ಮನವೊಲ್ಪಿವೊಡಲ್ತೆ ಮೆಚ್ಚು?" ಗಂಡಿನ ಮಾತಿನಿಂದಲೇ ಆತನನ್ನು ಕಟ್ಟಿಹಾಕಿ ಜಯಭೇರಿ ಬಾರಿಸಿದ್ದಾಳೆ ಜಾಣ್ಣೆ!

ಮುದ್ದಣನಿಗೆ ಪ್ರಾಯಶಃ ನಾಚಿಕೆಯಾಗಿರಬೇಕು ತನ್ನ ಮಾತಿನ ಜಾಲದಲ್ಲಿ ತಾನೇ ಸಿಲುಕಿಬಿದ್ದಿರುವುದನ್ನು ಕಂಡು. ಬಿಡಿಸಲಾಗದ ಬಿಗಿತ ಅದು! ತಪ್ಪಿಸಿಕೊಳ್ಳಲು ಹಾದಿಯೇ ಉಳಿದಿಲ್ಲ. ಮಡದಿಯ ಜಾಣತನ ಕಂಡು ಆನಂದ.

ಆಶ್ಚರ್ಯವೂ ಆಗಿರಬಹುದು. "ಮೆಚ್ಚಂ ನಚ್ಚಿ ಪೆಚ್ಚೆವೋದೆಂ" ಎಂದು ಆ ಎಡೆಯಿಂದ ಹೇಗೋ ಜಾರಿಕೊಂಡು ಮುಂದೆ ಹೇಳಿದ್ದಾನೆ "ಅಯ್ಯೊ ಸೋಲ್ವೆಂ." ಇಲ್ಲಿ ನಿನ್ನ ಕಟಕಿಯನ್ನು ನಾನು ಮರೆಯಲಾರೆ ಎಂಬ ಭಾವ ಸೂಚ್ಯವಾಗಿದೆ. ಅದನ್ನು ಆತ ಮರೆಯುವುದೂ ಇಲ್ಲ. ಮುಂದೆ ಅವೇ ಮಾತುಗಳು ತಿರುಗು ಬಾಣವಾಗಿ ಮನೋರಮೆಗೆ ತಾಗುವುದನ್ನು ನಾವು ಕಾಣುತ್ತೇವೆ!

ಮುದ್ದಣನೊ ಬಾಣರಲ್ಲಿ ಬಾಣ. ಆತನದು ಅಕ್ಷಯ ಬತ್ತಳಿಕೆ. ಒಂದು ಬಾಣ ಹುಸಿಹೋದರೇನಾಯಿತು. ಬೇರೆಯೇ ಒಂದು ಹೊಸ ಬಾಣವನ್ನು ತೆಗೆದಿದ್ದಾನೆ ಬತ್ತಳಿಕೆಯಿಂದ! ಹೊಸತೊಂದು ಪರಿಯಿಂದ ಕುಣಿಸುತ್ತಿದ್ದಾನೆ ಮನೋರಮೆಯನ್ನು! ಮುಂದರಿಸಿ ಕೇಳುತ್ತಿದ್ದಾನೆ "ಎಳೆಗುವರರೊಂದು ಕತೆ ಮುಂತೆಕೇಳ್. ನೀಂ ಮುನಿಸಿನೆರಸು ವೋದ ಸೀತೆಯೊಂದಿರವನರಿತುಂಟೆ?"

ಕ್ಷಣದ ಹಿಂದೆ ವಿಜಯ ಪಡೆದಿದ್ದ ಹೆಣ್ಣು ಈಗ ಗಂಡಿನ ಕವಡು ಬಗೆಗೆ ಸೋತಿದೆ. ಗಂಡು ತೋರಿದ ಈ ಮೋಹಕವಾದ ಹಾದಿ ಹೊಸತು ಎಂದೇ ಭ್ರಮಿಸಿ ಹೆಣ್ಣು ಆತುರದಿಂದ ಆ ಹಾದಿಯನ್ನು ಹಿಡಿಯಲೆಳಸಿದೆ. ಮುಂದೆ ಮಾತ್ರ ಹೆಣ್ಣಿಗೇ ತಿಳಿಯುತ್ತದೆ ಇದು ಹೊಸ ಬಾಟಲಿಯಲ್ಲಿ ಹಳೆ ಮದ್ದು ತುಂಬಿದ ಮೋಬು ಎಂಬುದು! ಹಿಂದಿನ ಹಳೆ ತಾಣಕ್ಕೆ ಸುತ್ತು ತಿರುಗಿಸಿ ತಂದು ಬಿಡುವ ಒಳಸುದಾರಿ ಎಂಬುದು! ಆದರೂ ಈ ಒಳಸು ದಾರಿ ಎಷ್ಟು ಮನೋಲ್ಲಾಸಕಾರಿಯಾದುದು! ಕಳೆಯಿತಲ್ಲಾ ಎಂದು ವ್ಯಸನಪಡುವಷ್ಟು ಮೋಹಕವಾದುದು! ಇನ್ನೂ ಸುತ್ತಾಗಿರಬಾರದಿತ್ತೆ ಎಂದು ಬಯಸುವಷ್ಟು ಪ್ರಿಯವಾದುದು.

ಮುದ್ದಣನ ಮಾತಿನಿಂದ ಮನೋರಮೆಗೆ ಒಮ್ಮೆಲೆ ಸೀತೆಯ ನೆನಪಾಗಿದೆ. ಸೀತೆಯ ನೆನಪಾಯಿತೊ ಆಕೆಗೆ ಉಳಿದುದೆಲ್ಲವೂ ಮರೆತಿದೆ. ಅದೊಂದೆ ಹೃದಯ ವ್ಯಾಪಿಸಿದೆ. ಪತಿಯಿಂದ ಪರಿತ್ಯಕ್ತೆ, ತುಂಬಿದ ಬಸಿರಿ ಸೀತೆ ಅಂದು ಋಷ್ಯಾಶ್ರಮವನ್ನು ಹೊಕ್ಕಬಳಿಕ ಏನು ಮಾಡಿದಳೊ, ಎಂತಿದ್ದಳೊ, ಏನಾದಳೊ ಎಂಬುದೊಂದೂ ತಿಳಿದಿಲ್ಲ. ಕತೆ ಕೇಳುವ ತನ್ಮಯತೆಯಲ್ಲಿ ಆ ಕುರಿತು ತನಗೆ ನೆನಪೂ ಆಗಲಿಲ್ಲವಲ್ಲಾ ಎಂದು ತನ್ನ ಕುರಿತೇ ಮನೋರಮೆಗೆ ಮುನಿಸು. ಆ ಮರವೆ ಆಕೆಯನ್ನು ಕೊರೆಯುತ್ತಿದೆ. "ಎನಗಮೇನೊಂದು ಮರವೆಯೊ? ಎನ್ನಬ್ಬೆ ಸೀತೆಯನಂದಾಗಳೆ ಮರೆತೆಂ. ಅಪ್ಪುದಪ್ಪುದು. ಮುನಿಗಳಾಶ್ರಮದೊಳಂತಿರ್ದಳೇಂ ಗಿಪ್ಪಳ್? ತಮರವರ್ ಕಡೆಗೆ ಕೊಂಡೊಯ್ದರೇಂ? ಎನಗಿದನೆ ಪೇಳ್." ಎಳೆವರೆಯದ ಕುವರರೀರ್ವರ ಬೀರತನದ ಕತೆಯನ್ನು ಕೇಳಲೆಂದು ಮೈಯೆಲ್ಲ ಕಿವಿಯಾಗಿ

ಉತ್ಸಾಹಾತಿರೇಕದಿಂದ ಮೈಮರೆತಿದ್ದ ಮನೋರಮೆಗೆ ದುಃಖಿತ ಸೀತೆಯ ಕರುಣಾಪೂರ್ಣ ಕಥೆಯು ನೆನಪಾಯಿತೊ ಉಳಿದುದೆಲ್ಲವೂ ಅಮುಖ್ಯವೆನಿಸಿದೆ. "ಆ ಮಕ್ಕಳಿರ್ಕೆ ಪೋಕೆ" ಎಂದಿದ್ದಾಳೆ. ಹೆಣ್ಣು ಹೃದಯದ ಚಿತ್ರ ಎಷ್ಟು ಪರಿಪೂರ್ಣತೆಯಿಂದ ವ್ಯಕ್ತವಾಗಿದೆ ಇಲ್ಲಿ. ಹೆಣ್ಣು ವೀರಕ್ಕಿಂತ ಶೋಕಕ್ಕೆ ಹೆಚ್ಚು ಮನಸೋಲುತ್ತಾಳೆ. ವೀರ ಗಂಡಿನ ರಸ! ಶೋಕ ಹೆಣ್ಣಿನದು!

ಮುದ್ದಣ ಇಂತಹ ಬಳಸುದಾರಿ ಹಿಡಿದು ಸೀತೆಯ ವಿಚಾರವನ್ನು ಹೇಳಲು ಮೊದಲಿಡುತ್ತಾನೆ. ಸೀತೆ ವಾಲ್ಮೀಕಿಯಾಶ್ರಮವನ್ನು ಸೇರಿದ ಮೇಲೂ ಕಣ್ಣೀರ ಮುನ್ನೀರಿನಲ್ಲಿ ಮುಳುಗಿಯೇ ದಿನದೂಡುತ್ತಿದ್ದಳು. 'ನುಡಿಯೊಳ್ ನಡೆಯೊಳೆಡವಿನೊಳ್ ಜಡದೊಳ್ ಜಂಜಡದೊಳ್ ಅಡಿಗಡಿಗೆ' ಶ್ರೀರಾಮನನ್ನು ನೆನೆಯುತ್ತಾ ಹೊತ್ತು ಕಳೆಯುತ್ತಿದ್ದಳು. ಹೀಗೆ ತಿಂಗಳು ತುಂಬಿಬರಲು ವಾಲ್ಮೀಕಿ ಸೀಮಂತ ಕರ್ಮಾದಿಗಳನ್ನು ಯಥಾವಿಧಿ ನೆರವೇರಿಸಿದ. ಮೇಲೊಂದು ದಿನ 'ಪೆರ್ನೇಸರ್ಕಳಂ ಪೂರ್ವದಿಕ್ಸುಂದರಿಯೆಂತಂತು' ಸೀತೆ ಅವಳಿಜವಳಿ ಗಂಡು ಮಕ್ಕಳನ್ನು ಹೆತ್ತಳು. ಮುನಿ ಅವರಿಗೆ ಲವಕುಶರೆಂದು ಹೆಸರಿಡುತ್ತಾನೆ. ತರತರದ ಬಾಲಲೀಲೆಯನ್ನು ಮಾಡುತ್ತಾ ಮಕ್ಕಳು ಬೆಳೆಯುತ್ತಾರೆ. ಇದನ್ನು ಕಂಡ ಸೀತೆಯ ದುಃಖವೂ ಸ್ವಲ್ಪ ಮರೆಯಾಗುತ್ತದೆ. ಆನಂದ ತಲೆದೋರುತ್ತದೆ. ಋಷಿಯೂ 'ಬಾಲಕರ್ಗೆ ಪಲವೋದುಗಳನೋದಿಸಿ, ಬಿಜ್ಜೆಯೊಳ್ ಬಿನ್ನಣಿಗರನಾಗಿಸಿ, ಪಳವಾತುಗಳನೆಲ್ಲಮಂ ಸಾಂಗಮರುಪಿ, ಶಾಸ್ತ್ರಂಗಳನೊರೆದು, ಪುರಾಣಂಗಳೊಳ್ ಪರಿಣತರಂ ಮಾಡಿ, ಗಾಣದೊಳ್ ಜಾಣರಂಗೆಯ್ದು, ಬಿಲ್ಗಾರಿಕೆಯೊಳ್ ಬಲ್ಗೈಗಳೆನಿಸಿ,' ತಾನು ಕೃತಕೃತ್ಯನಾದೆನೆಂದು ಸಂತಸಪಡುತ್ತಾನೆ. ಹೀಗಿರಲು ಒಂದು ದಿನ ವಾಲ್ಮೀಕಿ "ಕಿರಿದಾನುಂ ದಿನಕ್ಕೆ ತನ್ನೊಂದವಸರಕೆ ಕುಶಲವರನಾಶ್ರಮಕೆ ಕಾಪಿಟ್ಟು ವರುಣ ಲೋಕಕ್ಕೆ ಪೋಪುದುಮಾಗಳೆತ್ತಾನುಂ ಸ್ವೇಚ್ಛೆಯಿಂ ನಡೆವ ರಾಘವನ ಜನ್ನ ಗುದುರೆ ಈ ಆಶ್ರಮಮಂ ಪುಗುತರಲೊಡಂ . . . ." ಮುದ್ದಣ ಇಷ್ಟು ಹೇಳಿದಾಗ ಮನೋರಮೆಗೆ ಕಥೆಯಲ್ಲಿ ಹುದುಗಿದ ಹೊಳಹು ಹೊಳೆದಿದೆ. 'ನಾಡರಾಯರ ಜನ್ನಗುದುರೆಯಂ ಕಟ್ಟಿಕಾದುವೊಂದು ಬಲ್ಪಂ ಕೂರ್ಪುಂ ನೇರ್ಪಟ್ಟ' ಕುಮಾರ ರಾರೆಂಬುದು ಆಕೆಗೆ ಅರಿವಾಗಿದೆ. ಕತೆಯ ಅಂತರಂಗ ಅರಿವಾದ, ಸಮಸ್ಯೆಯು ಬಿಡಿಸಲ್ಪಟ್ಟ, ಉತ್ಸಾಹಿತ ಸ್ಥಿತಿಯಲ್ಲಿ ಅರ್ಧದಲ್ಲೇ ತಡೆದು ಹೇಳುತ್ತಿದ್ದಾಳೆ "ಈಗಳರಿತೆಂ ಹಸುಮಂ ಕಟ್ಟಿದ ಬಾಲರಾರೆಂಬುದಂ." ಅಣ್ಮನ ಒಗಟನ್ನು ಬಯಲುಪಡಿಸಿ ಹೇಳುತ್ತಿದ್ದಾಳೆ "ಕುಶಲವರಾಗರೇ?" ಇನಿಯನ ಈ ಬಳಸುದಾರಿ

ತನ್ನ ಮನವನ್ನು ಹಾದಿತಪ್ಪಿಸಿ ಅಲೆಯಿಸುವ ಉಪಾಯ; ಮರುಳುಮಾಡುವ ಮೋಡಿ. ಹೀಗೆ ಮಾಡಿ ಅಂದನೋಡುವ ಬಯಕೆಯ ಪ್ರಿಯವಾದ ಹುಚ್ಚು ಎಂದು ಮನೋರಮೆಗೆ ತಿಳಿದಿದೆ. ರಮಣನ ಕವಡು ಬಗೆ ಆಕೆಗೆ ನೋವಿನ ಜತೆಗೆ ಆನಂದವನ್ನೂ ತಂದಿದೆ. ಆ ನೋವು ಮಧುರವಾದುದು. ಆ ಆನಂದ ನಾಚಿಕೆ ಬೆರೆತುದು. ಮುಂದುವರಿಸಿ ನುಡಿಯುತ್ತಿದ್ದಾಳೆ "ನೀನುಮಾವ ನಾಡ ಗತಕಿಯೊ? ಆಗಳೆ ಸೀತೆಯ ಮಕ್ಕಳ್ ಕಟ್ಟಿ ಕಾದಿದರೆಂದೊಡಾಗದೆ! ತಾಂ ಪೇಳಂಗಡ! ಮುಚ್ಚುಗಡ!" ಹೇಗಿದ್ದರೂ ಈಗ ಆಕೆಗೆ ತನ್ನ ನೋವು ನಾಚಿಕೆಗಳನ್ನು ಕುರಿತು ಯೋಚಿಸಲು ಸಮಯವಿಲ್ಲ, ಆಕೆ ಕತೆಯಲ್ಲಿ ಪರವಶಳಾಗಿದ್ದಾಳೆ. ಸೀತೆ ಆಕೆಯ ಹೃದಯವನ್ನು ವ್ಯಾಪಿಸಿದ್ದಾಳೆ. ಲವಕುಶರು ಆಕೆಯ ಮನವನ್ನು ಸೂರೆಗೊಂಡಿದ್ದಾರೆ. ಈಗ ರಾಮ ಸೀತೆಯರೊಳಗೆ ಸಂಬಂಧದ ಒಂದು ಸೂಕ್ಷ್ಮ ಎಳೆಯನ್ನು ಈ ಘಟನೆ ಜೋಡಿಸಿದೆ. ಮುಂದೆ ಆ ಎಳೆ ಮತ್ತಷ್ಟು ಬಲಯುತವಾಗಿ ಸೀತಾರಾಮರನ್ನು ಸನಿಯ ಎಳೆದು ತರುವುದೊ ಅಥವಾ ಆ ತಂತುವೇ ಹರಿದು ಬೀಳುವುದೋ? ಈ ಪ್ರಶ್ನೆ ಆಕೆಯ ಮುಂದೆ ಬೃಹದಾಕಾರವಾಗಿ ನಿಂತಿದೆ. "ಅಯ್ಯಾಯ್ತು! ಮುಂತಣ ಕತೆಯಂ ಪೇಳ್ ನೋಳ್ಪೆಂ" ಎಂದಿದ್ದಾಳೆ ಉತ್ಸಾಹ ಉದ್ವೇಗಗಳಿಂದ.

ಮುದ್ದಣನ ಕತೆ ಮುಂದುವರಿಯುತ್ತದೆ.

*　　*　　*

ಕತೆ ಕೊನೆಗೊಳ್ಳುತ್ತಾ ಬರುತ್ತಿದೆ. ತನ್ನ ಯಜ್ಞಾಶ್ವವನ್ನು ಕಟ್ಟಿ ಕಾದಿದ ಋಷ್ಯಾಶ್ರಮದ ತರಳರು ಲವಕುಶರು —ತನ್ನ ಮಕ್ಕಳು ಎಂದು ತಿಳಿದಾಗ ರಾಮ ಹರ್ಷನಿರ್ಭರನಾಗುತ್ತಾನೆ—"ಸಂತಸದಾಲಿನೀರ್ ಕಾಳ್ಪುರಮಾಗೆ ಸವಿರ್ ನಿಗರಮಾಗಿ ಗುಡಿಗಟ್ಟಿದೆ"! ಕಣ್ಮನಗಳು ತಣಿಯುವಂತಹ ಈ ಪಾವನತರ ಸಮ್ಮಿಳನವನ್ನು ಕಂಡು ದೇವತೆಗಳು ಹೂಮಳೆಗರೆಯುತ್ತಾರೆ. ಆ ಬಳಿಕ ವಾಲ್ಮೀಕಿ "ಮುನಿಪಂ ತನ್ನ ಗುಂಡಿಗೆಯ ನೀರಂ ತಳಿದು ಮುಚ್ಚೆವೋದರನೆಲ್ಲರಿಸಿದಂ. ಈಗಳ್ ಸರ್ವರುಂ ಪುರಕೆ ಬಿಜಯಂಗೆಯ್ದರ್" ಎನ್ನುತ್ತಾನೆ ಮುದ್ದಣ.

ಈಗ ಮನೋರಮೆಯ ಮನಸ್ಸೆಲ್ಲವೂ ಸೀತೆಯ ಮೇಲೆ ಕೇಂದ್ರೀಕೃತವಾಗಿದೆ. ರಾಮ ಸೀತೆಯರ ಮಿಲನ ಘಟಿಸಿತೇ? ಮಿಲನ ಘಟಿಸಿದ್ದರೆ ಆ ಚಿರಸ್ಮರಣೀಯ ಘಳಿಗೆಯಲ್ಲಿ ಸೀತೆಯ ಮನಸ್ಥಿತಿ ಎಂತಿದ್ದೀತು? ರಾಮ ಆಕೆಯನ್ನು

ಅಯೋಧ್ಯೆಗೆ ಕರೆದೊಯ್ದನೇ? ಅಥವಾ ಮಿಲನವೇ ಘಟಿಸಲಿಲ್ಲವೇ? ರಾಮ ಇನ್ನೂ ಸೀತೆಯಲ್ಲಿ ದೋಷವನ್ನು ಕಂಡು ಆಕೆಯನ್ನು ಬಿಟ್ಟು ಹೋದನೇ? ಹಾಗಿದ್ದರೆ ಸೀತೆ ಹೃದಯವನ್ನು ಜರ್ಜರಗೊಳಿಸಬಹುದಾದಂತಹ ಆ ಆಘಾತ ವನ್ನು ಹೇಗೆ ಸಹಿಸಿಕೊಂಡಾಳು? ಈ ತೆರನ ನೂರು ಯೋಚನೆಗಳಿಂದ ಮನೋ ರಮೆ ಕಾತರಳಾಗಿದ್ದಾಳೆ. ಮನಸ್ಸು ಭಯ, ಶಂಕೆ, ಅನಿಶ್ಚಿತತೆಗಳಿಂದ ತಳಮಳ ಗೊಂಡಿದೆ. ಉದ್ವೇಗ—ತಡೆಹಿಡಿಯಲಾಗದ ಉದ್ವೇಗದಿಂದ "ಎಂ ಸೀತೆಯ ನಿನ್ನಂ ಕೂಡಿ ಪೋಗನೆ? ಉಳಿದೆ ಪೋದನೆ ರಾಮಂ?" ಎಂದು ಕೇಳಿದ್ದಾಳೆ.

ಮುದ್ದಣನಿಗೆ ಆ ಪ್ರಶ್ನೆಯ ಹಿಂದಿರುವ ಮನೋರಮೆಯ ಅಂತರಂಗದ ತಳಮಳದ ಅರಿವಾಗಿದೆ. ಈ ಕಳವಳ ಈ ಕಾತರ ಸಹಜವಾದುದು. ಅದನ್ನು ಸಂತೈಸ ಲೆಂದೇ ಹೇಳುತ್ತಾನೆ "ಓ! ಇನ್ನುಮುಳಿವನೆ ಸತಿಯಂ? ಈವೊಳ್ತುಂ ತನ್ನರಸಿಯ ಉರುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ಆಗಳೆ ತನ್ನತನ್ನೆಯಮಂ ಮನ್ನಿಸೆಂದು ನನ್ನಿವೇಳ್ದು ಸಂತವಿಟ್ಟು ಸುದತಿ ಸೀತೆಯಂ ಪೊನ್ನ ಸಿಬಿಗೆಯೊಳೇರಿಸಿ ದೇವರ್ಕಳ್ ಪೊಗಳೆ ತಾನುಂ ತನ್ನವರುಂ ಆಶ್ರಮದ ಮುನಿಗಳೊಂದುಗೂಡಿ ಪೋದ . . . . "

ಮುದ್ದಣನ ಮಾತುಗಳು ಮನೋರಮೆಯ ಅಂತರಂಗದಲ್ಲಿ ತುಂಬಿದ ಭಯಶಂಕೆಗಳ ತರಗೆಲೆಗಳಿಗೆ ಬೀಸಿದ ಬಿರುಗಾಳಿಯಾಗಿದೆ. ಆ ತರಗೆಲೆಗಳೆಲ್ಲ ಹೇಳ ಹೆಸರಿಲ್ಲದಂತೆ ಹಾರಿಹೋಗಿವೆ. ಆಕೆಯ ಅಂತರಂಗ ಈಗ ಸ್ವಚ್ಛವಾಗಿ, ಶುಭ್ರವಾಗಿ, ಶಾಂತವಾಗಿ, ಆನಂದಮಯವಾಗಿದೆ. ಮಾತಿಗೆ ನಿಲುಕದ; ಊಹೆಗೆ ಎಟುಕದ, ಅನುಭವಿಸಿಯೇ ಅರಿಯಬೇಕಾದ ಸ್ಥಿತಿ ಅದು! ಅಂತರಂಗದ ಈ ದಿವ್ಯಾನಂದದ ಕೇತನಗಳಾಗಿ ಆಕೆಯ ಮೈಯ ರೋಮಗಳೆಲ್ಲ ನಿಗುರಿ ನಿಂದಿವೆ! ಈ ಆನಂದೋನ್ಮತ್ತ ಮುಗ್ಧ ಹೆಣ್ಣುಹೃದಯ ರಾಮನ ಹಿಂದಿನ ಹಿಮಾಲಯ ಸದೃಶ ತಪ್ಪುಗಳನ್ನೆಲ್ಲ ಮನಸಾ ಕ್ಷಮಿಸಿದೆ. ಆ ಉನ್ಮೀಲಿತ, ಉನ್ಮುಕ್ತ, ಉದಾರ ಹೃದಯದ ಒಡನುಡಿಗಳು ಬಾಯಿಯಿಂದ ತನ್ನಿಂದ ತಾನೆ ಹೊರಬರು ತ್ತಿವೆ "ಓ! ರಾಮನೊಳ್ಳಿದನಕ್ಕೆ! ಸೊಗಂಬಾಳ್ಗೆ! ರಾಮಂಗೆ ಗೆಲವಕ್ಕೆ! ರಾಮನಂ ಕೊಂಡಾಡುಗೆ! ಜಸಂ ಪೆರ್ಚಿ ಪರಿಗೆ! ರಾಮನೊಳ್ ನನ್ನಿಸನ್ನಿದ ಮಾಗಿರ್ಕೆ! . . . . " ರಾಮನನ್ನು ಎಷ್ಟು ಹರಸಿ ಹಾಡಿದರೂ ದಣಿಯದಿದೆ ಆ ಬಾಯಿ, ತಣಿಯದಿದೆ ಆ ಹೃದಯ. ಹಿಂದೊಮ್ಮೆ ರಾಮನೆಂದೊಡನೆ ಉರಿದು ಕೆಂಡಕಾರಿದ್ದ ಮನೋರಮೆ ಈಕೆಯೇ ಏನು! ಮನೋರಮಾ ರೂಪಿ

ಓ ಮುಗ್ಧಹೆಣ್ಣೆ! ಶತಕೋಟಿ ಪ್ರಣಾಮ ನಿನಗೆ! ನೀನು ಸರಳತೆಯ ಸಾಕಾರ! ಕ್ಷಮೆಯ ತವರು! ಒಲವಿನ ಪ್ರತಿರೂಪ!

ಮಡದಿ ಮನೋರಮೆಯ ಮನದುಂಬಿ, ಎದೆದುಂಬಿ ಬಂದ ಹರಕೆ ಮಾತುಗಳು ಮುದ್ದಣನನ್ನೂ ಆನಂದಾಬ್ಧಿಯಲ್ಲಿ ತೇಲಿಸಿವೆ. "ಇಂತು ರಾಮಸಂ ನೀಂ ಪರಸುವ ಪರಕೆಯೆ ಸೊಗಸು! ಬಲ್ಸೊಗಸು!" ಎಂದಿದ್ದಾನೆ.

* * * * *

ಮುದ್ದಣ ಮುಂದುವರಿಸಿದ್ದಾನೆ "ಎನ್ನ ಪಟ್ಟದ ರಾಣಿ! ಇನ್ನೆತ್ತಂ ನಿರಾಮಯಂ, ನಿರಾಕುಳಂ; ಸುಭಿಕ್ಷಂ; ಶಾಂತಿ . . . ."

ಮನೋರಮೆಗೆ ಅಚ್ಚರಿ. "ಏನೆಲೆ ರಮಣ! ಇಂದಿದೇನೆತ್ತಣ ಶಾಂತಿ ಗೀಂತಿಗಳ್?" ಎಂದು ಕೇಳಿದ್ದಾಳೆ. ಕತೆಯು ಮುಗಿಯೆ ಬಂತು ಎಂದು ಕೇಳಿದಾಗ ಆಕೆಗೆ ಎಲ್ಲಿಲ್ಲದ ಉಮ್ಮಳ. "ಅಂತಪ್ಪೊಡೆ ನೀಂ ಪೇಳ್ವ ನಲ್ಗತೆ ಮುಗಿಯೆವಂದುದು" ಎಂದು ಉಬ್ಬೆಗದಿಂದ ಉದ್ಗರಿಸಿದ್ದಾಳೆ.

ಕತೆಯೇನೊ ಕೊನೆಗೊಳ್ಳಲಿದೆ. ಆದರೆ ಮುದ್ದಣನಿಗೆ ತನ್ನ ಕತೆಯ ಕುರಿತಾದ ವಿಮರ್ಶೆಯನ್ನು ಮನೋರಮೆಯಿಂದ ಕೇಳುವ ಕುತೂಹಲ. ಬಹುಶಃ ಈ ವಿಮರ್ಶೆ ಹೊಗಳಿಕೆಯೇ ಇರಬಹುದು ಎಂಬ ವಿಶ್ವಾಸವೂ ಈ ಕುತೂಹಲಕ್ಕೆ ಕಾರಣವಾಗಿರಬಹುದು. ಏಕೆಂದರೆ ಆ ಹೊಗಳಿಕೆ ಆತನ ಮುಂದಿನ ವಿಚಾರಕ್ಕೆ ಆವಶ್ಯಕವಾಗಿದೆ. ಆದರೆ "ಕತೆ ಹೇಗಿತ್ತು?" ಎಂದು ಮನೋರಮೆಯನ್ನು ನೇರವಾಗಿ ಹೇಗೆ ಕೇಳಲಿ? ಎಂದೇ "ಉಂ! ಎಂತೆಂತೊ ರಗಳೆಯ ಪಾಳ್ಗತೆ ಕಡೆಗಂಡುದು" ಎಂದಿದ್ದಾನೆ ಉಪಾಯದಿಂದ!

ಮನೋರಮೆಗೆ ಮುದ್ದಣನ ಮನದ ಮಾತು ತಿಳಿದಿಲ್ಲ. ಎಂದೇ ಪುಣ್ಯಕಥೆಯನ್ನು ಪಾಳ್ಗತೆ ಎನ್ನುತ್ತಿರುವನಲ್ಲಾ ಎಂದು ಬಹಳಷ್ಟು ಕೋಪ ಆಕೆಗೆ. "ಚಿಃ! ಶ್ರೀರಾಮಪುಣ್ಯಚರಿತಮಂ ಪಾಳ್ಗತೆಯೆಂದು ಇಳಿಕೆಯ್ದು ತೆಗಳ್ವ!" ಎಂದು ಸಿಡಿಮಿಡಿಗೊಂಡಿದ್ದಾಳೆ ಮುದ್ದಣನ ಮೇಲೆ.

ಬಾಣ ಗುರಿಮುಟ್ಟಿಲ್ಲ. ಈಗ ನೇರಹಾದಿ ಹಿಡಿಯದೆ ನಿರ್ವಾಹವಿಲ್ಲ. "ಶ್ರೀ ರಾಮ ಚರಿತಮನಿಳಿಸಿ ಕುಳಿಸಿ ನುಡಿದೆನಿಲ್ಲಂ; ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬರುವಣ್ಣನೆಯ ಜೇಸರಿಕೆಯ ಪಾಳ್ಗಬ್ಬಮಂ ಪೊಳ್ಳೆಂದೆ ನುಡಿದೆಂ" ಎಂದು ಹೇಳಿ ಆಕೆಯ ಬಾಯಿಂದ ಏನು ಬರುತ್ತದೊ ಎಂದು ಕಾದಿದ್ದಾನೆ.

ಮನೋರಮೆಗೆ ತನ್ನಿನಿಯನ ಮಾತುಕೇಳಿ ಆತನ ನಿರಹಂಕಾರಕ್ಕಾಗಿ ಅಭಿಮಾನ ಉಕ್ಕಿಬರುತ್ತದೆ; ಪ್ರೀತಿ ತುಂಬಿ ಹರಿಯುತ್ತದೆ. ಆದರೆ ಒಂದು ಹೆಣ್ಣು ತನ್ನ ಪತಿಯ ಹೊಗಳಿಕೆಯನ್ನು ತಲೆಯೆತ್ತಿ ಹೇಗೆ ತಾನೇ ಮಾಡಬಲ್ಲಳು? ಅದೂ ಆತನಿದಿರಲ್ಲೆ? ಆದರೂ ಹೊಗಳಿಕೆಯ ನಾಲ್ಕು ಮಾತುಗಳನ್ನಾದರೂ ಆಡದೆ ಆಕೆಯ ಮನಕ್ಕೆ ಶಾಂತಿಯಿಲ್ಲ; ಹೃದಯಕ್ಕೆ ತೃಪ್ತಿಯಿಲ್ಲ! ವಿನಯದಿಂದ ಹೇಳುತ್ತಿದ್ದಾಳೆ "ತಮ್ಮೊಡಮೆಯಂ ತಾಮೆ ಪೊಗಳ್ವರೆ ಬಲ್ಲರ್? ಅಲ್ಲದಂದು ನವರಸದ ತನಿರಸಮೊರೆವ ಬಣ್ಣಗಬ್ಬಮಂ ಪೊಳ್ಳೆದೊರೆವ ನಿನಗಮೇಂ ನಿರಹಂಕೃತಿಯೊ ನಿನ್ನಾ ಜಾಣ್ಮೆಯೊಳ್."

ಮಡದಿ ಮೆಚ್ಚಿದಳಲ್ಲಾ ಎಂದು ಮುದ್ದಣನಿಗೆ ಹರ್ಷ. ಆದರೆ ಆಕೆ ಬಾಯುಪಚಾರಕ್ಕಾಗಿ ಹಾಗೆ ಹೇಳಿದಳೇ ಎಂಬುದನ್ನು ಪರೀಕ್ಷಿಸೋಣ ಎಂಬ ಬಯಕೆಯಿಂದ "ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ?" ಎಂದು ಕೇಳಿದ್ದಾನೆ.

ಕೃತಿಯ ಕುರಿತಾದ ಮನೋರಮೆಯ ಅಭಿಮಾನ ಮುಗಿಲು ಮುಟ್ಟಿದೆ. "ಎನಗೊರ್ವಳ್ಗೆಂದೊಡೇಂ. ನಾಡೊಳೆಲ್ಲರ್ಗಂ" ಎಷ್ಟು ಎದೆ ಧೈರ್ಯದಿಂದ ಹೇಳುತ್ತಿದ್ದಾಳೆ ಈಹೆಣ್ಣು!

ಪತಿಯ ಮೇಲಿನ ಪ್ರೀತಿಯಿಂದ, ತನಗೆ ಮೆಚ್ಚುಗೆಯಾದುದರಿಂದ ನಾಡಿನವರೆಲ್ಲರಿಗೂ ಮೆಚ್ಚಿಗೆಯಾಗಬಹುದು; ಮೆಚ್ಚಿಗೆಯಾಗಬೇಕು ಎಂದು ನಿರ್ಭಯದಿಂದ, ನಿರ್ಧಾರದಿಂದ ಹೇಳುತ್ತಿರುವ ಸತಿಯನ್ನು ಕಂಡು ನಗು ಬಂದಿದೆ ಮುದ್ದಣನಿಗೆ. ಆದರೂ ಆಕೆಯ ಬಾಯಿಯಿಂದ ಹೊಗಳಿಸಿಕೊಳ್ಳುವ ಆಶೆ ಮಾತ್ರ ಕೊನೆಗೊಂಡಿಲ್ಲ. "ಎನ್ನೊಳೊಂದಭಿಮಾನದಿನಿಂತುಸಿರ್ವೆಯಕ್ಕುಂ" ಎಂದಿದ್ದಾನೆ. ಮುಂದೇನು ಹೊರಡುವುದೊ ನೋಡೋಣ ಎಂಬ ಯೋಚನೆಯಿಂದ.

ಮನೋರಮೆ ಕಾವ್ಯದ ರುಚಿಯನ್ನು ಆಸ್ವಾದಿಸಬಲ್ಲಳು. ಆದರೆ ಅದು ಹೇಗೆಂಬುದನ್ನು ವಿವರಿಸಿ ಹೇಳಲಾರಳು. ಅದು ಅವಳ ಚೈತನ್ಯಕ್ಕೆ ಮೀರಿದ ಮಾತು. ಎಂದೇ ತನ್ನ ಪತಿ ಹೇಳಿದ ಕತೆ ಹೇಗೆ ಚೆನ್ನಾಗಿತ್ತು ಎಂದು ವಿವರಿಸಿ ಹೇಳಬೇಕೆಂದು ಬಯಸಿದರೂ ಎಂತು ಹೇಳೀತು ಆ ಹೆಣ್ಣು? ಆದರೂ ಮುದ್ದಣನ ಸಂದೇಹವನ್ನು ಪರಿಹರಿಸಬೇಕಲ್ಲ? "ಎನ್ನ ಮುದ್ದಿನರಸ! ಅಂತಲ್ತು; ನಿನ್ನ ಪೆಸರೆಂತಂತು ಕಬ್ಬಮುಂ ಮುದ್ದುಮುದ್ದಾಯ್ತು ಜಗಕೆ" ಎಂದು ಆ ಮುಗ್ಧೆ ಮುದ್ದು ಮುದ್ದಾಗಿಯೇ ಹೇಳುತ್ತಾಳೆ. ಕುಶಲ ವಿಮರ್ಶಕನ ಸಂಯಮ ಪೂರ್ಣ ಸಂಕ್ಷಿಪ್ತ ಮಾತಿನಂತಿದೆ ಮನೋರಮೆಯ ಮಾತು.

ಮುದ್ದಣನಿಗೆ ಆಕೆಯಿಂದ ಹೊಗಳಿಸಿಕೊಂಡಷ್ಟೂ ಸಾಲದಾಗಿದೆ. ಅದು ಕುಡಿದಷ್ಟೂ ತೃಪ್ತಿಗಾಣದ ರಸಪಾನ! ಮಾತ್ರವಲ್ಲ ಆಕೆಯ ಹೊಗಳಿಕೆಯೇ ಆತನ ಮುಂದಿನ ಯೋಜನೆಗೆ ನೆರವು "ಇಂತೀ ನುಡಿಯಿನೆನ್ನಂ ನೀನೇಳಿಪಂತಿರಿರ್ಕುಂ" ಎಂದಿದ್ದಾನೆ ಪುನಃ.

"ಉಃ! ಉಃ! ಗುಣದೊಳ್ ಪುರುಡುಂಟೆ? ಸಾಜಂ. ನಿನ್ನೀಜಾಣ್ಮೆಯ ಬಣ್ಣನೆಯ ಸಲ್ಗತ್ತೆ ಕೇಳ್ವರನೆಂತಪ್ಪರುಮಂ ಬಗೆಯನಿರ್ಕುಳಿಗೊಳ್ಗುಂ" ಎಂದು ನಾಡರುಚಿಯ ಸುದ್ದಿ ತನಗೇಕೆ ಎಂಬ ಯೋಚನೆಯಿಂದ ಮುಂದುವರಿಸುತ್ತಿದ್ದಾಳೆ "ನಾಡ ಮಾತೇಕೆ! ಎನಗೆಂತೋ ಮೇಣುಂ ಮೇಣ್ ಕೇಳ್ವೆನೆಂಬೊಂದಾಸೆ ಪುಟ್ಟುಗುಂ."

ನಾಡರುಚಿಯ ಮಾತು ಮುದ್ದಣನಿಗೂ ಬೇಕಾಗಿಲ್ಲ. ಆತನಿಗೆ ಬೇಕಾದುದ್ದೂ ಮನೋರಮೆಯ ಮನದ ವಿಚಾರ "ಎನ್ನಾಣೆ" ಎಂದಿದ್ದಾನೆ!

ಮನೋರಮೆಯ ಸಂಕೋಚವೂ ಈಗ ಕಳೆದಿದೆ. ಎಷ್ಟು ಹೊಗಳಿದರೂ ಆಕೆಗೂ ಸಾಲದು ಎನಿಸುತ್ತಿದೆ. "ನಿನ್ನಾಣೆ! ಕಡೆಯೇಂ? ಕವ್ಮಲರ್ ಮುಗಮುಗಿಸದೇಂ ಪೋಕುಂ!"

ಮುದ್ದಣನ ಮುಂದಿನ ಮಾತು ಕೇಳಿ "ಮುತ್ತಬ್ಬೆಯಾಣೆ!"

ಮನೋರಮೆ ಇನ್ನು ಹೇಗೆ ತಾನೇ ಹೇಳಬಲ್ಲಳು? ಮುದ್ದಣನ ಮನಸ್ಸಿಗೆ ಸಮಾಧಾನವಾಗುವಂತೆ ತನ್ನಿಂದ ಹೇಳಲಾಗಲಿಲ್ಲವೆಂದೆ ಬಗೆದು ನುಡಿಯುತ್ತಾಳೆ "ಮುತ್ತಬ್ಬೆಯಾಣೆ! ಇಸ್ಸಿ! ಪುಸಿಯನೇವೊಳ್ತಿಂಗಮುಸಿರೆಂ. ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು."

"ಎಂತುಂ ನಿನಗೆ ಸೊಗಸಾಯ್ತುಲೇ! ಇದುವೆ ಪರಮಾನಂದಮೆನಗೆ." ಮುದ್ದಣನಿಗೆ ಇದು ಗಣ್ಯ; ಉಳಿದುದು ಗೌಣ!

ಮನೋರಮೆ ಒಂದು ತೆರನ ಆನಂದೋನ್ಮಾದದಲ್ಲಿದ್ದಾಳೆ ಈಗ "ಬಿನ್ನಣದ ನುಡಿಯಲ್ತು; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ."

ಮನೋರಮೆ ಈಗ ಸಂಪೂರ್ಣ ಸಿಕ್ಕಿಬಿದ್ದಿದ್ದಾಳೆ. ಕತೆ ತನಗೆ ಅತ್ಯಂತ ಮೆಚ್ಚಿಗೆಯಾಗಿದೆ ಎಂಬುದನ್ನು ಆಕೆಯೇ ಒಪ್ಪಿಕೊಂಡಿದ್ದಾಳೆ. ಮೀನು ಗಾಳವನ್ನು ನುಂಗಿದೆ; ಈಗ ಸಿಕ್ಕಿಬೀಳದೆಲ್ಲಿ ಹೋದೀತು! ಮುದ್ದಣ ಕೇಳುತ್ತಾನೆ "ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿನುಡುಗೊರೆಯಂ."

ಮನೋರಮೆಗೆ ಆಶ್ಚರ್ಯ. ತನ್ನ ಮಾತಿನಿಂದಲೇ ತನ್ನನ್ನು ಹಿಡಿದುಹಾಕಿರುವ ಪತಿಯ ಬಗ್ಗೆ ಸಾನಂದ ವಿಸ್ಮಯ. ತಾನು ಸಹಜವೆಂದೇ ಬಗೆದ ಪತಿಯ ಮಾತುಗಳ ಹಿಂದೆ ಎಂತಹ ಜಾಲ ಅಡಗಿತ್ತು! ಜಾಲಿಕತನದಲ್ಲಿ ಪರಿಣತನಾದ ಪತಿಯನ್ನು ಕುರಿತು ಹೇಳುತ್ತಿದ್ದಾಳೆ "ಇನ್ನೇಂ ಜಾಣನೊ! ನೀನರಿಯದರಂತೆ ಮಿಣ್ಣನಿರ್ದುಮೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ. ನಿನಗೇನೆಂಜೆನೇನೆಂಬೆನೊ! ನಿನ್ನಾ ಬಣ್ಣವಾತಿಗೆ ಮಾರುವ್ರೋದೆಂ" ಎಂದು ಸ್ವಲ್ಪ ಯೋಜನೆಮಾಡಿ ಉಡುಗೊರೆ ಕೊಡುವ ಕಾಲವನ್ನು ಇನ್ನೂ ಸ್ವಲ್ಪ ಮುಂದೂಡುವ ಯೋಜನೆಯಿಂದ "ಆಯ್ತಾಯ್ತು ಪೇಳ್ದ ಕತೆಗೆ ಮಂಗಳಮಂ ಮಾಡು; ಮೆಚ್ಚುಗಿಚ್ಚು ಬಳಿಕ್ಕ ಮಲ್ತೆ" ಎನ್ನುತ್ತಾಳೆ. ಅಷ್ಟು ಹೊತ್ತಿನೊಳಗೆ ಉಡುಗೊರೆ ಕೊಡದೆ ಜಾರಿಕೊಳ್ಳುವ ಉಪಾಯ ಏನಾದರೂ ಹೊಳೆದೀತು ಎಂಬ ಆಶೆ ಆಕೆಯದು.

"ಬರಿದೆ ಮಂಗಳಮುಕ್ಕುಮೆ! ಹೋಳಿಗೆ ತುಪ್ಪಮಂ ತಿನವಡಿಸವೇಡಾ!" ಎಂದಿದ್ದಾನೆ ಮುದ್ದಣ.

"ಹೋಳಿಗೆ ತುಪ್ಪಕ್ಕಿಂದೇಂ ನಿನಗೆ ಶೋಭನಮೆ?" ಹುಸಿಮುನಿಸುಗೊಂಡು ಆತ್ಮೀಯವೂ, ರಹಸ್ಯವೂ, ಪ್ರಿಯವೂ ಆದ ಹಳೆಯ ನೆನಪೊಂದನ್ನು ಕೆದಕಿದ್ದಾಳೆ ಮನೋರಮೆ.

ಮುದ್ದಣನ ರಸಿಕತೆ ಜೀವಂತವಾಗಿದೆ. "ಇಂದೆನಗೆಂದೊಡೇಂ? ಎನಗಂ ನಿನಗಂ." ಆ ಹಳೆಯ ನೆನಹಿಗೆ ಬಂಗಾರದ ಬಣ್ಣ ಬಳಿದಿದ್ದಾನೆ ಮುದ್ದಣ!

ಹೇಗೆ ಹೋದರೂ ತನ್ನನ್ನು ಪ್ರಿಯವಾದ ಮಾತಿನ ಬಲೆಯಲ್ಲಿ ಬಂಧಿಸುತ್ತಿರುವ ಪ್ರಾಣ ಪ್ರಿಯನನ್ನು ಕಂಡು ಮನೋರಮೆಯ ಮನ ಬಣ್ಣಿಸಲಾರದ ಬಗೆಯಿಂದ ಪಲ್ಲವಿಸುತ್ತಿದೆ. ಆದರೆ ಆ ಭಾವವನ್ನು ಇದ್ದಕ್ಕಿದ್ದಂತೆಯೇ ಪ್ರಕಟಪಡಿಸಲು ನಾಚಿಕೆ ಎಲ್ಲಿ ತಾನೇ ಬಿಡುತ್ತದೆ! "ಪೋ ಸಾಲ್ಗುಮಾಬಣ್ಣದ ಕೊಂಕುನುಡಿ. ರಾಘವನ ಯಜ್ಞಮೆಂತು ಪರಿಸಮಾಪ್ತಿಯಾಯ್ತು ಪೇಳ್."

"ಶೋಭನಾಂಗಿ" ಎಂದು ಮನೋರಮೆಯನ್ನು ಸಂಬೋಧಿಸಿ ಮುದ್ದಣ ರಾಘವನ ಯಜ್ಞವು ಸಾಂಗವಾಗಿ ನೆರವೇರಿದುದನ್ನು ವಿವರವಾಗಿ ತಿಳಿಸಿ 'ಮಂಗಳಂ ಶುಭಂ, ಭದ್ರಂ, ಕಲ್ಯಾಣಂ' ಎಂದು ಕತೆಯನ್ನು ಕೊನೆಗೊಳಿಸುತ್ತಾನೆ.

ಇದೇ ಸಂದರ್ಭವನ್ನು ಸಾಧಿಸಿ, ಉಡುಗೊರೆಯ ವಿಚಾರ ಮುದ್ದಣನ ಮನದಿಂದ ಮಾಸಿರಬಹುದೆಂದು ಬಗೆದು ಮನೋರಮೆ ಘಕ್ಕನೆ ಎದ್ದು ಹೊರ

ಟಿದ್ದಾಳೆ. ಆದರೆ ಮುದ್ದಣನೆಲ್ಲಿ ಬಿಡುತ್ತಾನೆ? ಆತನ ಮನಸ್ಸು ಕತೆಯ ಮಂಗಳಕ್ಕಿಂತಲೂ ಹೆಚ್ಚು ಮನೋರಮೆಯಿಂದ ಉಡುಗೊರೆ ಪಡೆದುಕೊಳ್ಳು ವುದರಲ್ಲಿ ಆಸಕ್ತವಾಗಿದೆ. ಎದ್ದುಹೋಗುತ್ತಿರುವಂತೆಯೇ ಆಕೆಯನ್ನು ತಡೆದು ನಿಲ್ಲಿಸಿ "ಬಲ್ಸೆಡಕುಗಾರ್ತಿ ಕಣಾ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ? ಕೊಂಕು ನುಡಿಯೊಂದು ನೆವದಿಂ ಬಿಂಕದಿನೆರ್ದೋಡಾಯ್ತು! ಮೆಚ್ಚನಿತ್ತಲ್ಲದೆ ಪೋಪೊಡೇಂ ಬಿಡುವೆನೆ!'' ಎಂದಿದ್ದಾನೆ.

ಮನೋರಮೆ ಏನೂ ಅರಿಯದ ಬಾಲೆಯಂತೆ ಅಭಿನಯಿಸಿದ್ದಾಳೆ. "ಕತೆಗೆ ಮಂಗಳಮಂ ಮಾಡದೆ ಬರಿದೆ ಉಡುಗೊರೆತುಡುಗೊರೆಯೆಂದೊಡೇಂ?"

"ಕತೆಗೆ ಮಂಗಳಮನಾಗಳೆ ಪೇಳ್ದೆನುಳಿದೆನಿಲ್ಲ. ಈಗುಳಿದುದೊಂದೆ ನಿನ್ನುಡುಗೊರೆ" ಎಂದು ಮುದ್ದಣ ಮನೋರಮೆ ತಪ್ಪಿಸಿಕೊಳ್ಳಲು ಯಾವ ಹಾದಿಯೂ ಉಳಿಯದಂತೆ ಮಾಡಿ ಉಡುಗೊರೆಗಾಗಿ ಚಾತಕದಂತೆ ಕಾದಿದ್ದಾನೆ.

ಈಗ ಉಡುಗೊರೆ ಕೊಡದೆ ನಿರ್ವಾಹವಿಲ್ಲ. ಜಾರಿಕೊಳ್ಳಲು ಜಾಗವೆ ಉಳಿದಿಲ್ಲ. "ಉಡುಗೊರೆಯ ಕಾಟಕ್ಕನ್ನೆತ್ತೇಪೋಪೆಂ! ನೀನೇಂ ಬೇಡುವಯ್?" ಎಂದು ಕೇಳಿದ್ದಾಳೆ.

ಹಿಂದೊಮ್ಮೆ ಮುದ್ದಣ ಉಡುಗೊರೆ ಕೇಳಿದ್ದಾಗ ಮನೋರಮೆ ಎಂದಿದ್ದಳು 'ಎರೆಯ! ನೀನುಮೇನೆವರೆಂತಂತು ಬೇಡುವಯ್. ಇಸ್ಸಿ! ಕಾಡಿ ಬೇಡಿ ಕೊಂಡೊಡೊಂದುಡುಗೊರೆಯೆ? ಮನವೊಲ್ದೀವೊಡಲ್ತೆ ಮೆಚ್ಚು?' ಎಂದು. ಆಗ ಮುದ್ದಣ 'ಆಯ್ತು ನೋಳ್ಪೆಂ' ಎಂದು ಆ ಮಾತಿನ ಕಟಕಿ ತನಗೆ ಮರೆಯಲಾರದೆಂಬುದನ್ನು ಎಚ್ಚರಿಸಿ ಹೇಳಿದ್ದ. ಇಂದು ಅವೇ ಮಾತುಗಳನ್ನು ತಿರುಗಿಸಿ ಮನೋರಮೆಯೊಡನೆ ಕೇಳುತ್ತಿದ್ದಾನೆ "ಬೇಡುವೊಡೇಂ ತಿರಿಕನೆ? ಮನೆಗೆ ಬಂದೆನೆ? ಮೆಚ್ಚಿತ್ತೊಡದನೆ ಕೈಕೊಳ್ವೆಂ". ಹೀಗೆನ್ನುವಾಗ ಆತನ ಮುಖ ಹುಸಿಮುನಿಸಿನಿಂದ ಬೆಡಗುಪಡೆದಿದೆ!

ಹೌದು, ಆ ಮಾತೂ ಹೌದು. ತನ್ನ ಮಾತೇ ತನಗೆ ತಿರುಗುಬಾಣವಾಗಿ ತಾಗಿದೆ. ಆದರೆ ಏನು ಮಾಡುವುದೊ ಏನು ನೀಡುವುದೊ ಒಂದೂ ತಿಳಿದಿಲ್ಲ ಮನೋರಮೆಗೆ. "ಆನೆಂತುಂ ಪರಾಧೀನೆ. ಮೇಣೆನಗೊಡಮೆಯಾವುದು? ಏನ ನೀವೆನೆಂತೀವೆಂ?" ಎಂದು ಪ್ರಶ್ನಿಸಿದ್ದಾಳೆ. ಆ ಪ್ರಶ್ನೆ ತನಗೆ ತಾನೇ ಹಾಕಿದುದೂ ಹೌದು; ಮುದ್ದಣನಿಗೆ ತಾನು ಹಾಕಿದುದೂ ಹೌದು!

ಉಡುಗೊರೆಯೇನೆಂಬುದು ಮನೋರಮೆಯ ಬುದ್ಧಿಗೆ ಗೋಚರಿಸುತ್ತಿಲ್ಲ ನಿಜ. ಹಾಗೆಂದು ಅದು ಇಂತಹದೇ ಎಂದು ತಾನು ಹೇಳಿದರೆ ಅದು ಉಡುಗೊರೆಯಾದೀತೇ? ಆದರೂ ಅದರ ಸ್ವರೂಪವನ್ನು ಹೇಳುತ್ತಿದ್ದಾನೆ ಮುದ್ದಣ. ಅದು ಏನೆಂದು ತಿಳಿದು ಕೊಡುವುದು ಮನೋರಮೆಯ ಜಾಣ್ಮೆಗೆ ಸೇರಿದುದು. "ಏನೊ! ಎಂತೊ! ಆಂ ಮೆಚ್ಚುವಂತುಂ, ಕತೆಯ ಪುರುಳ್ಗೊೞ್ವಂತುಂ, ನಾಲ್ವರ್ ತಲೆದೂಗುವಂತುಂ ಉಡುಗೊರೆಗೆಯ್ದೊಡಾಯ್ತು."

ಮನೋರಮೆಗೆ ಈಗ ಅರ್ಥವಾಗಿದೆ. ಆಕೆಯೂ ಸಾಕಷ್ಟು ಪ್ರಬುದ್ಧಳಾಗಿದ್ದಾಳೆ. ಅತ್ತ ಸೀತಾರಾಮರು ಬಹುಕಾಲದ ಬಳಿಕ ಕೂಡಿಬಾಳಿದ ಕತೆಯನ್ನು ಹೇಳಿ ಮುಗಿಸಿ ತನ್ನಿದಿರು ತನ್ನಿನಿಯ ತಾನು ಕೊಡಲಿರುವ ಉಡುಗೊರೆಯನ್ನು ಪಡಕೊಳ್ಳಲು ಕಾದುಕುಳಿತಿದ್ದಾನೆ. ಅವನ ಕಣ್ಣುಗಳಲ್ಲಿ ಒಲವಿನ ಕರೆಯಿದೆ. ಪ್ರಣಯದ ಸೆಳೆತವಿದೆ. ನಲ್ಲ 'ಮೆಚ್ಚುವಂತುಂ, ಕತೆಯ ಪುರುಳ್ಗೊೞ್ವಂತುಂ, ನಾಲ್ವರ್ ತಲೆದೂಗುವಂತುಂ,' ಉಡುಗೊರೆ ಕೊಡಲು ಮನೋರಮೆ ಈಗ ಸಿದ್ಧಳಾಗಿದ್ದಾಳೆ! ಒಂದು ಅನಿರ್ವಚನೀಯ ಭಾವತನ್ಮಯತೆಯಿಂದೆ ಆಕೆಯ ತನುಮನಗಳು ಆನಂದೋನ್ಮತ್ತವಾಗಿವೆ. "ಅಂತಪ್ಪೊಡಿಂತಿದು ....ನಿನ್ನೀಕಬ್ಬಮನೋದುವ ಜಾಣರೇವಗೆಯುಡುಗೊರೆಯ ನೀಯೆಂಬ ರಾವಗೆಯ ಮೆಚ್ಚನೀವೆಂ."

ಮುದ್ದಣನ ಹೃದಯವೇ ಹೂಂಗುಟ್ಟಿದೆ! "ಅಂತಾನುಮಕ್ಕೆ! ಪೋಪಂ" ಎಂದಿದ್ದಾನೆ.

ಇಲ್ಲಿ ಮನೋರಮೆ ಕೊಟ್ಟ ಉಡುಗೊರೆ ಸೂಚ್ಯವಾಗಿದೆ. ಅದು ವಾಚ್ಯವಾಗಿರಬಾರದು ಎಂದೇನಿರಲಿಲ್ಲ. ಆದರೂ ಆ ಉಡುಗೊರೆಗೆ ಸೂಚ್ಯವೇ ಸರಿಯಾದ ರೀತಿ. ಮಡದಿ ಮನದುಂಬಿ, ಎದೆದುಂಬಿ, ಜೀವದುಂಬಿ—ಆತ್ಮನಿವೇದನದ ಬಾಹ್ಯಕ್ರಿಯೆಯಾಗಿ ಕೊಡುವ ಚುಂಬನವನ್ನು 'ಮುತ್ತುಕೊಟ್ಟಳೆ'ಂದು ಹೇಳಿದರೆ ಏನು ಚಂದ! ಈ ಮೆಚ್ಚು ವಾಚ್ಯವಾಗಿದ್ದರೆ ರಸಿಕರ ಬುದ್ಧಿ ಅದನ್ನು ಒಮ್ಮೆ ಮಾತ್ರ ಮೆಚ್ಚುತ್ತಿತ್ತು. ಆದರೆ ಇಂದು ಸೂಚ್ಯವಾಗಿ ರಸಿಕರ ಹೃದಯ ಅದನ್ನು ಸಾವಿರಸಲ ಮೆಲುಕುಹಾಕುತ್ತಿದೆ! ಚಿರಂತನವಾಗಿ ರಸವೊಸರಿಸಬಲ್ಲ ಬತ್ತದ ರಸಬುಗ್ಗೆಯಾಗಿದೆ ಈ ಉಡುಗೊರೆ! ಪ್ರಪಂಚದ ಎಲ್ಲಾ ಸಂಪತ್ತನ್ನೂ ಮೀರಿ ನಿಲ್ಲಬಲ್ಲ ಅಲೌಕಿಕವಾದ—ದೇವತೆಗಳೂ

ಅಸೂಯೆ ಪಡುವಂತಹ ಈ ಉಪಮಾತೀತ ಉಡುಗೊರೆಯನ್ನು ಪಡೆದು ಮುದ್ದಣ ಕೃತಕೃತ್ಯನಾಗಿದ್ದಾನೆ! ಧನ್ಯನಾಗಿದ್ದಾನೆ!

ಹೀಗೆ ಮುದ್ದಣ-ಮನೋರಮೆಯರ ಈ ಸರಸ, ಸಾದರ, ನಲ್ಮೆ, ಮುನಿಸು, ದುಃಖ, ಕ್ರೋಧ, ಆಶ್ಚರ್ಯ, ಜುಗುಪ್ಸೆ, ಕರುಣೆ, ಹಾಸ್ಯ–ಇವೆಲ್ಲವೂ ನವ ದಂಪತಿಗಳ ಹಿತವಾದ, ಮಿತವಾದ ಶೃಂಗಾರದಿಂದ ಕಳೆದುಂಬಿ, ಜೀವಂತವಾಗಿ ಬೆಳಗಿ ಕನ್ನಡ ಸಾಹಿತ್ಯಲೋಕದಲ್ಲಿ ಅವರನ್ನು ಒಂದು ಅದ್ವಿತೀಯ ಜೋಡಿಯನ್ನಾಗಿ ಮಾಡಿವೆ; ಅಮರ ಪಾತ್ರಗಳನ್ನಾಗಿ ಮಾಡಿವೆ. ನಾವು ರಾಮಾಶ್ವಮೇಧವನ್ನು ಓದಿ ಮರೆಯಬಹುದು. ಆದರೆ ಮೆಯ್ಯೆರಡು ಮನವೊಂದಾದ 'ರೂಪಾಯಿಯಲ್ಲಿ ಹದಿನಾರಾಣೆ ಜಾತಕಾನುಕೂಲ'ವುಳ್ಳ ಈ ಸತಿಪತಿಯರನ್ನು —ಮುದ್ದಣ-ಮನೋರಮೆಯರನ್ನು ಮಾತ್ರ ಎಂದೆಂದೂ ಮರೆಯಲಾರೆವು. ಅವರು ನಮ್ಮ ಚಿತ್ತಫಲಕದ ಮೇಲೆ ಅಚ್ಚೊತ್ತಿ ನಿಲ್ಲುವರು!

ಮುದ್ದಣ-ಮನೋರಮೆಯರು ಉಡುಪಿ ನಗರದ ಚಿಕ್ಕ ಓಣಿಯೊಂದರ ಕತ್ತಲು ಗುಡಿಸಲಲ್ಲಿ ಎಂದೊ ಒಮ್ಮೆ ಬಾಳಿ ಸತ್ತುದಲ್ಲ. ಅದು ಅವರ ಬಾಳೇ ಅಲ್ಲ! ಅವರು ಕನ್ನಡ ಸಾರಸ್ವತಲೋಕದ ಮುಕ್ತ ಬಯಲಲ್ಲಿ ಅನುದಿನವೂ ಅವೇ ಮಧುರ ಸಂಭಾಷಣೆಗಳೊಡನೆ ಸದಾಕಾಲವೂ ಜೀವಿಸುತ್ತಿದ್ದಾರೆ. ಅಲ್ಲಿ ಅವರು ಅಮರರು. ಅವರ ಆ ಮೃದುಮಧುರ ಮಾತಿನ ಮಂಜುಳ ಧ್ವನಿಯ ಪ್ರವಾಹ ಅನಂತಕಾಲದ ವರೆಗೆ ರಸಿಕ ಕನ್ನಡಿಗರ ಮನಕ್ಕೆ ಅಮೃತಧಾರೆಯಾಗಿ ಉಳಿಯಬಲ್ಲುದು.

ಯಾವ ಕನ್ನಡ ನೆಲದ ಒಬ್ಬ ಆಂಜನೇಯ ಶ್ರೀರಾಮಚಂದ್ರನನ್ನು ಸೇವಿಸಿ ಚಿರಂಜೀವಿಯಾದನೋ ಅದೇ ಕನ್ನಡ ನೆಲದ ಈ ಇಬ್ಬರು ಗಂಡ ಹೆಂಡಿರು ಶ್ರೀರಾಮಚರಿತಾಮೃತವನ್ನು ಹೇಳಿ ಕೇಳಿ ಚಿರಂಜೀವಿಗಳಾದರು!

ಮೂರು ಪಾತ್ರಗಳು

"......ಅಣ್ಣನಿಗಾಗಿ ತಮ್ಮನ ಸ್ವಾರ್ಥತ್ಯಾಗ, ಗಂಡಹೆಂಡರಿಗೆ ಒಬ್ಬರಿಗೊಬ್ಬರಲ್ಲಿರುವ ನಿಷ್ಠೆ ಮತ್ತು ಪ್ರಜೆಗಳ ವಿಷಯದಲ್ಲಿ ರಾಜನ ಕರ್ತವ್ಯ ಇವುಗಳು ಎಷ್ಟು ದೂರ ಹೋಗಬಲ್ಲುವೆಂಬುದನ್ನು ರಾಮಾಯಣವು ತೋರಿಸಿರುತ್ತದೆ.

—ಶ್ರೀ ರವೀಂದ್ರನಾಥ ಠಾಕೂರ್.

ಮುದ್ದಣನ ರಾಮಾಶ್ವಮೇಧ ಘಟನಾಪ್ರಧಾನವಾದ ಕಾವ್ಯ. ಅಲ್ಲಿ ಪಾತ್ರಗಳ ಬೆಳವಣಿಗೆಗೆ ಅವಕಾಶ ಕಡಿಮೆ. ಕವಿಯು ವನ, ವನಿತೆ, ಋಷ್ಯಾಶ್ರಮ, ಋತು, ಬೆಳಗು, ರಾತ್ರಿ, ಯಾಗ, ಯುದ್ಧ ಇವುಗಳ ವರ್ಣನೆಗೆ ಮನಸ್ಸು ತೊಡಗಿಸಿರುವಷ್ಟು ಚಿತ್ರಗಳನ್ನು ರೂಪಿಸುವುದರಲ್ಲಾಗಲೀ, ಚಾರಿತ್ರ್ಯವನ್ನು ನಿರೂಪಿಸುವುದರಲ್ಲಾಗಲೀ ಆಸಕ್ತನಾಗಿಲ್ಲ. ಘಟನೆಗಳ ಚಲನೆಗಾಗಿ ಮಾತ್ರ ಅಲ್ಲಿ ವ್ಯಕ್ತಿಗಳ ಆವಶ್ಯಕತೆ.

ಸಮಗ್ರ ರಾಮಾಶ್ವಮೇಧವನ್ನು ಅವಲೋಕಿಸುವಾಗ ಅದೊಂದು ಮಹಾರಥದಂತೆ ಕಂಡರೆ ಅದರಲ್ಲಿ ಬರುವ ವ್ಯಕ್ತಿಗಳು ಆ ರಥವನ್ನು ಮುನ್ನಡೆಸುವ ಗಾಲಿಗಳು ಮಾತ್ರವಾಗಿ ಕಾಣುತ್ತಾರೆ. ಎಂದೇ ಸಾಮಾನ್ಯ ಓದುಗನೊಬ್ಬನ ಗಮನವನ್ನು ಅದರಲ್ಲಿನ ವರ್ಣ ವೈವಿಧ್ಯಮಯ ಬೆಡಗು, ಬಿನ್ನಾಣದ ಘಟನಾವಳಿಯೇ ಸೆಳೆದೀತು ಹೊರತು ಪಾತ್ರಗಳಲ್ಲ. ಹೀಗಿದ್ದರೂ ಅಲ್ಲಿನ ಕೆಲವೊಂದು ಪಾತ್ರಗಳು ಚುಟುಕಿನಲ್ಲಾದರೂ—ಚಿತ್ರಿತವಾಗಿರುವಷ್ಟು ಭಾಗ—ಕೋಮಲವಾಗಿ, ಸುಂದರವಾಗಿ, ಪರಿಪೂರ್ಣವಾಗಿ ಕಲಾಪೂರ್ಣವಾಗಿವೆ; ಆಕರ್ಷಕವಾಗಿವೆ. ಅವುಗಳಲ್ಲೊಂದು ಸಜೀವತೆಯಿದೆ. ಅವು ನಮ್ಮ ಅನುಕಂಪವನ್ನು ಪಡೆದು ಹೃದಯದಲ್ಲಿ ಅಚ್ಚಳಿಯದೆ ಉಳಿಯುತ್ತವೆ. ಈಗ ನಾವಿಲ್ಲಿ ಅಂತಹ ಮೂರು ಪಾತ್ರಗಳನ್ನು—ರಾಮ, ಸೀತೆ ಮತ್ತು ಲಕ್ಷ್ಮಣ—ಆರಿಸಿಕೊಂಡು ವಿಮರ್ಶಿಸೋಣ.

ಈ ಮೂರು ಪಾತ್ರಗಳಲ್ಲಿ ಒಂದು ವಿಶಿಷ್ಟ ಹೊಂದಾಣಿಕೆಯಿದೆ. ಒಂದು ಸಾಮಾನ್ಯ ದಾರವು ಈ ಮೂರನ್ನೂ ಹೆಣೆದಿದೆ. ಘಟನೆಯ ಜಡದಾರವಲ್ಲ ಅವನ್ನು ಕೋದಿರುವ ಮುಖ್ಯದಾರ. ಅದು ಸಾಮಾಜಿಕ ಸಂಬಂಧವೂ ಅಲ್ಲ. ಆಂತರಿಕ ಭಾವ ಸಮತೆಯೇ ಅವನ್ನು ಪೋಣಿಸಿರುವ ಮುಖ್ಯ ದಾರ. ದುಃಖವೇ ಈ ಮೂರೂ ಪಾತ್ರಗಳ ಬಾಳು. ನಾವಲ್ಲಿ ತ್ಯಾಗದ ಉಸಿರಿನ ಮೂಲಕವೇ ಪ್ರೇಮದ ಹೃದಯ ಸ್ಪಂದನವನ್ನು ಕೇಳುತ್ತೇವೆ. ಕಣ್ಣೀರಿನ ಅಭಿಷೇಚನೆಯಿಂದಲೇ ಈ ಪಾತ್ರಗಳು ಮಿರುಗುಗೊಂಡಿವೆ. ಯಾವುದು ಸದಾಕಾಲದ ಸಾನ್ನಿಧ್ಯದಿಂದ ಸಾಮಾನ್ಯವಾಗ

ಬಹುದಿತ್ತೊ ಅದನ್ನು ತ್ಯಾಗದ ತಪಸ್ಸಿನ ಮೂಲಕ ನಿತ್ಯನೂತನ ಮಾಡಿ, ವೇದನೆಯ ವಿಧಿನಿಯಮಗಳಿಂದ ಪವಿತ್ರತಮ ಮಾಡಿ ವಿಶಿಷ್ಟ ರೂಪದಲ್ಲಿ ಸದಾ ತಮ್ಮದನ್ನಾಗಿ ಮಾಡಿಕೊಂಡಿವೆ ಈ ಪಾತ್ರಗಳು.

ಸೀತಾಪರಿತ್ಯಾಗದ ಭಾಗವೇ ಪ್ರಧಾನವಾಗಿರುವ ರಾಮಾಶ್ವಮೇಧದಲ್ಲಿ ರಾಮನ ಪಾತ್ರವನ್ನು ಓದುಗರಿಗೆ ಪ್ರಿಯವಾಗುವಂತೆ ಚಿತ್ರಿಸುವುದು ಬಹಳ ಪ್ರಯಾಸದ ಕೆಲಸ. ಆ ಸಂದರ್ಭದ ರಾಮನ ನಡೆನುಡಿಗಳು ಜನರ ಅನುಕಂಪ ವನ್ನು ಪಡೆಯುವಂತೆ ಮಾಡಲು ಅಸಾಮಾನ್ಯ ಪ್ರತಿಭೆ ಬೇಕು. ಪತಿಭಕ್ತಿಯೇ ಉಸಿರಾಗಿ ಪಾವಿತ್ರ್ಯವೇ ರೂಪುವೆತ್ತಂತಿರುವ ಕುಸುಮಕೋಮಲೆ ಸೀತೆಯನ್ನು ಅನಾಮಧೇಯ ರಜಕನೋರ್ವನ ಮಾತಿಗೆ ಮನಸ್ಸು ಮಾರಿ ಕಾಡಿಗಟ್ಟುವು ದೆಂದರೆ— ಅದೂ ಋಷ್ಯಾಶ್ರಮಕ್ಕೆ ಕಳುಹುವುದೆಂದು ನೆವಹೇಳಿ ಘೋರಕಾನನ ಕ್ಕೊಯ್ದು ಬಿಟ್ಟು ಬರುವುದೆಂದರೆ ರಾಮನ ಹಿಂದಿನ ಉದಾತ್ತ, ಉನ್ಮುಖ ಚರಿತ್ರ ಚಾರಿತ್ರ್ಯಗಳನ್ನು ಕೇಳಿ ಅರಿತು ಆತನ ಮೇಲೆ ನಾವಿಟ್ಟಿರುವ ಆದರ ಭಕ್ತಿಗಳೆಲ್ಲ ಒಮ್ಮೆಲೆ ಕಳೆದುಹೋಗುತ್ತವೆ. ಹಿಂದೊಮ್ಮೆ ಸೀತೆಯನ್ನು ರಕ್ಕಸನೊಯ್ದಾಗ ಮತಿ ವಿಕಲನಾಗಿ, ಕಲ್ಲು ಕರಗುವಂತೆ ವಿಲಾಪಿಸಿದ್ದ ರಾಮ ಇವನೇ ಏನು ಎಂದು ಸಂಶಯ ತಲೆದೋರುತ್ತದೆ. ಹೀಗೆ ಜನರನ್ನು ಸಮಾಧಾನಪಡಿಸಲು ಕಷ್ಟಸಾಧ್ಯವಾದಂತಹ ಸೀತಾಪರಿತ್ಯಾಗದ ವಿಚಾರವೇ ಮುಖ್ಯವಾಗಿರುವ ಕಥಾಭಾಗವನ್ನು ಆರಿಸಿಕೊಂಡು ಕಾವ್ಯರಚಿಸಿದ್ದಾನೆ ಮುದ್ದಣ. ಇಲ್ಲಿ ಆತ ರಾಮಪಾತ್ರದ ಚಿತ್ರಣದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾನೆ ಎಂಬುದನ್ನು ಪರಿಶೀಲಿಸೋಣ.

ರಾಮಾಶ್ವಮೇಧವನ್ನೆತ್ತಿಕೊಂಡು ಅದರಲ್ಲಿನ ಪಂಚಮಾಶ್ವಾಸದ ಸೀತಾ ಪರಿತ್ಯಾಗದ ಭಾಗವನ್ನಷ್ಟೇ ಆರಿಸಿ ಅವಲೋಕಿಸಿದರೆ ಅಲ್ಲಿನ ರಾಮನ ನಡೆನುಡಿ ಗಳು ಮೊದಲನೋಟಕ್ಕೆ ಸಾಮಾನ್ಯನೊಬ್ಬನ ನಡೆನುಡಿಗಳಂತೆ ಕಾಣುತ್ತವೆ. ಅವು ರಾಮ ಪಾತ್ರದ ಗೌರವ, ಗಾಂಭೀರ್ಯಗಳಿಗೆ ತಕ್ಕುದಲ್ಲವೆಂದೆನಿಸುತ್ತವೆ. ಇಲ್ಲಿ ರಾಮ ಅಗಸನೊಬ್ಬನ "ಅಗಲ್ದ ಮಡದಿಯಂ ರಘುಜನಂತಿರೆ ಕೊಂಡಾಳೆಂ ಬಾಳೆಂ" ಎಂಬ ಮಾತನ್ನು ಕೇಳಿದೊಡನೆಯೆ "ಮನಂಗೆಟ್ಟುಂ ಮರವಟ್ಟುಂ" ಹೋಗಿದ್ದಾನೆ. ಆ "ವಿಚಾರಪರಂ ಮತ್ತಂ ನೀಡುಮೆಣಿಕೆಯೊಳ್ ನಿಟ್ಟುಸಿರ ಕಟ್ಟುಬ್ಬಸದಿಂ ತನಗೆ ತಾಂ — ಹಾ! ಹಾ! ಪೊಂಜುರಿಗೆಯೆಂದೇ ಎರ್ದೆಗೊತ್ತಿದೆಂ, ಇಂತು ಕರುಳಂ ಕೊರೆಗುಮೆಂದರಿತೆನಿಲ್ಲ ಕ್ಕಟಾ! ಪಾವನೆಯೆಂದೇ ಒಪ್ಪುಗೊಂಡೆನ

ದರಿನೀವಿಲಗವೊಂದಕ್ಕೆ ತಲೆಮಟ್ಟೆಂ. ಆಃ! ರಜಕನೆನ್ನನೇಳಿಸಿದನಿಲ್ಲಮಾದಮೆಳ್ಚರಿಸಿದಂ." "ಇನ್ನೇವೆಂ? ಕೆಯ್ವೊಲನೊಳ್ ಬೆಳೆದ ಕುರುಂಬುಲ್ಲಂ ಕಿಳ್ತುಬಿಸುಡುವಂತಿರೆ ಸೀತೆಯಂ ಬಿಡುವೆಂ" ಎಂದು ಹಿಂದುಮುಂದುಗಳನ್ನು ಯೋಚಿಸದೆ ಬಡಬಡಿಸುವ ವಿಚಾರಹೀನ. 'ಯಾರ ದಿವ್ಯನಾಮದ ಗಂಟೆಯು ಕೇಳಿದೊಡನೆ ದೋಷ, ಮಲಿನತೆ, ಅಮಂಗಳಗಳ ಪಿಶಾಚಿಗಳು ಎದ್ದುಬಿದ್ದೋಡುವವೋ ಆ ಭದ್ರೆಯು ಪತಿದೇವನ ಕರುಳನ್ನು ಕುಯ್ಯುವ ಸುರಿಗೆಯಂತೆ! ಯಾರ ಸಂಸರ್ಗದಿಂದ ಪಾವನತ್ವವು ಪಾವನವಾಯಿತೋ ಆ ಜನಕ ಕನ್ಯೆಯು ಹೊಲದಲ್ಲಿ ಬೆಳೆದ ಕುರುಂಬುಲ್ಲಂತೆ!' "ನಿರ್ಮೋಕನಿರ್ಮುಕ್ತನಿರ್ಮಲನಪ್ಪ ಫಣಿಯೆಂತಂತೀಸೀತೆಯಂ ತೊರೆದೇ ಸೊಗಂ ಬಾಳ್ವೆನಿದು ಸಿದ್ಧಂ" ಎಂದು ಪುಣ್ಯಮೇರುವಾದ ಸೀತೆಯನ್ನು ಹಾವಿನ ಪರೆಯಷ್ಟು ಹಗುರಮಾಡಿ ತನ್ನ ದೂಷಿತ ನಿರ್ಧಾರಕ್ಕೇ ಅಂಟಿಕೊಳ್ಳುವ ಹಠವಾದಿ. ಲಕ್ಷ್ಮಣನೊಡನೆ "ಕೇಳ್ಬೈ ತಮ್ಮ!......ಮುನ್ನ ಲಂಕೆಯೊಳ್ ನೀನೆ ಪೇಳ್ದಿಯಲ್ತೆ ಸೀತೆ ಪೂತೆ ಅವಳಂ ಕೈಕೊಳ್ವುದೆಂದು; ಈಗಳೇನಾಯ್ತು!" ಎಂದು ಯಾರದೋ ತಪ್ಪಿಗೆ ಇನ್ನಾರದೋ ಮೇಲೆ ಹರಿಹಾಯ್ದು ಬೀಳುವ ಮತಿಗೇಡಿ. ಸತ್ಯವನ್ನು ಹೇಳಲು ಬಂದ ಶತ್ರುಘ್ನನಿಗೆ "ತಮ್ಮ! ಕೆಮ್ಮನಿರ್; ನೀನರಿಯಯ್" ಎಂದು ತಡೆದ ಅನ್ಯರ ವಿಚಾರಗಳನ್ನು ಕೇಳಲಾರದ, ಕೇಳಲೆಳಸದ ವಿಪರೀತಮತಿ; ಶುಂಠ.

ಈ ದೃಷ್ಟಿಯಿಂದ ನೋಡುವಾಗ ಇಷ್ಟು ಮಾತ್ರವಲ್ಲ, ಈ ಸಂದರ್ಭದಲ್ಲಿ ಕವಿ ರಾಮನ ಕುರಿತು ಉಪಯೋಗಿಸಿರುವ "ವಿಚಾರಪರಂ" "ನೀಡುಮೆಣಿಕೆಯೊಳ್" ಎಂಬೆರಡು ಪದಗಳು ಬೇರಾವ ಸಂದರ್ಭದಲ್ಲಾದರೂ ರಾಮಪಾತ್ರಕ್ಕೆ ಕಳೆಕಟ್ಟುತ್ತಿದ್ದರೆ ಇಲ್ಲಿ ಮಾತ್ರ ಇನ್ನಷ್ಟು ಕಳಪೆಮಾಡಿವೆ. ರಜಕನೊಂದು ಪರುಷೋಕ್ತಿಯ ಪ್ರಬಲ ಆಘಾತದಿಂದ ಅರಿವುಗೆಟ್ಟು ರಾಮ ಒಂದೊಮ್ಮೆ ಉದ್ವೇಗದಿಂದ ಹಿಂದುಮುಂದನ್ನು ಯೋಚಿಸದೆ ಸೀತಾಪರಿತ್ಯಾಗದ ಕಾಲದ ಮಾತುಗಳನ್ನಾಡಿದನೆಂದರೆ ಅವು ಸ್ವಲ್ಪವಾದರೂ ಸಹ್ಯವಾಗುತ್ತಿದ್ದುವು. ಆದರೆ "ವಿಚಾರಪರ"ನಾದ ರಾಮ "ನೀಡುಮೆಣಿಕೆ"ಯ ಬಳಿಕವೇ ಈ ಮಾತುಗಳನ್ನಾಡಿದನೆಂದರೆ ಮುದ್ದಣನ ರಾಮಪಾತ್ರ ತೀರಾ ಸಾಮಾನ್ಯವಾಗಿ ಕಾಣುತ್ತದಲ್ಲವೇ?

ಹೀಗೆ ಪಂಚಮಾಶ್ವಾಸದ ಸೀತಾಪರಿತ್ಯಾಗದ ಭಾಗವನ್ನಷ್ಟೇ ನೋಡುವಾಗ ಮೇಲುನೋಟಕ್ಕೆಮುದ್ದಣನ ರಾಮ ರಾಮನಾಗಿಯೇ ಕಂಡುಬರುವುದಿಲ್ಲ. ಆದರೆ ಅದೊಂದೇ ಭಾಗದ ಒಂದು ಸನ್ನಿವೇಶವನ್ನಷ್ಟೆ ಅವಲೋಕಿಸಿ ಒಂದು

ತೀರ್ಮಾನಕ್ಕೆ ಬರುವುದರಿಂದ ಕವಿಗೆ ನಮ್ಮಿಂದ ನ್ಯಾಯದೊರಕುವುದಿಲ್ಲ. ಕಾವ್ಯ ಮತ್ತು ಪಾತ್ರಕ್ಕೆ ಅನ್ಯಾಯವಾಗುತ್ತದೆ. ಆದುದರಿಂದಲೇ ಕಾವ್ಯವನ್ನು ಆಮೂಲಾಗ್ರ ನೋಡಿ, ಪಾತ್ರದ ಸಮಗ್ರದರ್ಶನ ಮಾಡಿಕೊಂಡ ಮೇಲೆಯೇ ಈ ಭಾಗದ ವಿಮರ್ಶೆಗೆ ಹೊರಡುವುದು ಸಮಂಜಸ. ಏಕೆಂದರೆ ಯಾವುದೇ ಕಾವ್ಯದಲ್ಲಿ ಪಾತ್ರಗಳ ಒಂದೆಡೆಯ ನಡೆನುಡಿಗಳು ಇನ್ನೊಂದೆಡೆಯ ನಡೆನುಡಿಗಳಿಂದ ಸಮರ್ಥನೆ ಪಡೆಯುವುದೂ, ಅರ್ಥತುಂಬಿಕೊಳ್ಳುವುದೂ, ಹೊಸ ಭಾವಗಳನ್ನೇ ಸ್ಫುರಿಸುವುದೂ ಸಾಮಾನ್ಯ.

ಎಂದೇ ಸೀತಾಪರಿತ್ಯಾಗದ ಸನ್ನಿವೇಶದ ನಡೆನುಡಿಗಳಿಗೆ ಬೇರೆಲ್ಲಾದರೂ ಸಮಾಧಾನದೊರಕುತ್ತಿದೆಯೇ? ಅಥವಾ ಬೇರೆ ಸಂದರ್ಭಗಳ ನಡೆನುಡಿಗಳ ಬೆಳಕಿನಲ್ಲಿ ಈ ಭಾಗದ ನಡೆನುಡಿಗಳು ಹೊಸರೂಪದಾಳುತ್ತವೆಯೇ? ಎಂಬುದನ್ನು ನೋಡಬೇಕಾಗಿದೆ. ಅದು ಮಾತ್ರವಲ್ಲದೆ ಸೀತಾಪರಿತ್ಯಾಗದ ಸಂದರ್ಭದಲ್ಲೇ ಬರುವ ಪೂರ್ವಾಪರ ವಿರುದ್ಧವಾದ ಮಾತುಗಳಿಗೆ ಏನು ಅರ್ಥ? ಅವು ಏಕೆ ಹಾಗಿವೆ? ಅವು ಹಾಗಿರುವುದರಿಂದ ಆ ಮಾತುಗಳ ಹಿಂದೆ ಬೇರಾವುದಾದರೂ ಒಂದು ಧ್ವನಿ ಅಡಗಿರಬಹುದೆ? ಈ ನಿರಸ್ತ ನಿರ್ಘೃಣತೆಯ ಹಿಂದೆ ದಯೆ, ಪ್ರೇಮಗಳು ತಲೆಮರಸಿ ಕುಳಿತಿರುವವೇನು? ಕಹಿಯಾದ ಈ ಮೇಲು ಆವರಣದೊಳಗೆ ಯಾವ ಸಿಹಿ ಹೂರಣ ಹುದುಗಿರಬಹುದು? ಎಂಬ ಈ ಕುತೂಹಲ ನಮ್ಮನ್ನು ರಾಮಪಾತ್ರವನ್ನು ಸಮಗ್ರವಾಗಿಯೂ ಆಳವಾಗಿಯೂ ನೋಡುವ ಸಾಹಸ ಕಾರ್ಯಕ್ಕೆ ಪ್ರೇರೇಪಿಸುವುದು.

ಇನ್ನೂ ಒಂದು ವಿಚಾರ. ಶ್ರೀರಾಮ ಪ್ರಾತಃಸ್ಮರಣೀಯ; ಪೂಜ್ಯ. ಪ್ರಾತಃಸ್ಮರಣೀಯತೆ ಪೂಜ್ಯತೆಗಳು ರಾಮನಿಗೆ ಪರಮಾತ್ಮನೆಂಬ ಅಧಿಕಾರದಿಂದ ಮಾತ್ರ ದೊರೆತುದಲ್ಲ; ಅದಕ್ಕಿಂತಲೂ ಹೆಚ್ಚು ಆತನ ಚಾರಿತ್ರ್ಯಶುದ್ಧಿಯಿಂದಲೊದವಿದುದು. ಇದು ನಮ್ಮಂತಹ ಸಾಮಾನ್ಯರೂ ಬಲ್ಲವಿಚಾರ. ಹೀಗಿದ್ದೂ ಮುದ್ದಣನಂತಹ ಕವಿಶ್ರೇಷ್ಠ ತನ್ನ ರಾಮನನ್ನು ಸೀತಾಪರಿತ್ಯಾಗದ ಭಾಗದಲ್ಲಿ ನಮಗೆ ಮೇಲ್ನೋಟಕ್ಕೆ ಕಾಣುವಷ್ಟು ಕೆಳಮಟ್ಟಕ್ಕೆ ಇಳಿಸಿಯಾನೆ? ಆ ಸಂದರ್ಭದಲ್ಲಿ ರಾಮನ ನಡೆನುಡಿಗಳನ್ನು ಅದಕ್ಕಿಂತ ಮೇಲ್ಮಟ್ಟದಲ್ಲಿರಿಸಲು ಮುದ್ದಣನಿಗೆ ಅಸಾಧ್ಯವಾಯಿತು ಎಂದು ಭಾವಿಸೋಣವೆ? ಅಗಸನನ್ನೇ ಗುರುವಾಗಿ ಮಾಡಿಕೊಳ್ಳುವಷ್ಟು, ತಮ್ಮಂದಿರಿಂದಲೇ ಬುದ್ಧಿಹೇಳಿಸಿಕೊಳ್ಳುವಷ್ಟು ಅಯೋಗ್ಯನಾಗಿ ರಾಮನನ್ನು ರೂಪಿಸಿಯಾನೆ ಆತ? ಅದೂ ತನ್ನ ಕಥಾನಾಯಕನನ್ನು? ಹಿಂದು

ಮುಂದಿನ ಆಶ್ವಾಸಗಳಲ್ಲಿ ಸುಂದರವೂ, ಕೋಮಲವೂ, ಪರಿಪೂರ್ಣವೂ, ಮನೋಜ್ಞವೂ ಆಗಿದ್ದ ಪಾತ್ರವನ್ನು ಒಂದು ಆಶ್ವಾಸದಲ್ಲಿ ಮಾತ್ರ ಆ ಮಟ್ಟದಲ್ಲಿ ಚಿತ್ರಿಸಲಾರದಷ್ಟು ಪ್ರತಿಭಾಹೀನನೆ ಮುದ್ದಣ? ಮನೋರಮೆಯಂತಹ ಮುಗ್ಧ ಮನೋಹರತೆ, ಸೀತೆಯಂತಹ ತೇಜಸ್ವೀ ಪಾವಿತ್ರ್ಯ, ಲಕ್ಷ್ಮಣನಂತಹ ವಿನೀತ ಆತ್ಮವಂತರಿಕೆಗಳನ್ನು ಸಜೀವ ಮೂರ್ತಿಗಳೋ ಎಂಬಂತೆ ತನ್ನ ಕಲಾಕುಂಚದಿಂದ ಚಿತ್ರಿಸಿ 'ಕಲಾಚೋದ್ಯ' ಒಂದನ್ನು ಮಾಡಿ ತೋರಿಸಿದ ವರಕವಿಗೆ ತನ್ನ ಕಾವ್ಯದ ಪ್ರಾಣಲಿಂಗ ರಾಮನಂತಹ ಧೀರೋದಾತ್ತ ಧೀಮಂತಿಕೆಯನ್ನು ಚಿತ್ರಿಸುವಾಗ ಒಂದೆಡೆ ಮಾತ್ರ ತನ್ನ ಪ್ರತಿಭಾಭಂಡಾರದಲ್ಲಿ ಮಸಿಯಲ್ಲದೆ ಬೇರಾವ ಬಣ್ಣವೂ ದೊರಕಲಿಲ್ಲವೆಂದು ಯೋಚಿಸೋಣವೆ? ಹೀಗೆ ಯಾವ ಬಗೆಯಿಂದ ಚಿಂತಿಸಿದರೂ ಸೀತಾಪರಿತ್ಯಾಗದ ಕಾಲದ ರಾಮನ ನಡೆನುಡಿಗಳು ಮೇಲ್ನೋಟಕ್ಕಿಂತ ಹೆಚ್ಚು ಆಳ ಮತ್ತು ವ್ಯಾಪಕವಾದ ದೃಷ್ಟಿಯನ್ನು ಅಪೇಕ್ಷಿಸುತ್ತವೆ ಎಂಬುದು ಸುಸ್ಪಷ್ಟ.

ಅದರಲ್ಲೂ ಮುದ್ದಣನದು ಬಳಸುದಾರಿ. ಒಳಗೊಂದು ಭಾವವಿದ್ದು ಹೊರಗೊಂದು ಬಗೆ ತೋರಿಸುವ ಮಾಟಗಾರಿಕೆ. ರಾಮರಾಜ್ಯದ ಬಣ್ಣನೆಗೆ ತೊಡಗಿ ಅದು ತನ್ನಿಂದೇನು ಸೇಸನಿಂದಲೂ ಸಾಗದು ಎಂದು ಹೇಳಿಯೂ ಬಣ್ಣನೆಯನ್ನು ಕೊನೆಗಾಣಿಸದೆ ಮುಂದುವರಿಸುತ್ತಿರುವಾಗ "ಇದೇನು?" ಎಂದು ಮನೋರಮೆ ಕೇಳಲು ಈ ಬಣ್ಣನೆಯನ್ನು ನೀನು ಕೇಳಿದುದೂ ಅಲ್ಲ ನಾನು ಹೇಳಿದುದೂ ಅಲ್ಲ! ಇವು ಅಗಸ್ತ್ಯನು ಅಯೋಧ್ಯೆಗೆ ಬರುವ ಹಾದಿಯಲ್ಲಿ ತನ್ನ ಶಿಷ್ಯನಿಗೆ ಬಣ್ಣಿಸಿ ಹೇಳಿದ ನುಡಿಗಳು "ಅದನೆ ಕಂಡುಗಮಂ ಬಳ್ಳದೊಳಳೆದೆನ್ನೈಸೆ" ಎನ್ನುವ ಬೆಡಗಿನ, ಪೊನ್ನಸೀತೆಯ ವಿಚಾರ ಮೊದಲಿಟ್ಟು "ರನ್ನಸೀತೆಯೇನಾದಳೊ?" ಎಂದು ಮನೋರಮೆ ಕೇಳಿದ ಬಳಿಕ ಸೀತಾಪರಿತ್ಯಾಗದ ಕತೆ ಹೇಳಹೊರಡುವ ಅಂದದ, ರಾಮನ ಯಜ್ಞಾಶ್ವವನ್ನು ಆಶ್ರಮದ ತರಳರೀರ್ವರು ಕಟ್ಟಿದರು ಎಂದು ತಿಳುಹಿ ಮನೋರಮೆಯನ್ನು ವಿಸ್ಮಯ ಮೂಕಳನ್ನಾಗಿ ಮಾಡಿದ ಬಳಿಕ ಹಿಂದಿನ ಕತೆ ಹೇಳಿ ಆ ತರಳರೇ ಸೀತೆಯ ಮಕ್ಕಳು—ಲವಕುಶರು ಎಂದು ತಿಳುಹುವ ಗಾರುಡಿಗತನದ ಈ ಬಳಸು ದಾರಿಯ ಅಂದಚೆಂದಗಳನ್ನು ಸಮಗ್ರ ಕಾವ್ಯವನ್ನು ಓದಿಯೇ ಅನುಭವಿಸಬೇಕು. "ಭವತಿ ಭಿಕ್ಷಾಂ ದೇಹಿ" ಎಂಬಲ್ಲಿ ತನ್ನ ಅಂತರಂಗದ ಅಪಾರ ವೇದನೆಗೆ ನಗೆಯ ಬಂಗಾರದ ಮಿರುಗುಕೊಟ್ಟು ಪ್ರಕಾಶಪಡಿಸುವ ಕಲೆಗಾರಿಕೆಯನ್ನು ಆಸ್ವಾದಿಸಿಯೇ ಸವಿಯಬೇಕು. ಕಥಾನಿರೂಪಣೆಯಲ್ಲಿ ಇಂತಹ ವೈಶಿಷ್ಟ್ಯಪೂರ್ಣವಾದ ಹಾದಿ ತುಳಿದಿರುವ ಮುದ್ದಣನ ಕಾವ್ಯ

ರಾಮಾಶ್ವಮೇಧವನ್ನು ವಿಮರ್ಶಿಸುವಾಗ, ಪಾತ್ರಗಳನ್ನು ತೂಕಕ್ಕೆ ಹಾಕುವಾಗ ಈ ವೈಶಿಷ್ಟ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಈಗ ನಾವು ಸೀತಾಪರಿತ್ಯಾಗದ ಭಾಗವನ್ನು ಕಾಣುವ ಮೊದಲು ಚತುರ್ಥಾಶ್ವಾಸ "ಗರ್ಭಧಾರಣಂ" ಮತ್ತು ಸಪ್ತಮಾಶ್ವಾಸ "ವಿಜಯಪ್ರಯಾಣಂ" ಇವುಗಳಲ್ಲಿರುವ ರಾಮ — ಸೀತೆಯರ ಸಂಬಂಧವನ್ನೂ, ಸೀತೆಯ ಕುರಿತು ರಾಮನ ಅಂತರಂಗವನ್ನೂ ಗಮನಿಸೋಣ. ಒಂದು ದಿನ ಸೀತೆ ಗೆಳತಿ ಚಂದ್ರಮತಿಯೊಡನೆ ಕನ್ನೆವಾಡದ ಮೊಗಸಾಲೆಯಲ್ಲಿ ಕುಳಿತಿರುವಾಗ ಹೆಣ್ಣು ಗುಬ್ಬಿಯೊಂದು ತನ್ನ ಮರಿಯನ್ನು ಲಲ್ಲೆಗೈಯುವುದನ್ನು ಕಾಣುತ್ತಾಳೆ. ಇದರಿಂದ ಆಕೆಗೆ ತನ್ನ ಬಂಜೆತನದ ನೆನಹು ಕೆಣಕಿದಂತಾಗಿ ದುಃಖ ಉಮ್ಮಳಿಸಿ ಬರುತ್ತದೆ. ಕೊನೆಗೆ ಕೊರಗು ತಡೆಯದಾಗಿ ಮಲಗುಮನೆಗೆ ಹೋಗುತ್ತಾಳೆ. ಚಂದ್ರಮತಿಯೂ ಅವಳನ್ನು ಹಿಂಬಾಲಿಸುತ್ತಾಳೆ. ಇದನ್ನು ಕಂಡ ದಾಸಿಯೋರ್ವಳು ಓಲಗಶಾಲೆಯಲ್ಲಿ ಮಂತ್ರಿ ಜನರೊಡನೆ ಮಂತ್ರಾಲೋಚನೆಯಲ್ಲಿರುವ ರಾಮನೆಡೆಗೆ ಬಂದು "ಜೀಯ! ಏನೆಂದರಿಯೆನಕ್ಕ ನಿಂದು ಕಟ್ಟುಬ್ಬೆಗದೊಳಿರ್ಕುಂ; ಎನ್ನೊಳೆಂದಳಿಲ್ಲ. ನೆಟ್ಟನೆ ಸಜ್ಜೆವನೆಗೆ ಪೋಪುದುಂ, ಚಂದ್ರಮತಿ ತಾನುಂ ಬಲ್ದುಗುಡದಿಂ ಬೆಂಗೊಂಡೆಯ್ದಿದಳ್. ದೇವರೆ ದೇವಿಯರಿರವನರಿಯಲಕ್ಕುಂ" ಎಂದುದನ್ನು ಕೇಳಿದ್ದಾನೊ ಇಲ್ಲವೊ "ದಿಮ್ಮನೆಳ್ದು ದಿಗ್ಭ್ರಮೆಯಿಂಕಣ್ಗೆಟ್ಟ"ದ್ದಾನೆ! "ಚಿಂತಾಪರವಶತೆಯಿಂ ನಡೆಗಂಬಂ ಬರ್ಪುದೆನೆ" ಬಂದಿದ್ದಾನೆ! ಸೀತೆಗೆ ದುಃಖ ಎಂದೊಡನೆ ಇದೆಂತಹ ಕಳವಳ! ಪ್ರೀತಿಯ ಈ ಪಾಶ ಎಷ್ಟು ಬಲವತ್ತರವಾದುದು! ಮಾಡುತ್ತಿದ್ದ ಮಂತ್ರಾಲೋಚನೆ ಮಾಯವಾಯಿತು! ಹತ್ತಿರಿದ್ದ ಮಂತ್ರಿಗಳೊಡನೆ ಮಾತೇ ಇಲ್ಲ! ಪ್ರಪಂಚವನ್ನೇ ಮರೆತು ಒಮ್ಮೆಲೆ ಎದ್ದು ಸೀತೆಯ ಸನಿಯ ಸಾರಿದ್ದಾನೆ. ಇದೆಂತಹ ಪ್ರೀತಿಯ ಯೋಗಮಾಯೆ.

ಪತಿಯು ಬಂದನೆಂದು ಏಳಹೋದ ಸತಿಯನ್ನು ಏಳಗೊಡದೆ ತಾನೂ ಅವಳ ಜತೆಯಲ್ಲಿ ಅರ್ಧಾಸನದಲ್ಲಿ ಮಂಡಿಸಿದ್ದಾನೆ. ಏನಾದರೂ ಆಕೆ ಅರ್ಧಾಂಗಿ ತಾನೆ! ಮೈಯೆರಡು ಮನವೊಂದಾದ ದಂಪತಿಗಳ ಎಷ್ಟು ಸೊಗಸಾದ ಚಿತ್ರವಿದೆ ಇಲ್ಲಿ! ಸನಿಯ ಕುಳಿತು ಪರಿಪರಿಯಿಂದ ಸೀತೆಯ ದುಃಖಕಾರಣವನ್ನು ಕೇಳುತ್ತಿದ್ದಾನೆ ರಾಮ. ಸೀತೆಯ ಕಣ್ಣೀರು ರಾಮನ ತನುವನ್ನು ತೋಯಿಸುತ್ತಿದೆ. ರಾಮನ ಹೃದಯದ ಪ್ರೇಮಾಮೃತದ ಝುರಿ ಸೀತೆಯ ಮನವನ್ನು ತೋಯಿಸುತ್ತಿದೆ. ಚಂದ್ರಮತಿ ಹತ್ತಿರ ಇರುವಂತೆಯೇ ಚಕ್ರವರ್ತಿ ರಾಮಚಂದ್ರ ಸೀತೆಯ ಕಣ್ಣೀರನ್ನು

ತನ್ನ ಉತ್ತರಿಗೆಯ ಸೆರಗಿನಿಂದ ಒರಸುತ್ತಿದ್ದಾನೆ. ಅತ್ತಿತ್ತ ತುಯ್ಯಲಾಡುತ್ತಿರುವ ಮುಂಗುರುಳನ್ನು ತಿದ್ದಿದ್ದಾನೆ. ಕೆಲಕೊಂದಿದ ಸರವನ್ನು ನೇವರಿಸಿದ್ದಾನೆ. ಅರೆಗಲ್ಲವನ್ನು ಅಲುಗಿಸುತ್ತಿದ್ದಾನೆ! ಮಮತೆ ಮುಗಿಲು ಮುಟ್ಟಿರುವಲ್ಲಿ ಮುಟ್ಟು ವಿಕೆಯೇ ಸಾವಿರ ಮಾತುಗಳಿಗಿಂತ ಹೆಚ್ಚಿನ ಕೆಲಸಮಾಡುತ್ತದೆ! ಹೃದಯ ಹೃದಯದೊಡನೆ ಕೇಳುತ್ತಿದೆ ಏನು? ಏಕೆ? ಯಾರಿಂದ ದುಃಖ ಎಂದು. ಕೊನೆಗೆ ದುಃಖಕಾರಣ ತಿಳಿದಾಗ ರಾಮ ಸೀತೆಯನ್ನು ಸಂತೈಸುತ್ತಾನೆ. ಆ ಬಳಿಕ ತಾನು ಅರ್ಧದಲ್ಲೇ ತೊರೆದು ಬಂದ ಓಲಗಕ್ಕೆ ತೆರಳುತ್ತಾನೆ! ಇದಿಷ್ಟು ಚತುರ್ಥಾಶ್ವಾಸ ದಲ್ಲಿ ಸೀತೆಯ ಕುರಿತು ರಾಮನ ನಡವಳಿಕೆಯ ಕತೆ.

ಇನ್ನು ಸಪ್ತಮಾಶ್ವಾಸದ ವಿಚಾರ. ಇಲ್ಲಿ ರಾಮ ಏಕಾಂಗಿ. ಎಂದೇ ನಮಗಿಲ್ಲಿ ಆತನ ಅಂತರಂಗದ ನಿಚ್ಚಳ ಚಿತ್ರದೊರಕುತ್ತದೆ. ಸೀತೆಯನ್ನು ಕಾಡಿ ನಲ್ಲಿ ಬಿಟ್ಟು ಲಕ್ಷ್ಮಣ ಹಿಂದಿರುಗಿರುತ್ತಾನೆ. ಲಕ್ಷ್ಮಣ ಸೀತೆಯನ್ನು ಕಾಡಿಗೆ ಕೊಂಡೊಯ್ದನೆಂಬಾಗಲೇ ರಾಮನ "ಮನವೊಳಗೊಳಗೆ ಬೆಂದು ಬೇಗುದಿಯೊ ಳಿರ್ದತ್ತು". ಅದೇ ಲಕ್ಷ್ಮಣ ಆಕೆಯನ್ನು ಕಾಡಿನಲ್ಲಿ ಬಿಟ್ಟು ಬಂದನೆಂದು ತಿಳಿದಾಗ ದುಃಖ "ಒರ್ಮೆಯೆ ಉರ್ಕಿದುದು." ಈಗಲೊ ರಾಮನ ಅಂತರಂಗದಲ್ಲಿ ಕಾಳ್ಗಿಚ್ಚು ಎದ್ದಿದೆ. ಬೇಗೆಯನ್ನು ಸಹಿಸಲಾರದೆ ಬೊಬ್ಬಿರಿಯುತ್ತಿದೆ ಹೃದಯ. ನೆರವಿ ಬೇಡವಾಗಿದೆ. ಏಕಾಂತದಲ್ಲಿ ಕುಳಿತಾಗಲೊ ದುಃಖೋದ್ಗಾರಗಳು ತನಗೆ ತಾನೇ ಹೊರಡುತ್ತಿವೆ. ನನ್ನ ಬಾಳು ಕತ್ತಲಾಯಿತು. ಹಾ! ವಿಧಿ ನನಗೂ ಹೀಗೆಸಗುವುದೇ? ಎಂದು ಕೇಳಿದ್ದಾನೆ. ಆದರೆ ಮರುಕ್ಷಣದಲ್ಲಿ ಎನಿಸಿದೆ ವಿಧಿಯನೇಕೆ ಬಯ್ಯಲಿ? ಆತನೂ ನನ್ನಂತೆಯೇ ಲೋಕಾಪವಾದದಿಂದ ನೊಂದವ! ಆಃ! ಈ ಲೋಕಾಪವಾದದ ಶಕ್ತಿಯೇ! ಇದು ಯಾರನ್ನು ತಾನೇ ಬಿಟ್ಟಿದೆ. ಈ ಲೋಕಾಪವಾದದಿಂದಾಗಿ ನನಗಾದರೊ ಕೈಹಿಡಿದ ಮಡದಿಯನ್ನೇ ಜಿಡಬೇಕಾಯಿತು. ಆಕೆ ಪರಮ ಪವಿತ್ರಳೆಂಬುದು ರಾಮನಿಗೆ ತಿಳಿದಿದೆ. "ನಿಷ್ಕಳಂಕೆಯೆಂದರಿಯೆನೆ? ಪಾವನೆಯೆಂದರಿಯೆನೆ?" ಇಂತಹ ಪುಣ್ಯಚರಿತ್ರ ಳನ್ನೂ ಲೋಕಾಪವಾದದಿಂದಾಗಿ ಕಾಡಿಗಟ್ಟದೆ ನಿರ್ವಾಹವಿಲ್ಲವಾಯಿತು. ಸೀತೆಗೆ ತನ್ನಿಂದ ಎಂದೂ ನ್ಯಾಯಸಲ್ಲಲಿಲ್ಲ; ಆನಂದ ದೊರೆಯಲಿಲ್ಲ; ಸುಖ ಸಿಗ ಲಿಲ್ಲ. ವಿಧಿಯ ವಿಕಟ ವಿಲಾಸದಿಂದಾಗಿ ಇಂದು ಎಂದಲ್ಲ ಎಂದೂ ಪತಿಯ ಕರ್ತವ್ಯವನ್ನು ತನ್ನಿಂದ ನೆರವೇರಿಸಿಕೊಡಲಾಗಲಿಲ್ಲ. ಆ ಕೊರಗು ಆತನೆದೆ ಯನ್ನು ಶೂಲದಂತೆ ಇರಿಯುತ್ತಿದೆ. "ಹಾ! ಹಾ! ಸೀತೆ! ಎನ್ನಂ ಕೈವಿಡಿವಿನಂ

ನಿನಗೊದವಿದ ಭಾಗ್ಯಮೇ! ಎನ್ನನೆ ವರಿಪೆನೆಂದಾವ ದೈವಮಂ ನೋಂತೆಯೋ! ಅಕ್ಕಟಾ! ಕೈವಿಡಿದಿನ್ನೆಬರಮೊಂದು ದಿನಮಾದೊಡಂ ಸೊಗಮಂ ಕಂಡುದುಂಟೇ! ಎಳವೆ ವನಸಂಚಾರದೊಳಾಯ್ತು; ಬಳವಿ ರಕ್ಕಸರ ಬಂದಿಯೊಳಾಯ್ತು; ಕೆಳವೆ ಪುಲಿಕರಡಿಗಳಿಸಗುರ್ವಿಸಿದ ಕಾರಡವಿಯೊಳಾಯ್ತಲೇ! ಅಯ್ಯೋ ಅಬ್ಬೆಯಿಲ್ಲದ ಪೆಣ್ಮಗಳನೊರ್ವಳಂ ಕಾಡಿಂಗೊತ್ತೆಯಿಡುವೊಡೆಂದೇಂ ಮದುವೆನಿಂದೆನೇ!" ಹೀಗಿದ್ದರೂ ಸೀತೆ ಎಂದೂ ಕೋಪಿಸಿಕೊಂಡಿಲ್ಲ; ಅಪ್ರಿಯವಾಡಿಲ್ಲ; ವಿನಯ ತೋರೆದಿಲ್ಲ. ಆಕೆಯ ಪತಿಭಕ್ತಿ ಯಾವ ಬಿರುಗಾಳಿಗೂ ನಂದದ, ಕುಂದದ ನಂದಾದೀಪವಾಗಿ ಬೆಳಗಿದೆ ಎಂಬುದರ ಅರಿವಿದೆ ರಾಮನಿಗೆ. "ಆಃ! ಚೆನ್ನೇ! ನಿನ್ನಾ ಪಾವಿತ್ರ್ಯಮನಾ ಸೌಜನ್ಯಮನಾವಿನಯಮನೆಂತೊ ಮರೆವೆಂ." ಕಾನನವಾಸ ಬಂದಿವಾಸಗಳನ್ನು ಕಳೆದು ಬಂದು ರಾಣಿಯಾದಳು. ಆದರೇನು ದುಃಖಮಾತ್ರ ಅವಳನ್ನು ಬೆನ್ನುಬಿಡದೆ ಕಾಡಿತ್ತು. ತಾನು ಬಂಜೆಯೆಂಬ ಕೊರಗು ಕೊರೆದು ತಿನ್ನುತ್ತಿತ್ತು. ಕೊನೆಗೂ ಬಹುಕಾಲದ ದುಃಖದ ತಪಸ್ಸು ಸಿದ್ಧಿಸಿತು. ಬಸಿರಾದಳು. ಈಗಲೊ ತಾನೇ ಆಕೆಯನ್ನು ಕಾನನಕ್ಕೆ ಕೈಯಾರೆ ನೂಕಬೇಕಾಯಿತು. ಇದೆಂತಹ ವಿಧಿವಿಲಾಸ. ಈ ಕೊರಗಿನ ಕತ್ತರಿ ಕರುಳನ್ನು ಕತ್ತರಿಸತೊಡಗಿದೆ. 'ಅಕ್ಕಟಕ್ಕಟಾ! ಆ ಗರ್ಭಿಣಿಯೆಂತು ಪ್ರಸವವೇದನೆಯಂ ಸೈರಿಪಳೊ! ಇನಿಯಂ ಕೈವಿಟ್ಟನೆಂಬೊಂದು ದುಗುಡಮೊಂದು; ವನವಾಸದ ಬವಣೆಯೆರಡು; ಕಾಳ್ಮಿಗಂಗಳತ್ತಣಿಂ ಭಯಂ ಮೂರು; ಬರುವೆಯೆಂಬೊಂದು ಬೇವಸಂ ನಾಲ್ಕು; ಬಸಿರ ಬೇನೆಯೈದು; ಅಯ್ಯೋ! ಉಮ್ಮಳಕ್ಕೆಂತಸುವಿಡಿದಿರ್ಪಳೊ?! ಹಾಹಾ!' ಲಕ್ಷ್ಮಣನು ಕಾಡಿನಲ್ಲಿ ಉಳಿಸಿಬರುವಾಗ ಸೀತೆ ಏನೆಂದಿರಬಹುದು? ಅಪವಾದ ದುಃಖಗಳ ಅನಿರೀಕ್ಷಿತ ಪ್ರಬಲಾಘಾತವನ್ನು ಎಂತು ಸಹಿಸಿಕೊಂಡಿರಬಹುದು? ಎಷ್ಟು ದುಃಖಿಸಿರಬಹುದು? ಲಕ್ಷ್ಮಣನೊಡನೆ ತಾನೂ ಹಿಂದಿರುಗುವೆನೆಂದಿರಬಹುದೆ? ನನ್ನನ್ನು ಬಯ್ದಿರಬಹುದೆ? ಹಾ! ಈಗ ಎಂತಿರುವಳೊ? ಏನಾದಳೊ? ಇವನ್ನೆಲ್ಲ ಲಕ್ಷ್ಮಣನೊಡನೆ ಕೇಳಿ ತಿಳಿಯಬೇಕೆಂಬಾಶೆಯಾಗುತ್ತಿದೆ. ಆದರೆ ಹೇಗೆ ಆತನನ್ನು ಎದುರುಗೊಳ್ಳಲಿ. ಯಾವ ಮೋರೆಯಿಂದ ಮಾತಾಡಿಸಿ ಕೇಳಲಿ? ಯಾವ ಬಾಯಿಯಿಂದ ಕೇಳಿ ತಿಳಿಯಲಿ? 'ಸುಡು ಸೀತೆಯಿಲ್ಲದೀನಾಡಂ! ಹಾ! ನಾಯಿಕೇ! ಹಾ! ರನ್ನೇ! ಆವಿರ್ವರುಂ ಕಾಡೊಳಾದೆವಲ್ತೆ! ಎಮಗಾವುದು ಬಟ್ಟೆ! ರಾಜ್ಯದಿನೇಂ? ಐಸಿರಿಯಿನೇಂ? ಇಂತಿವು ಪೆರವರೊಡಮೆಯಲ್ತೆ! ಈಗಳಾನುಂ ಪೆರರ್ಗೆ ಮಾರುವೋದೆಂ. ಇನ್ನೆನಗೆ ಸಂತಸಮಾವುದೊ! ಸೊಗಮಾವುದೊ!

ಕೆಳೆತನ ಮಾವುದೊ! ಬಾಳ್ತೆಯಾವುದೊ! ಹಾ! ಹಾ! ಜಾನಕೀ!' ಹೀಗೆಂದು ಹಲಬಗೆಯಿಂದ ಹಲವಿಧದಿಂದ ಪರಿತಪಿಸುತ್ತಾನೆ ರಾಮ.

ಈಗ ಈ ಎರಡು ಹಿಂದು ಮುಂದಿನ ಕಥಾಭಾಗಗಳ ಬೆಳಕಿನಲ್ಲಿ ಮಧ್ಯದಲ್ಲಿರುವ ಸೀತಾಪರಿತ್ಯಾಗದ ಭಾಗವನ್ನು ಅವಲೋಕಿಸೋಣ. ಮೊದಲೊಮ್ಮೆ ನಾವೇ ರಾಮನ ಪಾತ್ರವನ್ನು ಕಳಪೆಮಾಡಿವೆ ಎಂದಿದ್ದ "ವಿಚಾರಪರ" ಮತ್ತು "ನೀಡು ಮೆಣಿಕೆಯೊಳ್" ಎಂಬೆರಡು ಪದಗಳು ನಮ್ಮ ಆಳವಾದ ದೃಷ್ಟಿಗೆ ಕಾಣುವ ಸತ್ಯಕ್ಕೆ ಪೋಷಕವಾಗಿವೆ. ರಜಕನೊಂದು ಮಾತನ್ನು ಕೇಳಿದೊಡನೆಯೇ ರಾಮ ಒಂದೊಮ್ಮೆ 'ಮನಂಗೆಟ್ಟುಂ ಮರವಟ್ಟುಂ' ಹೋಗುತ್ತಾನೆ. ಆ ಅಕಲ್ಪಿತ ಅಪಮಾನ, ದುಃಖಗಳ ಮಹಾಮೇರುವೇ ಅನಿರೀಕ್ಷಿತವಾಗಿ ಜರಿದು ಬಿದ್ದಾಗಲೊಮ್ಮೆ ರಾಮನ ಮತಿ ಮಸುಳಿಸಿದೆ. ನಿಜ. ಆದರೆ ಆತ ಪ್ರಾಜ್ಞ. ಮಸುಳಿಸಿದ ಮತಿಯ ಕತ್ತಲಲ್ಲೇ ಮಂಕನಾಗಿ ಕುಳ್ಳಿರುವವನಲ್ಲ. ಅಂತರಂಗದ ದೀಪದಲ್ಲಿರುವ ಮತಿಯ ಬತ್ತಿಗೆ ಹಿಡಿದ ಕರಕನ್ನು ವಿಚಾರದ ಕಡ್ಡಿಯಿಂದ ಕಳೆದು ಜ್ಞಾನದೀಪವನ್ನು ಬೆಳಗಬಲ್ಲ ಶಕ್ತ. ಇದನ್ನೇ ಕವಿ ರಾಮನ ಕುರಿತು ಬಳಸಿರುವ "ವಿಚಾರಪರಂ" ಎಂಬ ಪದದಲ್ಲಿ ತಿಳಿಸಿದ್ದಾನೆ. ತನ್ನ ಆ ಶಕ್ತಿಯ ಸರ್ವೋಪಯೋಗವನ್ನೂ ರಾಮ ಮಾಡಿಕೊಂಡಿದ್ದಾನೆ ಎಂಬುದನ್ನು "ನೀಡುಮೆಣಿಕೆಯೋಳ್" ಎಂಬಲ್ಲಿ ಹೇಳಿದ್ದಾನೆ. ಹೀಗೆ ವಿಚಾರಪರನಾದ ರಾಮ ಆಳವಾದ ಆಲೋಚನೆಯ ತುತ್ತತುದಿಗೆ ಒಂದು ನಿರ್ಧಾರಕ್ಕೆ ಬಂದಿದ್ದಾನೆ. ಆ ನಿರ್ಧಾರವೆಂತಹುದೊ! ಅದರ ಕಾವು ಹೃದಯವನ್ನೇ ದಹಿಸುತ್ತಿರಬೇಕು. ನಿಟ್ಟುಸಿರು ಅತ್ಯಂತ ಪ್ರಯಾಸದಿಂದ ಹೊರಬೀಳುತ್ತಿದೆ. ಇದನ್ನು ಮುದ್ದಣ "ನಿಟ್ಟುಸಿರ ಕಟ್ಟುಬ್ಬಸದಿಂ" ಎಂದು ಹೇಳಿದ್ದಾನೆ.

ಇಷ್ಟು ಶಬ್ದಗಳ ಕುರಿತು ಚಿಂತಿಸಿದ ಬಳಿಕ ನಮ್ಮ ಊಹೆಗೆ ಸ್ವಲ್ಪ ಕೆಲಸವಿದೆ. ಊಹೆಯೆಂದಾಕ್ಷಣ ಇದು ನೆಲ ಬಿಟ್ಟು ಗಾಳಿಯಲ್ಲಿ ತೇಲುವಂತಹದೇನೂ ಅಲ್ಲ. ರಾಮಾಶ್ವಮೇಧದ ಹಸನಾದ ನೆಲದಿಂದಲೇ ಎಲ್ಲಾ ಸತ್ವವನ್ನೂ ಹೀರಿಕೊಂಡು ಬೆಳೆದ ಬಳ್ಳಿಯ ತುಟ್ಟತುದಿಯಲ್ಲಿ ಬಿರಿದು ಪರಿಮಳಿಸುತ್ತಿರುವ ಕುಸುಮ. ಬೇಹುಗಾರರು ಬಂದು ಅಗಸನ ನುಡಿಯನ್ನು ಹೇಳಿದ ಕೂಡಲೇ ರಾಮನ ಮತಿಯ ಮೇಲೆ ವಜ್ರಾಘಾತವಾಗಿದೆ. ಅದು ಎಷ್ಟು ಬಲವತ್ತರವಾಗಿತ್ತೆಂದರೆ ಅದನ್ನು ಕೇಳಿದ ಕೂಡಲೇ ರಾಮನ ಬಾಯಿಯಿಂದ ಮಾತು ಬಿಟ್ಟು ಒಂದು ಉದ್ಗಾರ ಕೂಡಾ ಹೊರಡುವುದಿಲ್ಲ! ರಾಮ ಬೇಹುಗಾರರನ್ನು

'ಕೈಸನ್ನೆಯಿಂ ಕಳಿಪಿದಂ.' ಅಷ್ಟು ಆಳವಾಗಿತ್ತು ಗಾಯ! ಆ ಬಿರುಗಾಳಿಗೆ ಜ್ಞಾನದ ನಂದಾದೀಪ ನಂದಿಹೋದಂತೆನಿಸುತ್ತದೆ. ಮನದ ಕಣ್ಣು ಮಸುಕುತ್ತದೆ. ಮುಂದೆ ಮೆಲ್ಲಮೆಲ್ಲನೆ ಆ ವಿಚಾರಪರ ಆಳವಾಗಿ ವಿಚಾರಿಸಹತ್ತುತ್ತಾನೆ. ಆ ವಿಚಾರದ ಬೆಳಕಿನಲ್ಲಿ ಆತನಿಗೆ ಅಗಸನೆಂದ ಮಾತು ಅಗಸನೊಬ್ಬನ ಮಾತಾಗಿ ಕಾಣುವುದಿಲ್ಲ. ಅಗಸ ಆ ಮಾತನ್ನೊಂದು ನಾಣ್ಣುಡಿಯಂತೆ ಹೇಳಬೇಕಾದರೆ ಅದು ಬಹು ಜನರ ಬಾಯಿಯಲ್ಲಿ ಬೆಳೆದು ಬಂದಿರಬೇಕು ಎಂದು ಯೋಚಿಸಿದ್ದಾನೆ ರಾಮ. "ಎನ್ನಾಣೆ! ಅಯ್ಯನಾಣೆ! ಪೇಳಿಂ, ಮನ್ನಿಪೆಂ. ಅಲ್ಲದೊಡೆ ನಿಮ್ಮಂ ಶೂಲದ ತುತ್ತತುದಿಯೊಳ್ ಕಾಣ್ಬಿರಿ" ಎಂದು 'ಪುರ್ವಿನ್ ಜರ್ವಿಂ ಗದರೆ' ಮಾತ್ರ ತನ್ನ ಬೇಹುಗಾರರೂ ಯಾರೋ ಆಡಿದ ಈ ಮಾತನ್ನು ಹೇಳಿದರೆಂದ ಮೇಲೆ ಜನರು ಈ ವಿಚಾರವನ್ನು ಬಹಿರಂಗದಲ್ಲಿ ಹೇಗೆ ಆಡಿಯಾರು? ತನಗೆ ತಲಪುವಂತೆ ಆಡುವ ವಿಚಾರವನ್ನಂತೂ ಬಿಟ್ಟು ಬಿಡೋಣ. ಎಂದೇ ಬಹು ಜನರ ಮನದಲ್ಲಿ ಈ ವಿಚಾರವೂ ಕೆಲಜನರ ಬಾಯಿಯಲ್ಲಿ ಈ ಮಾತೂ ಸುತ್ತಿ ಸುಳಿಯುತ್ತಿರಬೇಕು" ಎಂದು ನಿರ್ಧರಿಸಿದ್ದಾನೆ ರಾಮ. ಆದ್ದರಿಂದಲೇ ಇದೇ ಸಂದರ್ಭದಲ್ಲಿ ಇನ್ನೊಂದೆಡೆ ರಾಮ "ಜನರಿಂತು ರೋಡಿಸೆ ಪುದುವಾಳ್ವೆನೆಂತೊ" ಎಂದಿದ್ದಾನೆ ತಮ್ಮಂದಿರೊಡನೆ. ಇಲ್ಲಿ ಆತ "ಅಗಸನಿಂತು ರೋಡಿಸೆ" ಎಂದಿಲ್ಲ.

ರಾಮ ಮೇಲಿನ ನಿರ್ಧಾರಕ್ಕೆ ಬಂದನೆಂದೇ "ರಜಕನೆನ್ನನೇಳಿಸಿದನಿಲ್ಲ ಮಾದಮೆಳ್ಚರಿಸಿದಂ" ಎಂದು ಹೇಳುತ್ತಿದ್ದಾನೆ. ಬಹು ಜನರ ವಿಚಾರಕ್ಕೆ ಒಂದು ಬಾಯಿಯಾಗಿ ಜನಪದದ ಆಶಯ ತನಗೆ ತಲಪುವಂತೆ ಮಹೋಪಕಾರವೆಸಗಿ ತನ್ನನ್ನು ಎಚ್ಚರಿಸಿದ್ದಾನೆ ಈ ಅಗಸ ಎಂದು ಭಾವಿಸಿದ್ದಾನೆ. ಉಳಿದವರಾದರೋ ಅಗಸನ ಮೇಲೆಯೇ ಮುನಿದು ಜೀಳುತ್ತಿದ್ದರೆ ಮುದ್ದಣನ ರಾಮ ಆ ಮಾತಿಗೆ ಕಾರಣವಾದ ತನ್ನ ತಪ್ಪನ್ನೇ ಅರಸುತ್ತಿದ್ದಾನೆ! ಆದರೆ ವಿಮರ್ಶಕರು ಮಾತ್ರ "ಇವನ ಸ್ತ್ರೀಪೀಡಕತನಕ್ಕೆ ಬುಡಬೇರಾದ ಪಾಪಿ ಅಗಸನು ಇವನಿಗೊಬ್ಬ ಗುರು: 'ರಜಕನೆನ್ನನೇಳಿಸಿದನಿಲ್ಲಮಾದಮೆಳ್ಚರಿಸಿದಂ' ಇದೊಂದು ಪ್ರಸ್ತಾವದಲ್ಲಿ ಕವಿ 'ಮರವಟ್ಟ'ನೋ ಎಂದು ಸಂಶಯ"* ಪಟ್ಟಿದ್ದಾರೆ. ವಿಮರ್ಶಕರ ಮಾತೆಂತಿರಲಿ. ರಾಮ ಮೇಲಿನ ನಿರ್ಧಾರಕ್ಕೆ ಬಂದಾಗ ಆತನಿಗೆ ಕಂಡುದೇನು? ಶಾಂತಿ ಸೌಂದರ್ಯಗಳಿಂದ ಕಂಗೊಳಿಸುತ್ತಿದ್ದ ಸೀತೆ ಮತ್ತು ತನ್ನ ಗಗನಚುಂಬಿ ಪ್ರೇಮ ಸೌಧಕ್ಕೆ

*'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಪ್ರಬುದ್ಧ ಕರ್ನಾಟಕದ ಭಾವ ಸಂವತ್ಸರದ ವಿನಾಯಕನ ಸಂಚಿಕೆಯ ಎಸ್. ವಿ ರಂಗಣ್ಣ ಇವರ ಲೇಖನದಿಂದ.

ಜನಾಪವಾದದ ಬರಸಿಡಿಲೆರಗಿರುತ್ತದೆ. ಪ್ರಜಾನಿಷ್ಠ ರಾಜನ ಕಣ್ಣೆದುರು ನೋಡ ನೋಡುತ್ತ ಅಚಿಂತನೀಯವೂ ಅತುಲನೀಯವೂ ಆದ ಆ ಪ್ರೇಮಸೌಧ ಭಸ್ಮೀ ಭೂತವಾಗುತ್ತದೆ. "ರಾಜಾರಾಮ" ಮತ್ತು "ಸೀತಾರಾಮ"ರೊಳಗೆ ನಡೆದ ಹೋರಾಟದಲ್ಲಿ "ರಾಜಾರಾಮ"ನಿಗೇ ಜಯವಾಗಿದೆ. ರಾಜ್ಯ ಮತ್ತು ರಾಜತ್ವ ಇವು ರಾಮನಿಗೆ ವಿಲಾಸ ಸಾಧನಗಳಲ್ಲ. ಅವನೇ ಏಳನೇ ಆಶ್ವಾಸದಲ್ಲೆನ್ನು ವಂತೆ "ರಾಜ್ಯದಿನೇಂ? ಐಸಿರಿಯಿನೇಂ? ಇಂತಿವು ಪೆರರೊಡವೆಯಲ್ತೆ! ಈಗಳಾನುಂ ಪೆರರ್ಗೆ ಮಾರುವೊದೆಂ" ಹೌದು ರಾಜನಾಗಿ ಅವನಿಗೆ ವೈಯಕ್ತಿಕ ವ್ಯಕ್ತಿತ್ವ ವಿಲ್ಲ. ಅವನು ಪ್ರಜೆಗಳಿಗೆ ಸೇರಿದವ. ಪ್ರಜೆಗಳೆಂತು ಆತನ ಶಾಸನಗಳನ್ನು ಪಾಲಿಸಬೇಕೊ ಅಂತೆಯೇ ಆತನೂ ಪ್ರಜೆಗಳ ಇಚ್ಛೆಗಳನ್ನು ನೆರವೇರಿಸಿಕೊಡ ಬೇಕು. ಅವರ ಸುಖ, ತೃಪ್ತಿ, ಶಾಂತಿಗಳಿಗಾಗಿ ತನ್ನನ್ನೇ ಇಲ್ಲವಾಗಿಸಲು ಬದ್ಧನೂ ಸಿದ್ಧನೂ ಆಗಿರಬೇಕು. ಏಕೆಂದರೆ ಇದು ರಾಮರಾಜ್ಯ—ಪ್ರಜಾ ರಾಜ್ಯ! ಇಲ್ಲಿ ಆತ ಧರ್ಮದರ್ಶಿ.

ರಾಮ ಹಿಂದೊಮ್ಮೆ ತನ್ನ ಪಿತನ ವಚನ ಪರಿಪಾಲನೆಗಾಗಿ ರಾಜ್ಯವನ್ನೆ ತೊರೆದಿದ್ದ. ಈಗಲೊ ಆತ ರಾಜನಾಗಿದ್ದಾನೆ. ಬೇಡವೆಂದರೂ ಬಿಡದ, ಬಿಡ ಲಾಗದ ಕಟ್ಟಿನಲ್ಲಿದ್ದಾನೆ. ರಾಜ್ಯವೆಂದರೆ ಆತನಿಗೆ ಬೇಕೆಂದಾಗ ಹಿಡಕೊಳ್ಳುವ ಬೇಡವೆಂದಾಗ ಬಿಡುವ ವಿಲಾಸ ಸಾಧನವಲ್ಲ. ಅದು ಧರ್ಮಬಂಧನ. ಎಂದೇ ಜನಪದದ ಸೇವಕನಾಗಿ ಜನಮನದ ತೃಪ್ತಿಗಾಗಿ ತನ್ನ ಪ್ರೀತಿ, ಸುಖ, ಶಾಂತಿ ಸರ್ವಸ್ವವನ್ನೂ ತೊರೆಯುವ ನಿರ್ಧಾರ ಮಾಡಿದ್ದಾನೆ! ಸೀತೆಯನ್ನು ತೊರೆವು ದೆಂದು ನಿರ್ಧರಿಸಿದ್ದಾನೆ! ಈ ನಿರ್ಧಾರವಾದ ಬಳಿಕ ರಾಮ ತನ್ನ ವೈಯಕ್ತಿಕ ಮೋಹ ಮಮತೆಗಳ, ಸತಿಯಮೇಲಣ ಪ್ರೇಮ ಕರುಣೆಗಳ ಮೇಲೆ ರಾಜನ ಕರ್ತವ್ಯದ ತೆರೆ ಎಳೆದಿದ್ದಾನೆ. ಆ ತೆರೆಯ ಮುಂದೆ ನಿಂತು ಮುಂದಿನ ಕರ್ತವ್ಯದ ಕಥಾ ಭಾಗವನ್ನು ಅಭಿನಯಿಸಲು ಸಿದ್ಧನಾಗಿದ್ದಾನೆ. ಈ ತೆರೆಯ ಮುಂದೆ ನಿಂತು ರಾಮನು ಏನನ್ನು ಆಡಿದನೊ, ಅಭಿನಯಿಸಿದನೊ ಅದು ಕಲಿತುದೂ ಅಲ್ಲ! ಕಲಿಸಿಕೊಟ್ಟುದೂ ಅಲ್ಲ! ಅದು ಧರ್ಮಸಂಕಟದ ಮಹಾಹೋರಾಟ ವೊಂದರಿಂದ ಕ್ಷತವಿಕ್ಷತ ಹೃದಯಿಯಾದ ವ್ಯಕ್ತಿಯೋರ್ವನ ಬಹಿರಂಗದ ಚಿತ್ರ ಮಾತ್ರ! ಸುಳ್ಳನ್ನೇ ಆಡಲರಿಯದ ಬಾಲಕನೊಬ್ಬ ಒಂದು ಸುಳ್ಳು ಆಡಹೋಗಿ ಮುಗ್ಗರಿಸಿ ಬಿದ್ದು ಆ ಒಂದು ಸುಳ್ಳನ್ನು ಆಧರಿಸಿ ನಿಲ್ಲಿಸಲು ನೂರು ಸುಳ್ಳು ಗಳನ್ನು ಆಡುತ್ತಿರುವಂತಹ ಕರುಣಾಪೂರ್ಣ ದೃಶ್ಯವಿದು ರಾಮನದು! ಆದರೂ

ಕೆಲವು ಬಾರಿ ಸತ್ಯ ತೆರೆಯನ್ನು ಸರಿಸಿ ಹೊರತಲೆಹಾಕುತ್ತಿದೆ. ಆಗಲೆಲ್ಲ ರಾಮ ಅದನ್ನು ಬಲಾತ್ಕಾರವಾಗಿ ಒಳನೂಕಿದ್ದು ಕಂಡುಬರುತ್ತದೆ!

ಹೀಗೆ ರಾಮ ಇಲ್ಲಿ ಸೀತೆಯ ಕುರಿತು ಆಡಿದ ಮಾತುಗಳು ತಾನು ರಾಜನ ಕರ್ತವ್ಯದಿಂದ ಚ್ಯುತನಾಗದಂತೆ ಮಾಡಲು ನುಂಗಿದ ವಿಷದ ಗುಳಿಗೆಗಳು! ಅವಾದರೂ ಆತನ ಕರುಳನ್ನೇ ಕೊರೆದು ತಿನ್ನುತ್ತಿವೆ. ಭರತ ವಿನೀತನಾಗಿ ಸೀತೆಯ ಪರಿಪೂತತೆಯ ಕುರಿತು ಹೇಳಿದಾಗ "ತಮ್ಮ! ಕೆಮ್ಮನಿರ್" ಎಂದು ತಡೆದಿದ್ದಾನೆ, ಆತ ಮುಂದೆ ಮಾತಾಡಿದರೆ ಎಲ್ಲಿ ತನ್ನ ದೌರ್ಬಲ್ಯವು ಹೊರಹೊಮ್ಮಿ ಕರ್ತವ್ಯವು ಕೊಚ್ಚಿಹೋದೀತೊ ಎಂಬ ಹೆದರಿಕೆಯಿಂದ! ಅದೇ ಶತ್ರುಘ್ನನು ತನ್ನ ಬೇಡಿಕೆಯ ಕೈಗಳಿಂದ ರಾಮನ ಅಂತರಂಗದ ಕರ್ತವ್ಯದ ತೆರೆಯನ್ನು ಮೆಲ್ಲನೆ ಸರಿಸಿದನೊ ಎಂತಹ ಸುಂದರ ದೃಶ್ಯ! ಎಲ್ಲಿ ಹೋಯಿತು ಆ ಕಟು ಮಾತುಗಳು! ಎಲ್ಲಿ ಹೋಯಿತು ಆ ಸಂದೇಹ ಸಂದೋಹಗಳು! "ಬಲ್ಲೆಂ ಬಲ್ಲೆ ನವಳಯೋನಿಜೆಯೆಂಬುದಂ; ಪಾವನೆಯೆಂಬುದಂ; ಪುಣ್ಯಶ್ಲೋಕೆಯೆಂಬುದಂ" ಎಂದು ಉದ್ಗರಿಸುತ್ತಿದೆ ರಾಮನ ಹೃದಯ! ಒಂದು ಗಳಿಗೆ ತೂಕಡಿಸಿದ ರಾಜನು ಫಕ್ಕನೆ ಎಚ್ಚತ್ತಿದ್ದಾನೆ. ಓ! ತಡೆದರೂ ತಡೆಯಲಾಗದೆ ದೌರ್ಬಲ್ಯವು ಮುನ್ನುಗ್ಗುತ್ತಿದೆಯಲ್ಲಾ ಕರ್ತವ್ಯವು ಕೊಚ್ಚಿಹೋದರೇನು ಗತಿ! ತೆರೆ ಪುನಃ ಬಿದ್ದಿದೆ! ಮಾತು ಕಹಿಯಾಗಿದೆ. "ಆದೊಡವಿಾಗಳೆನ್ನಳವಲು; ತೆಗಳ್ಗೆ ಮಾರುವೋದೆಂ ಜನರಿಂತು ರೋಡಿಸೆ ಪುದುವಾಳ್ವೆನೆಂತೊ" ಎಂದಿದ್ದಾನೆ. ಇನ್ನು ತಮ್ಮಂದಿರು ಸೀತೆಯ ಕುರಿತು ಮಾತಾಡಿದರೂ ತಾನು ಕರ್ತವ್ಯಚ್ಯುತನಾಗುವುದೇ ಖಂಡಿತ. ಸೀತೆಯ ಪ್ರೀತಿ ಅಷ್ಟು ಬಲವತ್ತರವಾಗಿದೆ. ಆದುದರಿಂದ ಇನ್ನು ತಮ್ಮಂದಿರನ್ನು ಮಾತಾಡಗೊಡಬಾರದು. ಅದಕ್ಕಾಗಿಯೇ "ಎನ್ನಂ ನಿರ್ನಿಮಿತ್ತದಿಂ ತಡೆಯದೆ ಯಥೇಷ್ಟಂ ಪೋಗಿಮೆಂದುಂ ಮಾಣೆ ನಿರ್ಮೋಕ ನಿರ್ಮುಕ್ತ ನಿರ್ಮಲನಪ್ಪ ಫಣಿಯೆಂತಂತೀ ಸೀತೆಯಂ ತೊರೆದೇ ಸೊಗಂ ಬಾಳ್ವೆನಿದು ಸಿದ್ಧಂ" ಎಂದು 'ದುಗುಡದೊಂದು ಕಾಯ್ಪಿಂ ಜಡಿದು ನುಡಿ'ದಿದ್ದಾನೆ ರಾಮ.

ಭರತನು ಸೀತೆಯ ಪಾವಿತ್ರ್ಯದ ಕುರಿತು ಹೇಳಿದಾಗ ರಾಮ ಉತ್ತರಿಸಿದ್ದಾನೆ "ತಮ್ಮ! ಕೆಮ್ಮನಿರ್; ನೀನರಿಯಯ್. ಧರ್ಮಮಂತುಟು. ಅಪವಾದಂ ಪೊರ್ದಿದಿಂಬಳಿಯುಂ ದೂಷಿತೆಯಾದೀಮಡದಿಯಂ ಬಿಟ್ಟಲ್ಲದೆ ಮಾಣೆಂ'. ಇಲ್ಲಿ "ಧರ್ಮಮಂತುಟು" ಎಂದು ಯಾವ ಧರ್ಮದ ಕುರಿತು ಹೇಳಿದ್ದಾನೆ? ಸೀತೆಯ ಪಾವಿತ್ರ್ಯವನ್ನವನಿಲ್ಲಿ ಅಲ್ಲಗಳೆಯುತ್ತಿಲ್ಲ. ಆದರೆ ತಾನೀಗ ಸೀತೆಯ ಪತಿ,

ಭರತಾದಿಗಳ ಅಣ್ಣ, ಕೌಸಲ್ಯಾದಿಗಳ ಮಗ ಮಾತ್ರ ಅಲ್ಲ. ಅದಕ್ಕಿಂತ ಸಹಸ್ರ ಪಾಲು ಹೆಚ್ಚು ಸಾಮ್ರಾಜ್ಯದ ರಾಜ—ಪ್ರಜಾಕೋಟಿಯ ಸೇವಕ. ಪ್ರಜಾರಂಜನೆಯೇ ರಾಜನ ಧರ್ಮ. ಅದನ್ನು ನಾನು ಪೂರೈಸದಿರಲು ಸಾಧ್ಯವೇ ಇಲ್ಲ. ಇದನ್ನೇ "ಧರ್ಮ ಮಂತುಟು" ಎಂಬಲ್ಲಿ ತಿಳಿಸಿದ್ದಲ್ಲವೆ?

"ಸೀತೆಯಂ ತೊರೆದೆ ಸೊಗಂ ಬಾಳ್ವೆನಿದು ಸಿದ್ಧಂ" ಎಂಬ ಈ ಮಾತಿನ ಮೇಲೆ ಕಟುವಾದ ವಿಮರ್ಶೆ ಬಂದಿದೆ. "'ಸೊಗಂ ಬಾಳ್ವೆಂ' ಎಂಬುದರಿಂದ ಮುದ್ದಣನ ರಾಮ ಧಡೀರೆಂದು ಕೆಳಗುರುಳುವನು; ಪುನಃ ಮೇಲಕ್ಕೆ ಏಳಲಾರ"* ಎಂದಿದ್ದಾರೆ ವಿಮರ್ಶಕರು. 'ಸೊಗಂ ಬಾಳ್ವೆಂ" ಎಂಬುದು ರಾಮ ತನ್ನ ವೈಯಕ್ತಿಕ ಬಾಳಿಗೆ ಅನ್ವಯಿಸಿ ಹೇಳಿದ ಮಾತೇನು? "ಸೊಗಂ ಬಾಳ್ವೆಂ" ಎಂಬ ಮಾತನ್ನು ರಾಮ "ದುಗುಡದೊಂದು ಕಾಯ್ಪಿಂ ಜಡಿದು ನುಡಿ"ದಿದ್ದಾನೆಂದು ಕವಿ ಹೇಳಿದ್ದಾನೆ. ಅದರ ಅರ್ಥವೇನು? ಸೀತಾ ಸಮೇತನಾಗಿ ನಾನು ಬಾಳುವುದು ಪ್ರಜೆಗಳಿಗೆ ಸೊಗಂ—ಚೆಲುವು—ಆಗಿ ಕಾಣುತ್ತಿಲ್ಲವಾದರೆ ಅವಳನ್ನು ತೊರೆದೇ ಪ್ರಜೆಗಳಿಗೆ ಚೆಲುವಾಗಿ ಬಾಳುತ್ತೇನೆ ಎಂದ ದುಃಖೋದ್ವೇಗದ ಮಾತು ಮಾತ್ರ ಇದು. ಅದು ಬಿಟ್ಟು "ಸೊಗಂ ಬಾಳ್ವೆಂ" ಎಂಬುದನ್ನು ರಾಮ ತನ್ನ ವೈಯಕ್ತಿಕ ಬಾಳಿಗೇ ಅನ್ವಯಿಸಿ ಹೇಳಿದನೆನ್ನುವುದಾದರೆ ನಾಲ್ಕು ಮತ್ತು ಏಳನೇ ಆಶ್ವಾಸಗಳಲ್ಲಿ ಬರುವ ರಾಮನಿಗೂ ಸೀತಾಪರಿತ್ಯಾಗದ ರಾಮನಿಗೂ ಯಾವೂರ ಸಂಬಂಧ? ಏಳನೇ ಆಶ್ವಾಸದಲ್ಲಂತೂ ಆತನ ಸೊಗಸು ಅಳಿದು, ಸಂತಸ ಕಳೆದು, ಕೆಳತನವುಳಿದು, ನಾಡು ಕಾಡಾಗಿ, ಮನೆ ಮಸಣವಾಗಿ ಬಾಳೇ ಸಾವಾಗಿದೆಯಲ್ಲಾ! ಸೀತೆಯನ್ನು ತೊರೆದ ರಾಮನ ದುಃಖ ಎಷ್ಟು ಪರಮಾವಧಿಗೇರಿತ್ತೆಂದರೆ "ಇಂತಿದು ಕಣಾ! ಸೋದರರಂ ಸೊಮ್ಮುಗಿಡಿಸಿದುದು, ಅಗಸ್ತ್ಯನಂ ನೆಲೆದಪ್ಪಿಸಿದುದು." ಈ ಸ್ಥಿತಿಯೆ ಏನು ರಾಮ ಸೀತೆಯನ್ನುಳಿದು "ಸೊಗಂ ಬಾಳ್ವ" ರೀತಿ? ಎಂದೇ ರಾಮ ತನ್ನ ವೈಯಕ್ತಿಕ ಬಾಳಿಗೆ ಅನ್ವಯಿಸಿ ಈ ಮಾತನ್ನುಹೇಳಿರದೆ ಸೀತೆಯನ್ನು ತೊರೆದು ಪ್ರಜಾಜನರಿಗೆ ಚೆಲುವಾಗಿ ಪ್ರಿಯವಾಗಿ ಬಾಳುತ್ತೇನೆ ಎಂದೇ ಹೇಳಿರುತ್ತಾನೆ ಎಂಬುದು ಸ್ಪಷ್ಟ.

"ನಿರ್ಮೋಕನಿರ್ಮುಕ್ತನಿರ್ಮಲನಪ್ಪ ಫಣಿಯೆಂತಂತೀಸೀತೆಯಂ ತೊರೆದೇ ಸೊಗಂ ಬಾಳ್ವೆನಿದು ಸಿದ್ಧಂ" ಎನ್ನುವ ರಾಮನ ಮಾತಿನ ಕುರಿತು "ಸೀತಾದೇವಿ

*"ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಪ್ರಬುದ್ಧ ಕರ್ನಾಟಕ ಭಾವ ಸಂವತ್ಸರದ ವಿನಾಯಕನ ಸಂಚಿಕೆಯ ಎಸ್. ವಿ. ರಂಗಣ್ಣ ಇವರ ಲೇಖನದಿಂದ.

ಯನ್ನು ಹಾವಿನ ಪರಿಗೆ ಹೋಲಿಸುವಲ್ಲಿ ತನ್ನ ಸರ್ಪಜಾತಿಯನ್ನಾದರೂ ಒಪ್ಪಿಕೊಂಡಿದ್ದಾನೆ"* ರಾಮ ಎಂದಿದ್ದಾರೆ ಇನ್ನೊಬ್ಬ ವಿಮರ್ಶಕರು. ಈ ವಿಚಾರದಲ್ಲಿ ಮುದ್ದಣನ ರಾಮನ ಜೊತೆಗೆ ಲಕ್ಷ್ಮೀಶನ ರಾಮನೂ ಇದ್ದಾನೆ ಎಂಬುದನ್ನು ನಾವು ಮರೆಯಲಾಗದು. ಅಲ್ಲದೆ ಮಹಾಪುರುಷರ ಮನಸ್ಸಿನ ಏರಿಳಿತಗಳನ್ನು ಅರಿಯಲು ನಮಗೆಲ್ಲಿ ಸಾಧ್ಯ ಎನ್ನುತ್ತಾನೆ ಭವಭೂತಿ—

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ
ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ

ಲೋಕೋತ್ತರ ಪುರುಷರು ವಜ್ರದಂತೆ ಕಠೋರರೂ ಆಗಬಲ್ಲರು. ಕುಸುಮದಂತೆ ಕೋಮಲರೂ ಆಗಬಲ್ಲರು. ಅವರ ಮನಸ್ಸಿನ ಸ್ವರೂಪವನ್ನು ತಿಳಿಯಲು ಯಾರು ಶಕ್ತರು? ನಿಜ. ಮಹಾಪುರುಷರ ಮನಸ್ಸಿನ ಗತಿ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಏರಿಳಿತಗಳನ್ನು ಕಾಣಬೇಕೆಂದು ನಿಮ್ಮಿಂದ ನಿರ್ಧರಿಸಲಸಾಧ್ಯ. ಈ ಸಂದರ್ಭದಲ್ಲಿ ಮುದ್ದಣನ ರಾಮ ಮಾತ್ರ ಇಂತಹ ಮಾತನ್ನು ಆಡಿದ್ದಲ್ಲ ಕಾಳಿದಾಸನಂತಹ ಜಗದ್ವಿಖ್ಯಾತ ಮಹಾಕವಿಯ ರಾಮನೂ ಇಂತಹದೇ ಮಾತನ್ನು ಆಡುತ್ತಾನೆ! ಕಾಳಿದಾಸನ ರಘುವಂಶದಲ್ಲಿ ಸೀತಾಪರಿತ್ಯಾಗದ ಈ ಸಂದರ್ಭದಲ್ಲೇ ಶ್ರೀರಾಮನು ಆಡುವ ಮಾತೊಂದಿದೆ—

"ರಕ್ಷೋವಧಾಂತೋ ನ ಚ ಮೇ ಪ್ರಯಾಸೋ ವ್ಯರ್ಥಃ ಸ
ವೈರಪ್ರತಿಮೋಚನಾಯ
ಅಮರ್ಷಣಃ ಶೋಣಿತಕಾಂಕ್ಷಯಾ ಕಿಂ ಪದಾ ಸ್ಪೃಶಂತಂ ದಶತಿ
ದ್ವಿಜಿಹ್ವಃ ॥ ಸರ್ಗ ೧೪ ಶ್ಲೋಕ ೪೧

'ತನ್ನನ್ನು ತುಳಿದವರನ್ನು ಸರ್ವಥಾ ಕ್ಷಮಿಸದ ಸ್ವಭಾವವುಳ್ಳ ಸರ್ಪವು ರಕ್ತದ ಅಪೇಕ್ಷೆಯಿಂದ ಕಚ್ಚುವುದಲ್ಲ. ಅಂತೆಯೇ ರಾಕ್ಷಸರನ್ನು ಕೊಂದಂತಹ ನನ್ನ ಶ್ರಮವು ವ್ಯರ್ಥವಲ್ಲ; ಅದು ವೈರವನ್ನು ತೀರಿಸುವ ಸಲುವಾಗಿ.' ಹೀಗೆ ರಾಮನ ಮನಸ್ಸನ್ನು ಮಹಾಕವಿ ಕಾಳಿದಾಸನೇ ಹಾವಿಗೆ ಹೋಲಿಸಿ ಚಿತ್ರಿಸಿರುವಾಗ ಕನ್ನಡದ ಮುದ್ದುಕವಿ ಮುದ್ದಣ "ನಿರ್ಮೋಕನಿರ್ಮುಕ್ತನಿರ್ಮಲನಪ್ಪ ಫಣಿಯೆಂತಂತೆ' ಎಂದುದರಲ್ಲಿ ಯಾವ ಕೊರತೆ ಕಾಣುತ್ತಿದೆಯೋ ನಾವು ಬೇರೆ

*"ಸಾಹಿತ್ಯ—ಸಮೀಕ್ಷೆ" ಪುಸ್ತಕದ "ಮುದ್ದಣನ ಸೀತಾಪರಿತ್ಯಾಗದ ಕಥೆ" ಎಂಬ ಲೇಖನದಲ್ಲಿ ಪ್ರೊ. ರಾ. ಯು. ಧಾರವಾಡಕರ ಎಂ. ಎ. ಅವರು.

ಕಾಣೆವು! ಎಂದೇ ಇಲ್ಲಿ ಮುಖ್ಯವಾಗಿ ಕವಿ ಯಾವ ಭಾವವನ್ನು ವ್ಯಕ್ತಪಡಿಸಲು ರಾಮನ ಬಾಯಿಯಿಂದ ಈ ಮಾತುಗಳನ್ನು ಹೊರಡಿಸಿದ ಎಂಬುದನ್ನು ನೋಡಬೇಕು. ಪರೆ ಹಾವಿನ ದೇಹದ ಒಂದು ಭಾಗ. ಹಾಗೆಯೆ ಸೀತೆಯೆಂದರೂ ನನ್ನ ಬಾಳಿನ ಒಂದು ಅವಿಭಾಜ್ಯ ಅಂಗ. ಪ್ರಜೆಗಳು ನನ್ನ ದೇಹದ್ದೇ ಒಂದು ಭಾಗದಂತಿರುವ, ಬಾಳಿನ ಅರ್ಧಾಂಗಿ ಸೀತೆಯನ್ನು ತೊರೆದೇ ನಾನು ಬಾಳಬೇಕೆಂದು ಬಯಸುತ್ತಿದ್ದರೆ, ನಾನು ನನ್ನ ವೈಯಕ್ತಿಕ ಬಾಳಿನ ಸುಖವನ್ನು ಕ್ಷುಲ್ಲಕವೆಂದೆನಿಸಿ ಪ್ರಜೆಗಳಿಗಾಗಿ ಹಾಗೆ ಮಾಡಲೂ ಸಿದ್ಧ! ಹಾಗಾದರೂ ನಾನು ಪ್ರಜೆಗಳಿಗೆ "ಸೊಗಂ" ಆಗಿ—ಚೆಲುವಾಗಿ—ಬಾಳುತ್ತೇನೆ. ಇದಿಷ್ಟೇ ಅಲ್ಲವೇನು ರಾಮನ ಮೇಲಿನ ಮಾತಿನ ಅರ್ಥ?

ಹೀಗೆ ಸೀತೆಯನ್ನು ಬಿಟ್ಟೇ ತೀರುತ್ತೇನೆ ಎಂದು ತಮ್ಮಂದಿರೊಡನೆ ಜಡಿದು ನುಡಿದ "ರಾವಣಾರಿ ಬಾಗುಳೊಂದು ಬಿಗುರ್ಪಿಂ ತಲೆ ತಿಣ್ಣಮಾಗೆ ಕೆಕ್ಕೆಯಂ ಕರತಲದೊಳೂರಿಯುಂ ಕರತಲಮಸಿದು ಬಳ್ಕೆ ಅಂಕದೊಳಿಟ್ಟುಮಂಕಂ ಕದಕ್ಕದಿಸೆ ನೆಲನೊಳ್ ಧರಿಸಿಯುಂ ನೆಲಂ ನೆಲದಪ್ಪ ತಾನೆ ತಲೆಮುಟ್ಟುಂ ಕಂಬನಿಗರೆಯು"ತ್ತಿದ್ದಾನೆ. ರಾಮ ಸೀತೆಯನ್ನು ಅಪವಿತ್ರಳು ಎಂದು ಭಾವಿಸಿದ್ದರೆ, ತನ್ನ ಎದೆಯ ನಿರಿವ ಕತ್ತಿಯೆಂದು ಬಗೆದಿದ್ದರೆ, ಬತ್ತದ ಗದ್ದೆಯಲ್ಲಿ ಬೆಳೆದ ಕಳೆಯೆಂದು ಯೋಚಿಸಿದ್ದರೆ ಸೀತೆಯನ್ನು ಬಿಟ್ಟೇತೀರುತ್ತೇನೆಂದು ಜಡಿದು ನುಡಿದ ರಾಮನಿಗೆ ದುಃಖದ ಈ ಪರಮೋನ್ನತಿಯೇಕೆ? ಪರಿಸ್ಥಿತಿ ಹೀಗಿದ್ದೂ ರಾಮನಿಗೆ "ಯಾತನಾ ಮಾರಿಯ 'ಆ' ಎಂದಿರುವ ಬಾಯಿಗೆ ದುರದೃಷ್ಟವು ನೂಕುತ್ತಿರುವ ಆ ಅಬಲೆ ಗರ್ಭಿಣಿ ಸೀತೆಯ ಪರವಾಗಿ ಕರುಳು ಹೊರಳಲೇ ಬೇಡವೇ?"* ಎಂದು ಹಿರಿಯರೊಬ್ಬರು ಹೇಳಿದರೆಂದು ನಾವು ನಂಬಬೇಕೆ? "ರಾಮನ ಬಗೆಗಿರುವ ಅಭಿಮಾನವು ಕೆಳಗಿಳಿಯುತ್ತದೆ"† ಎಂದು ವಿಮರ್ಶಕರೊಬ್ಬರು ಬರೆದರೆಂದು ನಾವು ಒಪ್ಪಬೇಕೆ?

ವಿಮರ್ಶಕರೊಬ್ಬರು "ಶ್ರೀರಾಮಚಂದ್ರನು ನಿಜವಾದ ಕರ್ತವ್ಯ ಪರಿಪಾಲಕನಾಗಿದ್ದರೆ ಸೀತಾದೇವಿಯನ್ನು ಕರೆದು ಹೇಳಿ ಆ ರೀತಿ ಬಿಡಬಹುದಾಗಿತ್ತಲ್ಲವೆ? ಇದರಿಂದ ಅವನ ಚಾರಿತ್ರ್ಯವೂ ಉದಾತ್ತವಾಗುತ್ತಿತ್ತು. ಆದರ್ಶ ರಾಜ್ಞಿಯಾಗಿದ್ದ ಸೀತಾದೇವಿಯ ಮನಸ್ಸೂ ಬಹುಶಃ ಸಮಾಧಾನ ಹೊಂದುತ್ತಿತ್ತು. ಆದರೆ ಮುದ್ದಣನ ರಾಮಚಂದ್ರನು ಹಾಗೆ ಮಾಡದೆ ಹೇಡಿಯಂತೆ ಬೆನ್ನಲ್ಲಿ ಇರಿದು

*ಪ್ರಬುದ್ಧ ಕರ್ನಾಟಕದ ಭಾವ ಸಂವತ್ಸರದ ವಿನಾಯಕನ ಸಂಚಿಕೆಯಲ್ಲಿ ಶ್ರೀ ಎಸ್. ವಿ. ರಂಗಣ್ಣ ಅವರು ಬರೆದ "ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಎಂಬ ಲೇಖನದಲ್ಲಿ.

'ಸಂದಿಯನ್ನು' ಸೇರುತ್ತಾನೆ"† ಎಂದಿದ್ದಾರೆ. ಆದರೆ ಹೀಗೆ 'ಹೇಡಿಯಂತೆ ಬೆನ್ನಲ್ಲಿ ಇರಿದು 'ಸಂದಿಯನ್ನು' ಸೇರುವವರಲ್ಲಿ' ಮುದ್ದಣನ ರಾಮನ ಜೊತೆಗೆ ಲಕ್ಷ್ಮೀಶನ ರಾಮನೂ ಸೇರಿದ್ದಾನೆ ಎಂಬುದನ್ನು ವಿಮರ್ಶಕರು ಮರೆತಿದ್ದರೋ ಏನೋ! ಈ ಕಥಾ ಭಾಗದಲ್ಲಿ ಮುದ್ದಣನು ಲಕ್ಷ್ಮೀಶನನ್ನು ಅನುಸರಿಸಲಿಕ್ಕೆ ಕಾರಣವಿತ್ತು. ಮೂಲ ರಾಮಾಯಣದಲ್ಲಿ ಇರುವಂತಿಲ್ಲದ, ಸೀತೆಯನ್ನು ಘೋರ ಕಾನನದಲ್ಲಿ ಬಿಟ್ಟು ಬಿಡುವಂತಹ ಈ ಭಾಗದಿಂದಾಗಿ ಸೀತೆಯ ಕುರಿತು ಓದುಗರ ಅನುಕಂಪ ಇನ್ನಷ್ಟು ಹೆಚ್ಚಾಗುತ್ತದೆ. ಸೀತೆಯನ್ನು ವಾಲ್ಮೀಕಿಯ ಆಶ್ರಮದ ಹತ್ತಿರ ಬಿಡದೆ ಘೋರಕಾನನದಲ್ಲಿ ಬಿಡುವಂತೆ ರಾಮ ಹೇಳುವದರಿಂದ ಕಾವ್ಯದಲ್ಲಿ ನಾಟಕೀಯತೆಯೂ ಸೇರಿ ಓದುಗರ ಕುತೂಹಲ ಜಾಗೃತವಾಗಿರುತ್ತದೆ. 'ಮುಂದೇನು? ಮುಂದೇನು?' ಎಂದು ತಿಳಿಯಲು ಅವರು ತುದಿಗಾಲ ಮೇಲೆ ನಿಂತಿರುವಂತಾಗುತ್ತದೆ! ದಡಕಾಣದ ಸೀತೆಯ ದುಃಖದ ಮೇಲೆ ದಟ್ಟನೆಯ ಕರಿನೆಳಲು ಬಿದ್ದು, ಸೀತೆ ಅರಮನೆಯಿಂದ ಹೊರಟು ಆಶ್ರಮವನ್ನು ಸೇರುವ ವರೆಗೆ ಓದುಗರ ಹೃದಯ ಭಾವ ಪ್ರಖರತೆಯಿಂದ ಸುಡುತ್ತಿರುತ್ತದೆ! ಓದುಗರನ್ನು ತನ್ನ ಪ್ರತಿಭಾಶಕ್ತಿಯಿಂದ ತನ್ನಿಚ್ಛೆ ಬಂದಂತೆ ಕುಣಿಸುವುದರಲ್ಲಿ ಮೊದಲೇ ಕುತೂಹಲಿಯಾದ ಕವಿ ಇಂತಹ ಒಂದು ಕಥಾ ಸಂವಿಧಾನ ಸಿಕ್ಕರೆ ಬಿಟ್ಟಾನೇ? ಎಂದೇ ಇದಿಷ್ಟು ಭಾಗವನ್ನು ಆತ ಲಕ್ಷ್ಮೀಶನಿಂದ ಆರಿಸಿಕೊಂಡಿದ್ದಾನೆ. ಇನ್ನು 'ಸೀತೆಯನ್ನು ಕರೆದು ಹೇಳಿ ಬಿಡುವ' ಕುರಿತು. ವಿಮರ್ಶಕರು ಇಲ್ಲಿ ಹೇಳಿರುವಂತಹ 'ಮಹತ್ತರವಾದ' ಕೆಲಸವನ್ನು ಪ್ರಪಂಚದ ಯಾವ ರಾಮನೂ ಮಾಡಲಿಲ್ಲ! ವಾಲ್ಮೀಕಿಯ ರಾಮನಾಗಲೀ, ಕಾಳಿದಾಸನ ರಾಮನಾಗಲೀ, ಭವಭೂತಿಯ ರಾಮನಾಗಲೀ ಮಾಡದಂತಹ 'ಮಹತ್ಕಾರ್ಯ'ವನ್ನು ಮುದ್ದಣನ ರಾಮ ಮಾಡಬೇಕಿತ್ತು ಎಂದು ವಿಮರ್ಶಕರು ಆಶೆ ಪಡುತ್ತಾರೆಯೇ? ನಿಜ, ಪುರಾಣದ ವ್ಯಕ್ತಿಗಳನ್ನೂ ಘಟನೆಗಳನ್ನೂ ತಮ್ಮಿಚ್ಛೆ ಬಂದಂತೆ ಬದಲಾಯಿಸಿಕೊಂಡು ಬರೆಯುವ ಕ್ರಮವಿಲ್ಲವೆಂದಲ್ಲ. ಪುರಾಣ ವ್ಯಕ್ತಿಗಳಲ್ಲಿದ್ದ ಕೆಡುಕನ್ನು ಕಳೆದು, ಮಲಿನತೆಯನ್ನು ತೊಳೆದು 'ಒಳ್ಳೆಯವರ'ನ್ನಾಗಿ ಚಿತ್ರಿಸುವುದು ಒಂದು "ಫ್ಯಾಶನ್." ಈ ದೃಷ್ಟಿಯಿಂದ ಮುದ್ದಣ ಬದಲಾವಣೆ ಮಾಡಬೇಕಿತ್ತೆಂದು ಬಯಸುವುದು ತಪ್ಪಲ್ಲ. ಈ ದೃಷ್ಟಿಯಿಂದ ನೋಡಿದರೂ ವಿಮರ್ಶಕರೆಂದಂತೆ ಬದಲಾವಣೆ ಮಾಡುತ್ತಿದ್ದರೆ

---

†"ಸಾಹಿತ್ಯ–ಸಮೀಕ್ಷೆ" ಪುಸ್ತಕದಲ್ಲಿ "ಮುದ್ದಣನ ಸೀತಾಪರಿತ್ಯಾಗದ ಕಥೆ" ಎಂಬ ಪ್ರೊ. ರಾ. ಯು. ಧಾರವಾಡಕರ ಎಂ. ಎ. ಅವರ ಲೇಖನದಲ್ಲಿ.

ಅದರಲ್ಲಿ ಕಾವ್ಯಗುಣವೇ ಅಳಿಯುತ್ತಿತ್ತೋ ಏನೊ (?)! ರಾಮ ಸೀತೆಯನ್ನು ಕರೆದು ಹೇಳಿ ಆ ರೀತಿ ಬಿಡುತ್ತಿದ್ದರೆ ಆ ರಾಮನನ್ನು ನಾವಂತೂ ಕರ್ತವ್ಯದ ಹೃದಯ ಶೂನ್ಯ ಕಲ್ಲುಬೊಂಬೆ ಎನ್ನುತ್ತಿದ್ದೆವು! ಮಾತ್ರವಲ್ಲ ಅದು ಹಿಂದು ಮುಂದಿನ ಆಶ್ವಾಸ ಗಳಲ್ಲಿ ಬರುವ ಮುದ್ದಣನ ರಾಮನ ಚಿತ್ರಕ್ಕೆ ಹೊಂದಿಕೊಳ್ಳದೆ ಹೋಗುತ್ತಿತ್ತು. ಇಲ್ಲಿ ಕವಿಗಳೆಲ್ಲ ರಾಮ ಸೀತೆಯನ್ನು ಕಾಣಲೇ ಇಲ್ಲ ಎಂದು ಮಾಡಿ, ಸೀತೆಯ ಕುರಿತು ರಾಮನಿಗಿರುವ ಪ್ರೇಮದ ಆಳದ ಪರಮಾವಧಿಯನ್ನು ತೋರಿಸಿದ್ದಾರೆ ಎಂದು ನಮ್ಮ ಅಭಿಪ್ರಾಯ. ಸೀತೆಯ ಕುರಿತು ತಮ್ಮಂದಿರ ಕೆಲಮಾತುಗಳಿಂದಲೇ ರಾಮನ ಕರ್ತವ್ಯದ ಕಲ್ಲುಗೋಪುರವು ಕೊರೆಯ ತೊಡಗಿತ್ತೆಂದರೆ ಸೀತೆಯೇ ಎದುರು ನಿಂತಿದ್ದರೆ ಏನಾಗುತ್ತಿತ್ತು? ಪ್ರೀತಿಯು ಮಹಾಪೂರವಾಗಿ ಹರಿದು ಕರ್ತವ್ಯದ ಕಲ್ಲುಗೋಪುರವು ಕುಸಿದು, ಕೊಚ್ಚಿ ಹೋಗುತ್ತಿತ್ತು. ಎಂದೇ ರಾಮ ಸೀತೆಯನ್ನು ಕಾಣುವ ಎದೆಗಾರಿಕೆ ತೋರಿಸಿಲ್ಲ. ಇದು ರಾಮನ ಹೇಡಿ ತನವೇನೂ ಅಲ್ಲ. ರಾಮನಲ್ಲಿ "ರಾಜಾರಾಮ"ನೂ "ಸೀತಾರಾಮ"ನೂ ಸಮಬಲರಾಗಿದ್ದರೆಂಬುದನ್ನಷ್ಟೆ ತೋರಿಸುತ್ತದೆ! 'ಸೀತೆಯನ್ನು ಕರೆದು ಹೇಳಿ ಆ ರೀತಿ ಬಿಡುತ್ತಿದ್ದರೆ ಸೀತೆಯ ಮನಸ್ಸೂ ಬಹುಶಃ ಸಮಾಧಾನ ಹೊಂದುತ್ತಿತ್ತು' ಎಂದಿದ್ದಾರಲ್ಲಾ ವಿಮರ್ಶಕರು. ಇದಂತೂ ಅಭಿಪ್ರಾಯ ಭೇದದ ವಿಚಾರ. ಸೀತೆಯನ್ನು ಕಂಡು ಹೇಳಿ ಕಳುಹಲಿಲ್ಲ ಎಂಬುದರಿಂದ ಸೀತೆಯ ಮನಸ್ಸಿಗೇ ಒಂದು ಸಮಾಧಾನ! ರಾಮನಿಗಂತೂ ಇದರಿಂದ ಕಳೆಯಲಾಗದ ದುಃಖ! ಇದು ನಮ್ಮ ವಿಚಾರ.

ಈ ವಿಚಾರಗಳನ್ನು ಮನದಂದರೆ, ಸೀತಾಪರಿತ್ಯಾಗ ಭಾಗದ ರಾಮನ ನಡೆನುಡಿಗಳನ್ನು ಅವುಗಳ ಬಾಹ್ಯಾರ್ಥದಲ್ಲೇ ತೂಕಕ್ಕೆ ಹಾಕುವುದಾಗಲಿ ಒರೆಗೆ ಹಚ್ಚುವುದಾಗಲಿ ಅಯುಕ್ತವೆಂದೆನಿಸುವುದು. ಅನಿರೀಕ್ಷಿತವಾಗಿ ಬಿದ್ದ ಪ್ರಬಲ ಆಘಾತವೊಂದರ ಅಪಾರ ವೇದನೆಯಿಂದ ತುಡಿಯುತ್ತಿರುವ ಹೃದಯ ವನ್ನು ಅದುಮಿ ಹಿಡಿಯುವಾಗ—ನಿರ್ವಾಹವಿಲ್ಲದೆ ಅದುಮಿ ಹಿಡಿಯುತ್ತಿರುವಾಗ, ತೋರಿದ ಕಠೋರತೆ ಮಾತ್ರ ಅದು. ಕಣ್ಣು ಮನಗಳನ್ನು ತೆರೆದು ನೋಡಿರಿ; ರಾಮನ ಮಾತುಗಳು ವೈದ್ಯನ ಕೈಯ ಕತ್ತರಿ; ಕಟುಕನ ಕೈಯ ಕತ್ತಿಯಲ್ಲ! ಸುಕುಮಾರವಾದ ಸ್ನೇಹ ತಂತುವೊಂದು ಹರಿದು ಹೋಗುತ್ತಿರುವಾಗ ಕ್ಷತವಿಕ್ಷತ ಹೃದಯಿಯೊಬ್ಬನು ಅದನ್ನು ನೋಡಲಾಗದೆ ಬೇರೊಂದು ದೃಶ್ಯವನ್ನು ನೋಡಲೆ ಳಸಿದ ಪ್ರಯತ್ನ ಮಾತ್ರ ಅದು. ಆಗ ರಾಮ ಏನು ಮಾಡಿದನೊ ಏನು ಆಡಿದನೊ

ಅವೆಲ್ಲ ಒಂದು ಉದ್ಭ್ರಾಂತ ಸ್ಥಿತಿಯ ನಡೆನುಡಿಗಳು. ಪ್ರಜಾರಂಜನೆಯ ಮಹಾ ಯಜ್ಞದ ಪರಿಪೂರ್ತಿಗಾಗಿ ಜನತಾ ಜನಾರ್ದನನು ಆಶಿಸಿದ ಪೂರ್ಣಾಹುತಿಯಾಗಿ ಸೀತೆಯನ್ನು—ತನ್ನ ಪ್ರಾಣದ ಪ್ರಾಣವನ್ನು ಅರ್ಪಿಸಲು ಸಿದ್ಧನಾಗಲು, ಆ ಮಹಾರ್ಪಣೆಯನ್ನು ತಡೆಯಲೆಳಸಿದ ಹೃದಯದ ಕೊರಳನ್ನು ಕರ್ತವ್ಯವು ಹಿಸುಕುತ್ತಿರುವಾಗ ನರಳುತ್ತಿರುವ ಹೃದಯದ ಕರುಣ ಕ್ರಂದನವು ಕಿವಿಗೆ ಬಿದ್ದು ತಾನೆಲ್ಲಿ ಚಂಚಲ ಮನಸ್ಕನಾದೇನೋ, ತನ್ನ ಚಂಚಲತೆಯ ಚುಂಗನ್ನೇ ಹಿಡಿದು ತನ್ನವರೆಲ್ಲ ಕೂಡಿ ತನ್ನನ್ನು—ತನ್ನ ಸಂತಸದ, ಅದರಲ್ಲೂ ಮುಖ್ಯವಾಗಿ ಸೀತೆಯ ಸುಖದ ಹೆಸರಲ್ಲಿ ಎಲ್ಲಿ ಹಾದಿ ತಪ್ಪಿಸುವರೋ ಎಂದು ನಟಿಸಿದ ನಟನೆ ಮಾತ್ರ.

ಮುದ್ದಣನು ಚಿತ್ರಿಸಿದುದಕ್ಕಿಂತ ಉತ್ತಮ ಮಟ್ಟದಲ್ಲಿ ರಾಮನನ್ನು ಚಿತ್ರಿಸಲು ಅವಕಾಶವಿರಲಿಲ್ಲವೆಂದಲ್ಲ. ಖಂಡಿತ ಇತ್ತು. ಆದರೂ ಮೇಲಿನ ದೃಷ್ಟಿಯಿಂದ ನೋಡುವಾಗ ಮುದ್ದಣನು ರಾಮಪಾತ್ರವನ್ನು ಸಾಕಷ್ಟು ಯಶಸ್ವಿಯಾಗಿ ಚಿತ್ರಿಸಿರುವುದು ಕಂಡು ಬರುತ್ತಿಲ್ಲವೆ? ಅದು ಬಿಟ್ಟು ವಿಮರ್ಶಕ ರೆಂದಂತೆ ರಾಮನನ್ನು ಚಿತ್ರಿಸುವಾಗ ಎಲ್ಲಿಯಾದರೂ "ಕವಿಯು ಮರವಟ್ಟನೋ ಎಂದು ಸಂಶಯವೆರಗುವುದೆ?" "ಮುದ್ದಣನ ರಾಮ ದಥೀರೆಂದು ಕೆಳಗುರುಳು ವನು. ಪುನಃ ಮೇಲಕ್ಕೇಳಲಾರ" ಎಂದು ಹೇಳಬಹುದಾದ ಸ್ಥಿತಿ ಯಾವ ಸ್ಥಳ ದಲ್ಲೇ ಆಗಲಿ ಕಾಣಸಿಗುವುದೇ? ಮುದ್ದಣನ ರಾಮ "ಸರ್ಪ ಜಾತಿಯವ"ನಂತೆ ಒಂದು ಕ್ಷಣವಾದರೂ ತೋರುವನೇ? ವಿಧಿಯ ವಿಕಟ ವಿಲಾಸದಿಂದಾಗಿ ರಾಮನ ಅಂತರಂಗ ತ್ಯಾಗ ಭೋಗಗಳ ತುಮುಲ ಹೋರಾಟದ ಕಳವಾಗಿದೆ. 'ನ ಭೂತೋ ನ ಭವಿಷ್ಯತಿ' ಎಂಬಂತಹ ಧರ್ಮಸಂಕಟವೊಂದರಿಂದ ಬೆಂದು ಹೋಗಿದೆ ಆತನ ಹೃದಯ. ಇದರಿಂದಾಗಿ ಆತನ ಧೃತಿ ಕೆಟ್ಟು ಮತಿ ಮಸುಳಿಸಿದೆ. ಈ ಉದ್ಭ್ರಾಂತ ಸ್ಥಿತಿಯಲ್ಲೂ ಹಾದಿ ತಪ್ಪದೆ ಪ್ರೇಯಸ್ಸಿಗೆ ಮನ ಸೋಲದೆ ಶ್ರೇಯಸ್ಸನ್ನೇ ಆಧರಿಸಿ ನಿಂತಿದ್ದಾನೆ. ರಾಜಧರ್ಮವನ್ನು ಪರಿಪಾಲಿಸಲು ತನ್ನ ಸರ್ವಸ್ವವನ್ನೂ ಬಲಿಗೊಟ್ಟಿದ್ದಾನೆ. ಹೀಗೆ ಅಂತರಂಗದಲ್ಲಿ ಇಷ್ಟು ಹಿರಿದಾದ ಹೋರಾಟ ನಡೆಯಬೇಕಾಯಿತೆಂದೇ ರಾಮನ ಪತ್ನೀ ಪ್ರೇಮದ ಆಳ ಅಗಲಗಳ ಅರಿವಾಗುತ್ತಿದೆ. ಸೀತೆ ಆತನ ಒಳ ಹೊರಗುಗಳನ್ನೆಲ್ಲ ವ್ಯಾಪಿಸಿದ್ದಳು. ಸೀತೆ ಯಿಲ್ಲವೊ ರಾಮನಿಗೆ "ಸಂತಸವಾವುದೊ! ಸೊಗವಾವುದೋ! ಕೆಳೆತನವಾವುದೊ! ಬಾಳ್ತೆಯಾವುದೊ!" ಎಂದಾಗಿದೆ! ಹೀಗೆ ರಾಮ ಆದರ್ಶ ರಾಜನೂ ಅನ್ಯಾದೃಶ ಪತಿಯೂ ಆಗಿ ಮೆರೆದಿದ್ದಾನೆ. ತ್ಯಾಗದ ಮೂಲಕ ಪರಿಪೂರ್ಣವೂ, ದುಃಖದ

ಮೂಲಕ ಚರಿತಾರ್ಥವೂ ಧರ್ಮ ಮೂಲಕ ಸ್ಥಿರವೂ ಆಗಿ ಮೆರೆಯುವ ರಾಮನಂತಹ ಜಗದ್ವಂದ್ಯ ವ್ಯಕ್ತಿಯ ಪಾತ್ರವೊಂದನ್ನು ಚಿತ್ರಿಸುವುದರಲ್ಲಿ ಮುದ್ದಣ ಸಾಕಷ್ಟು ಯಶಸ್ವಿಯಾಗಿದ್ದಾನೆಂದು ಅಭಿಮಾನದಿಂದ ಹೇಳಬಹುದು.

ರಾಮಾಶ್ವಮೇಧದ ಸೀತೆಯ ಪಾತ್ರವನ್ನು ವಿಮರ್ಶಕರೆಲ್ಲರೂ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ನಿಜವಾಗಿಯೂ ಸಂಕಷ್ಟ ಸಂಕ್ಷೋಭೆಗಳ ಅಗ್ನಿ ದಿವ್ಯದಿಂದ ಆವಿರ್ಭವಿಸಿದ ಸ್ವರ್ಣಮೂರ್ತಿ ಅದೊಂದು! ದುಃಖದ ಕಡು ನೀಲಿಮೆಯ ಮುಂದೆ ಸೌಮ್ಯಸುಂದರವಾಗಿ ಬೆಳಗುವ ಚಂದ್ರಬಿಂಬ ಅದು! ಆ ಬಾಳಿನಲ್ಲಿ ಸುಖ ಒಂದು ಕ್ಷಣ ಸುಳಿಯಿತೋ ಅದು ಅಲ್ಲೇ ಮಿಂಚಿನಂತೆ ಮಾಯವಾಗಿದೆ. ಕೊನೆಯ ಭಾಗದಲ್ಲಿ ಸುಖ, ಸಂತೋಷಗಳ ಹುಚ್ಚು ಹೊನಲೇ ಭೋರ್ಗರೆದು ಹರಿಯಬೇಕಾದಲ್ಲಿ ದೃಶ್ಯ ಮೊಟಕಾಗಿದೆ. ಬಿಂದುವೊಂದರಿಂದಲೇ ಸಿಂಧುವಿನ ಕಲ್ಪನೆಯನ್ನು ಮಾಡಿಕೊಳ್ಳಬೇಕಾಗಿದೆ ಅಂತೂ ರಾಮಾಶ್ವಮೇಧದ ಸೀತಾ ಪಾತ್ರವನ್ನು ಭಾವಿಸಿಕೊಂಡಾಗಲೆಲ್ಲ ಭಕ್ತಿ, ಪ್ರೇಮ ಕರುಣೆಗಳ ಹೊಳೆ ಹೊನಲು ಹೊನಲಾಗಿ ಹರಿಯುತ್ತದೆ. ಇಂತಹ ಒಂದು ಅದ್ವಿತೀಯ ಶಿಲ್ಪವನ್ನು ಕಂಡರಿಸಿ ಅಮರ ರೂವಾರಿಯೆನಿಸಿದ್ದಾನೆ ಮುದ್ದಣ.

ರಾಮಾಶ್ವಮೇಧದ ಕಥಾ ಲೋಕಕ್ಕೆ ಕಾಲಿಟ್ಟು ಯಾತ್ರೆ ಹೊರಟ ಪಯಣಿಗನಿಗೆ ಮೊದಲ ದರ್ಶನವಾಗುವುದು ಪೊನ್ನ ಸೀತೆಯದು. ಆಗಲೋ ಸಹಯಾತ್ರಿ ಮನೋರಮೆಯಂತೆ ನಮಗೂ ಆಶ್ಚರ್ಯ. "ಇಂತಿದೇಂ ಪೊನ್ನ ಸೀತೆಯೆಂಬ್ಯೆ? ರನ್ನ ಸೀತೆಯೆತ್ತವೋದಳ್?" ಎಂದು ಕವಿಯನ್ನು ನಮಗೂ ಪ್ರಶ್ನಿಸಬೇಕೆನ್ನಿಸುತ್ತದೆ. ಆದರೆ ಹರಟೆಮಲ್ಲಿ ಮನೋರಮೆಯಾದರೋ ನಮಗಿಂತ ಮೊದಲೇ ಆ ಪ್ರಶ್ನೆ ಕೇಳಿ ನಮ್ಮ ಪ್ರತಿನಿಧಿಯಾಗುತ್ತಾಳೆ! ಹೀಗೆ ನಮ್ಮ ಕುತೂಹಲವನ್ನು ಕೆರಳಿಸಿ ರನ್ನ ಸೀತೆಯ ಕತೆಗೆ ಮೊದಲಿಡುತ್ತಾನೆ ಮುದ್ದಣ.

ಶ್ರೀ ರಾಮ ರಕ್ಕಸರನ್ನು ಕೊಂದಿದ್ದಾನೆ. ಅಗ್ನಿಯಲ್ಲಿ ಪರೀಕ್ಷಿಸಿ ಸೀತೆ ಪೂತೆಯೆಂದು ಸಿದ್ಧಮಾಡಿಕೊಂಡು ಆಕೆಯನ್ನು ಅಯೋಧ್ಯೆಗೆ ಕರೆತಂದಿದ್ದಾನೆ. ರಾಮನಿಗೆ ಪಟ್ಟಾಭಿಷೇಕವಾಗಿದೆ. ಸೀತೆ ಈಗ ಪಟ್ಟಮಹಿಷಿಯಾಗಿದ್ದಾಳೆ. ಹೀಗೆ ಸಾವಿರಕಾಲ ಕಳೆದಿದೆ. ಆದರೇನು ದುಃಖ ಮಾತ್ರ ಬೆನ್ನುಬಿಡದ ಸಂಗಾತಿಯಾಗಿದೆ ಸೀತೆಗೆ. ಆಕೆಗಿನ್ನೂ ಮಕ್ಕಳಾಗಿಲ್ಲ. ಬಂಜೆಯೆಂಬ ಕೊರಗು ಆಕೆಯನ್ನು ಕೊರೆದು ತಿನ್ನುತ್ತಿದೆ. ಹೀಗಿರಲೊಂದು ದಿನ 'ಕನ್ನೆವಾಡದ ನೆಲಮನೆಯ ಮೊಗಸಾಲೆಯೊಳ್' ತನ್ನ ಗೆಳತಿ ಚಂದ್ರಮತಿಯೊಡನೆ ಕುಳಿತಿದ್ದಾಗ ಹೆಣ್ಣು

ಗುಬ್ಬಿಯೊಂದು ಆಕೆಯ ಇದಿರಲ್ಲೇ 'ಕಿರುಮರಿಯಂ ಕುಟುಂಕಿತ್ತಿರಂಕೆಯೊಳ್' ಪುದುಗಿಸಿಯುಂ ಕೊಕ್ಕಿಂ ಮೇಲ್ದುಪ್ಪುಳನೊಸೆದು ನೆಸೆದುಂ ಲಲ್ಲೆಗೆಯ್ವುದಂ' ನೋಡಿ ಮಕ್ಕಳ ಬಯಕೆ ಬಲಿಯುತ್ತದೆ. ಕೊರಗು ಹೆಚ್ಚುತ್ತದೆ. "ನಿಕ್ಕುವಂ ಮಕ್ಕಳಂ ಪಡೆದೋವಲ್ಕಾಂನೋಂತೆನಿಲ್ಲ ಕ್ಕುಂ. ಎಳೆವರೆಯದೊಳ್ ನಲ್ಗೂಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೆ ಕಂಡು ಸಂಸಾರದ ಸಾರಮಿದೆನುತೆ ಸಂತಸಂಬಡುವ ಪೆಣ್ಗಳೆ ಧನ್ಯೆಯರಲ್ತೆ!" ಎಂದು ದುಃಖಿಸುತ್ತಾಳೆ. ಈಗ ಮಕ್ಕಳ ಬಾಲಕೇಳಿಯ ವಿವಿಧ ಚಿತ್ರಗಳು ಚಲಚಿತ್ರದಂತೆ ಆಕೆಯ ಕಣ್ಣ ಮುಂದೆ ಸುಳಿಯತೊಡಗುತ್ತವೆ. ಇಲ್ಲಿ ಮುದ್ದಣ ಚಿತ್ರಿಸಿದ ಬಾಲಕರ ವಿವಿಧ ಲೀಲೆಗಳ ಸೊಗಸಾದ, ಜೀವಂತವಾದ ಶಬ್ದಚಿತ್ರಗಳಿಗೆ ರಾಮಾಶ್ವಮೇಧದಲ್ಲಿ ವಿಶಿಷ್ಟವಾದೊಂದು ಸ್ಥಾನವಿದೆ ಕನ್ನಡ ಸಾಹಿತ್ಯ ಲೋಕದಲ್ಲೇ ಮೀಸಲು ಜಾಗವಿದೆ. ಮಕ್ಕಳ ಬಾಲಲೀಲೆಯ ಸಂಪೂರ್ಣ ಚಿತ್ರವಿದೆ ಇಲ್ಲಿ. ಈ ಶಬ್ದ ಚಿತ್ರಗಳು ಹೀಗೆ ಸಜೀವವಾಗಿರಲು ಅವು ಮುದ್ದಣನ ವೈಯಕ್ತಿಕ ಬಾಳಿನಿಂದ ಸಾರಹೀರಿಕೊಂಡುದೇ ಕಾರಣ. ಸರಿ, ಹೀಗೆ ಮಕ್ಕಳ ಬಾಲಲೀಲೆಯ ಎಷ್ಟು ಎಷ್ಟು ಚಿತ್ರಗಳು ಎಷ್ಟು ಎಷ್ಟು ಭಂಗಿಗಳಿಂದ ಸೀತೆಯ ಮನಃ ಚಕ್ಷುವಿನ ಮುಂದೆ ಸುಳಿಯತೊಡಗಿದುವೊ ಅಷ್ಟು ಅಷ್ಟು ಆಕೆಯ ಅಳಲು ಅಳತೆ ಮೀರಿತು. ವೇದನೆ ತಡೆಯದಾಗಿ ಅಲ್ಲಿ ಕುಳ್ಳಿರಲಾಗಲಿಲ್ಲ. ಒಮ್ಮೆಲೆ ಎದ್ದು ಸಜ್ಜೆಮನೆಗೆ ಹೋಗಿ ಮಲಗುತ್ತಾಳೆ.

ಸೀತೆಯ ದುಃಖ ವಿಚಾರವನ್ನು ದೂತಿಯೋರ್ವಳಿಂದ ಕೇಳಿದ ರಾಮ ಸಜ್ಜೆಮನೆಗೆ ಬರುತ್ತಾನೆ. ಪತಿಯು ಬಂದನೆಂದು ಏಳ ಹೋಗಿದ್ದಾಳೆ ಸತಿ. ಪತಿ ಸತಿ ಏಳುತ್ತಿರುವಂತೆಯೇ ತಡೆದಿದ್ದಾನೆ. ಹಾಗೆಯೇ ತಾನೂ ಜತೆಗೆ ಕುಳಿತು ಕೊಂಡು ಬಗೆಬಗೆಯಿಂದ ರಮಿಸಿ ದುಃಖದ ಕಾರಣವನ್ನು ಕೇಳುತ್ತಿದ್ದಾನೆ. ದುಃಖದ ಕಾರಣವನ್ನು ಹೇಳಬೇಕೆಂದರೂ ಹೇಳಲಾರದಾಗಿದ್ದಾಳೆ ಸೀತೆ. ಪರಳೊಬ್ಬಳು ಸನಿಯವಿರುವಾಗ ಎಂತು ಹೇಳಲಿ? ಏನೆಂದು ಹೇಳಲಿ? ಸೀತೆಯ ಮೈಯನ್ನು ಕೈಯಿಂದ ಸವರಿ, ಹೃದಯವೇ ಹೃದಯದೊಡನೆ ನುಡಿವಂತೆ ಕೇಳುತ್ತಿದ್ದಾನೆ ರಾಮ ಏನು ದುಃಖ? ಏಕೆ ದುಃಖ? ಯಾರಿಂದ ದುಃಖ? ಸೀತೆ ಎಲ್ಲಾ ನಾಚಿಕೆಯನ್ನೂ ಮೀರಿ ಹೇಳಬೇಕೆಂದು ಬಯಸಿದರೂ 'ಅಳಲ್ ಕೊರಳನೌಂಕು' ತ್ತಿದೆ. ಕೊನೆಗೂ ಹೇಳಬೇಕೆಂಬ ಸಾಹಸದಲ್ಲಿ ಸೀತೆ ಸೋತಿದ್ದಾಳೆ. ಗೆಳತಿ ಚಂದ್ರಮತಿಯೇ ಕಾರಣವನ್ನು ಹೇಳಬೇಕಾಗುತ್ತದೆ. ಸೀತೆಗೆ ಮಕ್ಕಳಿಲ್ಲದ

ಕೊರಗು ಎಂದು. ಆದರೆ ಇವೆಲ್ಲ 'ವಿಧಿವಶವಲ್ತೆ'. ದುಃಖಿಸುವುದರಿಂದೇನಾಗುವುದು? ಎಂದು ಸೀತೆಗೆ ತಿಳಿಹೇಳಿದ್ದಾನೆ; ಸಂತೈಸಿದ್ದಾನೆ ರಾಮ.

'ಇಂತು ಕೆಲವಾನುಂ ದಿನಂಗಳ್ ಕಳಿಯೆ......ಸೀತೆ ಬಸಿರಿಯಾದಳ್.'

'ಇಂತು ಭೂಜಾತೆ ಗರ್ಭಿಣಿಯಾದಳಾಗೆ, ನಾಡೆ ನಾಡೆ ಸಂತಸಗಡಲೊಳೋಲಾಡುತಿರ್ದುದು; ಬಂಧು ಜನಂಗಳ ಸಮ್ಮೋದಮುಂ ಪರಿಜನಂಗಳುಕ್ಕೈವದೇಳ್ಗೆಯುಂ ಪಿರಿದಾಯ್ತು; ಎತ್ತಲುಮೊಸಗೆವರೆ ಮೊಳಗಿದತ್ತು; ಭೂಸುರರ್ ದಾನದಕ್ಷಿಣೆಗಳಿಂ ತಣಿದರ್; ನೆರೆದ ದೀನಾಂಧಬಧಿರಕುಬ್ಜವರ್ಗಂ ಸ್ವರ್ಗಸುಖಾನುಭವದೊಳಿರ್ದತ್ತು.'

ಹೀಗೆ ಸಾಮ್ರಾಜ್ಯಕ್ಕೆ ಸಾಮ್ರಾಜ್ಯವೇ ಪೇರುಕ್ಕೈವದ ದೇಗುಲವಾಗಿರಲೊಂದು ದಿನ ಸಂಜೆ ಸೀತಾರಾಮರು ರಾಣಿವಾಸದ ಮೊಗಸಾಲೆಯಲ್ಲಿ ಕುಳಿತುಲ್ಲಸಿಸುತ್ತಿದ್ದಾರೆ. ಅಕಟಕಟಾ! ಸೀತೆಗೆ ಆನಂದದ ಅಮರ ಲೋಕವೇ ಕೈವಶವಾಗಿರುವ ಈ ಮುಹೂರ್ತದಲ್ಲೇ ವಿಧಿ ತನ್ನ ಸಂಚಿನ ಮಹಾಕಾವ್ಯಕ್ಕೆ ಸೀತೆಯ ಕೈಯಿಂದಲೇ ಶ್ರೀಕಾರ ಬರೆಸತೊಡಗಿದೆ! "ನಾಥ! ಬಲ್ಬೇಸರ್ ಕಣಾ!" ಎಂದಿದ್ದಾಳೆ ಸೀತೆ! ಬೇಸರವೆ ಬೇವಸಪಟ್ಟು ಬೆಂಗೊಡಬೇಕಾದ ಈ ಕಾಲ ಸನ್ನಿವೇಶಗಳಲ್ಲೇ ಸೀತೆಗೆ 'ಬಲ್ಬೇಸರ್' ಅಂತೆ! ಹಾ! ವಿಧಿಯ ಅದಾವ ಮಾಟ ಸೀತೆಯನಿಂತು ನುಡಿಸುತ್ತಿದೆ! ಆಕೆ ಮುಂದುವರಿಸಿದ್ದಾಳೆ "ಆವುದುಮನೊಳಕೊಂಡಿತಿಲ್ಲೆನ್ನಮನಂ, ಅದರಿಂ ವನದೊಳಾಶ್ರಮಂಗಳ ಋಷಿಪತ್ನಿಯರಂ ಕಂಡು ಸುಖಸಲ್ಲಾಪಂಗೊಂಡವರೊಡನಾಟದಿನಾನುಂ ಕಿರಿದುಂ ದಿನಮಿರ್ದು ಮರಲ್ದು ಬರಲಕ್ಕುಮೆಂದು ಬಯಸುವೆ."

ಯಾವ ಬಯಕೆ ತಲೆದೋರಿದರೂ ತೀರಿಸಬೇಕಾಗಿದ್ದ ಈ ಕಾಲದಲ್ಲಿ ಋಷ್ಯಾಶ್ರಮಕ್ಕೆ ಹೋಗಬೇಕೆಂದು ಸೀತೆ ಬಯಸಿದರೆ ರಾಮ ಅದಕ್ಕೆ ಒಪ್ಪಿಗೆ ಕೊಡದಿರುವನೇನು? ಸಂತೋಷದಿಂದ ಒಪ್ಪಿದ್ದಾನೆ. "ಅಂತೆಯೆ ಅಕ್ಕೆ! ಆದೊಡೆ ಒರ್ವಳೆ ಪೋಪುದಲ್ತು; ಕೂಡಿಪೋಗೆ ಲಕ್ಷ್ಮಣನಂ ಪೇಳ್ದಟ್ಟುವೆಂ" ಎಂದು ಹೇಳಿ ರಾಮ, ಅವನಿಗರಿಯದಂತೆಯೇ ವಿಧಿಯು ಬರೆಯಲಿರುವ ಮಹಾಕಾವ್ಯದ ಪೀಠಿಕಾಪ್ರಕರಣವನ್ನು ಕೊನೆಗೊಳಿಸಿದ್ದಾನೆ!

* * * * *

ಲಕ್ಷ್ಮಣ ತೃತೀಯಾಶ್ವಾಸದಲ್ಲಿ ಮೊತ್ತಮೊದಲು ನಮ್ಮ ಕಣ್ಣಿಗೆ ಬೀಳುತ್ತಾನೆ. ಅಗಸ್ತ್ಯರು ಆಸ್ಥಾನಕ್ಕೆ ಬರುತ್ತಿದ್ದಾರೆಂಬುದನ್ನು ತಿಳಿದ ರಾಮ 'ಅಣು

ಗದವ್ಮನಂ ಲಕ್ಷ್ಮಣನಂ' ಕರೆದು ಮುನಿಗಳನ್ನು 'ತಕ್ಕಂತಿರೆ ಕರೆದು ತರ್ಪುದೆಂದು ಕಳುಪಿದಂ.' 'ಆಗಳ್ ಸೌಮಿತ್ರಿ ಮುಂತಪ್ಪರ್ ಬಂದು ಮುನಿಗೆರಗಿ' ಕರೆದೊಯ್ಯು ತ್ತಾರೆ. ಇಡೀ ಕಾವ್ಯದಲ್ಲಿ ಲಕ್ಷ್ಮಣನನ್ನು ಇದೇ ರೂಪದಲ್ಲಿ ನಾವು ಕಾಣು ವುದು. ಅದರಲ್ಲಿ ಒಂದಿನಿತು ವ್ಯತ್ಯಾಸವಿಲ್ಲ. ರಾಮನದು ಅದೇ ಆಜ್ಞೆ! ಲಕ್ಷ್ಮಣನದು ಅದೇ ಮರುಮಾತಿಲ್ಲದ ಆಜ್ಞಾಪಾಲನೆ! ವಿಧೇಯತೆ! ಇಡೀ ಕಾವ್ಯದಲ್ಲಿ ಒಂದೇ ಒಂದೆಡೆ ಮಾತ್ರ ಯಾವುದು ಮರುಮಾತಿನಂತೆ ಬಂದಿದೆಯೋ ಅದೂ ಒಡನುಡಿ ಮಾತ್ರವಾಗಿದೆ! ಆತ್ಮೋದ್ಗಾರವೇ ಆಗಿದೆ. ಖಂಡಿತ ಅದಕ್ಕಿಂತ ಹೆಚ್ಚಿನದೇನೂ ಅಲ್ಲ! ಇದೇ ಲಕ್ಷ್ಮಣನ ಸಂಪೂರ್ಣ ಚಿತ್ರ. ಆತ ರಾಮನ ಇಚ್ಛೆಯನ್ನು ಕಾರ್ಯಗತ ಮಾಡುವ ಒಂದು ಸಾಧನ ಮಾತ್ರ! ನಿಜ, ಆದರೂ ಮುಂದಿನ ಆಶ್ವಾಸಗಳಲ್ಲಿ ಮೊದಲಿನದರಲ್ಲಿಲ್ಲದ ಅತ್ಯಂತ ವಿಷಾದದ ಕಡುನೀಲ ಆಚ್ಛಾದನೆಯೊಂದು ಆ ಚಿತ್ರವನ್ನು ಮುಸುಗಿರುತ್ತದೆ.

ಮುಂದಿನ ಆಶ್ವಾಸಗಳಲ್ಲಿ ಕ್ಷತವಿಕ್ಷತ ಹೃದಯಿ ಲಕ್ಷ್ಮಣ. ಆದರೇನು ಆ ಅಪಾರ ವೇದನೆ ಅದಮನೀಯ ದುಃಖಗಳನ್ನು ವ್ಯಕ್ತಮಾಡಲೂ ಆಗದಂತೆ ವಿಧಿ ಆತನ ಬಾಯಿಗೆ ಬೀಗ ಬಿಗಿದಿದೆ. ಆತ್ಮಭರ್ತ್ಸನೆಯೊಂದೆ ಆತನಿಗುಳಿದಿರುವ ಹಾದಿ ಕೆಲವೇಳೆ ಅದೂ ತುಟಿ ಮೀರಿ ಬರಬಾರದಂತಹ ಬಂಧನ! ಆತ ರುದ್ರ ನಾಟಕವೊಂದರ ಪ್ರಮುಖ ಪಾತ್ರಧಾರನಾಗಿ ನಟಿಸುತ್ತಾನೆ. ಆ ನಟನೆಯಾ ದರೂ ಎಂತಹುದು! ಇನ್ನೊಬ್ಬನ ಕೈಸನ್ನೆಗೆ ಕುಣಿದ ಕುಣಿತ ಮಾತ್ರ. ಆ ಕುಣಿತ ರುದ್ರನ ವಿಲಯನಾಟ್ಯದಂತಾಗಿದೆ. ಎಲ್ಲೆಡೆಗಳಿಂದಲೂ ದುಃಖದ ಕಡಲು ಘೂರ್ಣಿಸಿ, ಘೂರ್ಣಿಸಿ ಮೇಲ್ವಾಯ್ದು ಬರುತ್ತದೆ. ಅದು ಆತನಿಗೆ ಮೊದಲೇ ತಿಳಿಯದ ವಿಚಾರವಲ್ಲ. ಆದರೆ ಆತನಿಗೆ ಏನು ಮಾಡಲು ಸಾಧ್ಯವಿತ್ತು? ಆ ಕಡಲಲ್ಲಿ ತಾನೂ ಮುಳುಗಿ ಹೋಗುವುದೊಂದೇ ಆತನ ಗತಿ; ಬೇರಿಲ್ಲ. ಆತ ನಲ್ಲೂ ಅನುಭವಿಸುವ ಹೃದಯವಿದೆ, ಮಾತಾಡುವ ನಾಲಗೆಯಿದೆ, ಇಳಿಯುವ ಕಣ್ಣೀರಿದೆ. ಇದ್ದರೇನು? ಅವೆಲ್ಲವನ್ನು ತನ್ನ ಶಕ್ತಿಸರ್ವಸ್ವದಿಂದ ದಮನಿಸಿಕೊಳ್ಳ ಬೇಕಾಗಿದೆ. ಎಂತಹ ಕರುಣಾಪೂರ್ಣ ದೃಶ್ಯ! ಅಂತರಂಗದಲ್ಲಿ ಲಾವಾರಸ ಕುದಿಯುತ್ತಿದ್ದರೂ ಮೌನಿಯಾಗಿ, ಶಾಂತಳಂತೆ ತೋರುವ ಮಾತೆ ಪೃಥ್ವಿಯಂ ತಿದ್ದಾನೆ ಲಕ್ಷ್ಮಣ. ಆಜ್ಞೆಯ ಕಣ್ಣಪಟ್ಟಿ ಕಟ್ಟಿದ ಕುದುರೆಯಂತೆ ತನ್ನನ್ನೇ ಇಲ್ಲ ವಾಗಿಸಿಕೊಂಡು, ತಾನು ದಹಿಸಿ ದಹಿಸಿ ಹೋಗುತ್ತಿರುವಾಗಲೂ 'ಸ್ವಾಮಿ ಕಾರ್ಯ ಧುರಂಧರ ಅಗ್ರಜನಾಜ್ಞಾನುವರ್ತಿ'ಯಾಗಿ ಬಾಳಿದ್ದಾನೆ ಆತ.

ಪರಿತ್ಯಕ್ತ ಸೀತೆಯ ಹೃದಯದಲ್ಲಿ ಅಪವಾದದ ಸಿಡಿಮದ್ದು ಆಸ್ಫೋಟನ ಗೊಂಡು ದುಃಖದ ಕಾಳ್ಗಿಚ್ಚು ನೂರು ನಾಲಗೆಗಳನ್ನೆತ್ತಿ ಉರಿಯುತ್ತಿದೆ. ನಿಸ್ಸ ಹಾಯಕತೆಯೇ ಆಂ ಎಂದು ಬಾಯ್ದೆರೆದು ನುಂಗಲೆಳಸಿದೆ. ನಿಜ, ಆದರೂ ಆ ಅಪವಾದ ಸುಳ್ಳು ಎಂಬ ಆತ್ಮಾವಲಂಬನೆಯಾದರೂ ಆಕೆಗಿದೆ! ದುಃಖವನ್ನು ಪ್ರತ್ಯಕ್ಷ ಅನುಭವಿಸುವಷ್ಟು ಮಟ್ಟಿನ ಸಮಾಧಾನವಾದರೂ ಆಕೆಗೆ ದೊರಕಿದೆ! ಆದರೆ ದುರದೃಷ್ಟವೇ ಮೂರ್ತಿವೆತ್ತ ದುಃಖಿ ಲಕ್ಷ್ಮಣನಿಗೆ ಅಂತಹ ಸೂಕ್ಷ್ಮಾತಿ ಸೂಕ್ಷ್ಮ ತಂತುವಿನ ನೆರವೂ ಇಲ್ಲ. ಕವಿ ಬೇಂದ್ರೆಯವರೆಂದಂತೆ 'ತನ್ನ ದುಃಖ ನುಂಗಿಕೊಂಡು.........ತಾನೆ ಅತ್ತು ಹಾಡಿಕೊಂಡು ತನ್ನ ತಾನು ರಮಿಸ ಬೇಕು' ಆತ. ಇದನ್ನು ಭಾವಿಸುವಾಗಲೊಮ್ಮೆ ಸೀತೆಗಿಂತಲೂ ಲಕ್ಷ್ಮಣನೇ ಹೆಚ್ಚು ಕರುಣಾಪಾತ್ರನೆಂದೆನಿಸುತ್ತದೆ.

ಲಕ್ಷ್ಮಣ ನೋಡ ನೋಡುತ್ತಿರುವಂತೆಯೇ ಅಸಂಭವನೀಯ ಅಕಲ್ಪನೀಯ ಭೂಕಂಪವೊಂದು ಉಂಟಾಗುತ್ತದೆ. ಆ ಕಂಪನದಿಂದ ರಾಮನ ಹೃದಯ ಒಡೆದು ಬಿರುಕು ಬಿಡುತ್ತದೆ. ಸೀತಾರಾಮನ ಕೊಲೆಯಾಗಿ, ರಾಜಾರಾಮನ ಕರ್ಣ ಕಠೋರ ಮಾತಿನ ಬೆಂಕಿ ಹೊಳೆ ಹರಿಯುತ್ತದೆ! ಲಕ್ಷ್ಮಣ ಇದನ್ನೆಲ್ಲ ನೋಡುತ್ತಿದ್ದಾನೆ; ಕೇಳುತ್ತಿದ್ದಾನೆ. ಆದರೆ ಒಂದು ಮಾತನ್ನೂ ಆಡದಿದ್ದಾನೆ. ಆತನ ಹೃದಯ ಆ ಘಟನೆಯ ವಜ್ರಾಘಾತದಿಂದ ಜರ್ಜರಿತವಾಗಿದೆ. ಮತಿ ಮಸುಳಿಸಿದೆ. ಮಾತು ಮೂಕವಾಗಿದೆ. ಇಲ್ಲದೆ ಹೋದರೆ "ಕೇಳ್ದೈ ತಮ್ಮ! ಎಮ್ಮೀಬಳಿಗಡರ್ದ ಪಳಿವಂ! ಮುನ್ನಂ ಲಂಕೆಯೊಳ್ ನೀನೆ ಪೇಳ್ದೆಯಲ್ತೆ ಸೀತೆ ಪೂತೆ, ಅವಳಂ ಕೈಕೊಳ್ವುದೆಂದು. ಈಗಳೇನಾಯ್ತು?" ಎಂಬ ರಾಮನ ಅರ್ಥ ಹೀನ ವ್ಯರ್ಥಾಪವಾದದ ಬರಸಿಡಿಲು ಬಡಿಯುತ್ತಿರುವಾಗಲೂ ಆತ ಶಿಲಾಪ್ರತಿಮೆ ಯಂತೆ ಮೂಕನಾಗಿರುತ್ತಿದ್ದಿಲ್ಲ. ಆತನ ಬಾಯಿಯಿಂದ ಹಾಹಾಕಾರವಾದರೂ ಹೊರಡದಿರುತ್ತಿದ್ದಿಲ್ಲ. ಮಾರುತ್ತರವಾದರೂ ಬಾರದಿರುತ್ತಿದ್ದಿಲ್ಲ. ಬೇಡ, ಉದ್ಗಾರದ ಒಂದು ಕಿರುದನಿಯೂ ಕೇಳಿಸದಿರುತ್ತಿತ್ತೇನು? ಇದೆಂತಹ ಮೌನ? ದುಃಖ, ವೇದನೆಗಳ ತುಮುಲ ಸಾಗರವೇ ಅಂತರಂಗದಲ್ಲಿ ಭೋರ್ಗರೆಯುತ್ತಿರು ವಾಗಲೂ ಇದೆಂತಹ ಮೌನ!

ಇದನ್ನು ಯೋಚಿಸುವಾಗ ಕವಿಯನ್ನು ನಿಲ್ಲಿಸಿ ಕೇಳಬೇಕು ಎಂದೆನಿಸುತ್ತದೆ: ಕವಿಯೇ! ಲಕ್ಷ್ಮಣನನ್ನು ಇಲ್ಲಿ ಚಿತ್ರಿಸುವಾಗ ನೀನಿಷ್ಟು ನಿರ್ದಯನೇಕಾದೆ? ದುಃಖದ ಒಂದು ಉದ್ಗಾರವನ್ನಾದರೂ ಹೊರಡಿಸಲು, ಬೇಗೆಯ ಒಂದು

ನಿಟ್ಟುಸಿರನ್ನಾದರೂ ಬಿಡಲು ಅವಕಾಶಕೊಡದೆ ಆತನ ಅಂತರಂಗವನ್ನು ನಾಲ್ದೆಸೆಗಳಿಂದಲೂ ಮುಚ್ಚಿ ಏಕೆ ದಹಿಸುವಂತೆ ಮಾಡಿದೆ? ಆ ಅತ್ಯಲ್ಪ ಬಿಡುಗಡೆಯಾದರೂ ಆತನಿಗೆ ದೊರೆಯಬಾರದಿತ್ತೇ? ನಿನ್ನ ಅಷ್ಟು ಕರುಣೆಗೂ ಲಕ್ಷ್ಮಣ ಅನರ್ಹನಾದನೇನು? ಆದರೆ ನಾವು ಯೋಚಿಸುವಂತೆ ಎಲ್ಲವೂ ನಡೆಯಲಾರದು. ಪ್ರಾಯಶಃ ಕವಿ ಚಿತ್ರಿಸಲೆಳಸಿದ್ದ ಲಕ್ಷ್ಮಣ ಇಂತಹ ಅಗ್ನಿದಿವ್ಯದಿಂದ ಹೊರಬಿದ್ದ ಪುತ್ತಳಿಯೇ ಆಗಿದ್ದಿರಬೇಕು. ಹೇಗಿದ್ದರೂ ಲಕ್ಷ್ಮಣನ ಕುರಿತು ನಮ್ಮ ವೇದನೆಗೆ ಮಿತಿಮೀರೆಗಳಿಲ್ಲ.

ಸತ್ಯದೇವತೆಯನ್ನೇ ಅಸತ್ಯವೆಂದು ಆಪಾದಿಸುತ್ತಿರುವ ವಿಡ್ಗೂರ ವಿಡಂಬನೆಯನ್ನು ಕಂಡಿದ್ದಾನೆ ಲಕ್ಷ್ಮಣ. ದಯೆ ಪ್ರೇಮಗಳ ಅಪಾರ, ಅಕ್ಷಯ ಶರಧಿಯೇ ಬತ್ತಿ ಬರಡಾಗಿ ಬಾಯ್ಬಿಟ್ಟುದನ್ನು ನೋಡಿದ್ದಾನೆ ಆತ. ಎಂದೆಂದೂ ನಡೆಯದ, ನಡೆಯಲಾರದ, ನಡೆಯಲಾಗದ ರುದ್ರಭೀಕರತೆಯನ್ನು ಕಂಡು ನಿರ್ವಾಕ್ ಸ್ತಂಭಿತ ದೃಷ್ಟಿಯಿಂದ ಶಿಲಾಪ್ರತಿಮೆಯಂತೆ ನಿಂತಿದ್ದಾನೆ ಲಕ್ಷ್ಮಣ. ಹೀಗೆ ಕೆಲಹೊತ್ತು ಕಳೆದಿದೆ. ದುಗುಡ ದುಮ್ಮಾನಗಳ ಗುಡುಗು ಮೋಡಗಳ ಅಬ್ಬರ ಆರ್ಭಟಗಳು ಕಳೆದು ಕಣ್ಣೀರ ಮಳೆಕರೆಯುತ್ತಿದೆ ಈಗ. "ಅಣುಗದಮ್ಮ! ಇತ್ತಲ್ ಬಾರೈ!" ಎಂದು ಕರೆದಿದ್ದಾನೆ ರಾಮ ಕಣ್ಣೀರ ಕೊಳದಲ್ಲೇ ತೋಯುತ್ತ ಮಿಾಯುತ್ತ. ಲಕ್ಷ್ಮಣನ ಕುರಿತು 'ಅಣುಗದಮ್ಮ' ಎಂಬ ಪದಪ್ರಯೋಗವನ್ನು ಕೇಳಿದ ಕೂಡಲೇ ನಮ್ಮ ಮನಸ್ಸು ಒಮ್ಮೆಲೇ ತೃತೀಯಾಶ್ವಾಸಕ್ಕೆ ನೆಗೆಯುತ್ತದೆ. ಅಂದು ಅಗಸ್ತ್ಯನನ್ನು ಕರೆತರಲು ರಾಮನು ಲಕ್ಷ್ಮಣನನ್ನು ಕರೆದಟ್ಟುವಾಗಲೂ ಕವಿ ಲಕ್ಷ್ಮಣನ ಕುರಿತು ಇದೇ "ಅಣುಗದಮ್ಮ" ಎಂಬ ಪದವನ್ನು ಪ್ರಯೋಗಿಸುವ ಚಾಕಚಕ್ಯತೆಯನ್ನು ತೋರಿದ್ದಾನೆ. ಆ ಎರಡೂ ಸಂದರ್ಭಗಳನ್ನು ತೂಗಿ ನೋಡುವ ಅವಕಾಶವನ್ನು ಒದಗಿಸಿದ್ದಾನೆ ಕವಿ. ಅಂದು-ಇಂದುಗಳಲ್ಲಿ ಎಂತಹ ಅಂತರ! ಭೂಮ್ಯಾಕಾಶಗಳಷ್ಟು!

ಇರಲಿ. ಹೀಗೆ ಕರೆದು ರಾಮ ಮುಂದುವರಿಸಿದ್ದಾನೆ "ಅಂದಂದಿಂಗಮೆನಾಣತಿಯಂ ಮಿಾರಿದೆಯಿಲ್ಲಂ ಬಲ್ಲೆಂ." ಓ! ಇದೆಂತಹ ನೆನಕೆ. ಇದು ನೆನಕೆಯಲ್ಲ ನೀನು ಇಂದೂ ನನ್ನಾಣತಿಯನ್ನು ಮಿಾರಬಾರದು ಎಂಬ ನಿರ್ಧಾರದ ಖಚಿತ ನುಡಿ! ರಾಮ ನುಡಿಯುತ್ತಿದ್ದಾನೆ "ಈಗಳ್ ಪೆರೆಗೆ ಕರೆಯೆಂತಂತೆವಿಮ್ಮಾ ಬಳಿಗೆ ಪಳಿಯೊದವಿದತ್ತೀಜಾನಕಿಯ ದೂಸರಿನಾಕೆಯಂ ಕಾನನಕುಯ್ದು ತೊರೆದು ಬಾರಾ!" ಇದು ತೋರಿಕೆಗೆ ಕೋರಿಕೆ ಮಾತ್ರ. ಆದರೆ ಇದು ಕೋರಿಕೆ ಮಾತ್ರವೇನು? ಅನುಲ್ಲಂಘನೀಯ ಆಜ್ಞೆಯಲ್ಲದೆ ಮತ್ತೇನು ಇದು!

"ಜೀಯ" ಎಂದು ಕರೆದಿದ್ದಾನೆ ರಾಮನನ್ನು ಲಕ್ಷ್ಮಣ! ಮುಂದುವರಿಸಿ "ಅಣ್ಣನಾಜ್ಞೆಯಂ ಮೀರಿನಡೆಯೆ ಕುಂಭೀಪಾಕಂ; ನಿರ್ದುಷ್ಟೆಯಾದೀ ಅತ್ತಿಗೆಯ ನರಿದುಂ ನಟ್ಟಡವಿಗುಯ್ದು ಬಿಡೆ ರೌರವಂ. ಎನ್ನೊಡೆಯ, ಅಂತದರೊಳ್ ತುಂಬಿದ ಬಸಿರಿಯತ್ತೆ! ಎಂತಯ್ ಕೊಂಡುಯ್ದು ಪಾಪಿ ಕೈವಲ್ಯಲಕ್ಷ್ಮಿಯಂ ಬಿಡುವಂತಿರೆ, ನಿರ್ಘೃಣನಾಂ ಭಾಗ್ಯಲಕ್ಷ್ಮಿಯಂ ಬಿಡುವೆಂ" ಎಂದಿದ್ದಾನೆ. ಇದು ಸಂಬೋಧನೆ ಯಿಂದ ಪ್ರಾರಂಭವಾಗಿ ತೋರಿಕೆಗೆ ಬೇಡಿಕೆಯಾಗಿದೆ. ಹೀಗೆ ಕವಿ ಒಮ್ಮೆ ಲಕ್ಷ್ಮಣನಿಗೆ ನಿಟ್ಟುಸಿರು ಬಿಡಲು ಅವಕಾಶಕೊಟ್ಟನೊ ಎಂದು ಭಾವಿಸಬೇಕು. ಖಂಡಿತವಾಗಿ ಇದು ಬೇಡಿಕೆಯಲ್ಲ. ಆ ಸಂಬೋಧನ ಪದಗಳನ್ನು ತೆಗೆದು ನೋಡಿ! ಅವು ಆತ್ಮಗತ ಉದ್ಗಾರಗಳು ಮಾತ್ರ! ಅವು ಆತ್ಮಗತ ಉದ್ಗಾರಗಳಲ್ಲದಿರುತ್ತಿದ್ದರೆ "ಅಣ್ಣನಾಜ್ಞೆಯಂ ಮೀರಿನಡೆಯೆ..." ಎಂಬಲ್ಲಿ "ಅಣ್ಣನಾಜ್ಞೆಯಂ" ಬದಲು "ನಿನ್ನಾಜ್ಞೆಯಂ" ಎಂಬ ಪದ ಪ್ರಯೋಗವಾಗುತ್ತಿದ್ದಿಲ್ಲವೇನು! 'ಜೀಯ', 'ಎನ್ನೊಡೆಯ'ಗಳು ಅಲ್ಲಿ ನೆಪಕ್ಕೆ ಮಾತ್ರ. ಇಲ್ಲ, ಲಕ್ಷ್ಮಣ ಎಂದೂ ರಾಮನಿಗೆ ಮಾರುತ್ತರ ಕೊಡಲಾರ; ಬೇಡಿಕೊಳ್ಳಲಾರ. 'ಜೀಯ ಹಸಾದ'ವು ಮುದ್ದಣನ ಲಕ್ಷ್ಮಣ! ಆದರೇನು? 'ಜೀಯ ಹಸಾದ'ದೊಳಗೆ ಅಜೀಯ ಆತ್ಮವಿದೆ! ಸಿಪ್ಪೆ ಗೆರಟೆ ಗಳೊಳಗಿನ ಕೊಬರಿಯಂತೆ! ಇದೇ ಮುದ್ದಣನ ಲಕ್ಷ್ಮಣ!

ವಿಷವನ್ನು ಪಾನಮಾಡು ಎಂದ ಅಣ್ಣನಾಜ್ಞೆಗೆ ಒಮ್ಮೆ ಹಿಂದುಮುಂದು ನೋಡಿದ್ದಾನೆ ಲಕ್ಷ್ಮಣ; ತನಗಾಗಿ ಅಲ್ಲ — ಅತ್ತಿಗೆಗಾಗಿ, ಅಣ್ಣನಿಗಾಗಿ, ರಾಜ್ಯ ಕ್ಕಾಗಿ. ರಾಮನದು ಅಚಲ ನಿರ್ಧಾರವೆಂದಾಯಿತೊ, ತುಯ್ಯಲಾಡಿದ ಲಕ್ಷ್ಮಣನ ಮನ ಕಲ್ಲಾಗಿದೆ. "ಎಲೆ ಅಣ್ಣ! ಇದಕೊಳ್ ಚಂಡಾಲಂ ಸಿದ್ಧವಿರ್ಪೆಂ. ಅಡಿಯಾಣೆ! ಆಣತಿಯೆಂತಂತು ನಡೆವೆಂ. ಮುನ್ನಂ ಭಾರ್ಗವಂ ತಂದೆಯ ನನ್ನಿಗೆ ಮಾತೆ ರೇಣುಕೆಯಂ ಕೊಲ್ಲನೆ! ಅಂತಿರಾಂ ನೀನಯ್ಯಂಗೆ ಪಡಿಯಾಗಿರೆ ಮಾತೆ ಸೀತೆಯಂ ಕೊಲ್ವೆನೊ ಮೇಣ್ ಕಾಡೊಳ್ ಸಿಂಗದಿಕ್ಕೆಯೊಳ್ ಬಿಸುಳ್ವೆನೊ ಪೇಳ!" ಎಂದಿದ್ದಾನೆ. ನಮ್ಮ ತುಟಿಗಳಲ್ಲಿ ವಿಷಾದದ ನಗುವೊಂದು ಸುಳಿಯುತ್ತದೆ ಲಕ್ಷ್ಮಣನ ಮಾತನ್ನು ಕೇಳುವಾಗ. ಆತ ಎಷ್ಟೆಷ್ಟು ಬಿರುಸು ಮಾತುಗಳನ್ನಾಡು ತ್ತಾನೋ ಅಷ್ಟಷ್ಟು ದಯೆ, ಪ್ರೇಮ, ಕರುಣೆಗಳು ತುಂಬಿದ ಆತನ ಅಂತರಂಗ ಬಯಲಾಗುತ್ತಿದೆ! ಆತ ಸೋತಿದ್ದಾನೆ ಈ ನಟನೆಯಲ್ಲಿ! ಸಂಪೂರ್ಣ ಸೋತಿದ್ದಾನೆ!! ಏನಾದರೇನು? ಆತನೀಗ ಲಕ್ಷ್ಮಣನಲ್ಲ. ಅತ್ತಿಗೆಯ ಒಲವಿನ ಮೈದುನನಲ್ಲ. ಅಗ್ರಜನ ಆಜ್ಞಾನುಧಾರಿ ತಮ್ಮ! ಸಮ್ರಾಟನ ಕರ್ತವ್ಯಪಾಲಕ ಸೇವಕ!

ರಾತ್ರಿ ಕಳೆದಿದೆ. ಆದರೆ ಲಕ್ಷ್ಮಣನ ಪಾಲಿಗೆ ಆ ರುದ್ರಭೀಕರ ರಾತ್ರಿ ಹೇಗೆ ಕಳೆಯಿತೊ ಕವಿ ತಿಳಿಸಲೇ ಇಲ್ಲ. ಆತ ಪ್ರಾರ್ಥಿಸುತ್ತಿರಬಹುದು: ತಾಯಿ ಪೃಥಿವಿ, ನನ್ನನ್ನು ನಿನ್ನ ಬಸಿರೊಳಗೆ ಒಳಕೊಳ್ಳು. ಆಕಾಶವೇ ಕುಸಿದು ಬೀಳು! ಕುಲದೈವ ಸೂರ್ಯನಾರಾಯಣನೇ ನೀನು ಮತ್ತೆ ಮೂಡದಿರು, ಈ ಕತ್ತಲೆ ಎಂದೆಂದಿಗೂ ಕತ್ತಲಾಗಿಯೇ ಉಳಿಯಲಿ. ಏನಾದರೇನು, ಆ ಅದೃಷ್ಟಹೀನನ ದುಃಖದಲ್ಲಿ ಜಡಚೇತನಗಳಾವುವೂ ಪಾಲುಗೊಳ್ಳಲಿಲ್ಲ. ಅಂದು ಪಾರ್ವತೀಪತಿ ಲೋಕಕಂಟಕ ನಿವಾರಣಾರ್ಥವಾಗಿ ವಿಷಪಾನ ಮಾಡಿದ್ದ. ಆದರೂ ಪಾರ್ವತಿ ಯಾದರೂ ಅದನ್ನು ಅಂದು ತಡೆದಿದ್ದಳು. ಆದರೆ ಇಂದು ಊರ್ಮಿಳಾಪತಿ ಯಾವ ವಿಷವನ್ನು ಪಾನಮಾಡಲಿರುವನೋ ಅದರಿಂದ ರಾಜ್ಯವೇ ಬೆಂದು ಹೋಗಲಿದೆ. ಆದರೇನು ಎಷ್ಟು ಬೇಡಿಕೊಂಡರೂ ಯಾರೂ ಅದನ್ನು ತಡೆಯಲಿಲ್ಲ. ಎಲ್ಲರೂ ಮೌನ ಸಮ್ಮತಿಯನಿತ್ತರೊ ಏನೊ! ಭಾಗ್ಯಹೀನ ಲಕ್ಷ್ಮಣನನ್ನು ಮೂದಲಿಸುವಂತೆಯೇ ಆತನ ಕುಲದೈವ 'ನೇಸರ್ ತಳತಳನೆ' ಮೂಡಿತು!

ಈಗ ಲಕ್ಷ್ಮಣ ಮುಂದಿನ 'ಮಹಾಸಾಹಸ'ಕ್ಕೆ ಸನ್ನದ್ಧನಾಗಬೇಕಾಗಿದೆ. ತಾಯಿಗೆ ಎರಗಿದ್ದಾನೆ. ಸೂರ್ಯನಿಗೆ ಅಂಜಲಿಯನ್ನೆತ್ತಿ ಹಿಡಿದು ಅಶ್ರುಪೂರಿತ ವಿಲೋಚನನಾಗಿ ಅಂತರಂಗವನ್ನು ತೋಡಿಕೊಂಡಿದ್ದಾನೆ. "ಎಂತೊ ತೊಳಚಿ ದೋಂಟದೊಳ್ ತುರುಚೆ ಪುಟ್ಟುವಂತಿರೆ ನಿನ್ನೀಬಳಿಯೊಳ್ ಜಾಳನೆ ಪಂಚಮನಾಂ ಪುಟ್ಟಿದೆಂ." ಆತ್ಮಭರ್ತ್ಸನೆಯೊಂದೆ ಆತನಿಗುಳಿದಿರುವ ಹಾದಿ. "ಅಗ್ರಜಂಗಾಂ ಬಳಿಯ ನಿರ್ಪಿನಂ ರಾಯದವಸಿಯ ಕುವರಿಯಂ ಭೂಸುತೆಯನಯೋನಿಜೆಯಂ ಮಂಗಳ ಸ್ವರೂಪೆಯುಂ ಸೀತೆಯನಣ್ಣನಾಣತಿಯಿಂ ಕಾಡೊಳ್ ಬಿಸುಡಲ್ಕೆ ಬದ್ಧನಾದೆಂ. ಅದರಿನಿದೆಪೋಪೆಂ. ನೀಂ ಜಗಚ್ಚಕ್ಷುವಾಗೆ ಕುಂದುಕೊರತೆಯುಂ ಕಡೆಗೊತ್ತುತೆನ್ನ ನುದ್ಧರಿಸೈ" ಎಂದು ಕೈಮುಗಿಯುತ್ತಿದ್ದಾನೆ. ನಿಜ ಜಗಚ್ಚಕ್ಷುವಾದ ಕುಲದೈವ ಸೂರ್ಯನಾರಾಯಣ ಒಂದು ದಿನ ಈತನ ಕುಂದುಕೊರತೆಗಳನ್ನು ಕಡೆಗೊತ್ತಿ ಉದ್ಧರಿಸಿಯಾನು. ಅದರಲ್ಲಿ ಸಂಶಯದ ಲವಲೇಶವಿಲ್ಲ. ಆದರೆ ಇಂದು ಈ ಮೂಕ ಜೀವದ ಬೇಗೆಯನ್ನು ತವಿಸಬಲ್ಲವರಾರಾದರೂ ಇರುವರೇ? ಇರುವರೇ? ಇಲ್ಲ ಅದನ್ನು ಆ ಮುಗ್ಧಜೀವಿ ಅನುಭವಿಸಿಯೇ ತೀರಬೇಕು.

ಲಕ್ಷ್ಮಣ ತೇರನ್ನು ಸಿದ್ಧಗೊಳಿಸಿದ್ದಾನೆ. ಅಶ್ವಗಳನ್ನು ಹೂಡಿದ್ದಾನೆ. ಸೀತಾದೇವಿಯ ಮಲಗುಮನೆಯ ಬಾಗಿಲಲ್ಲಿ ತಂದು ನಿಲ್ಲಿಸಿದ್ದಾನೆ ರಥವನ್ನು. ಈಗಲೋ ಕರುಳು ಹೊರಳುತ್ತಿದೆ. ಹೃದಯ ತುಟಿಯುತ್ತಿದೆ. ಕಣ್ಣು ನೀರ್ಗೊಳ

ಗಳಾಗುತ್ತಿವೆ. ಆದರೆ ಅದಕ್ಕೀಗ ಕಾಲವಲ್ಲ. ಅದು ಲಕ್ಷ್ಮಣನ ಪಾಲಿಗೆ ಸಲ್ಲ. ಅಂತಹ ಯೋಗ್ಯತೆಯನ್ನು ಪಡೆದುಬಂಧಿಲ್ಲ ಆತ! ಮನಸ್ಸನ್ನು ಕಲ್ಲುಮಾಡಿ "ಇದೆ ಇದೆ ಬಣ್ಣದೇರ್, ವನಕಂಯ್ವೊಡೆಂದೆ ರಾಘವನಟ್ಟಿದಂ, ತಳ್ವದೆ ಪೊರಮಡಿಂ" ಎಂದು ಕರೆಯತ್ತಿದ್ದಾನೆ. ಸೀತೆಯನ್ನು ವಿಪತ್ತೇ ಬಾಯ್ಬಿಟ್ಟು ಕರೆಯುತ್ತಿರುವಾಗ ಅವನು ಕರೆಯುವುದೇನು! ಲಕ್ಷ್ಮಣ ನೆವ ಮಾತ್ರ. ಸಾಧನ ಮಾತ್ರ.

ಲಕ್ಷ್ಮಣನಿಗೆ ಕ್ಷಣಾರ್ಧದಲ್ಲಿ ಕಳೆದ ರಾತ್ರಿ ಸೀತೆಯ ಪಾಲಿಗೆ ಸುದೀರ್ಘ ವಾಗಿ ಕಂಡಿದೆ. ಈ ಕತ್ತಲು ಕರಗುತ್ತಲೇ ಇಲ್ಲವೇನು? ನಾನು ಋಷ್ಯಾಶ್ರಮಕ್ಕೆ ಹೋಗಲು ಉತ್ಸುಕಳಾಗಿರುವೆನೆಂದೇ ಈ ರಾತ್ರಿ ತಳುವುತ್ತಿರುವುದೇನು? ಹೀಗೆ ಯೋಚಿಸುತ್ತ, ಚಿಂತಿಸುತ್ತ ಕಣ್ಣಲ್ಲೇ ಬೆಳಗಾಗಿದೆ ಸೀತೆಗೆ. ಹೊರವಾಗಿಲಲ್ಲಿ ಆದಾರ ಕರೆ? ಓ! ಲಕ್ಷ್ಮಣನದು. ಉತ್ಸಾಹದಿಂದ ಒಮ್ಮೆಲೆ ಬಾಗಿಲು ತೆರೆದು ಹೊರಬಂದಿದ್ದಾಳೆ. ಲಕ್ಷ್ಮಣನ ಮೊಗ ಕಳೆಗೆಟ್ಟಿದೆ. ಅಲ್ಲಿ ಲಕ್ಷ್ಮಣನ ಅಂತರಂಗದ ದುಃಖ ದಪ್ಪ ಅಕ್ಷರದ 'IN' ಬೋರ್ಡನ್ನು ತೂಗಹಾಕಿ ನಾನು ಒಳಗಿದ್ದೇನೆ ಎಂದು ಕರೆದು ಹೇಳುತ್ತಿತ್ತು! ಆದರೆ ಆನಂದೋತ್ಸಾಹಿತೆಯಾದ ಸೀತೆಗೆ ಅದನ್ನೋದಲು ಅವಕಾಶವೆಲ್ಲಿದೆ? ಆಕೆಗೆ ಆಕೆಯದೇ ಪ್ರಪಂಚ. ಹೊರಗಿನದೇನು ಕಾಣಿಸೀತು. ಮಕ್ಕಳಂತಹ ಮುಗ್ಧ ಹೃದಯ ಪಾವಿತ್ರ್ಯ—ಸೀತೆ ನುಡಿಯುತ್ತಿದ್ದಾಳೆ "ಎಸ್ಸೆ ಮೈದುನ, ಜೀವಿತೇಶನೆನ್ನೊಂದು ಬಿನ್ನಪಮಂ ತೂರದೆ ನಲ್ಮೆ ಮಿಗೆ ಪೊರೆದನೆ! ನಿನ್ನಂಪೇಳ್ದಟ್ಟಿದನೆ! ಕರುಣಾಕರನಲ್ತೆ! ದೀನೆಯಂ ನಲ್ಲನಲ್ಲದೆ ಮೇಣಾವಂ ಕಾವಂ? ಆಳ್ದನಡಿದಾವರೆಗಳಾವಗಂ ಸೊಗಮಿರ್ಕೆ!" ಹಿಂದು ಮುಂದನರಿಯದ ಬಲಿಪಶು ಸೀತೆ ಮಾತಾಡುತ್ತಿರುವುದನ್ನು ಕೇಳುವಾಗ ಯಾರ ಹೃದಯ ತಾನೇ ಮರುಕಗೊಳ್ಳದಿದ್ದೀತು. ಸೀತೆಗೆ ಇಷ್ಟು ಉತ್ಸಾಹವಿದ್ದರೂ ತೇರನ್ನು ಇಷ್ಟು ಬೇಗನೆ ಏಕೆ ತಂದನೆಂದು ಆಶ್ಚರ್ಯ. ತಾನಿನ್ನೂ ಸಿದ್ಧಳಾಗಿಲ್ಲವಲ್ಲಾ! 'ಆನತ್ತೆವಿರ್ಗೆರಗಿ ಪರಕೆಗೊಂಡೆನಿಲ್ಲ! ಮಾಳವಿಯರಂ ಬೆಸಗೊಂಡೆನಿಲ್ಲ! ಚಂದ್ರಮತಿಗೆ ಪೇಳ್ದೆನಿಲ್ಲ!' ಏನು ಮಾಡಲಿ? ತಳುವಿದರೆ ಪಯಣವೇ ತಪ್ಪಿಹೋದೀತೋ ಎಂಬಂತೆ ಹೆದರಿದ್ದಾಳೆ ಸೀತೆ! ಎಂದೇ ತನ್ನನ್ನು ತಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದಾಳೆ. ದೂರದ ಪಯಣ ತಾನೆ, ತಡಮಾಡಬಾರದು. ಅವರೇ ತಿಳಿದುಕೊಂಡಾರು, ಅಥವಾ ಪತಿ ತಿಳಿಸಿಯಾನು. ಹೇಗಿದ್ದರೂ ಸ್ವಲ್ಪ ದಿನಗಳಲ್ಲೇ ಹಿಂತಿರುಗಿ ಬರುತ್ತೇನೆ ತಾನೆ; ಆಗ ಅವರನ್ನು ಸಂತೈಸಬಹುದು. ಹೀಗೆ ಭಾವಿಸಿ "ಆಯ್ತಾಯ್ತು! ಪೋಪಂ

ಪೋಪಂ" ಎಂದಿದ್ದಾಳೆ 'ಆನಂದಾಶ್ರುವಿಲುಳಿತ ಕಮಲವಿಲೋಚನೆ ಚಂದ್ರಮುಖಿ ಮುನಿಕಾಂತಾದರ್ಶನೋತ್ಕಂಠೆ ಪುಳಕಿತಸರ್ವಾಂಗಿ.'

ಈ ಮಧ್ಯೆ ನಡೆದ ಭಯಂಕರ ಭೂಕಂಪದ ಸುದ್ದಿ ಸೀತೆಗೆ ಸಿಕ್ಕಿಲ್ಲ. ಆ ಕಂಪನದಿಂದ ಬಿರಿದು ಆಂ ಎಂದು ಬಾಯ್ಬಿಟ್ಟ ನೆಲದ ಮೇಲೆ ಸುಳ್ಳಿನ ಹಸೆಹಾಸಿ ಆ ಹಸೆಯ ಮೇಲಿಂದಲೇ ತನ್ನನ್ನು ನಡೆಯಿಸಿಕೊಂಡು ಹೋಗುವ ರುದ್ರನಾಟಕ ನಡೆದಿದೆ ಎಂಬುದನ್ನು ಪಾಪ ಸೀತೆಯೇನು ಬಲ್ಲಳು! ಆ ಹಸೆಯಾದರೂ ಎಷ್ಟು ಆಕರ್ಷಕ. ಮಿರಮಿರನೆ ಮಿರುಗುತ್ತಿದೆ. ವಿಧಿಯ ಕೈವಾಡದಿಂದ ಅದಕ್ಕೆ ಆಕೆಯ ಇಚ್ಛೆಯ ರಂಗು ಕೂಡಾ ಬೆರೆತು ಮತ್ತಷ್ಟು ಮೋಹಕವಾಗಿದೆ. ಸೀತೆ ಆ ಹಸೆಯ ಮೇಲಿಂದ ನಡೆದು ಹೋದಳೊ ಆಕೆಯ ಮುಂದನ್ನೇ ಊಹಿಸಲಸಾಧ್ಯವಾಗಿದೆ. ಏನೂ ಅರಿಯದ ಶಿಶುಹೃದಯದ ಆ ಮುಗ್ಧೆಯಾದರೊ "ಪೋಪಂ ಪೋಪಂ" ಎಂದು ಅದರ ಮೇಲಿಂದ ನಡೆದು ಹೋಗಲು ತವಕಿಸುತ್ತಿರುವುದನ್ನು ಕಾಣುವಾಗ ನಮಗೆ "ನಿಲ್ಲು ತಾಯಿ! ನಿಲ್ಲು!" ಎಂದು ಆಕೆಯನ್ನು ಕೂಗಿ ನಿಲ್ಲಿಸಬೇಕೆಂದು ಆಶೆಯಾಗುತ್ತಿದೆ! ಆದರೆ ಕಾಲದ ಅಚಿಂತ್ಯ ದೂರದಲ್ಲಿರುವ ಆಕೆಗೆ ನಮ್ಮ ಕರೆ ಹೇಗೆತಾನೇ ಕೇಳಿಸೀತು! ಅದು ವ್ಯರ್ಥಸಾಹಸವೇನೊ ನಿಜ. ಆದರೂ ಹೃದಯ ಮಾತ್ರ ಮೌನದ ಮಹಾಸ್ವರದಲ್ಲಿ ಕೂಗುತ್ತಲೇ ಇರುತ್ತದೆ "ನಿಲ್ಲು ತಾಯೀ! ನಿಲ್ಲು!" ಎಂದು.

ಮೊದಲೇ ತಡೆಯಲಾರದ ವೇದನೆಯನೆಂತೊ ಒಳಗೆ ಅದುಮಿ ಹಿಡಿದು ತಡೆದುಕೊಂಡಿದ್ದ ಲಕ್ಷ್ಮಣನಿಗೆ, ಸೀತೆ ತನಗೆ ಬರಲಿರುವ ಘೋರವಿಪತ್ತಿನ ಲವ ಲೇಶವೂ ಅರಿಯದೆ ಉಲ್ಲಸಿತಳಾಗಿ ಮಗುವಿನಂತೆ "ಪೋಪಂ ಪೋಪಂ" ಎನ್ನುವುದನ್ನು ಕೇಳುವಾಗ ತನ್ನ ಎದೆಯ ಮೇಲಿಂದ ಯಾರೋ ಗರಗಸವನ್ನು ಎಳೆದಂತಾಗಿದೆ. ಈ 'ಕೈವಲ್ಯಲಕ್ಷ್ಮಿಯಂ' ತನ್ನ ಈ ಪಾಪಿ ಕೈಗಳಿಂದಲೇ ಕಾಡಿಗಟ್ಟಬೇಕಾಯಿತಲ್ಲಾ. ಅಯ್ಯೋ ಅತ್ತಿಗೆಯಾದರೂ ಋಷ್ಯಾಶ್ರಮಕ್ಕೆ ಹೋಗಬೇಕೆಂದು ಅಣ್ಣನನ್ನೇಕೆ ಬೇಡಿದಳೊ ಎಂದೆನಿಸಿದೆ ಲಕ್ಷ್ಮಣನಿಗೆ. ಮುಳುಗುವವನು ಹುಲ್ಲುಕಡ್ಡಿಯಾದರೂ ದೊರಕಿದ್ದರೆ ಬದುಕುತ್ತಿದ್ದೆನೆಂದು ಭಾವಿಸುವಂತೆ ಕೇಳುತ್ತಿದ್ದಾನೆ "ಮಾತೆ! ವನಕೆ ಪೋಪೆನೆಂದು ಕಾಂತನನೇತರ್ಕೆ ಬೇಡಿದಾ! ಏಂ ಸೊಗಮಂ ಕಾಣ್ಬುದುಂಟು! ಮುನ್ನುಂಡುದು ಸಾಲದೆ! ವಿಪಿನಂ ಕ್ರೂರವ್ಯಾಳವೃಕಸೂಕರಚಮೂರುಕಂಠೀರವನಿಷೇವಿತಮಲ್ತೆ! ಈ ಬಗೆಗೇವೇಳ್ವೆನೊ!"

ಸೀತೆಗೋ ಲಕ್ಷ್ಮಣನ ಈ ಮಾತುಗಳಲ್ಲಿ ಹುರುಳೇ ಕಂಡಿಲ್ಲ. ಏನು ಹುಚ್ಚು ಮಾತಾಡುತ್ತಿದ್ದಾನೆ ಮೈದುನ. ದುಷ್ಟಮೃಗಗಳ ಸುದ್ದಿ ನಮಗೇಕೆ? ನಾವು ಬೇಟೆಗೆ ಹೋಗುತ್ತಿರುವುದೇನು? ಋಷ್ಯಾಶ್ರಮದಂತಹ ಪುಣ್ಯಸ್ಥಳಕ್ಕೆ ಹೋಗಲೆಂದು ಅಪ್ಪಣೆ ಪಡೆದು ಹೊರಟಿರುವಾಗ 'ತಡೆವುದಂದಮೆ ಕಂದ!' ಎಂದು ಕೇಳಿದ್ದಾಳೆ. ಅದೂ 'ಶ್ರೀ ರಘುಕುಲವಾರ್ಧಿಪೂರ್ಣ ಶಶಾಂಕನೊಲ್ಮೆ ಎನ್ನೊಳಿರೆ ಬನ್ನಮಾವುದು?' ಇದು ಆಕೆಯ ದೃಢ ವಿಶ್ವಾಸ. 'ನಿಕ್ಕುವಂ ತಳ್ವದೆ ಪೋಪಂ' ಎಂದಿದ್ದಾಳೆ ಸೀತೆ.

ಬಿರುಗಾಳಿಯ ಉತ್ಪಾತದಿಂದ ಸಮುದ್ರಮಧ್ಯೆ ದಿಕ್ಕು ಕಾಣದೆ, ದಡ ಸೇರುವ ಹಂಬಲದಿಂದ ಅತ್ತಿತ್ತ ನೋಡುತ್ತಾ ದೂರದ ಆಕಾಶದಲ್ಲಿ ಚಿಕ್ಕ ಚುಕ್ಕೆಯೊಂದು ಕಂಡರೂ, ದೇವರೇ! ಅದು ಹಕ್ಕಿಯಾಗಿರಬಾರದೇ ಅದು ನೆಲದ ಸಂದೇಶವನ್ನು ತಂದಿರಬಾರದೇ ಎಂದು ಆಶಾತುರನಾಗಿ ಬೇಡಿಕೊಳ್ಳುವ ನಾವಿಕ ನಂತಾಗಿದೆ ಲಕ್ಷ್ಮಣನ ಸ್ಥಿತಿ. 'ಶ್ರೀ ರಘುಕುಲ ವಾರ್ಧಿಪೂರ್ಣ ಶಶಾಂಕನೊಲ್ಮೆ ಎನ್ನೊಳಿರೆ ಬನ್ನಮಾವುದು' ಎಂದ ಸೀತೆಯ ನುಡಿಕೇಳಿ "ದೇವಿಯರ್ ಬಯಸು ವಂತಿರೆ ಪಯಣಂ ಲೇಸಕ್ಕೆ" ಎಂದು ಭಾಸ್ಕರನಂ ಬೇಡಿಕೊಂಡಿದ್ದಾನೆ! ಎಷ್ಟು ಚೆನ್ನಾದ ಮನೋವಿಶ್ಲೇಷಣೆ ಕವಿಯದು!

ಸಿದ್ಧವಾಗಿದ್ದ ರಥವನ್ನೇರಲೆಂದು ಎರಡು ಹೆಜ್ಜೆ ಬಂದವಳು "ಓ ಓ! ಇರಿರ್; ಬಂದೆಂ" ಎಂದು ತಡೆದು, ಹಿಂತಿರುಗಿ ಒಳಹೊಕ್ಕಿದ್ದಾಳೆ ಸೀತೆ. ಮುನಿಪತ್ನಿ ಯರಿಗೆ ಕೊಡಲೆಂದು ಕಟ್ಟಿದ್ದ ಬಾಯನಂಗಳನ್ನು ಮರೆತಿದ್ದಳಾಕೆ! 'ಕವಡನರಿ ಯದ ಬಾಲೆ'ಯ ಈ ನಡೆನುಡಿಗಳನ್ನು ಕಂಡಷ್ಟೂ ನಮ್ಮ ಎದೆಗೆ ನಾಟಿರುವ ಈಟಿ ಆಳಕ್ಕೆ ಇಳಿಯುತ್ತಿದೆ.

ಓದುಗನಿಗೇ ಇಂತು ತಡೆಯದ ನೋವಾಗುತ್ತಿರುವಾಗ ಲಕ್ಷ್ಮಣನ ಅಂತರಂಗದ ಸ್ಥಿತಿ ಎಂತಿದ್ದೀತು! ಅದು ಅಣುಬಾಂಬು ಆಸ್ಫೋಟಿಸಿದ ನೆಲ! ಸೀತೆಯನ್ನು ಕಾಡಿಗೊಯ್ಯುವುದರಲ್ಲಿ ನೆರವಾಗುತ್ತಿರುವ ಈ ರಥ ಹಯಗಳೂ ನನ್ನಂತೆ ಯಾವ ಜನ್ಮದಲ್ಲಿ ಎಂತಹ ಪಾಪಮಾಡಿವೆಯೊ ಎನಿಸಿದೆ ಲಕ್ಷ್ಮಣನಿಗೆ. ಆದರೆ ಮರುಕ್ಷಣದಲ್ಲಿ 'ಕೊಲೆಗನಾನಿರೆ' ನಿರ್ಲೇಪ ನಿರ್ದೋಷಿ ರಥ ಹಯಗಳ ನ್ನೇಕೆ ದೂರಲಿ? ಅವು ನನ್ನಂತೆ ದುರ್ದೈವಿಗಳಲ್ಲ; ಪುಣ್ಯವಂತ ಭಾಗ್ಯಜೀವಿಗಳೇ. 'ತೇರೆ! ನೀನೀ ಕಡೆವೊಳ್ತಿಂಗಂ ಭೂಮಿಯಂತಿರೆ ಭೂಸುತೆಯಂ ಪೊರೆವೆ ಗಡ! ತುರಗಂಗಳೇ! ನೀಮುಂ ಧನ್ಯರ್; ಸೀತಾಕಟಾಕ ವೀಕ್ಷಣ ಪರಿಪೂತಗಾತ್ರರಲ್ತೆ!'

ಎಂದಿದ್ದಾನೆ ಲಕ್ಷ್ಮಣ. ತಾಯಿ ಭೂಮಿಯೇ ಹೊರಲಾರದ ಈ ಮಹಾಪಾಪದಲ್ಲಿ ಪ್ರಪಂಚದ ಸ್ಥಾವರಜಂಗಮಗಳಾವುವೂ ಪಾಲುಗಾರರಿಲ್ಲ; 'ಅಂಗುಲಿಯೆ ಸಾನೊರ್ವನೆ'. ಸನ್ನಂತಹ ಪಾಪಿಯನ್ನು ತಾಯಿ ಏನೆಂದು ಹೆತ್ತಳು? ತಂದೆ ಏಕೆಂದು ಸಲಹಿದ? 'ಮುನ್ನಮೆಳವರೆಯದೊಳೀರೇಳ್ಗಾಲಂ ವನಂಬೊಕ್ಕು ನಿದ್ರಾಹಾರಂಗಳನುಳಿದು ಶ್ರೀರಾಮಚಂದ್ರಮನಂ ತ್ರಿಕರಣಶುದ್ಧಿಯಿಂ ಸೇವಿಸಿಯುಂ ಪಡೆದ ಸೃಪಿನೇಳ್ಗೆಗಿನಿತೊಂದು ಫಲಮಾಯ್ತೇ!' ಎಂದು ದುಃಖಿಸುತ್ತಿದ್ದಾನೆ.

ಇಷ್ಟರಲ್ಲಿ ಸೀತೆ ಬಾಗಿನಗಳ ಕರಂಡವನ್ನು ಹಿಡಿದುಕೊಂಡು ಹೊರಬಂದಿದ್ದಾಳೆ. "ತಳ್ವದಿರ್ ಪೋಪಂ ಪೋಪಂ" ಎಂದು 'ಸಂಭ್ರಮದ ನಾಟ್ಯದಿಂ ತೇರನೇರಿದಳ್.' ವಿಧಿಯೇ ಕೈಹಿಡಿದು ಎಳೆಯುತ್ತಿರುವಾಗ ಸೀತೆಯೆಂತು ತಳುವಿಯಾಳು? ರಥವು ಧೀಂಕಿಟ್ಟಿತು ಅಯೋಧ್ಯೆಯ ಭಾಗ್ಯಲಕ್ಷ್ಮಿಯನ್ನು ಹೊತ್ತುಕೊಂಡು! ಅರಮನೆಯ ಪುಣ್ಯದ ಭಂಡಾರ—ರಾಮನ ಬಾಳಿನ ಬೆಳಕು—ಭದ್ರೆ ಸೀತೆ ಅರಮನೆಗೆ ಬೆನ್ನುಹಾಕಿ ಪಯಣಹೊರಟಳು ಪುಣ್ಯಾಶ್ರಮದತ್ತ!

ಹೀಗೆ ರಥ ಬಹುದೂರ ಸಾಗಿ ಗಂಗಾನದಿಯ ತಡಿಗೆ ಬಂತು. ಸೀತಾಲಕ್ಷ್ಮಣರು ಅಲ್ಲಿ ರಥವಿಳಿದು ಪಾರೋಡದಲ್ಲಿ ನದಿಯನ್ನು ಉತ್ತರಿಸಿದರು. ಅಲ್ಲಿ ಸ್ವಲ್ಪ ತಡೆದು ವಿಶ್ರಮಿಸಿ ಬಳಿಕ ಪಯಣವನ್ನು ಮುಂದುವರಿಸಿದರು. 'ಇಂತು ನಡೆನಡೆದು ಬಲ್ದೂರಂಬೋಗಿ ಸಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳಣ್ಣನ ಕಟ್ಟಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುಳಿಸಿ ಪೋದಂ.' ಕವಿ ಇಲ್ಲಿ ಈ ವಿಚಾರವನ್ನು ಚುಟುಕಿನಲ್ಲಿ ಮುಗಿಸಿ ಕುಳಿತಿದ್ದಾನೆ.

ಕವಿ ಈ ವಿಚಾರವನ್ನು ಚುಟುಕಿನಲ್ಲೆ ಮುಗಿಸಿದ್ದರೂ ಶ್ರೋತೃವಿಗೆ ಇದರ ವಿಸ್ತಾರವನ್ನು ಕೇಳದೆ ತಡೆಯದಾಗಿದೆ. ವಿಸ್ತರಿಸ ಹೊರಟರೆ ಕವಿಗೆ 'ಅಳಲ್ ಕೊರಳನೌಂಕು'ತ್ತಿದೆ. ಇಲ್ಲಿ ಕವಿ ಶ್ರೋತೃಗಳಿಬ್ಬರೂ ಕಂಬನಿಗರೆಯುತ್ತಿದ್ದಾರೆ. ಕೊನೆಗೂ ಶ್ರೋತೃವಿನ ಒತ್ತಾಯಕ್ಕೆ ಕಟ್ಟುಬದ್ದು ಕವಿ ಆ ವಿಚಾರವನ್ನು ವಿಸ್ತರಿಸ ಹೊರಡುತ್ತಾನೆ. ಅಲ್ಲಿ ಸೀತೆಯ ಶುಭ್ರ, ಧವಳ, ಪೂತ, ಉತ್ತುಂಗ, ಗೌರೀಶಂಕರ ಸದೃಶ ಅಂತರಂಗದ ದರ್ಶನವಾಗುತ್ತಿದೆ. ದುಃಖ ವೇದನೆಗಳ ಶೋಕಾರುಣರಸಲೇಪನದಿಂದ ಅದು ಶಿವವಾಗಿದೆ. ಈ ಸರಳತೆಯ ತೊಡವು ತೊಟ್ಟ ಪಾವಿತ್ರ್ಯದ ಸಜೀವ ಮೂರ್ತಿಯ ದರ್ಶನಕ್ಕೆ ಬರುವ ಯಾತ್ರಿಕರೆಲ್ಲ ತಮ್ಮ ಹೃದಯದ ಒಟ್ಟಿಲಲ್ಲಿ ಕಣ್ಣೀರಿನಿಂದ ತೊಳೆದ ಭಕ್ತಿ ಕುಸುಮಗಳನ್ನು ತುಂಬಿಕೊಂಡೇ ಬರಬೇಕು! ಅದಿಲ್ಲದ ರಿಕ್ತಹೃದಯದ ಒಡ

ವನೇ, ನಿನಗಿಲ್ಲಿ ಪ್ರವೇಶವಿಲ್ಲ! ನೂರು ಯೋಜನದಾಚೆ ನಿಲ್ಲು! ನೀನು ಅಸ್ಪೃಶ್ಯನಿಲ್ಲಿ!

ಸೀತಾ ಲಕ್ಷ್ಮಣರು ನಡೆಯುತ್ತಿದ್ದಾರೆ. ಅಂತರಂಗದಲ್ಲಿ ಸುಡುತ್ತಿರುವ ಲಾವಾರಸವನ್ನು ಹೊರಗೆಡಹಿ ಸೀತೆಯನ್ನು ಸುಡಬೇಕಾದ ಕಾಲ ಸನಿಯವಾಗುತ್ತಿದೆಯಲ್ಲಾ ಎಂಬೊಂದು ದುಃಖದಿಂದ ಲಕ್ಷ್ಮಣನ ನಡೆ ಹಿಂಚಿದೆ; ಹಿಂದುಳಿದಿದ್ದಾನೆ. ಋಷ್ಯಾಶ್ರಮವು ಹತ್ತಿರಾಗುತ್ತಿದೆಯಲ್ಲಾ ಎಂಬೊಂದು ಆನಂದದಿಂದ ಸೀತೆಯ ನಡೆ ಮುಂಚಿದೆ. ಮುಂದಿದ್ದಾಳೆ. "ಏಂ ಕಂದ! ನಡೆಯೊಳ್ ಪಿಂದಾದಯ್?......ಪೆಣ್ಣಾಂ ಸಾಗಿವರೆ ನೀಂ ಗಂಡುಗಲಿ ನಡೆಯಲಾರೆಯೆನೆ ನಾಣಲೇ! ಪಿಂಚದಿರ್ ಬಾ" ಎಂದಿದ್ದಾಳೆ ಸೀತೆ ಚಿಗರಿಯಂತೆ ಪುಟನೆಗೆಯುತ್ತ! ಮಿಂಚಿ ಮುಂಚಿ ನಾಟ್ಯವಾಡುತ್ತಾ ಪ್ರಪಂಚವನ್ನೇ ಮರೆದು ಆನಂದೋಲ್ಲಾಸಗಳಿಂದ ನಡೆಯುತ್ತಿರುವ ಈ ಚಿಗರಿ ಜೋಸಿಗೆ ಸನಿಯವಾಗುತ್ತಿದೆಯಲ್ಲಾ, ಇದಕ್ಕೆ ನಾನೇ ನಿಮಿತ್ತವಾದೆನಲ್ಲಾ ಎಂಬೊಂದು ಕೊರಗಿನಿಂದ ಭಾರವಾದ ಹೃದಯದೊಡನೆ ಕಿತ್ತರೂ ಕೀಳಲಾರದ ಕಾಲನ್ನು ಅನಿವಾರ್ಯವಾಗಿ ಶಕ್ತಿಸರ್ವಸ್ವದಿಂದ ಕಿತ್ತು ಎತ್ತಿ ಎತ್ತಿ ಇಡುತ್ತಿದ್ದಾನೆ ಲಕ್ಷ್ಮಣ. ಇದನ್ನು ಸೀತೆಯೇನು ಬಲ್ಲಳು! ಹೀಗೆ ಆನಂದವು ಮುಂದಿನಿಂದ, ದುಃಖವು ಹಿಂದಿನಿಂದ, ಸಾಗುತ್ತಿವೆ. ಮುಂದೆ ದುಃಖವು ಆನಂದದ ಬೆನ್ನು ಹಿಡಿಯುತ್ತದೆ; ಕೊನೆಗೆ ಎರಡೂ ದುಃಖವೇ ಆಗುವ ವಿಷಾದಮಯ ದೃಶ್ಯವನ್ನು ಕಾಣಲಿದ್ದೇವೆ.

ಸಮುಪಥವು ಕಳೆದಿದೆ. 'ತಿಟ್ಟನೇರಿ ಬೆಟ್ಟನಿಳಿದು ಕಳಿದು ಅಗಳ್ತೆಯಂ ದಾಂಟಿ ದರಿಯಂ ಸಾರ್ದು ಮರನಂ ಪಾಯ್ದು ಕಲ್ಲನೆಡಹಿ ಮುಳ್ಳಂ ತಡವಿ ಕಣ್ಗಾಣದುಳ್ಳಿ ಬಳ್ಳಿ ನಡೆನಡೆದು ಕಾಲೊಡೆದು ನೆತ್ತರ್ ಬಸಿಯೆ ಮೆಯ್ಯುಂದಿ ಧರೆಗೆ ಹಮ್ಮಯಿಸಿ'ದ್ದಾಳೆ ಸೀತೆ. ಲಕ್ಷ್ಮಣ ಉಪಚರಿಸಿದ್ದಾನೆ. ಸೀತೆ ಮೆಲ್ಲನೆ ಕಣ್ದೆರೆದು ನೋಡಿದ್ದಾಳೆ. ಅಲ್ಲ ಇದು ಪುಣ್ಯಾಶ್ರಮದ ಹಾದಿಯಲ್ಲ. ಈಗ ವಿಧಿ ಮುಸುಕಿಕ್ಕಿದ್ದ ಮಾಯೆಯ ತೆರೆ ಬಯಲಾಗುತ್ತಿದೆ. ಅರಿವಿಗೆ ಎಚ್ಚರಾಗುತ್ತಿದೆ. 'ರಾಮನನ್ನು ಬಿಟ್ಟು ಬೇರೆ ಪುಣ್ಯಾಶ್ರಮ ಉಂಟೇ?' ಕಮಲವನ್ನು ಬಿಟ್ಟು ಮುತ್ತುಗದಲ್ಲಿ ಮಧುವಿದೆಯೇ?' ಎಂಬ ಜ್ಞಾನೋದಯವಾಗಿ ದುಃಖ ಉಮ್ಮಳಿಸಿ ಬರುತ್ತಿದೆ; ಪ್ರಳಾಪವಾಗಿ ಹೊರಜಿದ್ದಿದೆ.

ಲಕ್ಷ್ಮಣ ಈಗಲಾದರೂ ನಿಜವನ್ನು ಹೇಳದಿರಲಾರ. ಹೇಳಲೂ ಆರ. 'ಒಂದೆಡೆಯೊಳಗ್ರಭವನ ಕಟ್ಟಾಣತಿ, ಒಂದೆಡೆಗೆ ಸೀತೆಯತ್ತಣ ಮರುಕಂ.

ಏವಂ? ದೇವಿಗೆ ನೀನಂಜದಿರೆಂಬೊಡುಂಟೆ? ಪುರಕೆ ಮರಳ್ಚುವೆನೆಂಬೊಡುಂಟೆ? ತಾನೆ ಕಾವಲಿರ್ಪೆನೆಂಬೊಡುಂಟೆ?" ಏವಂ? ಏವಂ? ಈಗಲ್ಲ ಮತ್ತೆ, ಮತ್ತಲ್ಲ ಮಗದೊಂದು ಕ್ಷಣಕ್ಕೆ ಅಣ್ಣನ ಆಜ್ಞೆಯನ್ನು ತಿಳಿಸಿಯೇ ತೀರಬೇಕು. ಎಷ್ಟು ಹಿಂದೂಡಲಾದೀತು? ಕೊನೆಗೂ ದುಃಖದ ಕತ್ತರಿಯಲ್ಲಿ ಹೃದಯವು ಸಿಕ್ಕಿ ತತ್ತರಿಸುತ್ತಿರುವ ಲಕ್ಷ್ಮಣ 'ಶಶ್ವದ್ಗಳದಶ್ರುಧಾರಾಸಿಕ್ತಕಪೋಲಂ ಕಂಪಿತ ಕಾಯಂ ಸೀತೆಯ ಪದದೆಡೆಯೊಳ್ ಮೆಯ್ಯಿಕ್ಕಿ' ಹೇಳುತ್ತಿದ್ದಾನೆ—"ದೇವಿಯರೆನ್ನಂ ಕಂದನೆಂದು ಸಂಬೋಧಿಸದಿರಿಂ. ಪಗೆವನೆಂದೇ ಬಗೆಯಿಂ. ಇನ್ನೆವರಮಣ್ಣ ನಾಣತಿಯಂ ನಿಮ್ಮೊಳೆಂದೆಸಿಲ್ಲ. ನಾಡೊಳಾವನೊ ಮಡಿವಳನೊರ್ವನಭದ್ರ ಮಾಗೆ ದೇವಿಯರೊಳ್ ಕುಂದಿಟ್ಟು ದೇವರಂ ಚುನ್ನವಾಡಿದಂ ಗಡ! ಅಂತೀ ದೂಸರಿನಗ್ರಭವಂ ನಿಮ್ಮಂ ವಿಪಿನದೊಳಿಳಿಪಿ ಬರ್ಪುದೆಂದೆನ್ನಂ ಪೇಳ್ದಂ. ಇದೆ ಕೊಳ್ಳಿಂ ಸ್ವಾಮಿಕಾರ್ಯಧುರಂಧರಂ ಅಗ್ರಜನ್ಮಾಜ್ಞಾನುವರ್ತಿ ವೀರಾಗ್ರಗಣ್ಯಂ ಕೃತಕೃತ್ಯಂ ನಚ್ಚಿನ ಮೈದುನನೆಂ ಲಕ್ಷ್ಮಣನೆಂ ಈ ಒಸಗೆಯಂ ಪೇಳಲ್ಕೆಂದು ಬೆನ್ನಿಕ್ಕಿ ಪೊಳಲ್ಗೆ ಪೋದಪೆಂ."

ಪುಷ್ಪರಾಶಿಯ ಮೇಲಿಂದ ಬೆಂಕಿಯ ಹೊಳೆ ಹರಿದಿದೆ. ಸೀತೆ ಒಮ್ಮೆಲೆ ನಿಶ್ಚೇಷ್ಟಿತೆಯಾಗಿ ಬಿದ್ದಿದ್ದಾಳೆ. ಯಾವಳನ್ನು ಎಳವೆಯಿಂದ ಇಂದು ತನಕ ನಾಡು ಕಾಡುಗಳಲ್ಲಿ, ಸುಖ ದುಃಖಗಳಲ್ಲಿ, ಹಗಲು ರಾತ್ರಿಗಳಲ್ಲಿ ಎಡೆಬಿಡದೆ ಕುಂದದ ಕಂದದ ಭಕ್ತಿಯಿಂದ ಸೇವಿಸಿದ್ದನೋ ಆ ಅತ್ತಿಗೆಯ ಕಟ್ಟಕಡೆಯ ಸೇವೆಯೆಂದು ಲಕ್ಷ್ಮಣ ತಣ್ಣೀರನ್ನು ತಂದು ಹನಿಸುತ್ತಾನೆ. ಕಾಲು ತೊಳೆಯು ತ್ತಾನೆ. ಆ ನೀರೇ ಆತನಿಗೆ ತೀರ್ಥ!

ಲಕ್ಷ್ಮಣನ ಶೈತ್ಯೋಪಚಾರದಿಂದ ಸೀತೆ ಅರಿವುಗೊಂಡಿದ್ದಾಳೆ. ಅರ್ಧೋ ನ್ಮೀಲಿತ ನಯನೆಯಾಗಿ ನೋಡುತ್ತಿದ್ದಾಳೆ. ಅದೆಂತಹ ನೋಟ! ಆಶ್ಚರ್ಯ ದಿಂದಲೂ, ಭಯದಿಂದಲೂ, ಕರುಣದಿಂದಲೂ ಸಜಲವ್ಯಾಕುಲನೇತ್ರದ ನೋಟ! ಕಣ್ಣಿರಿವ ಮನಕೊರೆವ ನೋಟ! ಆಕೆಯ ಪಾಲಿಗೆ ಹಗಲು ಕತ್ತಲಾಗಿದೆ. ಮಾವು ಬೇವಾಗಿದೆ. ನಲ್ಮೆಯ ಕಡಲು ಬತ್ತಿಹೋಗಿದೆ. 'ಅಳವುಗಳಿದ ಮನ ದಳಲಿಂ' ಉಲುಹುತ್ತಿದ್ದಾಳೆ "ಹುಣ್ಣಿಮೆಯ ತಿಂಗಳಂ ರಾಹು ಕಣ್ಣೆವೆಮುಚ್ಚಿ ನುಂಗಿದುದೇ! ಧರ್ಮಂ ಕರ್ಮಡುವೊಕ್ಕುದೇ! ನೀತಿ ಬಾರ್ತೆಗೆಟ್ಟುದೇ! ನನ್ನಿ ಬೆನ್ನಿತ್ತುದೇ! ಹಾ ಕಂದ! ಅನಾಥೆಯಾದೆನಯ್. ಹಾ! ಹಾ! ಮಜ್ಜೀವಿತೇಶ ನಿಂದೆನ್ನಂ ಕಾರಡವಿಯೊಳ್ ಬಿಟ್ಟು ಬಾರೆಂದನೇ! ಎನ್ನೊಡೆಯಂ ತೊರೆದನೇ!

ಕೂಳನೊಂದು ಪಿಸುಣ್ಗೆ ನಿರಪರಾಧಿಯನೆನ್ನಂ ಬಲಿದೆತ್ತನೇ! ರಾಮಚಂದ್ರಮ ನಿಂದೆನ್ನಂ ಕೈವಿಟ್ಟನೇ! ಹಾಹಾ! ಪ್ರಾಣನಾಥನಿಂದೆನ್ನಂ ಮುಟ್ಟನೇ? ಅಕ್ಕಟಾ! ಬಾಳ್ಗೊಲೆಯಾದೆನಲಾ! ಹಾ ಕರುಣಾಕರಾ! ಇನ್ನೆನಗೆ ಗತಿಯಾರಯ್? ಹಾ ನಲ್ಲ! ಮುಂತೆನಗೆ ಬಟ್ಟೆಯಾವುದಯ್? ಹಾ ಕಾಂತ! ಆವಗಂ ನೀನೆ ಗತಿಯೆಂದು ನಂಬಿ ಸೇರ್ದಳಂ ಇಂತೊವೊರ್ದಲೊಳೆ ತ್ಯಜಿಸಲ್ಕೆಂತು ಮನಂದಂದಯ್? ಎನ್ನೊಳಾವುದೂಣೆಯಮಂ ಕಂಡಯ್? ಊರೊಳ್ ಮಾರಿಯೆಂದು ಮನೆವೋರಿ ಯಂ ಮಾರುಗುಡುವರೇ! ಪಾಲ್ಸುಳಿತುದೆಂದಾವಂ ಪೊಯ್ವರೇ? ನಿರ್ವ್ಯಾಜಮಸಗ ನೊರ್ವ ತೆಗಳ್ದನೆಂದಬಲೆಯನಿಂತು ಕಾರಡವಿಯೊಳ್ ಬಿಡುವರೇ! ಹಾ! ಮನೋ ವಲ್ಲಭ! ಆಂ ನಿನ್ನರ್ಧಾಂಗಿಯಲ್ತೆ! ಪಟ್ಟದರಸಿಯಲ್ತೆ! ಎನ್ನನುಳಿದೆಂತರೆವೆಯ್ಯೊ ಳಿರ್ಪಯ್! ಎಂತು ಪಟ್ಟವಣೆಯನೇರುವಯ್! ಹಾ ರಾಘವಾ! ನಿನ್ನಡಿಗಳಾಣೆ. ಎನ್ನೊಳ್ ಕೊರತೆಯಿರೆ ಮನ್ನಿಸಿ ಕಾವುದಯ್. ಕೈಮುಗಿದು "ಬೇಡುವೆಂ, ಬೇಡುವೆಂ." ಶ್ರೀ ರಾಮಚಂದ್ರನೆ ತನ್ನಿದಿರು ಇರುವನೆಂಬಂತೆ ಬಗೆದು ಭಾವಿಸಿ ಹಲುಬಿದುದು ಅರ್ಥಶಃ ಅರಣ್ಯರೋದನ! ಕಲ್ಲೇ ಕರಗಬೇಕಾದ ಈ ರೋದನಕ್ಕೆ, ಸತ್ಯವೇ ಸೋಲಬೇಕಾದ ಈ ತರ್ಕಕ್ಕೆ ರಾಮಚಂದ್ರನು ಎದುರಿದ್ದರೆ ಏನೆಂದು ಉತ್ತರಿಸುತ್ತಿದ್ದ? ಬಿಟ್ಟುಬಿಡೋಣ ಈ ಊಹೆಯ ವಿಲಾಸವನ್ನು. ಬಸಿಯು ತ್ತಿರುವ ಕಣ್ಣೀರನ್ನು ಒರಸಿ, ಹೊಮ್ಮುತ್ತಿರುವ ನಿಟ್ಟುಸಿರನ್ನು ತಡೆದು ಮುನ್ನಡೆಯೋಣ.

ಸೀತೆ ಸಾಮ್ರಾಜ್ಯದ ರಾಜ್ಞಿಯಾಗಿದ್ದಳು. ರಾಮನ ಅರಸಿಯಾಗಿದ್ದಳು. ಕೌಸಲ್ಯಾದಿಗಳ ಮೋಹದ ಸೊಸೆಯಾಗಿದ್ದಳು. ಭರತಾದಿಗಳ ಮೆಚ್ಚಿನ ಅತ್ತಿಗೆ ಯಾಗಿದ್ದಳು. ಪರಿಚಾರಕರ ಪ್ರೇಮದ ಒಡತಿಯಾಗಿದ್ದಳು. ಸಕಲ ಸಂಪತ್ತು ಸೌಭಾಗ್ಯಗಳು ಆಕೆಯ ಕಾಲಡೆಸೆಯಲ್ಲಿ ಹೊರಳುತ್ತಿದ್ದುವು. ಆದರೆ ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗೆ ಏನಾಗಿ ಹೋಯಿತು! ಆಕೆ ಈಗ ಯಾರಿಗೂ ಏನೂ ಆಗಿರದ, ಏನೂ ಇರದ ಸಾಮಾನ್ಯ ಕಾಡ ಹೆಣ್ಣು ಮಾತ್ರ. ತೊಟ್ಟು ಕಳಚಿದ ಮೊಗ್ಗೆ! ರಾಮನ ನನ್ನಿಯೊಂದು ಹೋಯಿತೋ ಆಕೆಯ ಎಲ್ಲವೂ ಮಿಂಚಿನಂತೆ ಹೋಯಿತು. ಆಕೆ ಈಗ ಅನಾಥೆ; ಅಗತಿಕೆ! ಹಾ! ಪುಣ್ಯಮೇರುವೇ, ನೀನೂ ಕರಗಿ ಕಾಣೆಯಾಗಬಲ್ಲೆಯಾ! ಹಾ! ಭಾಗ್ಯಲಕ್ಷ್ಮಿಯೇ ನಿನಗೂ ಈ ಗತಿಯೇ! ಓ! ಬೇಡ ಬೇಡವೆಂದರೂ ಗೂಟಕ್ಕೆ ಬಿಗಿದ ಪಶುವಿನಂತೆ ಮತ್ತೂ ಮತ್ತೂ ಅಲ್ಲೇ ಸುತ್ತುತ್ತಿದೆ ಮನ. ನಡೆಯಿರಿ ಮುಂದುವರಿಯೋಣ.

ಲಕ್ಷ್ಮಣನೊ ದುಃಖದ ಪ್ರತ್ಯಕ್ಷ ಮೂರ್ತಿಯಂತೆ ನಿಂತಿದ್ದಾನೆ. ಅಂತರಂಗದ ಬೇಗೆಗೆ ಸುಟ್ಟು ಬೂದಿಯಾಗದೆ ಆತ ಹೇಗೆ ಉಳಿದನೋ ಅದೇ ಒಂದು ಕೌತುಕ! ದುಃಖದ ಎರಡು ಮಹಾಶಿಖರಗಳು ನಮ್ಮ ಮುಂದೆ ನಿಂತಿರುತ್ತವೆ. ಅದರಲ್ಲಿ ಯಾವುದರ ಎತ್ತರ ಹೆಚ್ಚು ಎಂದು ನಮ್ಮಿಂದ ಹೇಳಲಿಕ್ಕೆ ಆಗುತ್ತಿಲ್ಲ. ಏಕೆಂದರೆ ಅವೆರಡರ ಶಿಖರಗಳೂ ಮುಗಿಲನ್ನು ಮೀರಿ ಆಕಾಶವನ್ನು ಬಗೆದು ಮೇಲೇರಿವೆ. ನಾವು ಇಷ್ಟು ಮಾತ್ರ ಹೇಳಬಲ್ಲೆವು, ಅವು ನಮ್ಮ ಈ ಕಣ್ಣು ಕಾಣುವುದಕ್ಕಿಂತ ಹೆಚ್ಚು ಮೇಲೇರಿ ನಿಂತಿವೆ! ಆ ಶಿಖರಗಳನ್ನಡರಿ ಅದರ ಎತ್ತರವನ್ನಳೆಯುವ 'ತೇನ್‌ಸಿಂಗ್' ಸಾಹಸ ನಮ್ಮಲ್ಲಿಲ್ಲ. ಆ ಶಕ್ತಿಯಿದ್ದವರು ಆ ಸಾಹಸ ಯಾತ್ರೆಯನ್ನು ಕೈಕೊಳ್ಳಲಿ!

"ಕುರುಂಬನ ಕುತ್ತ್ರಕ್ಕೆ ಕುರಿಯ ಪಿತ್ತಮೆ ಮರ್ದಾಯ್ತು" ಎಂದೆನಿಸಿದೆ ಸೀತೆಗೆ! ಮುಂದುವರಿಸಿ ಕೇಳುತ್ತಾಳೆ—"ನೀಮನಿಬರ್ ಮೈದುನರಿರ್ದುಮೆನಗೀ ಪಾಡುಗೈದಿರೇ! ಅಣ್ಣಂಗೆ ನಯಂಬೇಳಿರೇ!......ಅತ್ತೆವಿರಿಂತಿದಕ್ಕೊಪ್ಪಿದರೆ? ನಚ್ಚಿನ ಬಂಟಂ ಹನುಮಂತಂ ಕೆಮ್ಮನಿರ್ದನೆ? ಸುಮಂತ್ರಾದ್ಯರ್ಗೆ ಮನಂ ಬಂದುದೇ? ವೃದ್ಧ ಜಾಂಬವಂ ತಡೆಯದಾದನೆ?" ಇಡೀ ಲೋಕವೇ ತನಗೆ ಪಗೆಯಿತ್ತೋ? ಎಂದು ಯೋಚಿಸಿದ್ದಾಳೆ ಸೀತೆ. ಪುನಃ ಯೋಚಿಸುತ್ತಿದ್ದಾಳೆ 'ನಿಮ್ಮನ್ನರನೇಕೆ ನಿಷ್ಕಾರಣಂ ದೂರುವೆನೊ' ಎಂದು. ತನ್ನ ಪಾಪವೇ ತನ್ನನ್ನು ಕಾಡುತ್ತಿರುವಾಗ ರಾಮನಾದರೂ 'ಏಂಗೆಯ್ಗುಂ.'

ಆತನು "ಕರುಣಾಸಾಗರನಲ್ತೆ! ನಂಬಿದರಂ ಕಾವನೆಂಬ ಬಿರುದುಳ್ಳನಲ್ತೆ! ಆತನಡಿಯೊಲ್ಮೆಯೊಂದಿರುಯ್" ಎಂದು ಯಾವ ಕಾಲು ಒದ್ದು ದೂಡುತ್ತಿದೆಯೋ ಅದೇ ಕಾಲನ್ನು ಅಪ್ಪಿಹಿಡಿದು ಬೇಡಿಕೊಳ್ಳುತ್ತಿದ್ದಾಳೆ! ಎಲೈ ನದಿಯೇ, ಸಾಗರವು ನಿನ್ನನ್ನು ರೋಷದ ನೂರು ಕೈಗಳಿಂದ ಹಿಂದೂಡಿದರೂ ನೀನು ನಿರ್ವ್ಯಾಜ ಪ್ರೇಮದಿಂದ ಮತ್ತೂ ಸಾಗರವನ್ನೇ ಸೇರಲು ಮುಂದುವರಿಯುತ್ತಿರುವೆಯಲ್ಲಾ! ಎಂದರೆ ನದಿ ಏನೆಂದೀತು? ನಕ್ಕೀತು! ಅದು ಅದರ ಸ್ವಧರ್ಮ. ಸೀತೆಯೂ ಅಷ್ಟೆ. ಎಂದೇ ಈಕೆ ಜಗದ್ವಂದ್ಯೆ ಸೀತೆ! ಪ್ರಾತಃಸ್ಮರಣೀಯೆ. ಯುಗಯುಗಗಳ ಒಳಿಕವೂ ಭಾರತದ ನಾರೀ ಜನರಿಗೆ ಬೆಳಕನೀಯುವ ನಂದಾದೀಪ! ಋಷಿಮಾನವರ ಭಾರತವು ಪ್ರಪಂಚದ ಸಂಸ್ಕೃತಿಗೆ ನೀಡಿದ ಸರ್ವೋತ್ಕೃಷ್ಟ ಕಾಣಿಕೆ!

ಲಕ್ಷ್ಮಣನೊಡನೆ ಹೇಳುತ್ತಿದ್ದಾಳೆ "ಕಂದಾ! ಏತರ್ಕೆ ನಿಂದಿರ್ಪೆಯ್? ತಳ್ವಿದನೆಂದು ನಿನ್ನಗ್ರಜಂ ಕೋಪಿಸನೆ? ಅಣ್ಣನಾಜ್ಞೆ ಸಂದುದಲಾ! ಪೋಗು

ಪೋಗೈ." ವಿಪತ್ತು ನಮ್ಮ ಶಕ್ತಿಮೀರಿದಾಗ ಕೊನೆಗೆ ಅದೇ ಒಂದು ಆತ್ಮದಾರ್ಢ್ಯವನ್ನು ತರುತ್ತದೆ. ಸೀತೆ ಈಗ ಆ ಸ್ಥಿತಿಗೆ ತಲಪಿದ್ದಾಳೆ.

ಆತ್ಮಭರ್ತ್ಸನೆಯೊಂದನ್ನು ಬಿಟ್ಟು ಬೇರಾವ ಆತ್ಮಾವಲಂಬನೆಯಿದೆ ಲಕ್ಷ್ಮಣನಿಗೆ? "ಆವನಗಲ್ಪೆಳೆಗರುವಿನಂತಿರೆನ್ನೊಂದಿರವಾಯ್ತೋ! ಅಣ್ಣನಾಣತಿಯೆಂಬೋದು ನೇಣ್ ಗೋಣಂ ಬಿಗಿದೇಳ್ಗುಂ......... ಅಂತಿರೆ ಗೋರಿಟ್ಟ ಸ್ವಪಂ ದುರ್ವಿಷಯಂಗಳ್ಗೆ ಸೂರೆಗೊಟ್ಟು ನಿರಯದ ಬಾಗಿಲ್ಗಾಪಿಗೆಂದು ದಕ್ಷಿಣಾಭಿಮುಖನಾಗಿ ಪೋಪನಂತೆವೋಲ್ ಪುಣ್ಯರೂಪಿಣಿಯುಂ ಕಾಡಿಂಗೊತ್ತೆಯಿಟ್ಟು ಪಾಳ್ಪೋದ ನಾಡಿಂಗೆ ಮಗುಳಲ್ಕಿರ್ಪೆಂ" ಎಂದುಕೊಂಡಿದ್ದಾನೆ. "ಇಂತಿರ್ಪೆನಂ ನಿರ್ಘೃಣನಂ ಕುಲಘಾತಕನಂ ದುಷ್ಟನನುದ್ಧರಿಸೌ" ಎಂದು ಸೀತೆಯ ಕಾಲಿಗೆ ಬಿದ್ದಿದ್ದಾನೆ. ಪತಿಯನ್ನು ಕಳಕೊಂಡ ಸತಿಯ ಮಡಿಲಲ್ಲಿ ಮೊಗ ಮುಚ್ಚಿದೆ ಮಗು ಸಾಂತ್ವನಕ್ಕಾಗಿ!

ಬೆಂಕಿಯೇ ತಂಪೀವ ಸೋಜಿಗವನ್ನು ಕಾಣುತ್ತೇವೆ! ದುಃಖದ ಬೇಗೆಯಿಂದ ಉರಿಯುತ್ತಿರುವ ಸೀತೆಯೆ ವೇದನೆಯ ಉರಿಯಿಂದ ಸುಡುತ್ತಿರುವ ಲಕ್ಷ್ಮಣನನ್ನು ಸಂತವಿಸುವ ಕೌತುಕವನ್ನು ನೋಡುತ್ತೇವೆ. "ಏಳೇಳ್ ಕಂದ" ಎಂದು ಅಡಿಗೆರಗಿದ ಮೈದುನನನ್ನು ಎಬ್ಬಿಸಿ "ಕೈವಿಡಿದ ನಲ್ಲನೇ ಮುನಿವೆಡೆಯೊಳಾರೇನೆಂಗುಂ" ಎಂದಿದ್ದಾಳೆ. ನಿಜ ಹಸಿದು ಹಾವು ನುಂಗುವೊಡೆ ಕಾಯಬಹುದು, ಮುಸಿದು ಧರಣಿಯೇ ನುಂಗುವೊಡೆ ಕಾಯಲಾದೀತೆ! 'ಹೋಗೈ ಮೈದುನ ಹೊತ್ತಾಯಿತಲಾ' ಎಂದಿದ್ದಾಳೆ. "ನಿನ್ನಂ ನಿನ್ನಣ್ಣಂ ಕೇಳ್ದೊಡೆ, ನಿನ್ನಾಣತಿಗಬಲೆ ಮರುಗಿದಳಿಲ್ಲ; ಮಾರ್ನುಡಿದಳಿಲ್ಲ; ಮುನಿಸಾಂತಳಿಲ್ಲ; ಬೆರ್ಚಿದಳಿಲ್ಲ; ಕೂಳ್ಕುದಿಗೊಂಡಳಿಲ್ಲ; ದೂರಿದಳಿಲ್ಲ; ನೀನೆ ಗತಿಯೆಂದು ನಿನ್ನಡಿಯಂ ನೆನೆಯುತೆಕಡೆವೊಳ್ತಂ ಪಾರುತಿರ್ಪಳೆಂದು ಬಿನ್ನಯಿಸಯ" ಎಂದಿದ್ದಾಳೆ. ಎಂತಹ ಸಂದೇಶವನ್ನು ಕಳುಹಿದಳು ಈ ಸತಿ! ಈ ಸಂದೇಶವನ್ನು ಕೇಳಿದರೆ ಹೇಗೆ ತಡೆದುಕೊಂಡಾನು ಆ ಪತಿ! ಹೀಗೆ ಸೀತೆ ಮಹಾತ್ಯಾಗದಿಂದ ರಾಮನನ್ನು ಪ್ರೀತಿಸಿದಳೆಂದೇ ರಾಮ ಇಂದಿಗೂ "ಸೀತಾರಾಮ"ನಾಗಿದ್ದಾನೆ. ಆದರೆ ಸೀತೆ ಎಂದೂ "ರಾಮಸೀತೆ"ಯಾಗಲಿಲ್ಲ! ರಾಧೆ ತನ್ನ ಅಪಾರತ್ಯಾಗದ ಅನಂತ ವಿರಹದಲ್ಲೇ ಕೃಷ್ಣನನ್ನು ಪ್ರೀತಿಸಿದಳೆಂದೇ ಕೃಷ್ಣ ಎಂದೆಂದಿಗೂ "ರಾಧಾಕೃಷ್ಣ"ನಾದ. ರಾಧೆ ಎಂದೂ "ಕೃಷ್ಣರಾಧೆ"ಯಾಗಲಿಲ್ಲ! ಇದೇ ತ್ಯಾಗ ಪ್ರೀತಿಗಳ ಮಧುರ, ಪವಿತ್ರ ಸಮ್ಮಿಳನದ ಕೌತುಕ!

ನವವಧು ಸೀತೆ ಲಜ್ಜಾವಗುಂಠಿತೆಯಾಗಿ ಒಂದು ದಿನ ಅಯೋಧ್ಯೆಯ

ಅರಮನೆಯನ್ನು ಹೊಕ್ಕಿದ್ದಳು. ಲಜ್ಜೆಯ ಅವಗುಂಠನವು ಪೂರ್ತಿಯಾಗಿ ಸರಿಯುವ ಮುನ್ನವೇ ಆಕೆ ಅರಮನೆ, ರಾಜ್ಯ, ಪ್ರಜೆಪರಿವಾರ, ಬಂಧುಬಾಂಧವರನ್ನು ಬೀಳ್ಕೊಟ್ಟು ಕಾಡಿಗೆ ಹೊರಡಬೇಕಾಯಿತು. ಆದರೆ ಅದೆಂತಹ ಬೀಳ್ಕೊಡಿಗೆ! ಅದರಲ್ಲಿ ಪತಿಯ ಸಾನ್ನಿಧ್ಯದ ಮಧುರತೆಯಿತ್ತು. ಒಲವಿನ ಮೈದುನನ ಜತೆಯ ಲಾಲಿತ್ಯವಿತ್ತು. ಆದರ್ಶದ ಮೋಹಕತೆಯಿತ್ತು. ಬೀಳ್ಕೊಡುವ ಸಂಭ್ರಮವಿತ್ತು. ಬಂಧು ಬಾಂಧವ, ಪ್ರಜೆಪರಿವಾರವೆಲ್ಲವೂ "ಧನ್ಯೆ! ಧನ್ಯೆ!" ಎನ್ನುವ ಮಾದಕತೆಯಿತ್ತು. ಹದಿನಾಲ್ಕು ವರ್ಷಗಳೆಂಬ ಮಿತಿಯಿತ್ತು. ಆ ಹದಿನಾಲ್ಕು ವರ್ಷಗಳನ್ನು ಕಳೆದು ಬಂದ ಬಳಿಕ ಆಕೆ ತ್ಯಾಗಮಾಡಿದ್ದುದಕ್ಕಿಂತ ನೂರು ಪಾಲು ಹೆಚ್ಚು ಪಡೆದಳು! ಆದರೆ ಇಂದು? ಅವಾವುವೂ ಇಲ್ಲ. ಆಕೆ ಪರಿತ್ಯಕ್ತೆ. ದೂಷಿತಳು. ಇಂದು ಪ್ರಜೆಪರಿವಾರ, ಬಂಧುಬಾಂಧವರೇನೆನ್ನುತ್ತಿರಬಹುದು? "ಛೀ! ಛೀ!" ಎನ್ನುತ್ತಿರಬಹುದೇ? ಪ್ರಜೆಪರಿವಾರ, ಸುಖಸಂಪತ್ತು ಇನ್ನು ಆಕೆಯ ಪಾಲಿಗೆ ಕನಸಿನ ಪ್ರಪಂಚ. ಯಾವುದು, ಯಾರು, ಆಕೆಯ ನೋವು ನಲಿವುಗಳಲ್ಲಿ ಆಟಪಾಟಗಳಲ್ಲಿ ಊಟಉಪಚಾರಗಳಲ್ಲಿ ಪಾಲುಗೊಂಡಿತ್ತೋ, ಪಾಲುಗೊಂಡಿದ್ದರೋ, ಅಲ್ಲಿ ಆಕೆಯಿನ್ನು ಹೋಗಲಾರಳು; ಅವರನ್ನು ಆಕೆಯಿನ್ನು ಕಾಣಲಾರಳು. ಅನಂತ ವಿರಹಕ್ಕೆ ಹೊರಬೀಳುತ್ತಿರುವಾಗಲೂ ಅವರನ್ನು ಕಂಡು ಬೀಳ್ಕೊಟ್ಟು ಬರಲಾಗಲಿಲ್ಲ. ಹಾ ವಿಧಿಯೇ! ಇದೇಕೆ ನೀನು ಹೀಗೆ ಮಾಡಿದೆ?

ಈಗ ಲಕ್ಷ್ಮಣನ ಕೂಡೆ ಅವರಿಗೆಲ್ಲ ತನ್ನ ಬೀಳ್ಕೊಡಿಗೆಯ ಸಂದೇಶವನ್ನು ಕಳುಹುತ್ತಿದ್ದಾಳೆ: ಅತ್ತೆಯರನ್ನು ಕೇಳದೆ, ಅವರ ಆಶೀರ್ವಾದ ಪಡೆಯದೆ ಬಂದುದಕ್ಕಾಗಿ ಕ್ಷಮೆ ಯಾಚಿಸಿರುವೆನೆಂದು ಅರುಹು. ತಂಗಿಯರಾದ ಮಾಳವಿ, ಊರ್ಮಿಳೆ, ಶ್ರುತಕೀರ್ತಿಯರೊಡನೆ ಹೇಳದೆ ಬಂದುದಕ್ಕಾಗಿ ತನ್ನನ್ನು ಮನ್ನಿಸುವಂತೆಯೂ ತನ್ನನ್ನು ಮರೆಯದಿರುವಂತೆಯೂ ತಿಳುಹು. ಅವರಿಗೆ ನನ್ನ ವಸ್ತು, ಒಡವೆ, ಆಭರಣಗಳನ್ನು ಹಂಚು. ಉಳಿದವುಗಳನ್ನು ದಾಸಿಯರಿಗೆ ದಾನಮಾಡು. ಬಹುಕಾಲದ ಪ್ರೀತಿಯ ಗೆಳತಿ ಚಂದ್ರಮತಿಗೆ ತನ್ನ ಚಂದಿರಗಾವಿ ಸೀರೆ ಕುಪ್ಪಸಗಳನ್ನು ಕೊಟ್ಟು ದುಃಖಿಸದಂತೆ ತಿಳುಹು—ಎಂದು ಹೇಳಿದ್ದಾಳೆ. ಆಕೆಗೆ ಎಲ್ಲದರ ನೆನಹೂ ಆಗಿದೆ. "ಆ ಎನ್ನ ಪೂಜೆಯ ಕಪಿಲೆ ದುರುವಂ ಆ ಎನ್ನ ಮುದ್ದಿನೆಳೆಗಿರುವಂ ಬಡವಾಗದಂತು ಪೇಳ್ದು ನಿನ್ನಬೈಗೆ ಕೈವರ್ತಿಸೈ" ಎಂದಿದ್ದಾಳೆ. ಆ ಮೂಕ ಪಶುವಿನ ಕುರಿತೂ ತನ್ನ ಕೊಟ್ಟ

ಕೊನೆಯ ಬಯಕೆಯನ್ನು ತಿಳುಹಿದ್ದಾಳೆ. ಕೊನೆಗೆ ಲಕ್ಷ್ಮಣನನ್ನೂ ಬೀಳ್ಕೊಡುತ್ತಿದ್ದಾಳೆ. "ನಿನಗೆ ಮೇಲಕ್ಕೆ, ಮೇಣ್ ಪಯಣಂ ಸೊಗಮಕ್ಕೆ! ನಿಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರಪಂಜರಮಕ್ಕೆ! ಪೋಗೈ" ಎಂದು ಲಕ್ಷ್ಮಣನನ್ನು ಹರಸಿದ್ದಾಳೆ. ಆಕೆಯಿಾಗ ದುಃಖವನ್ನು ಮಾರಿ ದುಃಖಾತೀತಳಾಗಿದ್ದಾಳೆ. ಭಯವನ್ನುಳಿದು ಭಯಾತೀತಳಾಗಿದ್ದಾಳೆ. ಆಕೆಗೀಗ ಯಾರ ಮೇಲೂ ದ್ವೇಷವಿಲ್ಲ, ಮುನಿಸಿಲ್ಲ. ನಿರ್ಮುಕ್ತಳೀಗ ಆಕೆ!

'ಸೌಮಿತ್ರಿ ಡೋಲಾಯಮಾನಮಾನಸನಾಗಿ ದೇವಿಯರಂ ಬಲವಂದು ಕೈಮುಗಿ'ದಿದ್ದಾನೆ. ದಿಕ್ಪಾಲಕರೊಡನೆ ಈಕೆಯನ್ನು ಕಾವುದು ಎಂದು ಪ್ರಾರ್ಥಿಸಿಕೊಂಡಿದ್ದಾನೆ. ಭಾಸ್ಕರನೊಡನೆ ಈಕೆಯನ್ನು ನೋಡಿಕೊಳ್ಳು ಎಂದು ಬೇಡಿಕೊಂಡಿದ್ದಾನೆ. ವನದೇವಿಯರೊಡನೆ ಈಕೆಯನ್ನು ಸಂತೈಸು ಎಂದು ಬಿನ್ನಯಿಸಿಕೊಂಡಿದ್ದಾನೆ. ಹೀಗೆ ಎಷ್ಟು ಹೊತ್ತು ತಾನೇ ನಿಂತಾನು? ಕೊನೆಗೆ 'ಜಗಭಾರ'ವಾದ ಕಾಲನ್ನು ಹೊರಡಲೆಂದು ಎತ್ತಿ ಪುನಃ ಹಿಂದೆ ನೋಡಿದ್ದಾನೆ! ಸೀತೆ ಎವೆಮುಚ್ಚದೆ ತನ್ನನ್ನೇ ನೋಡುತ್ತಿದ್ದಾಳೆ! ಸ್ನಿಗ್ಧಕರುಣವೂ ಮುಗ್ಧಪವಿತ್ರವೂ ಆದ ಆ ನೋಟ ಲಕ್ಷ್ಮಣನ ಎದೆಯನ್ನು ಸೀಳಿದೆ! ಪಾಪ ಏನು ತಾನೆ ಮಾಡಬಲ್ಲ ಆತ. ಅಣ್ಣನ ಆಜ್ಞೆಯ ನೇಣು ಆತನ ತನುವನ್ನು ಎಳೆಯುತ್ತಿರುವಂತೆಯೇ ಮನವನ್ನು ಇಲ್ಲಿಯೇ ಉಳಿಸಿ ಹೊರಟು ಹೋಗಿದ್ದಾನೆ ಲಕ್ಷ್ಮಣ.

ಹೀಗೆ ಹೋದ ಲಕ್ಷ್ಮಣನನ್ನು ಮತ್ತೆ ನಾವು ಕಾಣುವುದು ಕೊನೆಯ ಆಶ್ವಾಸ "ಕಥೋಪಸಂಹಾರ"ದಲ್ಲಿ. ಅಲ್ಲಿಯೂ ಇದೇ ಬದಲಾಗದ ರೂಪ. ಅಣ್ಣನ ಅದೇ ವಿಧೇಯ ತಮ್ಮ!

ಯಜ್ಞದೀಕ್ಷಿತನಾಗಿ ಕುಳಿತ ರಾಮನಿಗೆ ಯಜ್ಞಾಶ್ವವನ್ನು ಬಾಲಕರೀರ್ವರು ಕಟ್ಟಿ, ಪಡೆಯೆಲ್ಲವನ್ನೂ ಸೋಲಿಸಿದ ಸುದ್ದಿಯನ್ನು ದೂತರು ಬಂದು ಹೇಳುತ್ತಾರೆ. ರಾಮ ಯಜ್ಞಾಶ್ವದ ಬಿಡುಗಡೆಗಾಗಿ ತಾನೇ ಹೊರಡುತ್ತಾನೆ. ಜತೆಯಲ್ಲಿ ಲಕ್ಷ್ಮಣ ಇದ್ದೇ ತೀರುತ್ತಾನೆಂಬುದನ್ನು ಬೇರೆ ಹೇಳಬೇಕೆ?

ಮಕ್ಕಳನ್ನು ಕಂಡು ರಾಮನಿಗೆ ಮಮತೆ ಹುಟ್ಟುತ್ತದೆ. ಲಕ್ಷ್ಮಣನನ್ನು ಕರೆದು "ಎಲೆ ತಮ್ಮ! ಇವರೊಳೆಗೇನೋ ಮಮತೆ ಪುಟ್ಟುಗುಂ; ಮುನಿಸು ಬಾರದು. ಆರೆಂಬುದನಾರಯ್ದು ಪೇಳಯ್" ಎಂದಿದ್ದಾನೆ. ಯಥಾಕ್ರಮ ಲಕ್ಷ್ಮಣನು ಅಣ್ಣನ ಆಜ್ಞೆಯನ್ನು ಪಾಲಿಸಲು ಮಕ್ಕಳ ಹತ್ತಿರ ಬರುತ್ತಾನೆ.

ಹೀಗೆ ಪ್ರಾರಂಭ ಮತ್ತು ಮುಕ್ತಾಯಗಳಲ್ಲಿ ಬಹಿರಂಗ ಚಿತ್ರವನ್ನು ಕೊಟ್ಟು, ಮಧ್ಯದಲ್ಲಿ ಅಂತರಂಗವನ್ನು ತೆರೆದು ತೋರಿಸಿ ಕುಶಲ ವರ್ಣಶಿಲ್ಪಿಯಂತೆ ಮುದ್ದಣ ತನ್ನ ಲಕ್ಷ್ಮಣ ಪಾತ್ರವನ್ನು ಪರಿಪೂರ್ಣ ಕಳೆಯಿಂದ ಬೆಳಗಿದ್ದಾನೆ. ಆತ್ಮವಂತ ಜೀವಿಯೊಬ್ಬನ ಶ್ರದ್ಧೆ, ಪ್ರೇಮಗಳ ಸೇವಾ ಜೀವನವೊಂದನ್ನು ಎಷ್ಟು ಚೆನ್ನಾಗಿ ನಿರೂಪಿಸಿದ್ದಾನೆ ಮುದ್ದಣ!

ಲಕ್ಷ್ಮಣ ಹೊರಟುಹೋದನೊ ಸೀತೆ ಕಟ್ಟಿದ್ದ ಕಟ್ಟೆಯನ್ನು ಒಡೆದು ಅಳಲು ಹರಿಯುತ್ತದೆ. ಮುಂದೆ ಆಕೆಗೇ ಅನಿಸುತ್ತದೆ—"ಆನೆ ರಾಯಗುವರಿಯಾಗಿ ಪುಟ್ಟೆನೆ? ಕಾಡಂಪೊಕ್ಕು ರಕ್ಕಸರ ಬಂದಿಗೊಳಗಾಗೆನೆ? ದೇವಿಯಾಗೆನೆ? ಈಗಣೀ ಬವಣೆಗೆ ಬಾರೆನೆ? ಸಾಜಂ ಸುಖದುಃಖಂಗಳ್ ಪಗಲಿರುಳಂತೆವೋಲ್ ಲೋಕದೊಳ್ ಪರಿವರ್ತಿಸಿರ್ಕುಂ." ಈ ಅಶಾಶ್ವತ ಜಗತ್ತಿನಲ್ಲಿ 'ಶ್ರೀ ರಾಮನೊಲ್ಮೆಯೊಂದೆ ಶಾಶ್ವತಂ' ಎಂದು ಆಕೆ ರಾಮಧ್ಯಾನದೊಳಿರ್ದಳು.

'ಆಪೊಳ್ತಿಂಗೆ ವೇದಪುರುಷನೇ ಮುದುಪಿನೊಂದು ಪರಿಜಂ ಪೆಯ್ಗೊಂಡು ನಡೆತಂದನೋ' ಎನ್ನುವಂತೆ ವಾಲ್ಮೀಕಿ ಮುನಿ ಅಲ್ಲಿಗೆ ಬರುತ್ತಾನೆ. ಈ ಕಾರಡವಿಯಲ್ಲಿ ಏಕಾಂಗಿಯಾಗಿರುವ ಸೀತೆಯನ್ನು ಕಂಡು "ಆರೌ? ವನದೇವಿಯಂತಿರೀವನದೊಳೊರ್ವಳೆ ಇರ್ಪುದೇಂ?" ಎಂದು ಕೇಳಿದ್ದಾನೆ.

ಸೀತೆ ಹಿಂದೊಮ್ಮೆ ಋಷಿವೇಷದಿಂದ ಬಂದ ರಾವಣನ ಮಾಯೆಗೆ ಸಿಕ್ಕು ಬನ್ನಪಟ್ಟವಳು. ಈಗ ವಾಲ್ಮೀಕಿಯನ್ನು ಕಂಡು ಆ ಸಂದೇಹವೇ ಆಕೆಯನ್ನು ಆವರಿಸಿದೆ! "ಎನ್ನಾಣೆ ರಾಯನಾಣೆ ಪತ್ತೆಸಾರದಿರ್ ಸಾರದಿರ್" ಎಂದು ಮರವೊಂದರ ಮರೆಯಲ್ಲಿ ನಿಲ್ಲುತ್ತಾಳೆ.

ಋಷಿ ರಾಮನಾಣೆಯಾಗಿ ತಾನು ವಾಲ್ಮೀಕಿಯೆಂಬುದನ್ನು ತಿಳಿಹೇಳುತ್ತಾನೆ. ಸೀತೆಯ ಸಂಶಯ ತೊಲಗುತ್ತದೆ. ಸೀತೆ ತನ್ನ ವೃತ್ತಾಂತವನ್ನರುಹಿ ಆತನ ಪಾದಕ್ಕೆರಗುತ್ತಾಳೆ. ವಾಲ್ಮೀಕಿ "ಮಗಳೆಂದೆ ನಿನ್ನಂ ಸಲಹುವೆಂ" ಎಂದು ಸಂತೈಸಿ 'ಭಾಗ್ಯಲಕ್ಷ್ಮಿಯಂ ಕೊಂಡುಯ್ವ ದೀನನಂತಿರೆ ಸಂತಸದಿಂ' ತನ್ನಾಶ್ರಮಕ್ಕೆ ಕರೆದೊಯ್ಯುತ್ತಾನೆ. ಸೀತೆ ಆಶ್ರಮದಲ್ಲಿ 'ಮುನಿಯ ಪಾಲನೆಯೊಳ್ ಸೊಗದಿನಿರ್ದಳ್'!

ಈಗ ನಮ್ಮ ನಾಡಿನಾಡಿಗಳಲ್ಲಿ ಈ ತನಕ ನಡೆಯುತ್ತಿದ್ದ ವಿಚಿತ್ರ ಕೋಲಾಹಲವು ಸ್ವಲ್ಪ ಶಾಂತವಾಗುತ್ತದೆ. ಋಷಿಯ ಕರುಣಾಕಿರಣದ ಬೆಳಕಿನಲ್ಲಿ ಆಘಾತ-ಪೀಡನ, ದೈನ್ಯ-ಅಪಮಾನಗಳೆಲ್ಲವನ್ನು ತೊಳೆದು ಕಳೆದುಕೊಂಡು ಸೀತೆ

ಶಾಂತ ಪರಿಪೂತ ಆಶ್ರಮವೊಂದರಲ್ಲಿ ಆಶ್ರಯಪಡೆದಳಲ್ಲಾ ಎಂದು ಬಿಡುಗಡೆಯ ನಿಟ್ಟುಸಿರೊಂದು ಹೊರಬೀಳುತ್ತದೆ. ಕೊನೆಯೇ ಕಾಣದ ಕತ್ತಲಲ್ಲೂ ಬೆಳಕಿನ ಒಂದು ಕಿರಣ ಬೆಳಗಿತಲ್ಲಾ ಎಂದು ತುಸು ಸಮಾಧಾನವಾಗುತ್ತದೆ ಮನಸ್ಸಿಗೆ.

ಮುಂದೆ ಸೀತೆಯನ್ನು ನಾವು ಕಾಣುವುದು ಕೊನೆಯ ಆಶ್ವಾಸ "ಕಥೋಪಸಂಹಾರ"ದಲ್ಲಿ. ತಪೋಮಯ ಮೂರ್ತಿಯೊಂದರ ದರ್ಶನವಾಗುತ್ತಿದೆ ಅಲ್ಲಿ. ಇನ್ನು ಈ ಬದುಕಿನ ಪ್ರವಾಹದ ಯಾವ ಘಾಟಿನಲ್ಲೂ ಯಾರ ಸಂದರ್ಶನವಾಗಲಾರದೊ, ಸಂಸ್ಪರ್ಶದೊರೆಯಲಾರದೊ ಯಾರನ್ನು ಎಷ್ಟು ಒಗೆಯಿಂದ ಅರಸುತ್ತ ಅಲೆದರೂ ನಿಷ್ಫಲವೊ ಆ ರಾಮಚಂದ್ರನ ಸಾಮೀಪ್ಯದ ಆಶೆಯನ್ನು ತೊರೆದು, ಪರ್ವತವಾಸಿನಿ ಉಮೆಯಂತೆ ಸರ್ವಸಂಗ ತ್ಯಾಗಿನಿಯಾಗಿ ಹೃದಯದ ಅರವಟ್ಟಿಗೆಯಲ್ಲಿ ಕುಳಿತು ಸದಾಕಾಲವೂ ಆತನ ನಾಮೋಚ್ಚರಣೆಯ ಮಧುರ ಸ್ಮೃತಿಯಲ್ಲೇ ಬಾಳಿನ ಸಾರ್ಥಕತೆಯನ್ನು ಅನುಭವಿಸುತ್ತಿದ್ದಾಳೆ ಸೀತೆ. "ನುಡಿಯೊಳ್ ನಡೆಯೊಳೆಡವಿನೊಳ್ ಜಡದೊಳ್ ಜಂಜಡದೊಳ್ ಅಡಿಗಡಿಗೆ ಶ್ರೀರಾಮನೊಂದೆ ನೆನಪು ಗಡ!... ತನ್ನೆರೆಯನಯೆ ಪಾಡು; ತನ್ನಾಣ್ಮನಯೆ ಭಕ್ತಿ; ತನ್ನಿನಿಯನಯೆ ನೆನಪು; ತನ್ನರಸನಯೆ ಸರಸಮಾಸರಸಿಜಾಕ್ಷಿಗಜಸ್ರಂ." ವಿರಹದ ಅಪೂರ್ವ ತಪಸ್ಸಿನಿಂದ ಆ ರೂಪಾತೀತ ರೂಪ–ರಾಮತ್ವವನ್ನು ಕಂಡು ಕಂಡು ಧನ್ಯಳಾಗುತ್ತಿದ್ದಾಳೆ. ವೇದನೆ ಕಷ್ಟಗಳಿಂದ ಅದು ದಿನದಿನವೂ ಅರಳುತ್ತ ನಡೆದಿದೆ! ಈಗ ಯಾರ ಮೇಲೂ ಕೋಪ ತಾಪಗಳಿಲ್ಲ. "ಕೋಡಳ್, ಬಾಡಳ್, ಕೊಂಕಳ್, ಸಂಕಿಸಳೋಪನ ಕೋಪದ ಶಾಸನಕೆ ಜನಕತನೂಜೆ'. ವ್ಯಥೆ? ವ್ಯಥೆಯನ್ನೇ ತುತ್ತುಗೊಂಬ ಈ ಸ್ಮೃತಿತಪವಿದೆಯಲ್ಲಾ! 'ತನ್ನೊಂದಿರವಿನ ನೋವನೆಂತುಂ ತನ್ನ ಮನದನ್ನನ ನೆನಪಿನೇರಗುಡಳ್.'

ಹೀಗೆ ಸೀತೆಯ ಬಾಳು ಈ ತಪೋವನದಲ್ಲಿ ತಪೋಮಯವಾಗಿ ಕಳೆಯುತ್ತಿದೆ. ಹೀಗೆ ಕೆಲವು ಕಾಲ ಕಳೆದಿದೆ. ಮತ್ತೊಂದು ದಿನ 'ವೇಣೊಂದು ಮುಹೂರ್ತದೊಳಮಳರನಮಳರಂ ಪೆರೆನೇಸರ್ಕಳಂ ಪೂರ್ವದಿಕ್ಸುಂದರಿಯೆಂತಂತು' ಹೆರುತ್ತಾಳೆ. ವಾಲ್ಮೀಕಿ ಆ ಮಕ್ಕಳಿಗೆ ಕುಶಲವರೆಂದು ನಾಮಕರಣ ಮಾಡುತ್ತಾನೆ.

ಮಕ್ಕಳು ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಾರೆ. ಅವರ ವಿವಿಧ ಬಾಲಲೀಲೆಗಳು ಆಶ್ರಮಕ್ಕೊಂದು ಹೊಸಕಳೆ ತರುತ್ತವೆ. ಎಂದೋ ಮುದುಡಿ ಹೋಗಿದ್ದ ಸೀತೆಯ ಮನಸ್ಸು ಈ ಚಿಣ್ಣರಾಟವನ್ನು ಕಂಡು ಬಿರಿಯತೊಡಗುತ್ತದೆ.

ಈಗ ಆಕೆಯ ಶರೀರದಲ್ಲಿ ಕಾತರತೆಯಿಲ್ಲ. ದೃಷ್ಟಿಯಲ್ಲಿ ಕ್ಷೀಣತೆಯಿಲ್ಲ, ವ್ಯಥೆಯಿಲ್ಲ, ವಿಕ್ಷೋಭೆಯಿಲ್ಲ. ಎಲ್ಲೆಲ್ಲೂ ಈ ಬಾಲಕೇಳಿ ರಂಗು ಬಳಿಯುತ್ತಿದೆ; ಗ್ರೀಷ್ಮ ಕಳೆದು ವಸಂತ ತಲೆಹಾಕುತ್ತದೆ! ಮುನಿ ಮಕ್ಕಳನ್ನು ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣರನ್ನಾಗಿ ಮಾಡುತ್ತಾ ಮಾಡುತ್ತಾ ಆ ಸರ್ವಸಂಗ ಪರಿತ್ಯಾಗಿಯೂ ಈ ಸಂಗದಿಂದ ಪುಲಕಿತನಾಗುತ್ತಾನೆ! ಈ ಮಾಯೆಯಲ್ಲಿ ಸಿಲುಕಿದ್ದಾನೆ!

ಇಂತಿರಲು ವಾಲ್ಮೀಕಿ ವರುಣಲೋಕಕ್ಕೆ ಹೋಗಿರುವ ಒಂದು ದಿನ ರಾಘವನ ಯಜ್ಞಾಶ್ವವು ಆ ಆಶ್ರಮಕ್ಕೆ ಬರಲು ಲವನು ಅದನ್ನು ಕಟ್ಟಿಹಾಕುತ್ತಾನೆ. ಹೀಗೆ ವಿಧಿ ಅಗಲಿರುವ ಸೀತಾರಾಮರ ನಡುವೆ ಒಂದು ಸೇತುವನ್ನು ಕಟ್ಟುವ ಕೆಲಸಕ್ಕೆ ತೊಡಗಿದೆ! ಜಗದ ಯುಗದ ಪುಣ್ಯವೇ ಬೆನ್ನುತಟ್ಟಿ ಲವನನ್ನು ಈ ಸಾಹಸಕಾರ್ಯಕ್ಕೆ ಕೈಹಾಕಿಸಿದೆ.

ಕುದುರೆಯನ್ನು ಕಟ್ಟಿದ ಲವನನ್ನು ಶತ್ರುಘ್ನಾದ್ಯರು ಸೆರೆಹಿಡಿದಿದ್ದಾರೆ. ಈ ಸುದ್ದಿ ಸೀತೆಯ ಕಿವಿಗೆ ಬಿದ್ದಕೂಡಲೇ ಬಹುಕಾಲದಿಂದಿದ್ದ ಸಮತೋಲನೆ ತಪ್ಪಿ ದುಃಖ ಉಕ್ಕಿಬರುತ್ತದೆ. ಅರುಣೋದಯದ ಮೊದಲು ಕಡುಕತ್ತಲಾಗಬೇಕಾದುದು ಸಹಜ! ಕುಶ ತಾಯಿಯನ್ನು ಸಂತೈಸಿ ಲವನನ್ನು ಬಿಡಿಸಿ ತರಲು ಹೋಗುತ್ತಾನೆ.

ಮುಂದೇನು? ಮಹಾಮಹೋತ್ಸವಕ್ಕೆ ಸನ್ನದ್ಧರಾಗಿ! ಗಂಗೆಯಮುನೆಯರ ಪುಣ್ಯಸಂಗಮವನ್ನು ಕಾಣಲು ಓಡಿ ಬನ್ನಿ! ಲೋಕೋತ್ತರವೂ ಅನಿರ್ವಚನೀಯವೂ ಆದ ಮಧುರ ಮಿಲನವನ್ನು ನೋಡಬನ್ನಿ! ಪಾರ್ವತಿಯ ತಪಸ್ಸಿಗೆ ಪರಮೇಶ್ವರನು ಒಲಿಯಲಿದ್ದಾನೆ ಕಾಣಬನ್ನಿ! ಅನಂತ ದುಃಖ, ಅದಮನೀಯ ವೇದನೆಗಳ ಬಸಿರಿಂದ ಅನಿರ್ವಚನೀಯವೂ ಅತುಲನೀಯವೂ ಆದ ಆನಂದ ಹುಟ್ಟಿಬರಲಿದೆ, ಅನುಭವಿಸಬನ್ನಿ!

ನಾವು ಇಷ್ಟೆಲ್ಲ ಸಂಭ್ರಮದಿಂದ ಬರುತ್ತೇವೆ ನಿಜ. ಆದರೆ ನಾವು ಕಾಣುವುದೇನು? "ಈಗಳ್ ಸರ್ವರುಂ ಪುರಕೆ ಬಿಜಯಂಗೆಯ್ದರ್" ಎಂದು ಕವಿ ಎಲ್ಲವನ್ನೂ ಅದರಲ್ಲೇ ಮುಕ್ತಾಯಗೊಳಿಸಿ ನಮ್ಮನ್ನು ನಿರಾಶೆಗೊಳಿಸುತ್ತಾನೆ! ನಮ್ಮ ಉತ್ಸಾಹವೆಲ್ಲ ಕಳೆದುಹೋಗುತ್ತದೆ.

"ಏಂ ಸೀತೆಯನಿನ್ನುಂ ಕೂಡಿ ಪೋಗನೆ? ಉಳಿದೆ ಪೋದನೆ ರಾಮಂ" ಎಂದು ಕೇಳಿದೆ ಶ್ರೋತೃವಾಣಿ ಉದ್ವೇಗದೊಡನೆ.

ಯಾತ್ರಿಕರ ನೆರವಿಗೆ ನೆರವಿಯೇ ಬಂದು ಉತ್ಸಾಹ, ಉದ್ವೇಗ, ಕಳಕಳಿ

ಗಳಿಂದ ಕಾತರಗೊಂಡು ಉತ್ಸವವೇಕೆ ನಡೆಯಲಿಲ್ಲ? ನಡೆಯಲಾರದೆ? ನಡೆಸಲಾರೆಯಾ? ನಾವು ಬಳಲಿಕೆ, ಬಾಯಾರಿಕೆಗಳನ್ನು ಗಮನಿಸದೆ ಇಷ್ಟು ದೂರದ ಪಯಣಮಾಡಿ ಬಂದುದು ಈ ಪುಣ್ಯಸಮ್ಮಿಲನದ ಮಹೋತ್ಸವವನ್ನು ನೋಡಲು. ಪೂಜಾರಿ ನೀನೇಕೆ ಈ ಉತ್ಸವವನ್ನು ಜರಗಿಸುತ್ತಿಲ್ಲ? ಎಂದು ಕೇಳುತ್ತಿದೆ. ಕವಿ ಯಾವುದೊ ಅಂತರಂಗದ ನಿಗೂಢ ನೋವಿನಿಂದ ಬಳಲುತ್ತಿದ್ದಾನೆ. ಈಗ ಯಾವುದೂ ಬೇಡವಾಗಿದೆ ಆತನಿಗೆ. ಆದರೆ ತನ್ನ ನೋವಿನಿಂದಾಗಿ ಬಳಲಿ ಬಂದವರನ್ನು, ಕಾದು ನಿಂದವರನ್ನು ಸಂಪೂರ್ಣ ನಿರಾಶೆಗೊಳಿಸಬಾರದಲ್ಲ, ಎಂದೇ ಒಂದೇ ಒಂದು ಆರತಿಯೆತ್ತಿ ಇಡೀ ಉತ್ಸವವನ್ನು ಕೊನೆಗಾಣಿಸುವ ದೃಶ್ಯವನ್ನು ನಾವು ಕಾಣುತ್ತೇವೆ! "ಓ! ಇನ್ನುಮುಳಿವನೆ ಸತಿಯಂ! ಈವೊಳ್ತು ತನ್ನರಸಿಯ ಉರುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ತನ್ನತನ್ನೆಯಮಂ ಮನ್ನಿಸೆಂದು ನನ್ನಿವೇಳ್ದು ಸಂತವಿಟ್ಟು ಸುದತಿ ಸೀತೆಯಂ ಪೊನ್ನ ಸಿಬಿಗೆಯೊಳೇರಿಸಿ ದೇವರ್ಕಳ್ ಪೊಗಳೆ ತಾನುಂ ತನ್ನವರುಂ ಆಶ್ರಮದ ಮುನಿಗಳೊಂದುಗೂಡಿ ಪೋದಂ......" ಎಂದು ಶ್ರೋತೃವಿಗೆ ಉತ್ತರಿಸಿದೆ ಕವಿವಾಣಿ.

ಕವಿಯ ಈ ಉತ್ತರ ಕಾವ್ಯದಲ್ಲಿ ಶ್ರೋತೃವನ್ನು ಸಂತೃಪ್ತಿಪಡಿಸಿದೆ. ಆದರೆ ನಮ್ಮನ್ನಂತು ಖಂಡಿತ ಸಂತೃಪ್ತಿಪಡಿಸಿಲ್ಲ. ನಮಗೆ ರಾಮ ಸೀತೆಯನ್ನು ಕರೆದುಕೊಂಡ ಹೋದ ಎಂಬುದಕ್ಕಿಂತಲೂ ಹೋಗುವ ಮೊದಲು ಏನು ನಡೆಯಿತು ಎಂಬುದು ಮುಖ್ಯವಾಗಿತ್ತು. ರಾಮ ಸೀತೆಯನ್ನೆಂತು ಎದುರುಗೊಂಡ? ಸೀತೆ ರಾಮನನ್ನು ಹೇಗೆ ಭೆಟ್ಟಿಯಾದಳು? ಅನಿಮಿಷರೂ ಕಣ್ಣಗಲಸಿ ನೋಡುತ್ತಿರಬಹುದಾದ ಆ ಪಾವಿತ್ರ್ಯಪೂರ್ಣ ಮಧುರ ಮಿಲನದ ಕಾಲದಲ್ಲಿ ಸೀತೆಯ ಮನಸ್ಥಿತಿಯೆಂತಿದ್ದೀತು? ರಾಮನ ಅಂತರಂಗದಲ್ಲಿ ಯಾವ ಭಾವದ ತುಮುಲ ನಡೆದಿತ್ತು? ರಾಮ ಸೀತೆಯರ ಕಣ್ಣುಗಳಿಂದ ಕಂಬನಿ ಹರಿಯಿತೇ? ಅದು ಸುಖದ್ದೇ? ದುಃಖದ್ದೇ? ಅಥವಾ ಅವೆರಡರ ಪ್ರಿಯವಾದ ಸಂಗಮದ್ದೇ? ರಾಮ ಸೀತೆಯನ್ನು ಕಂಡು ಓಡಿ ಬಂದು ಅಪ್ಪಿಕೊಂಡನೇ? ಅಥವಾ ಸೀತೆಯೆ ರಾಮನನ್ನು ಕಂಡು ಒಮ್ಮೆಲೆ ಕಾಲಿಗೆ ಬಿದ್ದಳೆ? ಅಥವಾ ರಾಮ ಆಕೆ ಕಾಲಿಗೆ ಬೀಳುವ ಮುನ್ನವೇ ಎತ್ತಿ ತಬ್ಬಿಕೊಂಡನೆ? ಅಥವಾ ಅವರಿಬ್ಬರ ಮಧ್ಯೆ ಇದ್ದ ನಾಚಿಕೆ, ಸಂಕೋಚ, ದುಃಖ, ತಾಪಗಳ ತೆರೆಯನ್ನು ಬೇರೆ ಯಾರೋ ಸರಿಸಿ ಅವರನ್ನು ಒಂದುಗೂಡಿಸಬೇಕಾಯಿತೇ? ಮಾತು ಹೊರಟಿತೇ? ಅಥವಾ ಮಾತೇ ಮೂಕವಾಗಿ ತುಟಿಗಳಲ್ಲಿ ಅಜ್ಜೊತ್ತಿ ನಿಂತುಕೊಂಡಿತೆ? ಅಥವಾ ಕಣ್ಣುಗಳೇ ಅನಂತ ಮಾತು

ಗಳನ್ನಾಡಿಕೊಂಡವೇ? ಅಥವಾ ಬೆರಳುಗಳೇ ಎಲ್ಲವನ್ನೂ ಸಲ್ಲಪಿಸಿಕೊಂಡವೇ? ಜನ್ಮಜನ್ಮಾಂತರದ ಪುಣ್ಯದಿಂದೊದಗಬಹುದಾದ ಈ ಪುಣ್ಯಾವಿಲಸವನ್ನು ಕಾಣುತ್ತಿದ್ದ ಸುತ್ತಣ ಜೀವ ಪ್ರಕೃತಿಗಳು ಆಗ ಹೇಗಿದ್ದುವು? ಇವು ನಮಗೆ ಬೇಕಿದ್ದುವು. ಮುದ್ದಣನ ಪ್ರತಿಭೆಯು ಸೃಷ್ಟಿಸಬಹುದಾಗಿದ್ದ ಆ ದೃಶ್ಯಭಾಗವನ್ನು ಕಾಣುವ ಭಾಗ್ಯ ನಮಗಿಲ್ಲವಲ್ಲಾ ಎಂದು ನಾವು ಪರಿತಪಿಸುತ್ತಿದ್ದೇವೆ. ಕವಿಯೇ! ನಿನ್ನ ಬಾಳಿನ ಯಾವ ದುಃಖ, ಇನ್ನಾವ ಸಂಕಟ, ಮತ್ತಾವ ಕೊರತೆಗಳಿಂದ ನಿನ್ನ ಪ್ರತಿಭಾ ಭಂಡಾರವನ್ನಿಲ್ಲಿ ತೆರೆದು ತೋರಿಸಲಾರದೆ ಹೋದೆ? ಯಾವ ನೋವು, ಯಾವ ಕಾವು ನಿನ್ನಿಂದ ಈ ಭಾಗಕ್ಕೆ ಕತ್ತರಿ ಪ್ರಯೋಗ ಮಾಡಿಸಿತು?*

ಹೇಗಿದ್ದರೂ ಈ ಭಾಗ ಮೊಟಕಾದುದರಿಂದ ನಮ್ಮ ರಸದೃಷ್ಟಿ ತಣಿಯಲಿಲ್ಲವೇ ಹೊರತು ಸೀತೆಯ ಪಾತ್ರ ಪರಿಪೋಷಣೆಯಲ್ಲಿ ದೊಡ್ಡ ಕೊರತೆಯೇನೂ ಆಗಲಿಲ್ಲ. ಮುದ್ದಣನ ಸೀತಾ ಪಾತ್ರದ ಸ್ಪರ್ಶದಿಂದ ನಮ್ಮ ಕುರೂಪತೆ ವಿರೂಪತೆಗಳೆಲ್ಲ ಕಳೆದು ಸುಂದರರಾಗುತ್ತೇವೆ. ಅದರ ದರ್ಶನದಿಂದ ನಮ್ಮ ಕಾಲುಷ್ಯಗಳೆಲ್ಲ ಕಳೆದು ಪುನೀತರಾಗುತ್ತೇವೆ. ಯುಗಯುಗಗಳಿಂದ ಕೋಟಿಕೋಟಿ ನರನಾರಿಯರಿಂದ ಭಕ್ತಿಪ್ರಣಾಮಗಳನ್ನು ಪಡೆದುಕೊಂಡು ಬರುತ್ತಿರುವ ಈ ಸ್ವರ್ಣಮೂರ್ತಿಯನ್ನು ತನ್ನ ಹೃದಯದ ಕುಲುಮೆಯಲ್ಲಿ ಕರಗಿಸಿ, ಪ್ರತಿಭೆಯ ಅಚ್ಚಿನಲ್ಲಿ ಎರಕಹೊಯ್ದು ನವನವೋನ್ಮೇಷಶಾಲಿಯಾಗಿ ಮಾಡಿದ್ದಾನೆ ವರಕವಿ ಮುದ್ದಣ! ಈ ಕವಿಯಿಂದ ಆ ಪಾತ್ರವೂ ಧನ್ಯ; ಆ ಪಾತ್ರದಿಂದ ಈ ಕವಿಯೂ ಧನ್ಯ.

---

*“ಏವಂಚ ಕುಶಲವರ ಹುಟ್ಟಿನಿಂದ ರಾಘವನ ಪರಾಭವದ ವರೆಗಣ 2—3 ಆಶ್ವಾಸಗಳಷ್ಟರಲ್ಲಿ ಹೇಳಬೇಕಾದ ಕಥೆ ಎಲ್ಲವನ್ನೂ ಕೊನೆಯ ಆದೊಂದು ಚಿಕ್ಕ ಆಶ್ವಾಸದಲ್ಲಿ ತುರುಕಿಸಿಟ್ಟಿದೆ. ಆ ವರೆಗೆ ಗೆಲುವೊಗವಾಗಿ ಎಸಳೆಸಳಾಗಿ ಹೇಳುತ್ತಾ ಹೋದ ಕಥೆ ಕೊನೆಗೆ ಒಮ್ಮೆಲೆ ಸೆಡಕೊಳ್ಳುತ್ತದೆ. ಇದಕ್ಕೆ ಕಾರಣವಾದರೋ ಲಕ್ಷ್ಮೀನಾರಣಪ್ಪನ ಅನಪೇಕ್ಷೆಯಲ್ಲ, ಅನಾದರವಲ್ಲ. ಅವನನ್ನು ತುತ್ತುಗೊಂಡ ಮಹಾರೋಗ. ರಾಮಾಶ್ವಮೇಧವನ್ನು ಮುಗಿಸುವಷ್ಟರಲ್ಲೇ ಆತನಿಗೆ ಕ್ಷಯರೋಗ ಸೋಕಿತ್ತು” — “ಮಹಾಕವಿ ನಂದಳಿಕೆ ಲಕ್ಷ್ಮೀನಾರಣಪ್ಪ” ಎಂಬ ಲೇಖನದಲ್ಲಿ ಎಂ. ಗೋವಿಂದ ಪೈಯವರು.

ಶೈಲಿ

“ಕಾವ್ಯಕ್ಕೆ ಭಾವ ವಿಭಾವಗಳೂ ಬೇಕು, ರಸವೂ ಬೇಕು, ಧ್ವನಿಯೂ ಬೇಕು; ಅಕ್ಷರ ತೇಜಸ್ಸೂ ಬೇಕು, ಪದಗಳ ಬಹುವರ್ಣ ರಂಜನೆಯೂ ಬೇಕು; ಛಂದಸ್ಸಿನ ನರ್ತನಗತಿಯೂ ಬೇಕು; ಉಪಮಾನೋಪಮಾನಗಳ ಮಿಂಚು ಬೆಳಕೂ ಬೇಕು. ಅವುಗಳಲ್ಲಿ ಒಂದೊಂದಕ್ಕೂ ಒಂದೊಂದು ಕೆಲಸವಿರುತ್ತದೆ. ನಮ್ಮ ಪಂಚೇಂದ್ರಿಯಗಳಲ್ಲಿ ಯಾವುದನ್ನು ಬಿಡಬಹುದು. ಪಂಚಪ್ರಾಣಗಳಲ್ಲಿ ಯಾವುದು ಇಲ್ಲದೆ ಹೋದರೆ ಜೀವನಕ್ಕೆ ನಷ್ಟವಿಲ್ಲ? ಭಾವರಸಧ್ವನಿಗಳ ಪುಷ್ಟಿಯು ಶಬ್ದ ವಾಕ್ಯ ಛಂದೋಲಂಕಾರಗಳನ್ನು ಅವಲಂಬಿಸಿಕೊಂಡಿರುತ್ತದೆ. ಇವು ಇಲ್ಲದಿದ್ದರೆ ಅವು ಇಲ್ಲ. ಇವು ಚೆನ್ನಿಲ್ಲದಿದ್ದರೆ ಅವು ಚೆನ್ನಿಲ್ಲ. ಎಲ್ಲಕ್ಕೂ ಮೂಲವಾದದ್ದು ಕವಿಯ ವ್ಯಕ್ತಿ ಸಂಪತ್ತು. ಅದೇ ಪ್ರತಿಭೆ; ಅದೇ ಸ್ಫೂರ್ತಿ; ಅದೇ ಸಹಜ ವರಪ್ರಸಾದ. ಕ್ಷಣ ಕ್ಷಣವೂ ಹೊಸ ಹೊಸದಾಗುತ್ತ, ಒಂದೇ ಕ್ಷಣದಲ್ಲಿ ನಾಲ್ಕಾರು ವಿಷಯಗಳನ್ನು ಸಂಪಾದಿಸಿ ಸೃಷ್ಟಿಸಬಲ್ಲದ್ದಾಗಿ, — ಪರಿಸರಗ್ರಹಣ ಪ್ರತ್ಯುದ್ಭಾವನ ವಾಗಭಿವ್ಯಂಜನ ಕ್ರಿಯೆಗಳನ್ನು ಔಚಿತ್ಯವಿವೇಚನೆಯಿಂದ ನಿರ್ವಹಿಸಬಲ್ಲದ್ದಾಗಿ, — ಲೋಕಧ್ವನಿಗೆ ಪ್ರತಿಧ್ವನಿ ಕೊಡುವ ಕಲ್ಪನಾ ಚಮತ್ಕೃತಿಯುಳ್ಳದ್ದಾದ ಮನೋಬುದ್ಧಿ ಸಾಮರ್ಥ್ಯವೇ ಪ್ರತಿಭೆ. ಅದು ಇಂದ್ರನಂತೆ ಸಹಸ್ರಾಕ್ಷಿಗಳುಳ್ಳದ್ದು, — ನವ ನವೋನ್ಮೇಷಶಾಲಿಯಾದವು ಆ ಅಕ್ಷಿಗಳು. ಇಂಥ ಅಂತಃಕರಣ ಲಕ್ಷಣದಿಂದ “ಶೀಲ” (ಕೇರೆಕ್ಟರ್), ಸ್ವಾಭಾವಿಕ ಪ್ರವೃತ್ತಿ, ಅಥವಾ ರೂಢಿಯಾದ ಚರ್ಯೆ; ಆ ಶೀಲದಿಂದ ಶೈಲಿ.

— **ಡಿ. ವಿ. ಜಿ.**

ಇಂದು ನಾವು ಯಾವುದನ್ನು "ಶೈಲಿ" ಎನ್ನುತ್ತೇವೆಯೊ ಅದನ್ನೇ ಹಿಂದೆ "ರೀತಿ" ಎನ್ನುತ್ತಿದ್ದರು. "ರೀತಿ" ಎಂಬ ಹೆಸರಿನಿಂದ ಶೈಲಿಯ ವಿಮರ್ಶೆ ನಮ್ಮಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಹೀಗಿದ್ದರೂ ನಮ್ಮ ಕೆಲವು ಆಲಂಕಾರಿಕರು ''ರೀತಿ" ಪದವನ್ನು ಕೆಲವೆಡೆ ಸಂಕುಚಿತ ಅರ್ಥದಲ್ಲಿ ಬಳಸಿದ್ದೂ ಉಂಟು. ಹಾಗಾಗಿ ''ರೀತಿ" ಪದದ ಉಪಯೋಗ ಅರ್ಥವ್ಯಾಪಕತೆಯ ದೃಷ್ಟಿಯಿಂದ ಗೊಂದಲಕ್ಕೆಡೆಯಾದೀತೆಂದು ಭಾವಿಸಿ ಇತ್ತೀಚೆಗೆ ನಮ್ಮ ವಿಮರ್ಶಕರು ಅದರ ಬದಲು ಹೆಚ್ಚಾಗಿ "ಶೈಲಿ" ಪದವನ್ನು ಬಳಸುತ್ತಿದ್ದಾರೆ. ಅಲ್ಲದೆ ಇಂಗ್ಲೀಷ್ ಪದ ''ಸ್ಟೈಲ್" (Style) ಮತ್ತು ಶೈಲಿಗೆ ಹೆಚ್ಚಿನ ಧ್ವನಿ ಸಾಮ್ಯವಿರುವುದೂ ಶೈಲಿ ಪದಪ್ರಯೋಗಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿತು. ದಿ. ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಗ್ರಂಥ "ನಾಡೋಜ ಪಂಪ"ದಲ್ಲಿ "'ಶೀಲಸ್ಯ ಇಯಂ ಶೈಲೀ' (ಶೀಲ ಸಂಬಂಧವಾದುದೇ ಶೈಲಿ) ಎಂದು ಆ ಪದದ ವ್ಯುತ್ಪತ್ತಿಯಾಗಿ ತೋರುತ್ತಿದೆ" ಎಂದಿದ್ದಾರೆ. ಆ ಪದದ ಮೂಲ, ಪ್ರಯೋಗದ ಪ್ರಾರಂಭ, ಆವಶ್ಯಕತೆ—ಇವುಗಳನ್ನೆಲ್ಲ ಚರ್ಚಿಸುವುದು ಇಲ್ಲಿ ನಮಗೆ ಅಪ್ರಸ್ತುತ; ಅನಗತ್ಯ. ನಾವು ಈಗ ಚಿಂತಿಸಲಿರುವುದು ಆ ಪದದಿಂದ ಸೂಚಿತವಾಗುವ ವಿಚಾರವನ್ನು ಕುರಿತು.

ವಿಚಾರದ ದೃಷ್ಟಿಯಿಂದ ನೋಡಿದರೆ ಕನ್ನಡದಲ್ಲಿ ಸಾಧಾರಣ ಒಂದು ಸಾವಿರ ವರ್ಷಗಳ ಹಿಂದಿನಿಂದ-ನೃಪತುಂಗನಿಂದಲೇ ಶೈಲಿಯ ಕುರಿತು ಚಿಂತನೆ ನಡೆದುದು ಕಂಡುಬರುತ್ತದೆ. ಸಂಸ್ಕೃತದಲ್ಲಂತೂ ಅದಕ್ಕಿಂತಲೂ ಎಷ್ಟೋ ಹಿಂದೆ ಬಹಳಷ್ಟು ಮಂದಿ ಆಲಂಕಾರಿಕರು ಶೈಲಿಯ ವಿವಿಧ ಅಂಗಗಳನ್ನು ಕೂಲಂಕಷವಾಗಿ ಚರ್ಚಿಸಿ, ಮಥಿಸಿ, ಒರೆದು, ತೂಗಿ, ಎಳೆಎಳೆಯಾಗಿ ಬಿಡಿಸಿ, ಸಮಗ್ರವಾಗಿ ಹೊಸೆದು ತೋರಿಸಿದ್ದಾರೆ; ಅದರ ಆಳ ವಿಸ್ತಾರಗಳನ್ನೆಲ್ಲ ಮುಳುಗಿ, ಈಸಿ ಅರಿತು ನಿರೂಪಿಸಿದ್ದಾರೆ. ಪಾಶ್ಚಿಮಾತ್ಯ ವಿಮರ್ಶಕರೂ ಎಲ್ಲ ಬಗೆಯಿಂದಲೂ, ಎಲ್ಲ ಕಡೆಯಿಂದಲೂ ಶೈಲಿಯೆಡೆಗೆ ಬೆಳಕು ಚೆಲ್ಲಿ ಅದನ್ನು ನಿಚ್ಚಳವಾಗಿ ಕಾಣಿಸಿದ್ದಾರೆ. ಹೀಗೆ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿಮರ್ಶಕರು ಶೈಲಿಯ ಸುಳುಹು-ಹೊಳಹು, ಸ್ಥಾನ-ಮಾನ; ವ್ಯಾಪ್ತಿ-ಪರಿಮಿತಿಗಳನ್ನು ಗುರುತಿಸಿ ರಸಗ್ರಹಣದ ಪಥನಿರ್ದೇಶ ಮಾಡಿದ್ದಾರೆ.

ಶೈಲಿಯ ವಿಮರ್ಶೆ ಕನ್ನಡದಲ್ಲಿ ಸಾಧಾರಣ ಒಂದು ಸಾವಿರ ವರ್ಷಗಳ ಹಿಂದಿನಿಂದಲೇ ನಡೆದು ಬಂದಿದೆ ಎಂದೆವು. ಆದರೆ ಈ ಪ್ರಾಚೀನತೆಯನ್ನು ನಾವು

ನಮ್ಮ ಹೆಮ್ಮೆಗೆ ಹೇಳಿಕೊಳ್ಳಬಹುದೇ ಹೊರತು ಆಧುನಿಕ ಕಾಲದಲ್ಲಿ ಈ ಕ್ಷೇತ್ರದಲ್ಲಿ ನಮ್ಮ ಕೃಷಿ ಏನೂ ಸಾಲದು. ಸಂಸ್ಕೃತ ಮತ್ತು ಆಂಗ್ಲ ವಿದ್ವಾಂಸರು ಈ ಕ್ಷೇತ್ರದಲ್ಲಿ ಬಹುಕಾಲ ಬೆವರು ಸುರಿಸಿ ಕೃಷಿಮಾಡಿದ ಬೆಳೆ ನಮ್ಮ ಮುಂದಿದೆ. ಆ ಅನುಭವದಿಂದ ಕನ್ನಡದಲ್ಲಿ ಈ ಶಾಸ್ತ್ರಸಾಹಿತ್ಯವನ್ನು ಬೆಳೆಯಿಸುವುದು ಸುಲಭಸಾಧ್ಯ. ಹೀಗಿದ್ದೂ ಕನ್ನಡದ ಉಳಿದ ಬೆಳೆಗಳ ನಡುವೆ ಈ ಬೆಳೆ ಸಾಲದು ಅನ್ನಿಸುತ್ತದೆ. ಈ ಶಾಸ್ತ್ರಸಾಹಿತ್ಯ ಕನ್ನಡದಲ್ಲಿ ಸಾಕಷ್ಟು ಬೆಳೆಯಲಿಲ್ಲ, ಜನ ಅರಿಯಲಿಲ್ಲವೆಂದೆ ಸಾಹಿತ್ಯದ ಉಳಿದ ಪ್ರಕಾರಗಳಲ್ಲೂ ತಪ್ಪುಗಳು ತಲೆಹಾಕಿ ಕೆಡಿಸುತ್ತಿವೆ. ಕನ್ನಡದಲ್ಲಿ ಈ ಶಾಸ್ತ್ರಸಾಹಿತ್ಯದ ಕೃತಿಗಳು ಇಲ್ಲವೇ ಇಲ್ಲವೆಂದಲ್ಲ; ಹಲವಿವೆ. ಪ್ರೊ. ತೀ. ನಂ. ಶ್ರೀಕಂಠಯ್ಯನವರ "ಭಾರತೀಯ ಕಾವ್ಯಮೀಮಾಂಸೆ" ಈ ದಿಸೆಯಲ್ಲಿ 'ಸಮರ್ಥವೂ ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯಕೃತಿ'ಯಾಗಿದೆ. ಅಲ್ಲದೆ ಇನ್ನೂ ಕೆಲವು ಹಿರಿಯರು ಕೆಲ ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಆದರೆ ಇಷ್ಟೇ ಸಾಕೇನು? ಸಾಲದು. ಕನ್ನಡದ ಹಿರಿಯರು ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕೃಷಿ ಮಾಡಬೇಕಾಗಿದೆ. ಕೊನೆಯ ಪಕ್ಷ ಅನ್ಯಭಾಷಾ ಗ್ರಂಥಗಳನ್ನು ಅನುವಾದಿಸುವಷ್ಟಾದರೂ ಪರಿಶ್ರಮ ಪಟ್ಟು ಬಾಯಾರಿ ಬಾಯ್ದೆರೆದಿರುವ ಕನ್ನಡ ಸಾಹಿತ್ಯಾಭ್ಯಾಸಿಯ ತೃಷೆಯನ್ನು ತಣಿಸಬೇಕೆಂದು ಕಳಕಳಿಯಿಂದ ಬೇಡಿಕೊಂಡರೆ ಅದು ಅಪ್ರಸ್ತುತವಾದರೂ ಅಪ್ರಾಸಂಗಿಕವಾಗಲಾರದು ತಾನೆ?*

ಶೈಲಿ ಎಂದರೇನು? ಸಾಮಾನ್ಯವಾಗಿ ಪದಗಳನ್ನು ಪೋಣಿಸಿದ ರೀತಿ, ವಾಕ್ಯಗಳನ್ನು ಹೊಂದಿಸಿದ ಕ್ರಮ, ಅರ್ಥವ್ಯಕ್ತವಾದ ಕ್ರಮ.—ಇವನ್ನಷ್ಟೆ ಶೈಲಿಯೆಂದು ಬಗೆವವರೂ ಇದ್ದಾರೆ. ಶ್ಲೇಷ, ಉಪಮೆ, ರೂಪಕಾದಿ ಅಲಂಕಾರಗಳನ್ನಷ್ಟೆ ಕಂಡು ಶೈಲಿಯನ್ನು ತೂಗಹೊರಡುವವರೂ ಇಲ್ಲದಿಲ್ಲ. ಪದಗುಂಫನ, ಧಾಟಿಯ ಓಟ ಇವಿಷ್ಟಕ್ಕೇ ಮರುಳಾಗಿ 'ಶೈಲಿಯೆಂದರೆ ಇದು ಶೈಲಿ' ಎನ್ನುವವರನ್ನೂ ಕಾಣುವುದು ಕಷ್ಟವಲ್ಲ. ಇವರೆಲ್ಲರದೂ ಆನೆಯ ಒಂದೊಂದೇ ಅಂಗವನ್ನು ಮುಟ್ಟಿನೋಡಿ 'ಇದು ಆನೆ' ಎಂಬ ಸಿದ್ಧಾಂತಕ್ಕೆ ಬಂದ ಕುರುಡರಂತಹ ಅಪೂರ್ಣ ಅರಿವು. ಹಾಗಾದರೆ ಶೈಲಿಯೆಂದರೇನು? ಶೈಲಿ ನಾವು ಮೇಲೆ ಕಂಡಷ್ಟರ

---

* ಈ ದಿಸೆಯಲ್ಲಿ ಡಾ| ಕೆ. ಕೃಷ್ಣಮೂರ್ತಿ ಎಂ. ಎ; ಬಿ. ಟಿ; ಪಿಎಚ್. ಡಿ. ಇವರು "ಆನಂದವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ", "ಕನ್ನಡ ಕಾವ್ಯಾಲಂಕಾರ" ಮತ್ತು "ಕನ್ನಡ ಕಾವ್ಯಪ್ರಕಾಶ" ಈ ಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸುವ ಮೂಲಕ ದೊಡ್ಡ ಕೆಲಸಮಾಡಿದ್ದಾರೆ.

ಮೊತ್ತವೂ ಅಲ್ಲ. ಶೈಲಿಯಲ್ಲಿ ಇವೆಲ್ಲ ಇವೆ; ಇವಕ್ಕಿಂತ ಹೆಚ್ಚಿನ ಇನ್ನೂ ಕೆಲವು ವಿಚಾರಗಳೂ ಇವೆ. ರಸ, ಗುಣ, ಧ್ವನಿ, ಅಲಂಕಾರ, ಔಚಿತ್ಯ, ಪಾತ್ರ ಇತ್ಯಾದಿ ಹಲವುಗಳ ಸುಂದರ ಸಮ್ಮಿಲನವೇ ಶೈಲಿ. ಒಟ್ಟಿನಲ್ಲಿ ಕವಿದರ್ಶನ ಸಾಲಂಕೃತವಾಗಿ ವ್ಯಕ್ತವಾಗುವ ಬಗೆಯೇ ಶೈಲಿ.

ಹೀಗೆ ಶೈಲಿಯೆಂಬುದು ಬಹು ವಿಶಾಲಾರ್ಥವನ್ನೊಳಗೊಂಡಿದೆ. ಎಂದೇ ಅದರ ಕುರಿತು ಅಭಿಪ್ರಾಯಭೇದಗಳೂ ತಲೆದೋರಿವೆ. ಪೌರ್ವಾತ್ಯ ಪಂಡಿತರಲ್ಲೆಂತೊ ಅಂತೆಯೇ ಪಾಶ್ಚಿಮಾತ್ಯ ವಿಮರ್ಶಕರಲ್ಲೂ ಆ ಕುರಿತು ಅಭಿಪ್ರಾಯ ಘರ್ಷಣೆ ನಡೆದಿದೆ. ಆಲೋಚನೆಯ ಉಡಿಗೆ ಶೈಲಿ; ಆಲೋಚನೆಗೆ ಸಾಕಷ್ಟು ಸಮರ್ಪಕ ಭಾಷೆಯನ್ನು ತೊಡಿಸುವ ಸಮಾರಂಭವೇ ಶೈಲಿ; ಆಲೋಚನೆಯ ಅವತಾರವೇ ಶೈಲಿ; ಶೈಲಿ ಲೇಖಕನ ಅಂಗಿಯಲ್ಲ ತೊಗಲು; ಸುಂದರ ಕಾವ್ಯದೇವಿಯ ಮುಖಬಣ್ಣದ ಹೊಳಪೇ ಶೈಲಿ–ಹೀಗೆ ಪಾಶ್ಚಿಮಾತ್ಯ ವಿಮರ್ಶಕರು ಶೈಲಿಯ ಕುರಿತು ಬಹುಬಗೆಯ ವ್ಯಾಖ್ಯೆ ನಡೆಸಿದ್ದಾರೆ. ಆದರೆ ಬಹುಜನ ವಿಚಾರವಂತರಿಗೆ ಸಮ್ಮತವಾದ ಒಂದು ವ್ಯಾಖ್ಯೆಯೆಂದರೆ "ಕವಿಯೇ ಶೈಲಿ" (The Style is the man himself) ಎಂಬ ಬಫನ್ನನ ಸಾಮತಿ. ಡಿ. ಮುಳಿಯ ತಿಮ್ಮಪ್ಪಯ್ಯನವರ 'ಕವಿಯ ಶೀಲವೇ ಶೈಲಿ' ಎಂಬ ವಾದವೂ ಮೇಲಿನ ವ್ಯಾಖ್ಯೆಗೆ ಸಮಾನಾರ್ಥವುಳ್ಳುದೇ ಆಗಿದೆ. ಎಸ್. ವಿ. ರಂಗಣ್ಣನವರೂ ತಮ್ಮ "ಶೈಲಿ" ಗ್ರಂಥದಲ್ಲಿ ಮೇಲಿನ ವ್ಯಾಖ್ಯೆಯನ್ನೇ ಎತ್ತಿ ಹಿಡಿದಿದ್ದಾರೆ.

ಈಗ ರಾಮಾಶ್ವಮೇಧದ ಶೈಲಿಯ ವಿಮರ್ಶೆ ನಡೆಸುವ ಮೊದಲು ಶೈಲಿಯ ಕುರಿತಾದ ಕೆಲ ವಿಚಾರಗಳನ್ನು ತಿಳಿದುಕೊಳ್ಳುವುದು ಅಗತ್ಯ. ಶೈಲಿ ನಿರ್ಮಿತಿ ಕವಿಯ ವೈಯಕ್ತಿಕ ಶಕ್ತಿ. ಆದರೆ ಅದರ ಮೇಲೆ ಪ್ರಭಾವ ಬೀರಬಲ್ಲ ಇನ್ನೂ ಕೆಲವಿಚಾರಗಳಿವೆ. ಅವನ್ನು ಸ್ಥೂಲವಾಗಿ ಎರಡಾಗಿ ವಿಂಗಡಿಸಿ ಹೇಳಬಹುದು. ಒಂದು: ಕವಿ ಹುಟ್ಟಿ ಬೆಳೆದು ಕೃತಿರಚನೆ ಮಾಡಿದ ಕಾಲ–ಸಮಯ. ಎರಡು: ಕವಿ ಬೆಳೆದು ಬಂದ ಪರಂಪರೆ–ಸಂಪ್ರದಾಯ. ಈಗ ಕವಿಯ ವೈಯಕ್ತಿಕ ಶಕ್ತಿ, ಸಮಯ ಮತ್ತು ಸಂಪ್ರದಾಯಗಳ ಕುರಿತು ಸ್ವಲ್ಪ ಚಿಂತಿಸೋಣ. ಅದು ನಮ್ಮ ಮುಂದಿನ ವಿಮರ್ಶೆಗೆ ಸಹಕಾರಿಯಾಗುತ್ತದೆ.

ಹುಟ್ಟಿದ ಪ್ರತಿಯೊಬ್ಬನಿಗೂ ಬದುಕು ಇದಿರಿಸುತ್ತದೆ. ದಿನನಿತ್ಯದ, ಸಾಮಾನ್ಯ ಆಗು-ಹೋಗುಗಳೊಡನೆ-ಸುಖ-ದುಃಖಗಳೊಡನೆ ಅಸಾಧಾರಣ ಅಸಾಮಾನ್ಯ ಘಟನೆಗಳೂ ವಿಚಾರಗಳೂ ಸೇರಿ ಆತನ ಚಿತ್ತಲಹರಿಗೆ ಚಾಲನೆ

ಕೊಡುತ್ತವೆ. ಸಾಮಾನ್ಯನ ಚಿತ್ತಲಹರಿಯಾದರೊ ಸಣ್ಣ ಕೆರೆಯೊಂದರ ಅಲೆಯಂತೆ. ಅದರ ಗತಿಗೆ ಒಂದು ಮಿತಿಯಿರುತ್ತದೆ. ನಾಲ್ದೆಸೆಗಳಿಂದಲೂ ಬಂಧಿತವಾಗಿರುವ ಅದು ಬದಿಗೆ ಬಡಿದೊಡನೆ ಅಲ್ಲೆ ಕರಗಿ ಕಣ್ಮರೆಯಾಗುತ್ತದೆ. ಅಸ್ತಿತ್ವವನ್ನು ಅಳಿಸಿಕೊಂಡ ಅದು ಹುಟ್ಟಿ ಸತ್ತಿದೆ ಎಂಬುದಕ್ಕೆ ಕುರುಹೂ ಇರುವುದಿಲ್ಲ. ಕೆಲವಂತೂ ಬದಿಯವರೆಗೆ ಸರಿಯುವ ಪ್ರಯಾಸವನ್ನೂ ತೆಕೆಳ್ಳದೆ ಮಧ್ಯದಲ್ಲೇ ಅಳಿದು ಹೋಗುತ್ತವೆ. ಹೀಗೆ ಉದ್ದೇಶಹೀನವಾಗಿ, ಅನಿವಾರ್ಯವಾಗಿ ಹುಟ್ಟಿ ಅಳಿದ ಅವು 'ಅತ್ತಿಯ ಹಣ್ಣಿನ ಜಂತುಗಳಂತೆ.' ಆದರೆ ಪ್ರತಿಭಾವಂತನ ಚಿತ್ತಲಹರಿಯಾದರೊ ಸಾಗರದ ತೆರೆಯಂತೆ. ಅದು ಗಂಭೀರ ಘೋಷದೊಡನೆ ದಡಕ್ಕೆ ಬಂದು ಅಪ್ಪಳಿಸಿ ಹಿಂದಿರುಗುವಾಗ ತನ್ನ ಬಡಿತದ ಗುರುತನ್ನು ಅಲ್ಲಿ ಉಳಿಸಿ ಹೋಗುತ್ತದೆ. ದಡಕ್ಕೆ ಬಂದು ಬಡಿದು ಹಿಂದಿರುಗುವಾಗ ಅದು ತನ್ನ ಅಸ್ತಿತ್ವವನ್ನು ಕಳೆದುಕೊಂಡು ನಿಷ್ಪ್ರಯೋಜಕವಾಯಿತೊ ಅನಿಸುತ್ತದೆ. ಆದರೆ ಸತ್ಯ ಬೇರೆಯಾಗಿರುತ್ತದೆ. ಅದು ತನ್ನಿಂದ ಹಿರಿದಾದ ಇನ್ನೊಂದು ತೆರೆಯ ಹುಟ್ಟಿಗೆ ಪ್ರೇರಕ, ಪೂರಕ, ಕಾರಕವಾಗುತ್ತದೆ. ಆ ಇನ್ನೊಂದರ ಹಿರಿತನಕ್ಕಾಗಿ ಇದು ತನ್ನನ್ನು ಲೀನಿಸಿಕೊಳ್ಳುತ್ತದೆ. ಆ ಇನ್ನೊಂದು ಮಗದೊಂದಕ್ಕಾಗಿ ಜೀವನಾರ್ಪಣೆ ಮಾಡುತ್ತದೆ. ಹೀಗೆಯೇ ಪ್ರತಿಭಾವಂತನ ಒಂದು ಚಿತ್ತಲಹರಿಯಿಂದ ಇನ್ನೊಂದು ಹುಟ್ಟಿ, ಇನ್ನೊಂದರಿಂದ ಮತ್ತೊಂದು ಜನ್ಮತಾಳಿ, ಮತ್ತೊಂದರಿಂದ ಮಗದೊಂದು ಆವಿರ್ಭವಿಸುತ್ತದೆ. ಹೀಗೆ ಸತತವಾಗಿ ತೆರೆಗಳ ಹಿಂದೆ ತೆರೆಗಳು ಏಳುತ್ತಾ ಏಳುತ್ತಾ ಅದರ ಗಾತ್ರ ಹಿರಿದಾಗಿ, ಉನ್ನತಿ ಹೆಚ್ಚಾಗುತ್ತದೆ. ಕೊನೆಗೆ ಅದಕ್ಕೊಂದು ಮೊನೆ ಮೂಡುತ್ತದೆ. ಅದೇ ಪ್ರತಿಭಾವಂತನ ದರ್ಶನ. ಹೀಗೆ ಸಂಸ್ಕಾರ ಸಮಷ್ಟಿಯ ಸಾರರೂಪವಾಗಿ ದರ್ಶನ ಸಿದ್ಧವಾಗುತ್ತದೆ. ಈ ದರ್ಶನ ನಿರ್ದಿಷ್ಟ ವಸ್ತುವೊಂದನ್ನಾಶ್ರಯಿಸಿ ಸಾಲಂಕೃತ ಉಕ್ತಿಯೊಡನೆ ವ್ಯಕ್ತವಾಗಿ ರೂಪುದಾಳುವುದೇ ಕಾವ್ಯ. ಹುಟ್ಟಲಿರುವ ಕಾವ್ಯಾತ್ಮಕ್ಕೆ ತೇಜಸ್ಸು ಕೊಡುವ ಇನ್ನೊಂದು ವಿಚಾರವೆಂದರೆ ಋಜುತನ. ನಿರ್ವಂಚನೆ ಕಾವ್ಯದ ಪ್ರಾಣಶಕ್ತಿ ಎಂದರೂ ಎನ್ನಬಹುದು. ಈ ಗುಣವಿಶೇಷದಿಂದಲೇ ಕವಿಗಳ ಶೈಲಿಗಳನ್ನು ಪ್ರತ್ಯೇಕಿಸಿ ನೋಡಬಹುದು. ಹೀಗೆ ವಸ್ತುವಿನಂತೆಯೇ ಶೈಲಿ ನಿರ್ಮಿತಿಗೂ ಪ್ರತಿಭೆ, ಹೃದಯವಂತಿಕೆ, ದರ್ಶನ, ಋಜುತನ ಇವಿಷ್ಟು ಅತ್ಯಗತ್ಯದ ಪರಿಕರಗಳು. ಇವಿಷ್ಟು ಕವಿಯ ವೈಯಕ್ತಿಕ ಶಕ್ತಿಯಲ್ಲಿ ಒಳಗೊಳ್ಳುತ್ತವೆ.

ಇನ್ನು ಈ ವೈಯಕ್ತಿಕ ಶಕ್ತಿಯ ಮೇಲೆ ಪ್ರಭಾವ ಬೀರಬಲ್ಲ ಇನ್ನೆರಡು

ಬಾಹ್ಯ ಶಕ್ತಿಗಳನ್ನು ಅವಲೋಕಿಸೋಣ. ಸಮಯ ಮತ್ತು ಸಂಪ್ರದಾಯಗಳ ಪ್ರಭಾವ ಸಾಮಾನ್ಯನ ಮೇಲೆ ಆಗುವಷ್ಟು ಕವಿಯ ಮೇಲಾಗಲಾರದು. ಸಾಮಾನ್ಯನು ಹೆಚ್ಚಿನಪಾಲು, ಸಮಯ ಮತ್ತು ಸಂಪ್ರದಾಯ ಪ್ರವಾಹಪತಿತ. ಆದರೆ ಕವಿ ಮಾತ್ರ ಈ ಪ್ರವಾಹವನ್ನೆದುರಿಸಿ ತನ್ನತನದ ಮೇಲೆ ನಿಲ್ಲಬಲ್ಲ. ಆದರೆ ಬೇಕೆಂದಾಗ ಆತ ಅವೆರಡರಿಂದಲೂ ಹಿತಮಿತವಾಗಿರುವಷ್ಟು ಅಂಶವನ್ನು ಅಂಗೀಕರಿಸಿಕೊಳ್ಳುತ್ತಾನೆ. ಅಂಗೀಕರಿಸಿದ ಅಂಶವನ್ನು ಅರಗಿಸಿಕೊಳ್ಳುತ್ತಾನೆ. ಆಹಾರವನ್ನು ತೆಗೆದುಕೊಂಡು ರಕ್ತವನ್ನಾಗಿ ಪರಿವರ್ತಿಸಿಕೊಳ್ಳುವ ಅಂತರಂಗ ಕ್ರಿಯೆಯಂತೆ ಪ್ರತಿಭಾವಂತ ಕವಿ ಸಮಯ ಮತ್ತು ಸಂಪ್ರದಾಯಗಳಿಂದ ಸ್ವೀಕರಿಸಿಕೊಂಡಷ್ಟು ಭಾಗ ವಿಶಿಷ್ಟವಾಗಿ ಆತನದೇ ಆಗುತ್ತದೆ. ಹೀಗೆ ಆತನದೇ ಆಗಿ ಪರಿವರ್ತಿತವಾಗದೆ 'ಇದೋ ನಾನು ಸಮಯದ ಪ್ರಭಾವ', 'ಇಗೋ ನಾನು ಸಂಪ್ರದಾಯದ ಛಾಯೆ'ಯೆಂದು ಕೂಗಿ ಹೇಳುವ ಭಾಗಗಳೂ ಕಾವ್ಯದಲ್ಲಿರುತ್ತವೆ. ಕವಿ ಪ್ರಬಲನಾದಷ್ಟೂ ಅಂತಹ ಅಂಶ ಕಡಿಮೆಯಾಗುತ್ತದೆ. ಆದರೆ ಅಂತಹ ಅಂಶಗಳು ಇಲ್ಲವೇ ಇಲ್ಲವೆಂಬ ಕೃತಿ ಪ್ರಪಂಚದಲ್ಲಿ ಈ ತನಕ ಹುಟ್ಟಿಲ್ಲ; ಇನ್ನು ಹುಟ್ಟಲೂ ಆರದು. ಅದು ಅಸಂಭವ; ಅಕಲ್ಪನೀಯ.

ರಾಮಾಶ್ವಮೇಧದ ಶೈಲಿಯನ್ನು ನೇರವಾಗಿ ವಿಮರ್ಶಿಸುವ ಮೊದಲು ವಿಮರ್ಶಕ ಇನ್ನೂ ಒಂದು ವಿಚಾರವನ್ನು ಖಚಿತವಾಗಿ ತಿಳಿದಿರಬೇಕು. ಅದು: ರಾಮಾಶ್ವಮೇಧದ ಶೈಲಿ ಅರುವತ್ತರ ಸಿದ್ಧಶೈಲಿಯಲ್ಲ. ಮೂವತ್ತರ ಸಾಧಕಶೈಲಿ ಎಂಬುದು. ಅಲ್ಲಿ ಕವಿಯ ಸ್ವಯಂ ಪ್ರತಿಭೆಯಿಂದ ಅಭ್ಯಾಸದಿಂದ ರೂಪುಗೊಂಡ ಶೈಲಿಯೊಂದು ಪರಿಪುಷ್ಟವಾಗಿ ಬೆಳೆಯುತ್ತಿರುವುದನ್ನು ಕಾಣಬಹುದು. ಜೊತೆಗೆ ಹಿಂದಿನ ಹಿರಿಯ ಕವಿಗಳ ಅನುಕರಣ ಅನುಸರಣಗಳನ್ನೂ ಗುರುತಿಸಬಹುದಾಗಿದೆ. ಎಂದೇ ರಾಮಾಶ್ವಮೇಧದ ಶೈಲಿ ಅಂಶತಃ ಕವಿಯ ನಿರ್ದಿಷ್ಟ ಶೈಲಿ; ಅಂಶತಃ ಅಭ್ಯಾಸಿಯ ಪ್ರಾಯೋಗಿಕ ಶೈಲಿ. 'ಕವಿಯೇ ಶೈಲಿ' ಎಂಬ ವಾದವನ್ನು ನಾವು ಒಪ್ಪಿಕೊಂಡಾಗ ಮುದ್ದಣ ರಾಮಾಶ್ವಮೇಧದಲ್ಲಿ ರೂಪುಗೊಳ್ಳುತ್ತಿದ್ದಾನೆ ಎಂದು ಹೇಳಬಹುದು.

ಮುದ್ದಣನ ಶೈಲಿಶಂಕರಿಯ ಅಂಗಭಂಗಿಯ ರೂಪುರೇಖೆಗಳನ್ನು, ಸುಳುಹು ಹೊಳಹುಗಳನ್ನು ರಾಮಾಶ್ವಮೇಧದಲ್ಲಿ ಕಂಡುಕೊಳ್ಳುವುದು ಸುಲಭಸಾಧ್ಯವಾದರೂ ಆ ಚಿತ್ರ ಅಸಂಪೂರ್ಣ; ಅಸ್ಪಷ್ಟವಲ್ಲದಿದ್ದರೂ ಅಸಿದ್ಧ. ಬಣ್ಣ ಬಳಿಯುವಿಕೆ ಇನ್ನೂ ಅಲ್ಲಿ ಇಲ್ಲಿ ಉಳಿದಿದೆ. ಅದು ಕೊನೆಗೊಳ್ಳುತ್ತಿರುವಂತೆಯೇ ಕವಿ

ಕಣ್ಮರೆಯಾದ. ಸಾವು ಅವನ ಮನೆಬಾಗಿಲಿಗೆ ಬಂದು ಕದ ತಟ್ಟುತ್ತಿರುವಾಗ ಕವಿ ಇನ್ನೂ ತನ್ನ ಚಿತ್ರವನ್ನು ಪೂರ್ಣಗೊಳಿಸುವುದರಲ್ಲೇ ತನ್ಮಯನಾಗಿದ್ದ. ಬಣ್ಣದಲ್ಲಿ ಅದ್ದಿದ್ದ ಕುಂಚ ಹಸಿಯಾಗಿರುವಂತೆಯೆ ಸಾವು ಅದನ್ನು ಕರುಣೆಯಿಲ್ಲದೆ ಕಸಿಯಿತು; ಎಸೆಯಿತು. ಕವಿಯನ್ನು ಕಾಣದ ನಾಡಿಗೆ ಕರೆದೊಯ್ದಿತು. ಈಗ ನಾವು ಏನನ್ನು ಕಾಣುತ್ತಿರುವೆವೊ ಅದು ಆಗ ನಿಲ್ಲಿಸಿರುವ ಅಪೂರ್ಣ ಚಿತ್ರ.

ಮುದ್ದಣ ಬದುಕಿದ್ದರೆ ಈ ಅಸಂಪೂರ್ಣ ಚಿತ್ರವನ್ನು ಪರಿಪೂರ್ಣಗೊಳಿಸುವ ಕೆಲಸವನ್ನು ಆತ ತಪಸ್ಸಿನಂತೆ ಮುಂದುವರಿಸುತ್ತಿದ್ದ. ಕೊನೆಗೊಮ್ಮೆ ಆ ನಿಷ್ಠಾಪೂರ್ಣ ತಪಸ್ಸು ಸಿದ್ಧಿಪಡೆಯುತ್ತಿತ್ತು. ಅಂದು ಮುದ್ದಣನ ಶೈಲಿಶಂಕರಿಯು ತನ್ನ ಸಂಪೂರ್ಣ ಕಳೆಯಿಂದ ಪ್ರತ್ಯಕ್ಷಳಾಗುತ್ತಿದ್ದಳು. ಆಗ ಮುದ್ದಣ ಕೃತಕೃತ್ಯ ನೆನಿಸುತ್ತಿದ್ದ. ಆದರೆ ಇದೆಲ್ಲವೂ "ರೆ" ಸಾಮ್ರಾಜ್ಯದ ಕಲ್ಪನೆಗಳು. ಹೇಗಿದ್ದರೂ ಇಂದು ನಾವು ಕಾಣುವಷ್ಟರಿಂದ ತೀರ್ಮಾನಿಸುವುದಿದ್ದರೆ ಇಷ್ಟು ಹೇಳಬಹುದು: 'ಹಿಂದಿನ ಗದ್ಯವಾವುದರಲ್ಲೂ ಇರದ ಆಶಾಜನಕವಾದ ಮೋಹಕವಾದ ಸರಣಿ ಅಥವಾ ವಿನ್ಯಾಸ' ಇಲ್ಲಿ ಮೈದೋರಿದೆ. 'ವಿಸ್ತಾರವಾಗಿ, ಸಂಕೋಚವಾಗಿ, ಏರಿ, ಇಳಿದು, ಬಾಲಕೇಳಿಯಾಡಿ, ವೃದ್ಧಗಾಂಭೀರ್ಯವನ್ನು ತೋರಿ, ನಾನಾ ಮಾರ್ಗಗಳನ್ನು ಹೊಕ್ಕು ಗದ್ಯಗತಿಯು ವೈವಿಧ್ಯದಿಂದ ಹೃದಯಂಗಮವಾಗಿದೆ.' ಗ್ರಹಮಾನಗಳನ್ನು ಗುಣಿಸಿ ನೋಡುವಾಗ ಶ್ರೇಷ್ಠ ಶೈಲಿಯಾಗಬಲ್ಲ ಸರ್ವ ಲಕ್ಷಣ ಗಳೂ ಅಲ್ಲಿ ಸ್ಫುಟವಾಗಿ ಕಂಡುಬರುತ್ತವೆ.

ಮುದ್ದಣ ಹತ್ತೊಂಬತ್ತನೆ ಶತಮಾನದ ಕೊನೆಯಲ್ಲಿ ಬದುಕಿ ಇಪ್ಪತ್ತನೆ ಶತಮಾನದ ಅರುಣೋದಯದ ಕೋಳಿ ಕೂಗುತ್ತಿರುವಂತೆಯೇ ಕಣ್ಮುಚ್ಚಿದ ಕವಿ. ಆ ಕಾಲದಲ್ಲಿ ಪದ್ಯವನ್ನು ಬರೆಯಬಲ್ಲಾತನೇ ಕವಿ ಎಂಬ ಭಾವ ಜನಮನದಲ್ಲಿ ದೃಢವಾಗಿ ನೆಲಸಿತ್ತು. 'ಪದ್ಯಂ ಸಮಸ್ತ ಜನತಾ ಹೃದ್ಯಂ' ಎಂಬ ನೃಪತುಂಗನ 'ಕವಿರಾಜಮಾರ್ಗ'ದ ಮಾತು ಪಂಡಿತರಲ್ಲೆಂದಲ್ಲ ಪಾಮರರಲ್ಲೂ ಬೇರು ಬಿಟ್ಟಿತ್ತು. ಮುದ್ದಣನ ಪ್ರಾರಂಭದ ಬರಹಗಳು ಯಕ್ಷಗಾನ ಪ್ರಬಂಧಗಳ ಗೀತರೂಪದಿಂದ ಮೊದಲಾಗಲು ಇದು ಬಹು ಮುಖ್ಯ ಕಾರಣವಾಗಿತ್ತು. ಆದರೇನು ಆ ಕ್ರಾಂತಿಕಾರಿ ಕವಿಯ ಮನಸ್ಸು ಬಳಬಳಸಿ ಹಳಸಾದ ತಂಗುಳಕ್ಕೆ ಬೇಸತ್ತಿತ್ತು. ಹೊಸತನಕ್ಕೆ ಹಂಬಲಿಸಿ ತಹತಹಿಸುತ್ತಿತ್ತು. ಕೊನೆಗೊಮ್ಮೆ ಸಮಯ ಮತ್ತು ಸಂಪ್ರದಾಯಗಳ ಒತ್ತಡವನ್ನು ಬಸಿರಕ್ತದ ಸಾಹಸಿ ಕವಿ ಮೀರಿನಿಂತ. 'ಅದ್ಭುತ ರಾಮಾಯಣ'ದ ರಚನೆ ಗದ್ಯರೂಪದಲ್ಲೇ ನಡೆಯಿತು.

ಪ್ರತಿಕ್ರಿಯೆಯಾದರೋ ಬಯಸಿದಷ್ಟು ಪ್ರೋತ್ಸಾಹಕರವಾಗಲಿಲ್ಲ. ಕೆಲವೇ ಮಂದಿಯನ್ನು ಬಿಟ್ಟು ಉಳಿದವರಾರೂ ಆ ಗದ್ಯಗ್ರಂಥದ ಕುರಿತು ಒಳ್ಳೆಯ ಮಾತನ್ನಾಡಲಿಲ್ಲ; ಬೆನ್ನುತಟ್ಟಲಿಲ್ಲ. ಸಾಹಸ ಸೋತು ತಲೆ ಕೆಳಗೆ ಹಾಕಿತು. ಸಮಯ ಮತ್ತು ಸಂಪ್ರದಾಯಗಳು ತಲೆಯೆತ್ತಿ ದಿಟ್ಟಿಸಿ ಸೋತು ತಲೆ ಕೆಳಹಾಕಿದವನನ್ನು ನೋಡಿ ನಗತೊಡಗಿದವು. ಬರಹ ಪದ್ಯ ರೂಪದಲ್ಲೇ ಮುಂದೆ ಸಾಗಿತು. "ರಾಮ ಪಟ್ಟಾಭಿಷೇಕ" ವಾರ್ಧಿಕ ಷಟ್ಪದಿಯಲ್ಲಿ ಹೊರಬಂತು.

ಎಷ್ಟು ಅಡೆತಡೆಗಳಿದ್ದರೇನು. ಕವಿಯ ಹೊಸತನದ ಹಂಬಲ ಮಾತ್ರ ಒಳಗಿಂದೊಳಗೆ ಹೆಮ್ಮರವಾಗಿ ಬೆಳೆಯತೊಡಗಿತ್ತು. ಏನು ಮಾಡಲಿ? ಹೇಗೆ ಬರೆಯಲಿ? ಎಂದು ಸಮಯ ಮತ್ತು ಸಂಪ್ರದಾಯಗಳ ಒತ್ತಡದಿಂದ ನಲಗುತ್ತಿರುವಾಗಲೇ ಬವುಲಾಡಿ ವೆಂಕಟರಮಣ ಹೆಬ್ಬಾರರ ಮೂಲಕ ಹೊಸಕಾಲದ ಕರೆ ಪಿಸುನುಡಿಯಿತು: "ನೀವು ಛಂದಸ್ಸಿನ ಗೊಡವೆ ಬಿಟ್ಟು ವಚನ ರೂಪದಲ್ಲೇ ಏಕೆ ಬರೆಯಬಾರದು?" ಅಷ್ಟೇ ಬೇಕಾಗಿತ್ತು. ಅಷ್ಟೇ ಸಾಕಾಗಿತ್ತು. ಕವಿ ಆನಂದೋಲ್ಲಾಸಗಳಿಂದ ಚೆಂಗನೆ ಜಿಗಿದ. ಒಮ್ಮೆ ಸೋತು ತಲೆತಗ್ಗಿಸಿದ್ದ ಸಾಹಸ ಅದಮನೀಯ ಚೇತನದೊಡನೆ ಪುನಃ ತಲೆಯೆತ್ತಿತು. ಗದ್ಯರೂಪದಲ್ಲಿ "ರಾಮಾಶ್ವಮೇಧ" ಹೊಮ್ಮಿ ಚಿಮ್ಮಿ ಹರಿಯಿತು. ಅಷ್ಟು ಮಾತ್ರವಲ್ಲ ಅಲ್ಲಿ ಕವಿ ತನ್ನ ಬಯಕೆ, ಸಿರ್ಧಾರಗಳನ್ನು ಸಿದ್ಧಾಂತವಾಗಿ ಉದ್ಘೋಷಿಸಿದ: "ಪದ್ಯಂ ವಧ್ಯಂ ಗದ್ಯಂ ಹೃದ್ಯಂ". ನಿಜವಾಗಿಯೂ ಈ ಹೊಡೆತದಿಂದ ಸಮಯ ಮತ್ತು ಸಂಪ್ರದಾಯಗಳು ಚೇತರಿಸಿಕೊಳ್ಳಲಾಗದಂತೆ ಮುಗ್ಗರಿಸಿದವು. ಅಲ್ಲಿಂದ ಮುಂದೆ ಹೊಸ ಕಾಲ ಕಾಲಿಕ್ಕಿತು. ನವ ಪರಂಪರೆ ತಲೆಹಾಕಿತು.

ಕವಿ ಕ್ರಾಂತಿಕಾರಿಯಾಗಿ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಸಾರಿದ. ನಿಜ; ಆದರೇನು? ಸಮಯ ಮತ್ತು ಸಂಪ್ರದಾಯಗಳ ಅಳುಕು ಅಂತರಂಗದ ಆಳದಲ್ಲಿ ಅರಿಯದಂತೆಯೇ ಹುದುಗಿದ್ದುದನ್ನು ನಾವು ಇಲ್ಲೂ ಕಾಣಬಲ್ಲೆವು. ಮುದ್ದಣನಿಗೆ ಆ ಸಿದ್ಧಾಂತವನ್ನು ತಾನೇ ಹೇಳುವಷ್ಟು ಧೈರ್ಯವಾಗಲಿಲ್ಲ. ಮನೋರಮೆಯ ಬಾಯಿಯಿಂದ ಹೇಳಿಸಿದ. ಅದಕ್ಕೆ ಆತನ ಪ್ರತಿಕ್ರಿಯೆ ನಸುನಗೆ! ಆ ನಸುನಗೆ ಅತ್ತ ಮಾಲಲೂ ಬಹುದು ಇತ್ತ ಜೋಲಲೂ ಬಹುದು! ಹೀಗೆ ಆ ಸಿದ್ಧಾಂತವನ್ನು ಮನೋರಮೆಯ ಬಾಯಿಂದ ಹೇಳಿಸಿದ ರೀತಿ, ಅದಕ್ಕೆ ಪ್ರತಿಯಾಗಿ ಈತನ ನಸುನಗೆ ಇವೆರಡೂ ಕೂಡಿ ಕೂಗಿ ಕರೆದು ಹೇಳುತ್ತಿವೆ "ಇದೋ ನೋಡಿ ನಾವು ಕ್ರಾಂತಿಕಾರಿ ಕವಿಯ ಮೇಲೆ ಬಿದ್ದಿರುವ ಸಮಯ ಮತ್ತು ಸಂಪ್ರದಾಯಗಳ ನೆರಳು" ಎಂದು.

ಪೌರಾಣಿಕ ವಸ್ತು ಮಾತ್ರ ಕಾವ್ಯವಾಗಬಲ್ಲದೆಂದು ಆ ಕಾಲದ ಅಭಿಪ್ರಾಯವಾಗಿತ್ತು. ಪೌರಾಣಿಕವಲ್ಲದ ವಸ್ತು ಕಾವ್ಯವಾದರೂ ಪಠನಕ್ಕೆ ಅನರ್ಹವೆಂಬ ಪರಂಪರಾಗತವಾದ ಭಾವನೆ ಅಂದಿನ ತಲೆಮಾರಿನಲ್ಲಿ ಬೇರೂರಿತ್ತು. ಮನೋರಮೆ ಕಥೆ ಹೇಳು ಎಂದು ಕೇಳಿಕೊಂಡಾಗ ಒಪ್ಪಿಕೊಂಡ ಮುದ್ದಣ ಕೇಳುತ್ತಾನೆ "ಆದೊಡಮಾವ ನಲ್ಗತೆಯಂ ಪೇಳ್ವೆಂ? ಏಂ ಭೋಜ ಪ್ರಬಂಧಂ? ವಿಕ್ರಮ ವಿಜಯಂ? ಮಹಾವೀರಚರಿತಂ?" ಇಷ್ಟು ಕೇಳಿದುದೇ ತಡ ಸಮಯ ಸಂಪ್ರದಾಯಗಳೆರಡೂ ಹೆಡೆಯೆತ್ತಿ ಬುಸುಗುಟ್ಟುತ್ತವೆ "ಇಸ್ಸಿ! ಇವರೊಳೆನಗಕ್ಕರಿಲ್ಲಂ." ಮನೋರಮೆ ಇಲ್ಲಿ ನುಡಿಯುವ ಬಾಯಿ ಮಾತ್ರ. ಇಷ್ಟು ಅಂಶದಲ್ಲಿ ಮುದ್ದಣ ಸಮಯ ಸಂಪ್ರದಾಯಗಳಿಗೆ ಶರಣಾಗಿದ್ದಾನೆ. ವಸ್ತು 'ಉಳಿದೊಡ-ಮಳಿದೊಡಂ ಬಟ್ಟೆದೋರಿಪ' ಪೌರಾಣಿಕವಾಗಿದೆ.

ಮುದ್ದಣನ ಕಾಲಕ್ಕೆ ಅವತಾರ ಪುರುಷರೆಂದು ಪರಿಗಣಿಸಲ್ಪಟ್ಟವರ ಎಲ್ಲಾ ಕಾರ್ಯಗಳನ್ನೂ ಹೇಗಾದರೊಂದು ರೀತಿಯಿಂದ ಸಮರ್ಥಿಸುವುದು ಸಾಮಾನ್ಯ ಸಂಪ್ರದಾಯವಾಗಿತ್ತು. ಆ ಸಂಪ್ರದಾಯವನ್ನು ಮೀರಿ ಅನ್ಯಾಯವನ್ನು ಅನ್ಯಾಯವೆಂದು ಹೇಳುವ–ನೇರವಾಗಿ ಹೇಳುವ ಎದೆಗುಂಡಿಗೆ ಯಾರಿಗೂ ಇರಲಿಲ್ಲ. ಅವತಾರ ಪುರುಷನಾಗಿ ತನ್ನ ಕಥಾನಾಯಕನೂ ಆದವನನ್ನು ಆತನ ಅಕಾರ್ಯ, ಅನ್ಯಾಯಗಳಿಗಾಗಿ ಛೀಗಳೆಯುವುದನ್ನು ನಾವು ಬೇರೆಲ್ಲೂ ಕಂಡಿಲ್ಲ. ಪ್ರಾಯಶಃ ಪ್ರಪಂಚದ ಕಾವ್ಯ ಚರಿತ್ರೆಯಲ್ಲೇ ಇದು ಅಪರೂಪವೊ ಅಪವಾದವೊ ಆಗಿರಬಹುದು. ಕನ್ನಡದಲ್ಲಂತೂ ನಾಯಕನನ್ನು ಬಿಡಿ ಪ್ರತಿನಾಯಕನನ್ನೂ ಸಮರ್ಥಿಸಿ ಎತ್ತಿ ಹಿಡಿಯುವುದು ಆದಿಕವಿ ಪಂಪನಿಂದ ಹಿಡಿದು ಆಧುನಿಕ ಕವಿ ಕುವೆಂಪು ವರೆಗೂ ನಡೆದು ಬಂದ ರಾಜಪಥ! ಹೀಗಿದ್ದೂ ಸೀತಾಪರಿತ್ಯಾಗದ ವಿಚಾರದಲ್ಲಿ ಮುದ್ದಣ ರಾಮನನ್ನು ನೇರವಾಗಿ "ಸೀತೆಯನಂತುಳಿದುಮೇತರ ಸೀತಾರಾಮಂ?" "ಅಪ್ಪೊಡಿನ್ನಾ ಕಲ್ಲೆರ್ದೆಯಂ ರಾಮನೋ? ಭೀಮನೊ?" "ಏಂ ತಾನೆ ತಲೆವೊಯ್ದುಂ ಮರುಗಿದನೆ?" "ಏಂ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ?" ಎಂದು ಛೀಗಳೆಯುವ ವರೆಗೂ ಮುಂದುವರಿದ. ಈ ನ್ಯಾಯ ನಿರ್ಣಯದ ಸಂದರ್ಭದಲ್ಲಿ ರಾಮನು ಅವತಾರ ಪುರುಷನೆಂಬ ಪರಂಪರಾಗತ ವಿಶ್ವಾಸವಾಗಲೀ ಕಥಾನಾಯಕನೆಂಬ ಮೋಹವಾಗಲೀ ಕವಿಯ ಸತ್ಯನಿಷ್ಠುರ ದೃಷ್ಟಿಗೆ ತೆರೆಯಾಗಿ ಮರೆಮಾಡಲಿಲ್ಲ. ಯಾರದೇ ಆಗಲಿ ಯಾವ ಸಂದರ್ಭದಲ್ಲೇ ಆಗಲಿ ಅಸತ್ಯ ಅನ್ಯಾಯಗಳನ್ನೂ ಸಮರ್ಥಿಸುತ್ತಾ ನಡೆದರೆ ವಾಸ್ತವಿಕ ಸತ್ಯ ನ್ಯಾಯಗಳ

ಸ್ಥಾನವೆಲ್ಲಿ? ಸ್ಥಾನವೇನು? ಇದು ಮುದ್ದಣನ ಮನದ ಪ್ರಶ್ನೆಯಾಗಿರಬಹುದು. ಯಾರೇ ಆಗಲಿ ಯಾವ ಸಂದರ್ಭದಲ್ಲೇ ಆಗಲಿ ತಪ್ಪು ಮಾಡಲಾರನೆಂಬುದು ಅಸತ್ಯದ ಪರಮಾವಧಿ. ಅಲ್ಲದೆ ಹಾಗೆ ಮಾಡಿದ ತಪ್ಪನ್ನು ಕಲೆಯ ತೆರೆಯ ಹಿಂದೆ ಮರೆಮಾಡುವ ಬದಲು ಕಲೆಯ ಮಿರುಗಿನೊಡನೆ ಹೇಳುವುದೇ ಉಚಿತ— ಇದು ಮುದ್ದಣನ ವಿಚಾರಲಹರಿ. ಇಂತಹ ಸತ್ಯನಿಷ್ಠುರವಾದ ನೇರ ದೃಷ್ಟಿಯಿಂದ ಎಷ್ಟೋ ವೇಳೆ ಕಲೆಯ ಕೊಲೆಯಾಗುವುದೂ ಉಂಟು. ಆದರೆ ಮುದ್ದಣನ ಅಸಾಮಾನ್ಯ ಪ್ರತಿಭೆ, ಅಪ್ರತಿಮ ಕಲಾಕೌಶಲ್ಯ ಅಂತಹ ಆಪಾದನೆಗೆ ಅವಕಾಶವೇ ಇಲ್ಲದಂತೆಸಗಿತು. ಕವಿ ರಾಮನ ತಪ್ಪನ್ನು ಮನೋರಮೆಯ ಬಾಯಿಯಿಂದ ಹೇಳಿಸಿ ತಾನು ಸಮಾಧಾನ ಹೇಳುವ ಸೋಗು ಹಾಕಿದ. ಈ ನಾವೀನ್ಯದಿಂದ, ಈ ಚಾತುರ್ಯದಿಂದ ಕಲೆಯ ಕೊಲೆಯಾಗಲಿಲ್ಲ; ಮಾತ್ರವಲ್ಲ ಕಲೆಯು ವಿಶಿಷ್ಟ ಕಳೆಯಿಂದ ಕಳಕಳಿಸಿತು; ಕೃತಕೃತ್ಯವಾಯಿತು.

ಇಲ್ಲಿ ಕವಿಯ ಈ ಸೋಗಿಗೆ ಇನ್ನೂ ಒಂದು ಬಾಗು ಇದೆ. ಅದು ಸಮಯ ಮತ್ತು ಸಂಪ್ರದಾಯಗಳ ಬೆದರಿಕೆ. ಕವಿ ಸಮಯ ಮತ್ತು ಸಂಪ್ರದಾಯಗಳ ಬಿಡುಗಣ್ಣ ಬೆದರಿಕೆಗೆ ಹೆದರಿದಂತೆ ತೋರಿಸಿಕೊಂಡಿದ್ದಾನೆ. ಆದರೆ ತನ್ನ ಅಭಿಪ್ರಾಯ ಪ್ರಕಾಶನದಲ್ಲಿ ಮಾತ್ರ ಹಿಂದೆ ಬೀಳಲೇ ಇಲ್ಲ. ನೋಡಿ ಮನೋರಮೆಯಿಂದ ರಾಮನನ್ನು ಆಪಾದಿಸುತ್ತಾ ನಡೆದ. ತಾನು ಸಮಾಧಾನ ಹೇಳುತ್ತಾ ಹೋದ. ಆದರೆ ಆ ಸಂವಾದಮಾಲೆಯ ಕೊನೆಯೆಲ್ಲಿ ಗೊತ್ತೇನು? ಮುದ್ದಣನ ಸಮಾಧಾನ ದಲ್ಲಲ್ಲ! ಮನೋರಮೆಯ ಆಪಾದನೆಯಲ್ಲಿ! "ಏಂ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ?" ಎಂಬ ಮನೋರಮೆಯ ಚುಚ್ಚು ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಮುದ್ದಣ ಅದಕ್ಕೆ ಉತ್ತರಿಸದೆ "ಪರಿಹಾಸಂ ಸಾಲ್ಗುಂ" ಎಂದು ಕಥೆಯನ್ನು ಮುಂದುವರಿಸಿ ದ್ದಾನೆ. ತಾನೇ ನಿರ್ಮಿಸಿದ ಪಾತ್ರವೊಂದನ್ನು ಸಮಾಧಾನಗೊಳಿಸುವುದು ಕವಿಗೆ ಪ್ರಯಾಸವೇನೂ ಆಗಿರಲಿಲ್ಲ ತಾನೆ? ಅಥವಾ ಸಮಾಧಾನ ಹೇಳಲಾಗದಂತಹ ಪ್ರಶ್ನೆಯನ್ನು ಆ ನಿರ್ಮಿತ ಪಾತ್ರದ ಬಾಯಿಯಿಂದ ಹೊರಡಿಸದಿರುವುದೂ ಸುಲಭ ಸಾಧ್ಯವಾಗಿತ್ತಲ್ಲವೆ? ಸಮಯ ಮತ್ತು ಸಂಪ್ರದಾಯಗಳ ಬೆದರಿಕೆಯನ್ನು ಮೀರಿಯೂ ಆ ಆಪಾದನೆ ನಿಲ್ಲಬೇಕೆಂಬುದೇ ಕವಿಯ ಆಶಯವಾಗಿತ್ತು! ಇಲ್ಲಿ ಎಂದಲ್ಲ ಬೇರೊಂದೆಡೆಯಲ್ಲಿ ಕೂಡಾ ಮನೋರಮೆಯೆಂಬ ಡಾಲು ಹಿಡಿದು ಕೊಂಡೇ "ಪೆಣ್ಗಳೊಂದು ಬಾಳ್ತೆ ಬಾಳ್ತೆಯೆ!" ಎಂದು ಸಮಯ ಮತ್ತು ಸಂಪ್ರದಾಯಗಳನ್ನು ಪರಿಹಾಸ್ಯಗೈದು, ಚುಚ್ಚಿ, ಕೆಣಕಿ ಎಚ್ಚರಿಸಿದ್ದಾನೆ.

ಮುದ್ದಣನ ಕಾಲಕ್ಕೆ ಅವನು ಬಾಳಿದ ವಾತಾವರಣದಲ್ಲಿ ಲಕ್ಷ್ಮೀಶನೇ ಆದರ್ಶ ಕವಿಯಾಗಿದ್ದ. ನಾಡಲೋಲ ಲಕ್ಷ್ಮೀಶನ ಅತಿಶ್ಲೇಷೆ, ಉಪಮೆ ಉತ್ಪ್ರೇಕ್ಷೆ, ಪದಗುಂಫನಗಳು ಪಂಡಿತರನ್ನೆಂದಲ್ಲ ಜನಸಾಮಾನ್ಯರನ್ನೂ ಕೂಡಿ ಯೇ ಸೂರೆಗೊಂಡಿದ್ದ ಕಾಲವದು. ಅಂದು ಏಂದೇನು ವಿಶಾಲಾನುಭವವಿಲ್ಲದ, ವಿಮರ್ಶಜ್ಞಾನವಿರಹಿತ ಪಂಡಿತ ಮಾತ್ರರನ್ನು ಕೇಳಿ 'ಕನ್ನಡದಲ್ಲಿ ಕಾವ್ಯವೆಂದರೆ ಜೈಮಿನಿ ಭಾರತ; ಕವಿಯೆಂದರೆ ಲಕ್ಷ್ಮೀಶ' ನೆಂದು ಹೇಳುತ್ತಾರೆ. ಮುದ್ದಣನು ಕಾಲ ಪ್ರಭಾವವಿಂದ ಲಕ್ಷ್ಮೀಶನ ಶೈಲಿಗೆ ಅಲ್ಪಸ್ವಲ್ಪ ಮರುಳಾಗಿದ್ದನೆಂಬುದಕ್ಕೆ ರಾಮಾಶ್ವಮೇಧ ಸಾಕ್ಷಿ ನುಡಿಯುತ್ತದೆ. ಮುದ್ದಣ ತನ್ನ ಕಥಾವಸ್ತು ಶೇಷ ರಾಮಾಯಣದ್ದು ಎಂದಿದ್ದಾನೆ. ಹಾಗೆ ಹೇಳಿದರೂ ಉಪಕಥೆಗಳ ವಿಚಾರ ವಲ್ಲ, ಮೂಲಕಥೆಗಂತೂ ಮುದ್ದಣ ಲಕ್ಷ್ಮೀಶನಿಂದ ಬಹಳಷ್ಟು ಸ್ಫೂರ್ತಿ ಪಡೆ ದಿದ್ದಾನೆ. ಯಾವ ಕವಿಯೇ ಆಗಲಿ ತನಗಿಂತ ಹಿಂದಿನ ಹಿರಿಯ ಕವಿಗಳಿಂದ ಪ್ರಭಾವಿತನಾಗದೆ ಇಲ್ಲ. ಹೆಚ್ಚು ಕಡಿಮೆಯ ಪ್ರಶ್ನೆ ಬೇರೆ. ಮುದ್ದಣನಂತೂ ಉಳಿದೆಲ್ಲರಿಗಿಂತ ಹೆಚ್ಚು ಲಕ್ಷ್ಮೀಶನಿಂದ ಪ್ರಭಾವಿತನಾಗಿದ್ದನೆಂಬುದರಲ್ಲಿ ಸಂದೇ ಹವೇ ಇಲ್ಲ. ಈಗ ಆ ಕುರಿತು ಶೈಲಿಯ ವಿಚಾರದಲ್ಲಿ ಕೆಲವೊಂದು ಉದಾಹರ ಣೆಗಳನ್ನು ನೋಡೋಣ.

ಲಕ್ಷ್ಮೀಶನ ಜೈಮಿನಿ ಭಾರತದ "ಎಲ್ಲರುಂ ಭೋಗಿಗಳ್ ಪಾತಾಳಗತರೆ ನಿಸರ್ . . . ." ಎಂಬುದು ಮುದ್ದಣನ ರಾಮಾಶ್ವಮೇಧದಲ್ಲಿ "ಭೋಗಿಗಳ್ ಕುಟಿಲಗಾಮಿಗಳಲ್ತು . . . ." ಎಂದಾಗಿದೆ. ಲಕ್ಷ್ಮೀಶನ "ಕುಟಿಲ ಚಂಚಲ ಕಠಿನ ಕೃಶವೆಂಬಿವುತ್ಕಟ ಯೌವನ ಶ್ರೀ ವಿಲಾಸಿನಿಯರಳಕಾಳಿ ಚಟುಲ ಸುಕ ಟಾಕ್ಷ ವಕ್ಷೋಜಜಾತ ಮಧ್ಯಗತಿಗಳ ವಿಸ್ತರದೊಳಲ್ಲದೆ . . . ." ಎಂಬುದು ಮುದ್ದಣನ "ಅಳಿಗಬ್ಬಂ ಬೆಳ್ಳಕ್ಕರಿಗರೊಳ್ ಪಳಿಗಜ್ಜಂ ಪಟ್ಟಸಾಲಿಗರೊಳ್ . ." ಎಂಬುದಕ್ಕೆ ಸ್ಫೂರ್ತಿ ನೀಡಿರುವುದನ್ನು ಭಾವಿಸಿ. ಲಕ್ಷ್ಮೀಶನ "ಹರಿಯಂತೆ ಬಲ ಬಲಯುತಂ . . ." ಎಂಬುದು ಮುದ್ದಣನಲ್ಲಿ "ತಾಳ್ಮೆಯೊಳ್ ತಿರೆಯಂತಿರೆ . . " ಎಂದು ಬದಲಾಗಿರುವುದನ್ನು ಗುರುತಿಸಿರಿ.

ಅಲ್ಲದೆ ರಾಮಾಶ್ವಮೇಧದ ಸಪ್ತಮಾಶ್ವಾಸದಲ್ಲಿ ಹೆಂಗಸರನ್ನು ವರ್ಣಿಸಿ ರಲು ಅಪವ್ಯಯಿಸಿರುವ "ಬಿಡು ಜಡೆಯ ಬಿದು-ಮೊಗದ ಬಿರಿದೆಸಳ್ಗಣ್ಣ . . ." ಎಂಬ ಅರ್ಥಹೀನ "ಬ"ಕಾರಗಳ ಸುರಿಮಳೆಯನ್ನು ಜೈಮಿನಿ ಭಾರತದ ಮೂವ ತ್ತನೆ ಸಂಧಿಯ "ಕಳಕೀರವಾಣೆಯರ್ ಕಾಳಾಹಿವೇಣೆಯರ್ ಕಳಭಮದಯಾನೆ

ಯರ್ . . ." ಎಂಬ "ಕ" ಕಾರದ ಜರಿಮಳೆಯೊಡನೆ ಹೊಂದಿಸಿ ನೋಡಿ. ರಾಮಾಶ್ವಮೇಧದ ದಶಮಾಶ್ವಾಸದ "ಮತ್ತಮಲ್ಲಿ ರನ್ನ ಗಲ್ಲೆಡೆಯ ಪುಲ್ಲ ಸಲ್ಲಾಪಿಸೆಸೊಳ್ ಚೆಲ್ಲದಿಂ . . ." ಎಂಬ "ಲ" ಕಾರ, ಮುಂದೆ ಬರುವ "ಕಡೆಗಣ್ಣೋಟಂ ಕುಡಿವರಿಯೆ ಕುಡುಪುರ್ವ ಸೆಡೆಯೆ . . ." ಎಂಬ "ಡ" ಕಾರ, ಆ ಬಳಿಕ ಬರುವ "ಕರವೊಪ್ಪುವ ಕಾರಾನೆಯ ಕಾಳಸಿಂಗನ . . ." ಎಂಬ "ಕ" ಕಾರಗಳನ್ನೂ ಹೀಗೆಯೇ ಬೇರೆಡೆಗಳಲ್ಲಿ ಬರುವ ಅನುಪ್ರಾಸಗಳನ್ನೂ ಜೈಮಿನಿ ಭಾರತದ ಹತ್ತನೆಯ ಸಂಧಿಯ "ಶೃಂಗಮಯ ಮುರುಶಿಲಾ ಸಂಗಮಯ . . ."ದಲ್ಲಿನ "ಂಗ"ಗಳಿಗೂ, ಇಪ್ಪತ್ತಾರನೆಯ ಸಂಧಿಯ "ಹೊತ್ತು ಹೊತ್ತಿಗೆ ಮತ್ತೆ ಮತ್ತೆ . . ."ಯಲ್ಲಿನ "ತ್ತೆ"ಗಳಿಗೂ ಅಂತೆಯೇ ಇನ್ನಿತರೆಡೆಯ ಅನುಪ್ರಾಸಗಳಿಗೂ ಹೋಲಿಸಿ ನೋಡಿ. ಈ ಪದಗೀರ್ಗುಂಫನದ ಹುಚ್ಚಿನಲ್ಲಿ ಆ ಕಾಲದ ಯಕ್ಷಗಾನಗಳ ಪ್ರಭಾವವೂ ಇದೆ. ಅಂತೂ ಆ ಕಾಲದ ಸಂಪ್ರದಾಯವಾದಿ ಜನರನ್ನು ಮೆಚ್ಚಿಸುವ ಹುಚ್ಚು ಹವ್ಯಾಸದಿಂದ ಮುದ್ದಣ ಎಲ್ಲೆಲ್ಲಿ ಲಕ್ಷ್ಮೀಶನನ್ನು ಅನುಕರಣೆ ಮಾಡಿದನೊ ಅಲ್ಲೆಲ್ಲ ಆತನ ಕಾವ್ಯ ಕಳಪೆಯಾಗಿದೆ; ಶೈಲಿ ನೀರಸವಾಗಿ ನಡೆಗೆಟ್ಟಿತೆವಳಿದೆ. ಅಲ್ಲಿ ಲಕ್ಷ್ಮೀಶನ ನಾದತರಂಗಿತತೆಯೂ ಇಲ್ಲ ಮುದ್ದಣನ ಸರಳ ಸುಭಗತೆಯೂ ಇಲ್ಲ. ಅಷ್ಟು ಭಾಗ ಕಾವ್ಯಕ್ಕೆ ಹೊಂದಿಕೊಳ್ಳದೆ ಬೇರೆಯಾಗಿಯೇ ನಿಂತುದು ಮೊದಲ ದೃಷ್ಟಿಗೇ ಕಂಡುಬರುತ್ತದೆ.

ಆದರೆ ಪದಗುಂಫನದ ಈ ಅತಿ ಮೋಹವನ್ನುಳಿದು ಮುದ್ದಣ ಈ ತಂತ್ರವನ್ನು ಹಿತಮಿತವಾಗಿ ಬಳಸಿದಲ್ಲಂತೂ ಕಾವ್ಯ ಕಳೆಗಟ್ಟಿದೆ. ಆತನ ಪ್ರತಿಭೆ ಅಲ್ಲಿ ನುಡಿಯುತ್ತಿದೆ. ನೋಡಿ: "ನೀಂ ಪಸಿದು ಸಸಿನಂಬಡಂತಾರಯ್ವದರಾರ್! ಸೋರ್ಮುಡಿಯನಾಗಳ್ ಪಿಕ್ಕಿ ಪೂದೊಡಂಬೆಯಂ ಮುಡಿಯಿಸುವರಾರ್! ದಿನದಿನಕಿಂ ಮಿಾಯಿಸುವರಾರ್ ನಿನ್ನನೊಡಂಬಡುವರಾರ್! ನಲ್ನುಡಿಯನುಡಿಸುವರಾರ್! ನಲ್ತೊಡವಂ ಕುಡುವರಾರ್! ಕೊಂಡಾಡುವರಾರೋವರಾರ್ ಬೇಸಗೆ ನೋವರಾರೆಲೆ ಕುವರೀ!" "ಪೆರ್ಕಳಿಕೆಯ ಗಂಡರಿರೆ ಕಟ್ಟುವುದು ಕಾದುವುದು. ಮೊನೆಯೊಳ್ ಶತ್ರುಹಂ ಗೆಲ್ಗುಂ ಕೊಳ್ಗುಂ. ಕಟ್ಟಿಲಾರದ ಬಣಗುಗಳ್ ಕಾಣ್ಕೆಗೊಟ್ಟೆಮ್ಮವರಂ ಕಂಡು ಬಾಳ್ವುದು"; "ಪಣದಾಸೆಗೆ ಈ ಹಸುವನಾಡಿಸಿ ಬೇಡಿಸಿ ಕೂಡಿಸುವ ಗಾರುಡಿಗತನಮಂ ಕಂಡೊರೆದ ಜೋಗಿಯೆ ಜಾಣಂ"— ಇಲ್ಲೆಲ್ಲ ಅರಿತೂ ಅರಿಯದಂತಿರುವ ಅನುಪ್ರಾಸಗಳು ಅರ್ಥ ಪ್ರಾಧಾನ್ಯದೊಡನೆ ವಾಕ್ಯವೃಂದಗಳಿಗೊಂದು ಚೇತನವನ್ನೊದಗಿಸಿ ಮಿರುಗುಗೊಟ್ಟಿರುವ ಕೌಶಲ್ಯಮನಸ್ಸನ್ನು

ಸೂರೆಗೊಳ್ಳುತ್ತದೆ. ಕಾಲದ ಬೇಡಿಕೆಯನ್ನು ತೃಪ್ತಿಪಡಿಸಲೆಂದು ಅಂಧಾನುಕರಣೆ ಮಾಡದೆ, ಆ ಬೇಡಿಕೆಯನ್ನು ತನ್ನ ಪ್ರತಿಭೆಯ ಮೂಸೆಯಲ್ಲಿ ಕಾಯಿಸಿ ಕೊಳೆಯನ್ನು ಕಳೆದು ಬಿಸುಟು ತನ್ನತನದ ಮುದ್ರೆಯೊತ್ತಿ ಚಲಾಯಿಸುವದರಲ್ಲೇ ಮುದ್ದಣನ ಶೈಲಿಯ ಶಕ್ತಿ ಹುದುಗಿದೆ.

ಪದಗುಂಫನದ ವಿಚಾರದಲ್ಲೆಂದಲ್ಲ ಲಕ್ಷ್ಮೀಶನ ಕೆಲವು ಉಪಮೆ, ರೂಪಕಗಳನ್ನೂ ತನ್ನವೇ ಆಗಿ ಪರಿವರ್ತಿಸಿಕೊಳ್ಳುವುದರಲ್ಲೂ ಮುದ್ದಣ ಬಹಳಷ್ಟು ಯಶಸ್ವಿಯಾಗಿದ್ದಾನೆ. ಇದಕ್ಕೆ ಒಂದು ದೃಷ್ಟಾಂತವನ್ನು ನೋಡೋಣ. ಜೈಮಿನಿ ಭಾರತದ ತೃತೀಯ ಸಂಧಿಯಲ್ಲಿ ಒಂದು ಉಪಮೆ ಬರುತ್ತದೆ:—

"ಕುದ್ದಾಲ ಹತಿಯನುರೆ ತಾಳ್ದೆವ್ಮನಿನ್ನೆಗಂ
ಮುದ್ದುಗೈದೀ ವಸುಧೆ ಬೆಳೆಯಿಸಿದಳೆಂದು ತುರು-
ಗಿದ್ದ ತನಿವಣ್ಗಳಿಂದೆಸೆವ ಪೆರ್ಗೊನೆಗಳಂ ಸಲೆ ಸಮರ್ಪಿಸಲೊಡರ್ಚಿ
ಎದ್ದಿರದೆ ಬಾಗಿದವೊ ಕದಳಿಗಳ್ ಧರಣಿಗೆನೆ . ."

ಮುದ್ದಣ ಇದೇ ವಸ್ತುವನ್ನು ತನ್ನ ಉಪಮೆಗೂ ಬಳಸಿಕೊಂಡ. ಆದರೆ ದೃಷ್ಟಿ ಮಾತ್ರ ಬೇರೆ. ಮುದ್ದಣ ಹೇಳುತ್ತಾನೆ: "ಇಂತೇಂ ರಸವಾಳೆಯ ಪೆರ್ಗೊನೆಗೆ ಕೀಳ್ಮೊಗಮಾಯ್ತು? ದುಮ್ಮಾನಂಗಡ! ಪೆತ್ತಬ್ಬೆಗೆ ತಮ್ಮತ್ತಣೆನಳಿವಾಯ್ತೆಂದು ನಾಣ್ಚಿ ತಲೆವಾಗಿರ್ಕುಮಕ್ಕುಂ." ಆಳವಾದ ಆಲೋಚನೆಗೆ ಇಲ್ಲಿ ಲಕ್ಷ್ಮೀಶನಿಗಿಂತ ಮುದ್ದಣನ ಕಾಣ್ಕೆಯಲ್ಲಿ ಒಂದು ಬಣ್ಣ ಹೆಚ್ಚು! ಅದೂ ಅಲ್ಲದೆ ಲಕ್ಷ್ಮೀಶನ ಮೇಲಿನ ಉಪಮೆ ಭದ್ರಾವತಿಯ ವರ್ಣನಾಮಾಲಿಕೆಯಲ್ಲಿ ಬೇರೇನೂ ಉದ್ದೇಶವಿಲ್ಲದೆ ಬರುತ್ತದೆ. ಮುದ್ದಣನ ಉಪಮೆಯಾದರೊ ರಾಮರಾಜ್ಯದ ವರ್ಣನಾಮಾಲಿಕೆಯಲ್ಲಿ ಬಂದರೂ ಅಲ್ಲಿ ಬರೇ ವರ್ಣನೆಗಿಂತ ಹೆಚ್ಚಿನ ಉದ್ದೇಶವನ್ನೊಳಗೊಂಡಿದೆ. ಅಗಸ್ತ್ಯ ರಾಮರಾಜ್ಯದಲ್ಲಿ ನಡೆದು ಹೋಗುತ್ತಿರುವಾಗ ಈ ಉಪಮೆ ರಾಮರಾಜ್ಯದ ಕುರಿತು ಹೇಳಲು ಉಪಯೋಗಿಸಲ್ಪಟ್ಟಿದೆ. ಆ ಕಾಲಕ್ಕೆ ಸೀತಾಪರಿತ್ಯಾಗವಾಗಿ ಕೆಲಕಾಲ ಸಂದಿರುತ್ತದೆ. ಸೀತಾ ಪರಿತ್ಯಾಗಕ್ಕೆ ಅಗಸನೋರ್ವನ ಮಾತೇ ನೆವನವಾಗಿದ್ದರೂ ಆ ಮಾತಿನ ಹಿಂದೆ ಹಲವಾರು ಪ್ರಜೆಗಳ ಮನದ ಸಂಶಯ, ಮಾತಿನ ಗುಸುಗುಸು ಅಡಗಿತ್ತೆಂಬ ಕಾರಣದಿಂದಲೇ ರಾಮ ಸೀತೆಯ ಪರಿತ್ಯಾಗಕ್ಕೆ ಅನುವಾದನೆಂಬುದನ್ನು ನಾವು ಬೇರೆಡೆಯಲ್ಲಿ ವಿವರಿಸಿದ್ದೇವೆ. ಅಗಸ್ತ್ಯಾಗಮನದ ಕಾಲದಲ್ಲಿ ಪ್ರಜಾಕೋಟಿಯೆಲ್ಲವೂ— ಹಿಂದೆ ಸಂಶಯಿತ ಮನರಾಗಿದ್ದ ಪ್ರಜೆಗಳು ಕೂಡಾ—ತಮ್ಮಿಂದಾಗಿ ಪರಿಪೂತಳಾದ ಮಾತೆ ಸೀತೆಯ

ಪರಿತ್ಯಾಗವಾಯಿತಲ್ಲಾ ಎಂದು ಪರಿತಪಿಸುತ್ತಿದ್ದರು. ಆ ದುಃಖ ವೇದನೆಗಳಿಂದ ನವೆಯುತ್ತಿದ್ದರು. ಹೀಗೆ ರಾಮರಾಜ್ಯದ ಪ್ರಕೃತಿ ವರ್ಣನೆಯ ನೆವದಲ್ಲಿ ರಾಮರಾಜ್ಯದ ಪ್ರಜಾಕೋಟಿಯ ಅಂತರಂಗದ ಯಥಾರ್ಥ ಚಿತ್ರವನ್ನು ಚಿತ್ರಿಸಿದ್ದಾನೆ ಕವಿ. ಇಲ್ಲಿ 'ಕೀಳ್ಮೊಗ', 'ದುರ್ಮ್ಮಾನಂ', 'ನಾಣ್ಚಿ', 'ತಲೆವಾಗಿರ್ಕುಂ' ಈ ಪದಗಳ ಪ್ರಯೋಗದ ಔಚಿತ್ಯವಂತಿರಲಿ ಇನ್ನೂ ಒಂದು ವಿಚಾರವಿದೆ. ಗೊನೆಯ ಹುಟ್ಟಿನಿಂದ ಬಾಳೆಗೆ ಕೊನೆಯೊದಗುತ್ತದೆ. ಆದರೂ ಕವಿ ಇಲ್ಲಿ 'ತಮ್ಮ ಹುಟ್ಟಿನಿಂದ' ಎಂದು ಹೇಳದೆ 'ತಮ್ಮತ್ತಣಿಂ' ಎಂದುದು ಸೀತೆಯ ಕುರಿತಾದ ಜನಮನದ ಸಂತಾಪಕ್ಕೆ ನೇರವಾಗಿ ಧ್ವನಿಕೊಡುವಂತೆ ಮಾಡಿಲ್ಲವೆ?

ಇಷ್ಟರ ವರೆಗೆ ನಾವು ಮುದ್ದಣನ ಮೇಲೆ ಲಕ್ಷ್ಮೀಶನ ಪ್ರಭಾವವನ್ನು ನೋಡಿದೆವು. ಆದರೆ ಆತನಿಗೆ ಲಕ್ಷ್ಮೀಶನೇ ಎಂದಲ್ಲ ಕನ್ನಡದ ಉಳಿದ ಹಿರಿಯ ಕವಿಗಳೂ ಸ್ಫೂರ್ತಿ ನೀಡಿದ್ದಾರೆ. ಅದನ್ನು ಕಾವ್ಯದಲ್ಲಿ ಗುರುತಿಸಿ ನೋಡುವುದು ಕಷ್ಟಸಾಧ್ಯವೇನೂ ಅಲ್ಲ. ರಾಮಾಶ್ವಮೇಧದಲ್ಲಿ "ಜಸಮುಂಟು, ಸಕಲ ಸೌಭಾಗ್ಯಮುಂಟು, ಸಂತಸದುಕ್ಕೆವಮುಂಟು, ಕಡುಪುಂಟು, ಮಾನ್ಯಮುಂಟು, ಹೂನ್ಯಮುಂಟು, ಪಣಮುಂಟು, ಗುಣಮುಂಟು, ನೀನುಳ್ಳೊಡುಂಟು ಪೆರರುಳ್ಳೊಡುಂಟೆ ಪೇಳಲೆ ಮಗನೆ...."ಎಂದು ವೀರಮಣಿ ರಾಜನು ರಣರಂಗದಲ್ಲಿ ಆಹತನಾಗಿ ಬಿದ್ದಿರುವ ಮಗನ ದೇಹವನ್ನೆತ್ತಿಕೊಂಡು ಪ್ರಲಾಪಿಸುವ ಭಾಗ ರನ್ನನ ಸಾಹಸಭೀಮವಿಜಯದಲ್ಲಿ ಕರ್ಣನ ಮೃತದೇಹವನ್ನು ಕಂಡು ಕೌರವನು:—

"ನೀನುಳ್ಳೊಡುಂಟು ರಾಜ್ಯಂ।
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟೆಯ್॥
ನೀನುಳ್ಳೊಡುಂಟು ಪೀಳಿಗೆ।
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ"॥

ಎಂದು ವಿಲಾಪಿಸುವ ಭಾಗವನ್ನು ನೇರವಾಗಿ ನೆನಪಿಸುತ್ತಿಲ್ಲವೆ? ಹಾಗೆಯೇ ರಾಮಾಶ್ವಮೇಧದ ಚತುರ್ದಶಾಶ್ವಾಸದಲ್ಲಿ ಬರುವ "ಸುರರಳ್ಕೆ ದಿಗಿಭಂಗಳ್ ಬಳ್ಕೆ ಕಮಠನ ಕೊರಲ್ ಕುಸಿಯೆ, ಭೋಗಿಪನ ಭೋಗಂ ನಸಿಯೆ ದೆಸೆಗೊಡೆಯರ್ ಸರಿಯೆ, ಬೆಟ್ಟುಗಳ್ ಜರಿಯೆ ಕಡಲ್ ಮೊಗೆಯೆ ಔತ್ಪಾತಕ ಮೊಗೆಯೆ ಸಬ್ಬಸಬ್ಬರಂ ಕಡಿದಾಯ್ತು" ಎಂಬುದು ನಾರಣಪ್ಪನ ಗದುಗು ಭಾರತದ ಉದ್ಯೋಗ ಪರ್ವದ

“ಪ್ರಳಯಜಲನಿಧಿ ಸಂಚಗೆಟ್ಟವೊ
ಲಿಳೆ ಕುಸಿಯೆ ಕಮಠಂಗೆ ಮೇಲುಸಿ
ರುಲಿಯೆ ದಿಗುದಂತಿಗಳು ಮೊಳಕಾಲೂರಲಹಿ ಕುಸಿಯೆ।
ಬಲಮಹಾಂಬುಧಿ ಬಲುಗಡಲ ಮು
ಕ್ಕುಳಿಸಿ ನಡೆದುದು ಕಡುಭರದ ಕಾ
ಲ್ದುಳಿಯ ಕದನಾಳಾಪಕರ ಕಾಹುರತೆ ಹೊಸತಾಯ್ತು॥”

ಎಂಬುದಕ್ಕೆ ಸಂಬಂಧಿಯಾಗಿರುವಂತೆ ಕಾಣುತ್ತಿಲ್ಲವೆ? ಹೀಗೆ ಈ ಯಾದಿಯನ್ನು ಇನ್ನೂ ಬೆಳೆಸಬಹುದು. ಹೀಗೆ ಮುದ್ದಣ ಹಿಂದಿನ ಹಲವಾರು ಹಿರಿಯ ಕವಿಗಳಿಂದ ಉಪಕೃತನಾಗಿದ್ದಾನೆ. ಹೀಗೆಂದ ಕೂಡಲೇ ಮುದ್ದಣನ ಕೃತಿ ಅಲ್ಲಿಂದ ಇಲ್ಲಿಂದ ಎರವಲು ತಂದ ಕೊಂಡಿಗಳನ್ನು ಬೆಸೆದು ಮಾಡಿದ ಸರಪಣಿಯೆಂದು ಭಾವಿಸಿದರೆ ಅದು ನಮ್ಮ ಮೂಢತನವಾದೀತು. ಮುದ್ದಣನೆಂದೇನು ಪ್ರಪಂಚದ ಸಾಹಿತ್ಯೇತಿಹಾಸದಲ್ಲೇ ತನ್ನ ಪೂರ್ವಕವಿಗಳಿಂದ ಉಪಕೃತನಾಗದ ಕವಿಯೋರ್ವನಿದ್ದನೆಂದು ಭಾವಿಸುವುದೂ ಅಸಾಧ್ಯವಾದ ವಿಚಾರ. ಕುವೆಂಪು ಒಂದಡೆ ಹೇಳಿದಂತೆ ‘ಜಗತ್ತಿನ ಮಹಾಕವಿಗಳನ್ನು ಸಾಲಾಗಿ ನಿಲ್ಲಿಸಿ ನೋಡಿದರೆ ಗುಟ್ಟು ರಟ್ಟಾಗುತ್ತದೆ: ಒಬ್ಬನ ಕೈ ಮತ್ತೊಬ್ಬನ ಜೇಬಿನಲ್ಲಿ! ಎಂಬ ಜಾಣ್ನುಡಿಯಲ್ಲಿ ಅರೆಪಾಲಿಗೆ ಮಿಗಿಲೆ ಸತ್ಯಾಂಶವಿದೆ.’

ಹಿಂದಿನ ಕವಿ ಕೃತಿಗಳನ್ನು ಆಳವಾಗಿ ಅಭ್ಯಾಸಿಸುವುದರಿಂದಲೇ ಇಂದಿನ ಕವಿ ಸಿದ್ಧನಾಗುತ್ತಾನೆ. ಎಂದೇ ಇಂದಿನ ಕವಿಯ ಕೃತಿಗಳಲ್ಲಿ ಪೂರ್ವ ಕವಿಗಳ ಭಾವಗಳೂ, ವಿಚಾರಗಳೂ, ಉಪಮಾದಿ ಅಲಂಕಾರಗಳೂ ಸೇರಿಕೊಳ್ಳುವುದು ಸ್ವಾಭಾವಿಕ. ಹೆಚ್ಚಿನ ವೇಳೆ ಅವು ಇವನವೇ ಆದ ಸಂಸ್ಕಾರ ಪಡೆದು ಹೊಸತೇ ಆಗಿ ಪುನರ್ಜನ್ಮ ಹೊಂದಿರುತ್ತವೆ. ಕೆಲವೇಳೆ ತಿಳಿದೊ ತಿಳಿಯದೆಯೊ ಮೂಲ ರೂಪದಲ್ಲೇ ವ್ಯಕ್ತವಾಗಬಹುದು. ಹೇಗಿದ್ದರೂ ತಾಮ್ರದ ಸರಿಗೆಯನ್ನು ಎಲ್ಲಿಂದ ತಂದನೆನ್ನುವುದು ಮುಖ್ಯವಲ್ಲ; ಅದರಲ್ಲಿ ತನ್ನ ಪ್ರತಿಭಾ ವಿದ್ಯುತ್ತನ್ನು ಹೇಗೆ ಹರಿಯ ಬಿಟ್ಟಿದ್ದಾನೆನ್ನುವುದೇ ಮುಖ್ಯ ವಿಚಾರ.

ರಾಮಾಶ್ವಮೇಧದ ರಚನಾ ಕಾಲದಲ್ಲಿ ಮುದ್ದಣನ ಮುದ್ದಿನ ಮಡದಿ ಮನೋರಮೆ— ವಾಸ್ತವಿಕ ಪ್ರಪಂಚದ ಕಮಲಾಬಾಯಿ ಗರ್ಭಿಣಿಯಾಗಿದ್ದಳೆಂದು ತಿಳಿದು ಬರುತ್ತದೆ.† ಮೊದಲ ಬಸಿರು (ಅದೇ ಕೊನೆಯ ಬಸಿರೂ ಆಯಿತು) ಅದು.

---

† ಈ ವಿಚಾರವನ್ನು ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ ಎಂ. ಎ. ಅವರು “ಜೀವನ” ಮಾಸಿಕದಲ್ಲಿ ಪ್ರಕಟವಾದ ತಮ್ಮ “ರಾಮಾಶ್ವಮೇಧದ ರಚನಾಕಾಲದಲ್ಲಿ” ಎಂಬ ಲೇಖನದಲ್ಲಿ ಕೂಲಂಕಷವಾಗಿ ಸಾಧಾರವಾಗಿ ಚರ್ಚಿಸಿದ್ದಾರೆ.

ಆ ಚೊಚ್ಚಿಲ ಬಸಿರು ಕವಿಯ ಮೇಲೆ ಬಹಳಷ್ಟು ಪರಿಣಾಮ ಮಾಡಿರಬೇಕು. ಭಾವೀ ಮಗುವಿನ ಬಾಲಲೀಲೆಯ ವಿವಿಧ ಚಿತ್ರಗಳು ಜೀವತಳೆದು ಆಗಾಗ ಕವಿಯ ಮನಸ್ಸಿನ ರಂಗಮಂಟಪದಲ್ಲಿ ವಿವಿಧ ಭಂಗಿಗಳಿಂದ ಕುಣಿಯುತ್ತಿರ ಬಹುದು ತಾನೆ? ಬೇಡವೆಂದರೂ ಬಿಡದೆ ಕಾಡುವ ಅತ್ಯಂತ ಪ್ರಿಯವಾದ ಮಧುರ ವಾದ ಕಲ್ಪನೆಯ ಕೂಸುಗಳವು. ಕವಿಯ ಮನಸ್ಸನ್ನು ಹೀಗೆ ದಿನಬಿಡದೆ ಕಾಡುತ್ತಿದ್ದ ಕಲ್ಪನೆಗಳ ಒತ್ತಡ—ಭಾವದ ತೀವ್ರತೆ ಸೀತೆಯ ಪುತ್ರ ದೋಹಳದ ನೆವದಲ್ಲಿ ಆತನ ಕಾವ್ಯದಲ್ಲಿ ರೂಪುಗೊಂಡ ರೀತಿ ನೋಡಿ: "ಎಳೆ ವರೆಯದೊಳ್ ನಲ್ಗೂಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೆ ಕಂಡು ಸಂಸಾರದ ಸಾರಮಿದೆನುತೆ ಸಂತಸಂಬಡುವ ಪೆಣ್ಗಳೆ ಧನ್ಯೆಯರಲ್ತೆ! . . . . . . ಕುಲಮಂ ವರ್ಧಿಪ ಕಂದನಂ ಪಡೆದು ತೊರೆದ ಮೊಲೆಯೂಡಿ ತೊಟ್ಟಿಲೊಳಿಟ್ಟು ಪಾಡಿ ತೂಗಿ ಕೂಸು ನಿದ್ದೆವೋಪುದುಂ ತಾನುಮರೆಗಳಿಗೆ ಕೆಲದೊಳ್ ಮಂಡಿಸಿ ಬಾಲ ಲೀಲೆಯಂ ನೆನೆನೆನೆದು ಮತ್ತಂ ಕುವರನೆಳ್ಚತ್ತನಾಗೆ ಪಿಡಿದೆತ್ತಿ ಮುಂಡಾಡಿಯುಂ ಮುದ್ದಿಸಿಯುಂ ತೊದಳ್ನುಡಿಯೊಳ್ ನುಡಿಸಿಯುಂ ಕಿರುನಗೆಯೊಳ್ ನಗಿಸಿಯುಂ ಪೊಸಬಿನದದಿನಾಡಿಸಿಯುಂ ಮನದ ಬೇಸರಂ ಕಳೆವೊಂದು ಸೈಪೆನ್ನೊಳೆಂದಿಂಗಾದ ಪುದೋ?। ಅಂತು ಮಲ್ಲದೆಯುಂ:—ಅಬ್ಬೆ! ಪಿಡಿ ನಡೆದಪೆನೆನುತುಮೆರಳ್ಕೊರಡಿ ಯಿಡುತೆ ಪೊಂಗಿ ತಾಯ ನಿಡುದೋಳಂ ತಾಂಗಿ ಮೆಲ್ಲನೊತ್ತಿನೊಳಂಕಮನೇರಿ ನುಣ್ಗಲ್ಲಮಂ ಪಿಡಿದಲುಗಿಸಿ ಈಗಳ್ ನಡೆಗಲ್ತೆನೆನುತೆ ಕೇಳಿಪ ಕಂದನೆಂದಿಂಗೆ ಪುಟ್ಟು ವನೋ! ಆಡುತಾಡುತೆ ನೆವಮಿಲ್ಲದೆ ನಗುತೆ ಪರಿತಂದು ತಾಯ್ತಂದೆವಿರ್ ಮುಂತಿರೆ ಬೆನ್ನನೆಸಾರ್ದಯ್ಯನ ಕಣ್ಗಳಂ ಕಿರುಗೈಗಳಿಂ ಮುಚ್ಚುತಾನಾರೆಂದು ಕೇಳ್ವ, ಮಾತೆಯ ಮೇಲುದರ ಸೆರಂಗಿನೊಳ್ ತಲೆಯಂ ಬೈತು ಆಂ ಗುಮ್ಮಂ ನುಂಗುವೆನಲ್ಲ ದೊಡೆ ತನಿವಣ್ಣನೀಯಿಮೆನಗೆನುತಂ ಕಾಡುವ, ಪೆರತೊರ್ಮೆ ತಂದೆಯ ಪಿಂದೆಸೆ ಯೊಳಡಂಗಿ ತಾನೆಲ್ಲಿರ್ಪೆನೆನುತಬ್ಬೆಯಂ ಕೇಳ್ವ, ಮತ್ತಮದೊರ್ಮೆ ಕೈಪಿಡಿಯ ಲೀಲೆಯಿಂ ದಿಟ್ಟಿಸಿ ಮಾರ್ಪೊಳೆವ, ಮುದ್ದುಮೊಗಮುಂ ಪಡಿಗೂಸುಗೆತ್ತು ತನಗೆ ತಂದೀವುದೆಂದು ಚಲದಿಂ ಮರುಗುವ, ಮುಗುಳ್ದೊರ್ಮೆ ತಾಯ್ ಪೊಯ್ದಳೆಂದು ತಾತಂಗೆ ತೋರಿಪ, ತಾತಸಬ್ಬರಿಸೆ ತಾಯೊಳ್ ದೂರುವ, ನಿರ್ನೆರಂ ಜರುಚುವ, ಜರುಚಾಟಿ ಬಳಲ್ವ, ಬಳಲ್ದು ಮರುಗುವ, ಮರುಗಿ ಪರಿತಂದು ಅಬ್ಬೆಯ ಕಾಲಂ ಜಗಿವಿಡಿವ, ಜಗಿವಿಡಿದು ಬೆಣ್ಣೆಯನೀವುದೆಂದು ಮುಂಜೆರಗಂ ಸೆಳೆವ, ಇಂತು ತನು ಮನಮನಪ್ಪುಕೆಯ್ವ ದಿವ್ಯ ಸುಂದರವಿಗ್ರಹಂ ಕುಮಾರನೆನಗಪ್ಪನೆಂದಿಂಗೋ

ಸಖೀ!" ಈ ಶಬ್ದ ಚಿತ್ರಗಳಲ್ಲಿ ಕವಿಯ ಬಾಳಿನ ವೈಯಕ್ತಿಕ ಆಶೆ ಆಕಾಂಕ್ಷೆಗಳು ಆತನ ಪ್ರತಿಭೆಯ ಮೂಸೆಯಲ್ಲಿ ಕಾಯ್ದು ಪುಟವಡೆದು ಎರಕಹೊಯ್ದು ರೂಪು ಗೊಂಡಿವೆ. ಈ ಭಾಗವನ್ನು ಓದುತ್ತಿರುವಾಗ ಅಳಿದ ಕವಿ ಕಾವ್ಯದ ಮೂಲಕ ಜೀವಪಡೆದು ನಮ್ಮ ಮುಂದೆ ನಿಂತು ತನ್ನಂತರಂಗದ ಸಂವೇದನೆಯನ್ನು ತೋಡಿ ಕೊಳ್ಳುತ್ತಿರುವನೊ ಅನ್ನಿಸುತ್ತದೆ. ಎಂತಹ ಸುಕುಮಾರ ಚಿತ್ರ. ಕನ್ನಡ ಕಾವ್ಯ ರಾಶಿ ಯಲ್ಲೇ ಮಕ್ಕಳ ಬಾಲಲೀಲೆಯ ಕುರಿತಾದ ಚಿತ್ರಗಳಲ್ಲಿ ಇದಕ್ಕೆ ಸಮನಾದುದು ಇದು ಮಾತ್ರಲ್ಲವೆ? ಕವಿಯೇ ಶೈಲಿ ಎಂಬ ಸಿದ್ಧಾಂತಕ್ಕೆ ಎಂತಹ ಸೊಗಸಾದ ಪ್ರಮಾಣವಿಲ್ಲಿದೆ!

ಸೀತಾಪರಿತ್ಯಾಗದಿಂದ ದುಃಖ ಸಂತಪ್ತನಾದ ರಾಮನ ಪ್ರಳಾಪವನ್ನು ಕವಿ ಬಣ್ಣಿಸುತ್ತಾ ಬಣ್ಣಿಸುತ್ತಾ "ಇಂತಿದು ಕಣಾ! ಸೋದರರಂ ಸೊಮ್ಮುಗಿಡಿ ಸಿದುದು; ಅಗಸ್ತ್ಯನಂ ನೆಲೆದಪ್ಪಿಸಿದುದು." ಆ ದುಃಖ ಪ್ರಸಂಗದ ಭಾವತೀವ್ರತೆ ಯಿಂದ ಕವಿ ದಗ್ಧನಾಗಿದ್ದಾನೆ. ಈ ತನ್ಮಯತೆಯಲ್ಲೇ ಕವಿ ಮುಂದುವರಿಸಿದ್ದಾನೆ "ಸಾಜಮಲೇ ಪತಿಪತ್ನಿಗಳೊಳ್ ವಿಯೋಗದುಃಖಂ!" ಕವಿ ಕರಗಿ ಹೋಗ ತೊಡಗಿದ್ದಾನೆ! ವ್ಯಕ್ತಿ ತಲೆಯೆತ್ತ ತೊಡಗಿ ಕಲೆಯ ಮರ್ಯಾದೆಯನ್ನು ಮೀರ ತೊಡಗಿದ್ದಾನೆ. ಎಂತಹ ಪ್ರಸಂಗದಲ್ಲೇ ಆಗಲಿ ದಿಗ್ದರ್ಶಕ ರಂಗಮಂಟಪವನ್ನು ಪ್ರವೇಶಿಸಬಾರದೆಂಬುದರ ಅರಿವಿದ್ದರೂ ಕವಿಯ ಅಂತರಂಗದ ದುಃಖದ ಅದಮ ನೀಯ ಒತ್ತಡದಿಂದ ಪ್ರಜ್ಞೆ ತಪ್ಪಿದೆ. ತೆರೆಸರಿಸಿ ನೇರವಾಗಿ ರಂಗಮಂಟಪಕ್ಕೆ ನುಗ್ಗಿ ಭಾವಪರವಶತೆಯಿಂದ ತಾನೇ ನಟನೊ ಎಂಬಂತೆ ಒಡನುಡಿಯುತ್ತಿದ್ದಾನೆ "ರನ್ನೆ! ಆನೊರ್ವೆಯುಂ ನಿನ್ನನುಳಿದು ಬಾಳೆಂ. ಅಂತರಿನೆಮ್ಮೊಳಾವಗಂ ಪುದು ವಾಳ್ಕೆಯುಂ ದೀರ್ಘಾಯುವಂ ಶಿವಂ ನೆಲೆಗೆಯ್ಗೆ! ಸ್ವಸ್ತಿ!" ಒಂದು ದೃಷ್ಟಿಯಿಂದ ಇಲ್ಲಿ ಕವಿಯ ಅನಧಿಕಾರಿ ಪ್ರವೇಶವು ಕಲೆಗೊಂದು ಕಲೆಯಾಗಿದೆ. ಆದರೆ ವಾಸ್ತವಿಕವಾಗಿ ಈ ಕಲೆ ಚಂದ್ರನ ಕಲೆಯಂತಾಗಿ ಕಲೆಗೆ ಕಳೆಗಟ್ಟಿಲ್ಲವೆ? ಕವಿಯೇ ಶೈಲಿಯೆಂಬ ವಾದಕ್ಕೆ ಸಾರ್ಥಕತೆಯನ್ನೊದಗಿಸಿಲ್ಲವೆ?

ಬಣ್ಣನೆಯಲ್ಲಿ ಕವಿಯ ಪರಿಣತಿಯನ್ನು ನಾವು ಹಲವು ಕಡೆ ಬೇರೆ ಕೆಲವು ದೃಷ್ಟಿಗಳಿಂದ ಪರಿಶೀಲಿಸುವಾಗ ಕಂಡಿದ್ದೇವೆ. ಈಗ ನೇರವಾಗಿ ಅದೇ ದೃಷ್ಟಿಕೋನ ದಿಂದ ಒಂದೆರಡು ಬಣ್ಣನೆಗಳನ್ನು ಅವಲೋಕಿಸೋಣ. ಕವಿ ಸರಯೂ ನದಿಯ ವರ್ಣನೆಗೆ ಪ್ರಾರಂಭಿಸಿದ್ದಾನೆ. ಮೊದಲು ಕವಿಗೆ ನದಿಯ ಪ್ರಾಪಂಚಿಕ ಪ್ರಯೋಜನದ ನೆನಹಾಗುತ್ತದೆ. "ನೋಡ! ನಾಡ ಬಳಿವಿಡಿದು ಪುಣ್ಯಾವಾಹಿನಿ

ಯೆನೆ ಒಳ್ಕುವ ಸರಯೂ ನದಿಯಂ ತಾಂ ಕಿನ್ನಲೆಯೊಳಿರ್ದುಂ ಲೋಗರ್ಗೆ ಮೇಲಂ ಬಯಸುವಳಲಾ!" ಕವಿಪ್ರತಿಭೆ ಹೆಡೆಬಿಚ್ಚತೊಡಗಿದೆ. "ಗಂಭೀರೆಯಾ ಗಿರ್ದೊಡಂ ನಿರ್ಮಲೆಯಾಗಿರ್ಪಿನಮಂತರಂಗಂ ಪೆರರ್ಗೆ ಕಾಣಲಕ್ಕುಂ. ಈಗ ಕವಿಯ ಮನಸ್ಸು ಮೆಲ್ಲಮೆಲ್ಲನೆ ನೆಲಬಿಡತೊಡಗಿದೆ. ಅದು ಊಹೆಯ ಕುದುರೆ ಯನ್ನೇರಿ ಕಲ್ಪನೆಯ ಆಗಸಕ್ಕೇರತೊಡಗಿದೆ "ನಲ್ಮೆಂಡಿರಂತಿರೆ ಮಂದಗಾಮಿನಿ ಗಡ!" ಈ ಒಂದು ಎಳೆ ಸಿಕ್ಕಿದ್ದೇ ಸಾಕಾಯಿತು ಕವಿ ತನ್ನ ಸೃಷ್ಟಿಯಿಂದ ತಾನೇ ಮೋಹಿತನಾಗಿ ಭ್ರಾಂತನಾಗಿದ್ದಾನೆ "ತಪ್ಪೇಂ ನಿಕ್ಕುವಂ ಪೆಣ್ಣೆ ಇವಳ್." ಈಗಲೊ ಕವಿಯ ಊಹೆ ಕಲ್ಪನೆಯ ಆಗಸದ ತಾರೆ ನೀಹಾರಿಕೆ ಗಳೊಡನೆ ಆಟವಾಡತೊಡಗಿದೆ "ಸರಸಕಮಲಮೆ ಮೊಗಂ, ಮೀನೆ ಕಣ್, ಪಾಸೆ ಜಿಡುಮುಡಿ; ಪೊಳೆವಕ್ಕಿ ಬಲ್ಮೊಲೆ; ಸುಳಿ ಪೊಕ್ಕುಳ್; ಮಳಲೊಟ್ಟಿಲ್ ಪೊಱಿವಾಱ್; ಕಾಲ್ ಕಾಲ್." ಈಗಲೊ ಭ್ರಮೆ ಇತ್ತಣರಿವೇ ಇಲ್ಲದಂತೆ ಪರಮಾವಧಿಗೇರಿದೆ "ಏಂ ತಡೆತಡೆದು ಪೋಪಳ್? ಕಳಕಳ ನಾದಂಗೆಯ್ವಳ್? ಓ! ತಾಯ್ವನೆಯಿನಾಣ್ಮನೆಡೆಗೆ ಪೋಪಳಕ್ಕುಂ." ಈ ವರ್ಣನೆಯಲ್ಲಿ ಕವಿಯ ಮನಸ್ಸು ಹೇಗೆ ಹಂತಹಂತವಾಗಿ ಮೇಲೇರಿತೆಂಬುದನ್ನು ನಾವು ನಿಚ್ಚಳವಾಗಿ ಕಾಣಬಲ್ಲೆವು. ಕವಿಯಾಗಿ ಬಣ್ಣಿಸ ಹೊರಟು ಪ್ರಜ್ಞೆಯಳಿದು ಆ ವರ್ಣನೆ ಯಲ್ಲೇ ತನ್ಮಯನಾಗಿ ಕೊನೆಗೆ ತಾದಾತ್ಮ್ಯಹೊಂದುತ್ತಾನೆ.

ರಾಮಚರಿತವೆಂದರೆ ಕವಿಗೆ ಮತ್ತೆ ಬೇರಿಲ್ಲ; ಅದಕ್ಕೆ ಆತನ ಮನಸ್ಸು ಮಾರುಹೋಗಿದೆ. ಆತ ಬರೆದ ಮೂರೂ ಕಾವ್ಯಗಳು ರಾಮನಿಗೇ ಸಂಬಂಧ ಪಟ್ಟವು. ಅಂತಹ ರಾಮನನ್ನು "ಸೃಷ್ಟಿಸಿದಾತ" ಆದಿಕವಿ ವಾಲ್ಮೀಕಿ. ಎಂದೇ ವಾಲ್ಮೀಕಿಯನ್ನು ಕುರಿತು ಭಾವಿಸುವಾಗ ಕವಿಗೆ ಭಕ್ತಿ ಪ್ರೀತಿಗಳ ಮಹಾಪೂರ. ನೋಡಿ! ಕವಿ ವಾಲ್ಮೀಕಿಯನ್ನು ಬಣ್ಣಿಸಿರುವ ಪರಿ: "ವೇದಪುರುಷನೇ ಮುದುಪಿ ನೊಂದು ಪರಿಜಿಂ ಮೆಯ್ಗೊಂಡು ನಡೆತಂದನೊ" ಎಂದು ಕಂಡಿದೆ ಕವಿಗೆ ವಾಲ್ಮೀಕಿಯನ್ನು ಕಂಡಾಗ. ಈ ಮೊದಲ ಒಂದು ವಾಕ್ಯದಲ್ಲೇ ಗೌರವಾದರ ಗಳಿಂದ ತಲೆಬಾಗಬೇಕಾದ ಭವ್ಯ ವ್ಯಕ್ತಿತ್ವ ಒಂದನ್ನು ಸೃಷ್ಟಿಸಿದ್ದಾನೆ ಕವಿ. ಈ ಒಂದೇ ವಾಕ್ಯದಲ್ಲಿ ವಾಲ್ಮೀಕಿಯ ವರ್ಣನೆ ಕೊನೆಗೊಳ್ಳುತ್ತಿದ್ದರೂ ಎಷ್ಟೋ ಸಾಕಾಗುತ್ತಿತ್ತು. ಅಂತಹ ಶಕ್ತಿಶಾಲಿ, ಸತ್ವಶಾಲಿ ಉಪಮೆಯದು. ಕವಿಯ ವಿವರ ಮುಂದೆ ಸಾಗಿದೆ "ಮೂಡಿವರ್ಪ ನೇಸರ ಪಸುಳೆಬಿಸಿಲ ಬೆಳ್ಗಂಪಿನ ಪೊಸಪೊಗರಿಂ ಕಣ್ಗೊಳ್ವ ಪೂರ್ವಾದ್ರಿಕೂಟಮೆಂಬಂತಿರೆ, ಮುಂದಲೆಯೊಳರೆ

ಪಿನ ಬೆಳ್ವೆಳಗಿಡಿದ ಜಡೆಮುಡಿ ವಿರಾಜಿಸೆ, ಮಾಗೆಯ ಬೆಳ್ಮುಗಿಲಾಗಸದಂತಿರೆ ಸಿತೋದ್ಧೂಳಿತಲಸಿತಲಲಾಟಂ ಕಣ್ಗೊಳಿಸೆ, ಇನ್ನೀತನನಿದಿರ್ಚಿ ಕೈಮಾಡೆನೆಂದು ಕಣೆಯಿಟ್ಟು ಕಾವನಸರೆಮುರಿದ ಕರ್ವುವಿಲ್ಲೆಂಬಂತಿರೆ ಶಿಥಿಲವಾಗಿ ಜೋಲ್ವ ಪುರ್ವಿಸೆಯೆ, ಜ್ಞಾನದೃಷ್ಟಿಯ ನೆರವೊ ಪೊರನೋಟಮೇವುದೆಂದು ಮರಿದು ನೋಳ್ಪನೆನೆ ತುರುಗೆಮೆಯರೆದೆರೆದ ಕಣ್ಣೊಚ್ಚತವಾಗೆ, ತನ್ನಚ್ಚಿಯ ಮುರಿ ನೋಟದ ವಿಶ್ರಾಂತಿಯೆಡೆಯಿಡೆನೆ ನೀಳ್ದ ನಾಸಾಪುಟಂ ರಂಜಿಸೆ, ಭಾರತಿಯ ಪದ್ಮಪೀಠಂಬೋಲ್ ಮುಖಕಮಲಮೊಪ್ಪಿರೆ, ಗೊರವನ ಬೆಳ್ಗೊರಲೊಳಮರ್ದ ಹಾಲಾಹಲದ ಕರ್ವೆಳಗುದುರುಗಲ ಮಾಳ್ಕೆಯಿಂ ಶಂಖಧವಳಕಂಠದೊಳ್ ಪತ್ತುವಿಡಿದೇಕಮುಖೀರುದ್ರಾಕ್ಷವೊಂದು ತೆರಂಬೊಳೆಯೆ, ಜೋಗಗೆಳೆಯರೆಣ್ಬ ರೇರಿವರ್ಪನ್ನಮರಿವಗೆಗಳಿಳಿವೋದ ನಿಚ್ಚಣಿಗೆಯೆಂಬಂತಿರಿರ್ಬದಿಯೊಳಮೆಲ್ಗಳ್ ಸಾಲ್ಗಳ್ ತೋರೆ, ಸಡಿಲ್ದ ಮಾಯೆದಾವಿನ ಪಲವುಂ ಪುರಿಗಳಂತೆವೋಲ್ ಸೆರೆಗಳೆತ್ತಂ ಮಡಲ್ತಿರೆ, ನಡುವಿನೊಳುಟ್ಟ ವಲ್ಕಲಂ ತೊವಲುಡೆಯನ ಕೃತ್ತಿ ವಾಸಂಬೋಲ್ ಮನೋಜ್ಞಮಾಗಿರೆ ವಾಲ್ಮೀಕಿ ತಾನಾಬಟ್ಟೆಯೊಳ್ ಬರುತು ಮಿರ್ದಂ." ಕವಿಯ ಮೊದಲ ಮಾತಿನಿಂದಲೇ ತಲೆದೋರಿದ ಭವ್ಯತಾನುಭೂತಿ ಆ ನಂತರದ ಪ್ರತಿಯೊಂದು ಉಪಮೆಯಿಂದಲೂ ಇಮ್ಮಡಿಯಾಗಿ ಮೂರ್ಮಡಿ ಯಾಗಿ ನಾಲ್ಮಡಿಯಾಗಿ ಬೆಳೆಯುತ್ತಾ ಹೋಗುತ್ತದೆ. ವಿವರ ಕೊನೆಗೊಳ್ಳು ವಾಗ ನಮಗೆ ಸಾತ್ವಿಕ ಮಹೋನ್ನತಿಕೆಯ ಧವಳ ಮೇರು ವ್ಯಕ್ತಿತ್ವವೊಂದರ ಮುಂದೆ ನಿಂದಿರುವಂತೆ ಭಾಸವಾಗುತ್ತದೆ. ಆ ದರ್ಶನಾನುಭವದಿಂದ ನಮ್ಮ ಹೃದಯ ಭಕ್ತಿಪರವಶವಾಗಿರುತ್ತದೆ; ತಲೆ ಬಾಗಿರುತ್ತದೆ. ಸಮಗ್ರ ರಾಮಾಶ್ವ ಮೇಧದಲ್ಲಿ ಮೊದಲ ಭೇಟಿಗೆ ಇಂತಹ ಮಹತ್ತನ್ನು ನಾವು ಬೇರೆಲ್ಲಿಯೂ ಎದುರುಗೊಳ್ಳುವುದಿಲ್ಲ.

ರಾಮಾಶ್ವಮೇಧದ ಶೈಲಿಯ ಬಾಹ್ಯ ಲಕ್ಷಣಗಳಲ್ಲಿ – ಸ್ವರೂಪದಲ್ಲಿ ಎದ್ದು ತೋರುವ ಗುಣವೆಂದರೆ ಸರಳ ಶಬ್ದಗಳ ಚುಟುಕು ವಾಕ್ಯಗಳು. ಹೆಚ್ಚಿನ ವೇಳೆ ಒಂದೊಂದು ಶಬ್ದವೇ ಒಂದೊಂದು ವಾಕ್ಯವಾಗುತ್ತದೆ. ಪ್ರತಿಯೊಂದು ವಾಕ್ಯವೂ ಸ್ವಯಂಪೂರ್ಣವಾಗಿರುವುದು ಕೆಲವೆಡೆಯ ಸೊಗಸು. ಕುಣಿಯುತ್ತಿರುವ ಪದಗಳ ಪದನೂಪುರದ ಕಿಂಕಿಣಿ ಅಲ್ಲಿನ ಮಾಧುರ್ಯ. ಒಟ್ಟಿನಲ್ಲಿ ಸಹಜ ಸುಭಗತೆಯೊಡನೆ ಸರಳತೆ, ಚೇತನದೊಡನೆ ಸಂಯಮ ಇವು ಅಲ್ಲಿನ ಲಕ್ಷಣವೆಂದು ಹೇಳಬಹುದು.

ನಿಶ್ಚಿತ ಅರ್ಥವನ್ನು ಅಭಿವ್ಯಕ್ತಿಗೊಳಿಸುವ ಸಾಧನವಾಗಲು, ಭಾವದ ಭೀಮಭಾರದ ವಾಹಕವಾಗಲು ಅತ್ಯಂತ ಸಮರ್ಥವೆಂದು ಸಾರಿಹೇಳುವ ಸರಳ ಶಬ್ದಗಳ ಚುಟುಕು ವಾಕ್ಯಗಳಿಗೆ ದೃಷ್ಟಾಂತವೆಂದು ರಾಮಾಶ್ವಮೇಧದಿಂದ ವಾಕ್ಯವೃಂದಗಳನ್ನು ಆರಿಸಿಕೊಡುವುದು ವ್ಯರ್ಥಸಾಹಸವಾದೀತು. ಏಕೆಂದರೆ ಅಲ್ಲೊಂದು ಇಲ್ಲೊಂದು ಅಪವಾದಗಳನ್ನು ಬಿಟ್ಟರೆ ಸಮಗ್ರ ರಾಮಾಶ್ವಮೇಧವೇ ಅದಕ್ಕೊಂದು ಸುಂದರ ಉದಾಹರಣೆ. ಅದು ದುಃಖ, ವೇದನೆಗಳಿಗೆ ಬಾಗು ವಂತೆಯೇ ಉದ್ವೇಗ, ಉದ್ರೇಕಗಳಿಗೆ ಸಿಡಿದು ನಿಲ್ಲಲೂ ಬಲ್ಲುದು. ಉತ್ಸಾಹ, ಉಲ್ಲಾಸಗಳಿಗಂತೂ ಅದು ಹೇಳಿ ಮಾಡಿಸಿದಂತಿದೆ. ಯಾವ ರಸವೇ ಆಗಲಿ ತನಗೆ ಈ ಪಾತ್ರ ಒಲ್ಲದು, ಸಾಲದು ಅಂದುದನ್ನು ನಾವಲ್ಲಿ ಕೇಳಲಾರೆವು. ಆದರೂ ತೀಕ್ಷ್ಣ ದೃಷ್ಟಿಯ ಕಟುವಿಮರ್ಶೆ ರೌದ್ರ ಮತ್ತು ವೀರ ರಸಗಳನ್ನು ಹೊರುವಲ್ಲಿ ಈ ಶೈಲಿ ಕುಂಟಿದೆ ಎಂದೆನ್ನಬಹುದು. ಅದರಲ್ಲಿ ಸ್ವಲ್ಪ ಸತ್ಯವೂ ಇದೆ. ಆದರೆ ಆ ಸಂದರ್ಭದಲ್ಲೂ ಅದು ಕುಂಟಿದೆ ಹೊರತು ಮುಗ್ಗರಿಸಿ ನಡೆಗೆಟ್ಟಿಲ್ಲವೆಂದು ಧೈರ್ಯದಿಂದ ಹೇಳಬಹುದು. ಒಟ್ಟಿನಲ್ಲಿ ಇಲ್ಲಿನ ಓಘದಲ್ಲಿ ಜೀವಾನಂದಕಾರಿಯಾದ ಚೆಲುವಿದೆ.

ಈ ಶೈಲಿಯ ಇನ್ನೊಂದು ಸೊಗಸೆಂದರೆ ತಾಯ್ನೆಲದ ನುಡಿಗಟ್ಟುಗಳನ್ನು ಹಿತಮಿತವಾಗಿ ಬಳಸುವುದು. ಹಲವು ಮಾತುಗಳನ್ನು ವ್ಯಯಿಸಬೇಕಾದಲ್ಲಿ ಒಂದು ನುಡಿಗಟ್ಟನ್ನು ಉಪಯೋಗಿಸಿ ಹೇಳಬೇಕಾದುದನ್ನು ಓದುಗನ ಮನಸಿ ನಲ್ಲಿ ಆಳವಾಗಿ ಬೇರೂರಿಸುವುದು. ಸುಗ್ಗಿಯೊಳುಂಡುದಂ ಕಾರೊಳ್ ಕಾರುವ ಸಕ್ಕುಂ; ಕಿಚ್ಚನರಿತೊಡಮರಿಯದೊಡಂ ಕಿಟ್ಟಿ ಸುಡದೆ; ಊರೊಳ್ ಮಾರಿಯೆಂದು ಮನೆವೋರಿಯಂ ಮಾರುಕೊಡುವರೇ; ಪಾಲ್‌ಪುಳಿತುದೆಂದಾವಂ ಪೊಯ್ವರೆ; ಕುರುಂಬನ ಕುತ್ತಕ್ಕೆ ಕುರಿಯ ಪಿತ್ತಮೆ ಮರ್ದಾಯ್ತು; ಸುಖದುಃಖಂಗಳ್ ಪಗಲಿರುಳಂತೆ; ಇರುಳ್ ಕಂಡ ಬಾವಿಯೊಳ್ ಪಗಲ್ ಬೀಳ್ದಂತೆ; ಉಗುರಿಂ ಚಿವುಡಲ್ಕಾಗುವೊಂದು ಕಜ್ಜಕ್ಕೆ ಕೊಡಲಿಯೊಂದು ನೆರವಂಪಾರ್ವರೆ; ಪರ್ವದ ಕಡಲಂತೆ, ಎಣ್ಣೆ ಸೀಗೆ—ತಾಯ್ನೆಲದ ಅನುಭವದಿಂದ ಮಾಗಿದ ಇಂತಹ ಹಲವಾರು ಸಣ್ಣದೊಡ್ಡ ಸಾಮಾನ್ಯ ನುಡಿಗಟ್ಟುಗಳಿಂದ ಬಹುಭಾರವಾದ ಭಾವಗಳನ್ನು, ವಿಚಾರಗಳನ್ನು ಹೊರಿಸಿ ತನ್ನ ಕಾವ್ಯಕ್ಕೆ ಕಳೆಕಟ್ಟಿದ್ದಾನೆ ಮುದ್ದಣ.

ಶಬ್ದಚಿತ್ರಗಳನ್ನು ಚಿತ್ರಿಸವುದರಲ್ಲಂತೂ ಅತ್ಯಂತ ಕುಶಲವಾದ ಕುಂಚ

ಮುದ್ದಣನದು. "ಗಂಗೆಯ ತಡಿಯೊಳಿರ್ಕೆಲನೊಳಂ ಬಿಸಿಲ ಜಳಕ್ಕೆ ನೀರಡಿಸಿ ಹರಿಣಗಣಂ ಬಂದು ನಿಂದು ಮುಂಗಾಲಂ ನೀರೊಳೂರಿ ಪಿಂಗಾಲಂ ನೆಲದೆ ಪಿಂತಿಟ್ಟು ಮುಸುಡಂ ನೀಡಿ ಕಣ್ಮುಚ್ಚಿ ನೀರಂ ಕುಡಿದು ತಣಿದು ಮರಲ್ವುವು." ಇಲ್ಲಿ ನೀರು ಕುಡಿಯುತ್ತಿರುವ ಜಿಂಕೆಗಳ ಚಿತ್ರ ಸರಳ ಮಾತುಗಳಲ್ಲಿ ಚುಟುಕಾಗಿಯಾದರೂ ಎಷ್ಟು ಚೆಲುವಾಗಿ, ಚತುರವಾಗಿ ಚಿತ್ರಿತವಾಗಿದೆ. ಇಂತಹ ನೂರು ಚಿತ್ರಗಳನ್ನು ರಾಮಾಶ್ವಮೇಧದಿಂದ ಎತ್ತಿ ತೋರಿಸಬಹುದು. ಒಂದೊಂದೂ ಒಂದೊಂದು ಬಗೆಯಿಂದ ಬೆಡಗುವಡೆದು, ಕಂಗೊಳಿಸುತ್ತದೆ.

ರಾಮಾಶ್ವಮೇಧದ ಇನ್ನೊಂದು ವೈಶಿಷ್ಟ್ಯವೆಂದರೆ ಒಂದು ಘಟನೆಯನ್ನು ನಿರೂಪಿಸಬೇಕಾದರೆ, ಅದರ ಬೆಳವಣಿಗೆಯನ್ನು ಹಂತಹಂತವಾಗಿ ನಿರೂಪಿಸಿ ಚಲಚಿತ್ರದಂತೆ ನಮ್ಮ ಮುಂದೆ ಹಾಯಿಸಿ ಚಿತ್ತದ ಭಿತ್ತಿಯಲ್ಲಿ ಬಿಂಬಿಸುವುದು. ಈ ತಂತ್ರದಿಂದಾಗಿ ಕವಿಯ ಉದ್ದಿಷ್ಟ ಉದ್ದೇಶವು ಪರಿಣಾಮಕಾರಿಯಾಗಿ ನೆರವೇರುತ್ತದೆ. ಸೀತೆಯ ಮೇಲೆ ಬಂದಿರುವ ಅಪವಾದ ಅದರಿಂದಾಗಿ ಆಕೆಯನ್ನು ತೊರೆಯಬೇಕಾಗಿ ಬಂದಿರುವ ಸಂದರ್ಭ ಇವುಗಳಿಂದಾಗಿ ಮರ್ಯಾಹತನಾಗಿರುವ ರಾಮನ ದುಃಖ, ವೇದನೆ, ನಾಚಿಕೆಗಳ ಪರಾಕಾಷ್ಠೆಯನ್ನು ನಿರೂಪಿಸುವಲ್ಲಿ ಕವಿ ಒಂದು ಚಿಕ್ಕ ಘಟನೆಯನ್ನು ಹಂತಹಂತವಾಗಿ ಚಿತ್ರಿಸುವ ಮೂಲಕ ಎಷ್ಟು ಸುಲಭವಾಗಿ ಸಿದ್ಧಿಯನ್ನು ಸಾಧಿಸಿದ್ದಾನೆ. "ಆಗಳ್ ರಾವಣಾರಿ ಬಾಗುಳೊಂದು ಬಿಗುರ್ಪಿಂ ತಲೆತಿಣ್ಣಮಾಗೆ ಕೆಕ್ಕೆಯಂ ಕರತಲದೊಳೂರಿಯುಂ ಕರತಲಮುಸಿದು ಬಳ್ಕಿ ಅಂಕದೊಳಿಟ್ಟುಮಂಕಂ ಕದಕ್ಕದಿಸೆ ನೆಲನೊಳ್ ಧರಿಸಿಯುಂ ನೆಲಂ ನೆಲದಪ್ಪೆ ತಾನೆ ತಲೆಮುಟ್ಟುಂ ಕಂಬನಿಗರೆಯುತೆ..." ಇಲ್ಲಿ ಘಟನೆ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯುವ ಸೊಗಸು ಮಾತ್ರವಲ್ಲ ಆ ಮೂಲಕ ಪಾತ್ರದ ಅಂತರಂಗವನ್ನು ತೆರೆದು ತೋರಿಸುವ ಜಾಣ್ಮೆಯೂ ಚೇತೋಹಾರಿಯಾಗಿವೆ. ರಾಮಾಶ್ವಮೇಧದಲ್ಲಿ ಇಂತಹ ಹಲವಾರು ಘಟನಾವಳಿಗಳು ಚಲಚಿತ್ರದಂತೆ ಹಾಯ್ದು ನಮ್ಮ ಚಿತ್ತವನ್ನು ಸೂರೆಗೊಳ್ಳುತ್ತವೆ.

ಕೊನೆಯದಾಗಿ ಈ ಶೈಲಿಗೆ ಮಿರುಗು ಕೊಡುವ ಇನ್ನೊಂದು ಅಂಶವೆಂದರೆ ಸಂದರ್ಭೋಚಿತ, ಧ್ವನಿಪೂರ್ಣ ವರ್ಣನೆಗಳು. ಕನ್ನಡದ ಪ್ರಾಚೀನ ಕವಿಗಳಲ್ಲಿ ಅಷ್ಟಾದಶ ವರ್ಣನೆಗಳು ಕಾವ್ಯದ ಬೆನ್ನುಮೂಳೆಯೆಂಬ ನಂಬಿಕೆಯಿತ್ತು. ಈ ನಂಬಿಕೆಯಿಂದಲೇ ಹೆಚ್ಚಿನ ವರ್ಣನೆಗಳನ್ನು ಎಳೆತಂದು ಕಾವ್ಯಕ್ಕೆ ಬೆಸೆಯುತ್ತಿದ್ದರು. ಪರಿಣಾಮವಾಗಿ ಮೊದಲ ಸಾಲಿನಲ್ಲಿ ನಿಲ್ಲಬಲ್ಲ ಕಾವ್ಯಗಳಲ್ಲಿ

ಕೂಡಾ ಎಲ್ಲಾ ವರ್ಣನೆಗಳು ಮೂಲಕಥೆಗೆ ಹೊಂದಿಕೆಯಾಗುವಂತಾಗಲೀ ಪರಿಸ್ಥಿತಿಗೆ ಪರಿಪೋಷಕವಾಗುವಂತಾಗಲೀ ಬಂದಿವೆಯೆಂದು ಹೇಳುವಂತಿಲ್ಲ. ರೂಪಭೇದ, ಸ್ಥಳಭೇಧ, ಕಾಲಭೇದಗಳನ್ನು ನಿರೂಪಿಸಲು ವರ್ಣನೆಗಳ ಬಳಕೆ. ಆ ಸಾಮಾನ್ಯ ಆವಶ್ಯಕತೆಗಳೊಡನೆ ಕಥೆಯ ಸನ್ನಿವೇಶಗಳಿಗೊಂದು ಪ್ರಭಾವಳಿ ಯಾಗಿ ನಿಂತು ಗಾನಕ್ಕೆ ಜೀವಕಳೆ ಕೊಡುವ ಹಿಮ್ಮೇಳದಂತೆ ಕಥೆಯನ್ನು ಧ್ವನಿಪೂರ್ಣವಾಗಿಸಿ, ರಸಪೂರ್ಣವಾಗಿಸಿ, ಆಳವಾಗಿಸಿ, ವಿಸ್ತಾರವಾಗಿಸುವ ಸಂದರ್ಭೋಚಿತ ವರ್ಣನೆಗಳು ಕಾವ್ಯದ – ಶೈಲಿಯ ಜೀವಾಳ ಶಕ್ತಿಗಳಲ್ಲೊಂದು.

ಇಂತಹ ವರ್ಣನೆಗಳು ರಾಮಾಶ್ವಮೇಧದಲ್ಲಿ ಹಲವಾರು ಇವೆ. ಅವು ಗಳಲ್ಲಿ ಸುದೀರ್ಘವಾದವುಗಳೂ ಇವೆ; ಚುಟುಕಾದವುಗಳೂ ಇವೆ. ಇಲ್ಲಿ ದಿಗ್ದರ್ಶನಾರ್ಥವಾಗಿ ನಾವು ಒಂದೆರಡನ್ನಷ್ಟೆ ನೋಡೋಣ. ಪಂಚಮಾ ಶ್ವಾಸದಲ್ಲಿ ಕತ್ತಲೆ ಹಬ್ಬಿದ ಪರಿಯನ್ನು ಕವಿ ವರ್ಣಿಸಿದ್ದಾನೆ "ಅನಿತರೊಳ್ ನೀಲಿಯ ಕಡುವಣ್ಣದೊಳಳ್ದಿದ ಪಂದಿಯ ತೊವಲಂ ಮುಸುಂಕಿಟ್ಟು ವೈದೋ ರದೆ ಲೋಕಮಂ ನುಂಗಲ್ಕೆಂದು ಬಂದ ಮಂದೇಹರಾಕ್ಷಸನೆನೆ ಕಳ್ತಲೆಯೆತ್ತಂ ಪರ್ಬಿದುದು." ಹೀಗೆ ಕತ್ತಲು ಹಬ್ಬಿದ ಈ ಕಾಳರಾತ್ರಿಯಲ್ಲೇ ಬೇಹುಗಾರರು ಬಂದು ರಾಮನಿಗೆ ಅಗಸನು ಸೀತೆಯ ಕುರಿತು ಆಡಿದ ಮಾತುಗಳನ್ನು ಕೇಳಿಸು ತ್ತಾರೆ. ಅದನ್ನು ಕೇಳಿದೊಡನೆಯೆ ಆಳವಾದ ವೇದನೆಯ ಕಡುನೀಲಿಯ ಬಣ್ಣದೊಳದ್ದಿದ ಅಪಮಾನದ ಹಂದಿಯ ಚರ್ಮವನ್ನು ಹೊದೆದುಕೊಂಡು ಕೊಳಕು ಅಸಹ್ಯಮಯನಾದ ಸಂದೇಹ ರಾಕ್ಷಸನು ರಾಮನ ಹೃದಯ ಲೋಕಕ್ಕೆ ದಾಳಿಯಿಡುತ್ತಾನೆ! ಇಲ್ಲಿ ಕವಿ ಉದ್ದೇಶಪೂರ್ವಕವಾಗಿಯೆ ಬಳ ಸಿರುವ "ಮಂದೇಹ" ಶಬ್ದವನ್ನು ಧ್ಯಾನಿಸಿರಿ. ಅದು "ಸಂದೇಹ"ದ ಧ್ವನಿಕೊಡ ಲೆಂಬುದೇ ಕವಿಯ ಆಶಯವಾಗಿರಬಹುದಲ್ಲವೆ?

ಬೇಹುಗಾರರಿಂದ ಅಗಸನ ಮಾತನ್ನು ಕೇಳಿದ ರಾಮ ಸೀತೆಯನ್ನು ತೊರೆಯುವ ನಿರ್ಧಾರಕ್ಕೆ ಬಂದಿರುತ್ತಾನೆ. ಆ ಕುರಿತು ಇಡೀ ರಾತ್ರೆ ತಮ್ಮಂದಿ ರೊಡನೆ ವಾದ ಪ್ರತಿವಾದಗಳಾಗಿರುತ್ತವೆ. ತಮ್ಮಂದಿರೆಂತು ತಿಳಿಸಿ ಹೇಳಿದರೂ ಅಣ್ಣ ತನ್ನ ನಿರ್ಧಾರದಲ್ಲಿ ಅಚಲನಾಗಿದ್ದ. ಅಣ್ಣನೊಡನೆ ಚರ್ಚಿಸಿ, ಕಾಡಿ, ಬೇಡಿ ವಿಫಲನಾದ ಲಕ್ಷ್ಮಣ ಅಣ್ಣನಾಜ್ಞೆಯಂತೆ ಸೀತೆಯನ್ನು ಕಾಡಿಗೊಯ್ದು ಬಿಟ್ಟುಬರಲು ಸಮ್ಮತಿಸಿರುತ್ತಾನೆ. ಆ ಹೊತ್ತಿಗಾಗಲೇ ಮೂಡಣ ಕರೆ ಕೆಂಪೇರಿ ಬೆಳಗಾಗಹತ್ತಿದೆ. ಕವಿ ಆ ಬೆಳಗನ್ನು ವರ್ಣಿಸಿರುವ—ಸಮಗ್ರ ಘಟನೆ

ಗೊಂದು ಪ್ರಭಾವಳಿಯಾಗುವಂತೆ ಬಣ್ಣಿಸಿರುವ ಪರಿ ಹೃದಯಸ್ಪರ್ಶಿಯಾಗಿದೆ: "ಆ ವೇಳೆಯೊಳ್ ರಾಮರಾಜ್ಯದೊಳಿಂತನುಚಿತಮಾಗಿ ಅರಂಗೆಟ್ಟುದೆಂದು ಬೆದರಿ ತಾರೆಗಳ್ ದೆಸೆಗೆಟ್ಟುವು; ಚಂದ್ರಮಂ ಕಳೆಗೆಟ್ಟಂ; ಜಂಪತಿವಕ್ಕಿ ಕಂಗೆಟ್ಟುವು; ಕೋವಳೆ ಬಣ್ಣಂಗೆಟ್ಟಳ್; ಕಮಲಿನಿ ಬಾಯ್ಬಿಟ್ಟಳ್; ತುಂಬಿ ಮೊರೆಯಿಟ್ಟುದು. ಇಂತಿದೇನನ್ನೆಯದ ಗಲಬೆ? ಇದರಡಿಯರಿಯಲ್ವೇಳ್ಕುಮೆಂದು ಮೆಯ್ದೋರದೆ ತಡೆ ತಡೆದುಂ ಕುಳಿರ್ಗಾಳಿ ಸುಳಿಯಲ್ತೊಡಂಗೆ, ಪಕ್ಕಿಗಳ್ ಗಜಬಜಿಸೆ; ತಾನೆ ಭಾಸ್ಕರಂ ಬೇಗನುಪ್ಪವಡಿಸಿ ಮೂಡುವೆಟ್ಟಿನ ಕೋಡುಗಲ್ಲನೇರಿ ನಿಟ್ಟಿಸು ತಿರ್ದಂ." ವಾಸ್ತವಿಕತೆಯೊಡನೆ ಸೌಂದರ್ಯ, ಅರ್ಥಗಾಂಭೀರ್ಯದೊಡನೆ ಧ್ವನಿಮಾಧುರ್ಯಗಳು ಮೇಳವಿಸಿ ಇದೊಂದು ಅತ್ಯಂತ ಸೊಗಸಾದ ವರ್ಣನೆ ಯಾಗಿದೆ.

ಇಷ್ಟರ ವರೆಗೆ ನಾವು ರಾಮಾಶ್ವಮೇಧದ ಶೈಲಿಯ ಸ್ಥೂಲಾವಲೋಕನ ವನ್ನು ಮಾಡಿದೆವು. ಕೊನೆಯದಾಗಿ ರಾಮಾಶ್ವಮೇಧದಲ್ಲಿ ಶೈಲಿ ಮತ್ತು ವಸ್ತುಗಳ ಹೊಂದಿಕೆ ಹೇಗಿದೆ ಎಂಬ ಪ್ರಶ್ನೆ ಹುಟ್ಟುವುದು ಸಹಜ. ಕವಿಯೇ ಶೈಲಿಯೆಂಬ ವ್ಯಾಪಕಾರ್ಥದಲ್ಲಿ ಶೈಲಿಯನ್ನು ನಾವು ಸ್ವೀಕರಿಸಿಕೊಂಡಾಗ ಶೈಲಿ ಮತ್ತು ವಸ್ತುಗಳ ಮಧ್ಯೆ ಒಂದು ಗೆರೆ ಎಳೆದು 'ಇದು ಶೈಲಿ; ಇದು ವಸ್ತು' ಎಂದು ಬೊಟ್ಟಿಟ್ಟು ತೋರಿಸುವುದು ಅಸಾಧ್ಯವಾದ ಕೆಲಸವಾಗುತ್ತದೆ. ಏಕೆಂದರೆ ಎಷ್ಟೋ ವೇಳೆ ನಾವು ಶೈಲಿಯೆಂದುದೆ ವಸ್ತುವಿನ ಅಂಗವಾಗಿರ ಬಹುದು; ವಸ್ತುವೆಂದುದೆ ಶೈಲಿಯ ಭಾಗವಾಗಿರಬಹುದು. ಹೀಗೆ ಶೈಲಿ ಮತ್ತು ವಸ್ತುಗಳನ್ನು ಹಲವಾರು ಬಾರಿ ವಿಂಗಡಿಸುವುದು ಅಸಾಧ್ಯವಾದರೂ ನಮ್ಮ ವಿಮರ್ಶೆಯ ಸೌಲಭ್ಯಕ್ಕಾಗಿ ಅವನ್ನು ವಿಂಗಡಿಸಿ ನೋಡದಿರುವುದೂ ಅಸಾಧ್ಯ. ಈ ದೃಷ್ಟಿಯಿಂದ ಅವಲೋಕಿಸುವಾಗ ರಾಮಾಶ್ವಮೇಧದಲ್ಲಿ ಶೈಲಿ ಮತ್ತು ವಸ್ತುಗಳು ಸಮ ಮತ್ತು ಸಮರಸವಾಗಿರುವುದು ಕಂಡುಬರುತ್ತದೆ. ಒಂದು ಇನ್ನೊಂದಕ್ಕೆ ಪೂರಕವಾಗಿ, ಪೋಷಕವಾಗಿ ಒಂದು ಇನ್ನೊಂದರಿಂದ ಬೆಳಕು ಪಡೆದು ಪ್ರಕಾಶಿತವಾಗುತ್ತವೆ. ಒಟ್ಟಿನಲ್ಲಿ — ಕೆಲವೆಡೆಯ ಅಪವಾದಗಳನ್ನು ಬಿಟ್ಟರೆ ಇಲ್ಲಿ ಶೈಲಿ ಮತ್ತು ವಸ್ತುಗಳು ಸಮಭಾವದ ಸಮಭಂಗಿಯಿಂದ, ತಾಲ ಲಯಾನುಸಾರಿತ್ವದ ಸಮಗತಿಯಿಂದ ಲಾಸ್ಯವಾಡುತ್ತಿರುವ ದಂಪತಿಗಳಂತೆ ಕಂಡುಬರುತ್ತವೆ. ಅವುಗಳ ಸಮಜೋಡಿಯ ನಾಟ್ಯವಿಭ್ರಮಕ್ಕೆ ನಾವು ಮಾರುಹೋಗದಿರಲು ಅಸಾಧ್ಯವಾಗುತ್ತದೆ.

ಕವಿ ಮತ್ತು ಕಾವ್ಯ

ಮುಖ್ಯವಾಗಿ ಕಾವ್ಯದಲ್ಲಿ ದೊರಕುವುದು ಕವಿಯ ಸಹವಾಸ. ಅದರ ಆಳದಲ್ಲಿ ಅಡಗಿರುವುದು ಆತನ ಜೀವ.

ವಿ. ಸೀ.

ಸಾಧಾರಣ ಎಂಬತ್ತೇಳು ವರ್ಷಗಳ ಹಿಂದಿನ ಮಾತು. ಕನ್ನಡ ನಾಡಿನ ಒಂದು ಮೂಲೆಯ ಕತೆ. ತುಳುನಾಡಾದ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನಲ್ಲಿ ನಂದಳಿಕೆ ಎಂಬ ಚಿಕ್ಕದೊಂದು ಗ್ರಾಮವಿದೆ (ಈಗ ಈ ಗ್ರಾಮ, ಆ ಬಳಿಕ ಹೊಸತಾಗಿ ರಚಿತವಾದ ಕಾರ್ಕಳ ತಾಲೂಕಿಗೆ ಸೇರಿದೆ). ಪ್ರಕೃತಿಯು ಸೌಮ್ಯ ಸುಂದರವಾಗಿ ಮೆರೆದಿತ್ತು ಅಲ್ಲಿ. ಆ ಗ್ರಾಮದಲ್ಲಿ ಊರ ದೇವಸ್ಥಾನ ವೊಂದಿದೆ. ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿ ಒಂದು ಮನೆಯಿತ್ತು. ಅದರಲ್ಲಿ ಪಾಠಾಳಿ ತಿಮ್ಮಪ್ಪಯ್ಯರೆಂಬ ಗೃಹಸ್ಥರೊಬ್ಬರು ಜೀವಿಸಿಕೊಂಡಿದ್ದರು. ಮಹಾ ಲಕ್ಷ್ಮಮ್ಮ ಅವರ ಧರ್ಮ ಪತ್ನಿ. ಈ ಸತಿಪತಿಯರಿಗೆ ೧೮೭೦ನೆಯ ಇಸವಿ ಜನವರಿ ೨೪ನೇ ತಾರೀಕು, ಶುಕ್ಲ ಸಂ॥ರದ ಪುಷ್ಯ ಬಹುಳ ಅಷ್ಟಮಿ ಸೋಮ ವಾರ ಮೊದಲ ಗಂಡು ಮಗು ಜನನವಾಯಿತು. ಮಗುವಿಗೆ ಲಕ್ಷ್ಮೀನಾರಾಯಣ ಎಂದು ನಾಮಕರಣವಾಯಿತು. ಮಗು ಮುದ್ದುಮುದ್ದಾಗಿ ಕಣ್ಮನಗಳನ್ನು ಸೆಳೆಯುತ್ತಿತ್ತು. ತಂದೆತಾಯಿಗಳಿಗೆ ಚೊಚ್ಚಲ ಮಮತೆ ಬೇರೆ. ಹೀಗಾಗಿ ತಂದೆ ತಾಯಿಗಳು ಮಗುವನ್ನು ಅಕ್ಕರೆಯಿಂದ "ಮುದ್ದಣ್ಣ" ಎಂದೇ ಕರೆಯುತ್ತಿದ್ದರು. ಈ ಮಗುವೇ ಮುಂದೆ ನಾಡಿನ ಭಾಗ್ಯಾಕಾಶದಲ್ಲಿ ತನ್ನದೇ ಆದ ವಿಶಿಷ್ಟ ಕಳೆ ಯಿಂದ ಬೆಳಗಿ ಕನ್ನಡ ಸಾಹಿತ್ಯದ ಮುನ್ನಡೆಯ ಹೊಸ ಹಾದಿಯ ಮೇಲೆ ಬೆಳಕು ಚೆಲ್ಲಿದ "ಕಬ್ಬಿಗರ ಬಲ್ಲಹಂ ಮುದ್ದಣ"ನಾಗಿ ಮೆರೆದ. ತಂದೆ ತಾಯಿಗಳು ಮುದ್ದಿ ನಿಂದ ಕರೆದ "ಮುದ್ದಣ" ಎಂಬ ಹೆಸರನ್ನೇ ಕವಿ ಮಾತಾಪಿತರ ಕುರಿತಾದ ಭಕ್ತಿ, ಪ್ರೀತಿಗಳ ನೆನಹಾಗಿ ತನ್ನ ಕಾವ್ಯನಾಮವನ್ನಾಗಿ ಮಾಡಿಕೊಂಡು ನಾಡಿಗೂ ಮುದ್ದುಮುದ್ದಾದ "ಮುದ್ದಣ"ನೇ ಆದ.

"ಕನ್ನಡ ಸಾಹಿತ್ಯಯಾತ್ರೆಗೆ ಹೊರಟವರು ಜೈನ, ಬ್ರಾಹ್ಮಣ, ವೀರಶೈವ ಸಾಹಿತ್ಯಗಳನ್ನು ಸಂದರ್ಶನ ಮಾಡಿಕೊಂಡು ಮುಂದಕ್ಕೆ ಪ್ರಯಾಣ ಬೆಳೆಸಿದರೆ ಸುಮಾರು ಎರಡು ಶತಮಾನಗಳ ದೊಡ್ಡ ಮರಳುಕಾಡೊಂದನ್ನು ದಾಟಬೇಕಾ ಗುತ್ತದೆ. ಆ ಮರುಭೂಮಿಯ ಈಚೆಯ ಕೊನೆಯಲ್ಲಿ ಕಂಡು ಬರುವ ನಂದನ ವನದ ಹೆಬ್ಬಾಗಿಲೇ ಮುದ್ದಣಕವಿ. ಆಧುನಿಕ ಕನ್ನಡಯುಗ ಆರಂಭವಾಗುವುದು ಮುದ್ದಣನಿಂದ."[1] ಭರತೇಶ ವೈಭವವನ್ನು ಬರೆದ ರತ್ನಾಕರವರ್ಣಿಯ ಬಳಿಕ

---

1. ಟಿ. ಎಸ್. ಶ್ಯಾಮರಾವ್ ಎಂ. ಎ. ಅವರ "ಮುದ್ದಣ"ದಿಂದ. ಮೈ. ವಿ. ಪ್ರ. ಪುಸ್ತಕ ಮಾಲೆಯಲ್ಲಿ ಪ್ರಕಟಿತ.

ಕನ್ನಡ ನಾಡಿನಲ್ಲಿ ದೇವಚಂದ್ರ, ಚಿಕದೇವರಾಯ, ಮುಮ್ಮಡಿ ಕೃಷ್ಣರಾಜ, ಕೆಂಪುನಾರಾಯಣ, ಬಸವಪ್ಪ ಶಾಸ್ತ್ರಿ—ಹೀಗೆ ಹಲವು ಬರಹಗಾರರು ಹುಟ್ಟಿ ಕೃತಿರಚನೆ ಮಾಡಿದರು. ನಿಜ, ಆದರೂ ಎತ್ತಿ ಹೇಳುವಂತಹ—ಹೊಸ ಹಾದಿ ಹಾಕಿಕೊಡುವಂತಹ, ಜನರಲ್ಲಿ ನವಚೇತನವನ್ನು ಹುಟ್ಟಿಸುವಂತಹ—ಮನೋರಂಜಕವಾದ ಪ್ರೌಢ ಕೃತಿ ಮಾತ್ರ ಜನ್ಮತಾಳಲಿಲ್ಲ. ಈ ಕಾಲದಲ್ಲಿ ಕನ್ನಡ ಸಾಹಿತ್ಯಲೋಕದಲ್ಲಿ ಒಂದು ತೆರನ ಜಡತೆ, ನಿರ್ವೀರ್ಯತೆಗಳು ಮನೆ ಮಾಡಿದ್ದುವು. "ಹಳೆಯ ಕನ್ನಡ ಸಾಹಿತ್ಯವೆಂಬ ಮನೆ ಒಂದು ರೀತಿಯಲ್ಲಿ ಹೊತ್ತಿ ಹೋದಂತೆ ಆಗಿತ್ತು."[2] "ಸಂಜೆ ಸೇರಿತು ಬಂದು ಕನ್ನಡದ ನಾಡಿನೊಳು. ಮಂಜು ಮುಸುಗಿದ ಮುಗಿಲು ಕತ್ತಲೆಯ ಗೂಡಿಸಿತೊ? ನಂಜೇರಿ ಸಿದ್ದೆಗೈದಿತೊ? ಸತ್ತಿತೋ ಜೀವ? ಮಿಡುಕಿಲ್ಲದಾಯಿತಾಗ."[3] ಇದೆಂತಹ ದುಃಖದಾಯಕ ಸ್ಥಿತಿ "ಮುರುಟಿಹುದು ಪೂಬಳ್ಳಿ, ಸುರುಟಿಹುದು ಪಣ್ಮರಂ, ಬರಿದಿಹುದು ನೀರ್ಗೊಳಂ, ಜರಿದಿಹುದು ಬಳ್ಳಿವನೆ, ಹರಹರಾ! ಪಣ್ಣಿಲ್ಲ, ಕಾಯಿಲ್ಲ, ಪೂವಿಲ್ಲ, ನನೆಯಿಲ್ಲ, ತಳಿರಿಲ್ಲಲಾ!"[4] ಕನ್ನಡನಂದನದ ಗತಿ ಹೀಗಿತ್ತು. ಬೆಳಕು ಕಾಣದೆ ಜನರು ಕಾತರಿಸುತ್ತಿದ್ದರು. ಆತುರದಿಂದ ಕತ್ತುನೀಡಿ ಕಾಯುತ್ತಿದ್ದರು ನವ ಅರುಣೋದಯವನ್ನು. ಕೊನೆಗೊಮ್ಮೆ ನಿರಾಶೆಯ ಬಸಿರಿಂದ ಆಶೆಯ ಸಂದೇಶವೊಂದು ಕೇಳಿಬಂತು: ನಾಡನಾವರಿಸಿದ್ದ ಕಾವಳ ಕಳೆಯಿತು; ಬೆಳಗಾಯಿತು. ಏಳಿ! ಕನ್ನಡಿಗರೇ ಎದ್ದೇಳಿ! ಹೊಸ ಬೆಳಕಿನ ಹೊಸ ಉದ್ಯಮಕ್ಕೆ ಸನ್ನದ್ಧರಾಗಿ ಏಳಿ! ಸಚೇತನರೂ ಸಶಕ್ತರೂ ಆಗಿ ಎದ್ದೇಳಿ! ಎಂದು ಕನ್ನಡ ನಾಡಿನ ಮೂಲೆಯಿಂದ, ತುಳುನಾಡ ಹೃದಯದಿಂದ ಮಂಜುಳ ಧ್ವನಿಯೊಂದು ಹಾಡಿ ಹೇಳಿತು! "ಮುಂಜಾವಿನಮಳ ತಂಬೆಲರೊಡನೆ ಮುದ್ದಣನ ಹುಂಜವೆಕ್ಕಕ್ಕಿ ಕೂಗಿದ ಮೇಲೆ ಆ ದನಿಯ ಸಂಜೀವವೆಬ್ಬಿಸಿತು ಸಾಸಿಗರ ಹಿಂಜರಿಯದಂಥ ಚೈತನ್ಯವನ್ನು."[3] ಹೀಗೆ ಕವಿ ಮುದ್ದಣ ಕಾವ್ಯ ರಾಮಾಶ್ವಮೇಧದ ಮೂಲಕ ಕನ್ನಡ ಸಾಹಿತ್ಯದ ನವೋದಯದ ನಾಂದಿಹಾಡಿದನು!

---

2. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಜಯಕರ್ನಾಟಕದಲ್ಲಿ ಬರೆದ "ಮುದ್ದಣನ ಜಾಣ್ಮೆ" ಎಂಬ ಲೇಖನದಿಂದ.

3. ಅಂಜಿಕಾತನಯದತ್ತರ "ಗರಿ" ಕವನ ಸಂಗ್ರಹದ "ಮುದ್ದಣ" ಕವನದಿಂದ

4. ರಾ. ಸು. ಸಾಲಿ. ಬಿ. ಎ. ಇವರು ಬೆಂಗಳೂರು ಸೆ. ಕಾ. ಕ. ಸಂಘದಿಂದ ಪ್ರಕಟಿತ "ಮುದ್ದಣ" ಗ್ರಂಥದಲ್ಲಿ ಬರೆದ "ಮುದ್ದಣ" ಕವನದಿಂದ.

ಮುದ್ದಣ ಪ್ರಾಚೀನರಲ್ಲಿ ಅರ್ವಾಚೀನ; ಅರ್ವಾಚೀನರಲ್ಲಿ ಪ್ರಾಚೀನ! ಮಧ್ಯಮಣಿ! "ಸಂಪ್ರದಾಯ ನೂತನ ಮಾರ್ಗಗಳೆರಡನ್ನೂ ಸಂಗಮಗೊಳಿಸಿ ಇಬ್ಬಣದವರ ದೃಷ್ಟಿಯನ್ನೂ ಏಕಕಾಲದಲ್ಲಿ ಆಕರ್ಷಿಸಿದ ಪೌರುಷ ಆತನದು"[1] ಹಳೆಯದರ ಗುಣ್ಪು, ಗಾಂಭೀರ್ಯ; ಹೊಸದರ ಲಾಲಿತ್ಯ, ಬೆಡಗುಗಳನ್ನು ಔಚಿತ್ಯವರಿತು ಬೆರಸಿ, ಸಂಸ್ಕೃತ ಪದಗಳನ್ನು ಹದವರಿತು ಸೇರಿಸಿ ರುಚಿಯಾದ, ಶುಚಿಯಾದ ರಸಪಾಕವೊಂದನ್ನು ಸಿದ್ಧಮಾಡಿ ಕನ್ನಡ ಸಾರಸ್ವತಲೋಕಕ್ಕೆ ಒದಗಿಸಿಕೊಟ್ಟ ರಸಋಷಿ ಮುದ್ದಣ! ಆತನ ನಿಸ್ಪೃತುಂಬಿದ ಅಚಲ ಸಾಹಿತ್ಯ ತಪಸ್ಸಿನ ಪುಣ್ಯಫಲರೂಪವಾಗಿ ಉದಿಸಿಬಂದ ಈ ಅಮೃತ ರಸಪಾಕವನ್ನು "ರಾಮಾಶ್ವಮೇಧ"ದ ಬಟ್ಟಲಲ್ಲಿಟ್ಟು ನಾಡಿಗೆ ಕಾಣಿಕೆ ಕೊಟ್ಟ ಧನ್ಯ ಕವಿ ಮುದ್ದಣ!

"ಲಕ್ಷ್ಮೀನಾರಾಯಣನ ಕೃತಿಯ ನವೀನತೆಯು ಕಾವ್ಯದ ವಸ್ತುವಿಗೆ ಸಂಬಂಧಪಟ್ಟುದಲ್ಲ, ರೀತಿಗೆ ಸಂಬಂಧಪಟ್ಟುದು."[5] ಹಳೆಯ ಕಥೆಯೊಂದನ್ನೇ ಸಶಕ್ತವಾದ, ಸುಂದರವಾದ ಗದ್ಯದಲ್ಲಿ ಹೊಸರೀತಿಯಿಂದ ನಿರೂಪಿಸಿದ ಜಾಣ್ಮೆ ಆತನದು. "ಶೈಲಿಯೆಲ್ಲ ಹಳತಾದರೂ ಮುದ್ದಣನು ಹೊಸ ಮಂತ್ರವನ್ನು ಅರಿತ ಮಾಂತ್ರಿಕನಾಗಿದ್ದ."[6] "ಆತನ ಕಾವ್ಯಗಳಲ್ಲಿ ವೃತ್ತಗಂಧಿ ಶೈಲಿಗೆ ಹಲವು ಉದಾಹರಣೆಗಳು ದೊರೆಯುತ್ತವೆ."[1] "ಹಿಂದಿನ ಪದ್ಯರಚನಾಭ್ಯಾಸದಿಂದ ಸಂಪಾದಿತವಾದ ಶಬ್ದಸಂಪತ್ತನ್ನೂ ವಾಗ್ಧೋರಣೆಯನ್ನೂ ಆತನು ಗದ್ಯನಿರ್ಮಿತಿಯಲ್ಲಿ ಉಪಯೋಗಪಡಿಸಿರುವುದರಿಂದ ಆತನ ವಾಕ್ಯಸರಣಿಯಲ್ಲಿ ಅಥವಾ ಶೈಲಿಯಲ್ಲಿ ಒಂದು ಹೊಸ ಸೊಬಗೂ ಶ್ರಾವ್ಯತೆಯೂ ಉಂಟಾಗಿವೆ"[5] "ಹಿಂದಿನ ಗದ್ಯವಾವುದರಲ್ಲಿಯೂ ಇಲ್ಲದ ಆಶಾಜನಕವಾದ ಮೋಹಕವಾದ ಸರಣಿ ಅಥವಾ ವಿನ್ಯಾಸವು ರಾಮಾಶ್ವಮೇಧದ ಒಂದು ಹೊಳಪು. ವಿಸ್ತಾರವಾಗಿ, ಸಂಕೋಚವಾಗಿ, ಏರಿ, ಇಳಿದು, ಬಾಲಕೇಳಿಯಾಡಿ, ವೃದ್ಧಗಾಂಭೀರ್ಯವನ್ನು ತೋರಿ, ನಾನಾ ಮಾರ್ಗಗಳನ್ನು ಹೊಕ್ಕು ಗದ್ಯಗತಿಯು ವೈವಿಧ್ಯದಿಂದ ಹೃದಯಂಗಮವಾಗಿದೆ.

---

1. ಟಿ. ಎಸ್. ಶ್ಯಾಮರಾವ್ ಎಂ. ಎ. ಅವರು ಬರೆದ "ಮುದ್ದಣ್ಣ" ಗ್ರಂಥದಿಂದ (ಮೈ. ವಿ. ಪ್ರ. ಪು. ಮಾಲೆ).

6. ರಂ. ಶ್ರೀ. ಮುಗಳಿಯವರ "ಕನ್ನಡ ಸಾಹಿತ್ಯ ಚರಿತ್ರೆ"ಯಿಂದ.

5. ಡಿ. ವಿ. ಜಿ. ಯವರು "ಮುದ್ದಣ" ಗ್ರಂಥಕ್ಕೆ ಬರೆದ ಮುನ್ನುಡಿಯಿಂದ (ಬೆ. ಸೆ. ಕಾ. ಕ. ಸಂ. ಪ್ರಕಟಿತ.)

ಕೆಲವುವೇಳೆ ಪರ್ವತದಲ್ಲಿ ಉದ್ಭವಿಸಿ, ಬಂಡೆಯಿಂದ ಬಂಡೆಗೆ ಲಂಘಿಸಿ ಭೋರ್ಗರ್ಜಿಟ್ಟುವ ಝುರಿಯಂತೆ ಧುಮ್ಮುಕ್ಕಿ ಧುಮ್ಮುಕಿ ಹೋಗುವ ಆಟೋಪ......ಆಗಾಗ ಸಮಭೂಮಿಯನ್ನು ಸುಭಿಕ್ಷಗೈಯುವ ಉಪನದಿಯಂತೆ ಶಾಂತ ಮಧುರ ಕಲರವದಿಂದ ಮೆಲ್ಲಗೆ ಹರಿಯುವ ಚೆಲುವು.........ಅಲ್ಲಲ್ಲಿ ಅಗಲ ಆಳಗಳನ್ನು ಅಧಿಕ ಮಾಡಿಕೊಂಡು ಶುಭ್ರನೀಲದಿಂದಾವೃತವಾಗಿ ಅಗಾಧವಾಗುವ ಸರೋವರ ಸೌಂದರ್ಯ......ಒಂದೇ ಸ್ಥಳದಲ್ಲಿ ಗಮನಭೇದಗಳ ಪುಟ್ಟಮೆರವಣಿಗೆ...... ಒಂದೊಂದು ಸಂದರ್ಭದಲ್ಲಿ ನಡೆದು, ನಡೆವುದು ಸಾಕಾಗಿ ಓಡಿ, ಓಡುವುದು. ಸಾಕಾಗಿ ಹಾರಿ ಅಡಿಗಡಿಗೂ ಹುರುಪು ಹೆಚ್ಚಿಸುವ ಸಚೇತನ ಶಬ್ದಗುಂಫನ."[7] ಹೀಗಿದೆ ರಾಮಾಶ್ವಮೇಧದ ಗದ್ಯಧಾಟಿಯ ಸೊಬಗು! ಚಿತ್ತಾಪಹಾರಕವಾದ ಬೆಡಗು!

ಹಿಂದೆ "ತಾನೇ ಸ್ವತಃ ಪದ್ಯಕಾವ್ಯವನ್ನು ಬರೆದವನಾದರೂ 'ಪದ್ಯಂ ವಧ್ಯಂ' ಎಂದು ಅದನ್ನು ಘಂಟಾಘೋಷವಾಗಿ ತೆಗಳಿ, 'ಗದ್ಯಂ ಹೃದ್ಯಂ' ಎಂದು ಗದ್ಯದ ಧಾಟಿಯನ್ನು ತನ್ನ ಕಾವ್ಯಗಳಿಗೆ ಸ್ವೀಕರಿಸಿದುದು ಆತನ ಮನೋನಿಗ್ರಹ ಶಕ್ತಿಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ."[1] ಮಾತ್ರವಲ್ಲ ಇದು ಆತನ ನಿರ್ಭಯ ಮತ್ತು ನಿರ್ದಾಕ್ಷಿಣ್ಯವಾದ ಅಭಿಪ್ರಾಯಪ್ರಕಾಶನದ ಎದೆಗಾರಿಕೆಗೆ ಸಾಕ್ಷಿಯೂ ಆಗಿದೆ. 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬುದು ಬಹಳ ಹಿಂದಿನ ಮಾತು. ಮಾತು ಹಿಂದಿನದಾದರೂ ಆ ನಿಕಷದಲ್ಲಿ ತನ್ನ ಪ್ರತಿಭಾ ಬಂಗಾರವನ್ನು ಒರೆದು ಹದಿನಾರು ಅಲ್ಲದಿದ್ದರೂ ಹನ್ನೆರಡಕ್ಕೂ ಮಿಕ್ಕಿಯೇ ಬಣ್ಣದೋರಿದ ಪ್ರಪ್ರಥಮ ಕವಿ ಮುದ್ದಣನೇ! ಆ ಎದೆಗಾರಿಕೆಯನ್ನು ತೋರಿ ಸಫಲರಾದವರಲ್ಲಿ ಆತನೇ ಮೊತ್ತಮೊದಲಿಗ! ಎಂದೇ ಅದು "ಆತನ ಯಶಸ್ಸು ಹಬ್ಬಿನಿಲ್ಲುವುದಕ್ಕೆ ಊರೆಗೋಲಾಗಿದೆ."[7] ಹೀಗೆ "ಪದ್ಯವು ವಧ್ಯವಿರಲಿ ಬಿಡಲಿ ಗದ್ಯ ಮಾತ್ರ ನಿಸ್ಸಂದೇಹವಾಗಿ 'ಹೃದ್ಯ'ವಾಯಿತು. ಲಲಿತ ಸಾಹಿತ್ಯದ ವಾಹಕದ ಮರ್ಯಾದೆಯನ್ನು ಪಡೆಯಿತು"[8] ಮುದ್ದಣನಿಂದ.

"ಮುದ್ದಣನ ನೂತನ ಮಾರ್ಗಾನುಸಂಧಾನಕ್ಕೆ ಮತ್ತೊಂದು ಉದಾಹರಣೆ ಆತನು ಪದಗಳನ್ನು ಬಳಸಿಕೊಳ್ಳುವುದರಲ್ಲಿ ಮಾಡಿಕೊಂಡಿರುವ ನಿರ್ಧಾರ

---

7. ಎಸ್. ವಿ. ರಂಗಣ್ಣ ಅವರು ಪ್ರಬುದ್ಧ ಕರ್ನಾಟಕದಲ್ಲಿ ಬರೆದ "ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಲೇಖನದಿಂದ.

8. ಪ್ರೊ. ರಾ. ಯ. ಧಾರವಾಡಕರ ಎಂ. ಎ. ಅವರ "ಸಾಹಿತ್ಯ-ಸಮೀಕ್ಷೆ" ಪುಸ್ತಕದಿಂದ

ದಲ್ಲಿ ಕಂಡುಬರುತ್ತದೆ. ಸಂಸ್ಕೃತದ ಪ್ರಭಾವ ಕನ್ನಡದ ಮೇಲೆ ಬಿದ್ದಂದಿನಿಂದ ಅದರ ಮಾತುಗಳ ಬಳಕೆ ಬಲವಾಯಿತು. ಅಗತ್ಯವಿರಲಿ ಬಿಡಲಿ ಸಂಸ್ಕೃತ ಮಾತುಗಳನ್ನು ಬಳಸುವುದು ಒಂದು 'ಫ್ಯಾಶನ್' ಆಗಿಹೋಯ್ತು. ಇದನ್ನು ಕಂಡು ಕನ್ನಡ ಪ್ರೇಮಿಗಳು ಬಲವಾಗಿ ಪ್ರತಿಭಟಿಸುತ್ತಾ ಬಂದರು. ಸಂಸ್ಕೃತದ ಮಾತುಗಳನ್ನು ಬಳಸುವುದೇ ಇಲ್ಲವೆಂದು ಪ್ರತಿಜ್ಞೆ ಮಾಡಿ ಕಾವ್ಯವನ್ನು ಬರೆಯ ಹೊರಟ, ಒಬ್ಬ ಕವಿ. ಆದರೇನು? ಮತ್ತೊಬ್ಬ 'ಶ್ರೀರಾಮಾನಟಿಕೌಸ್ತುಭದ್ಯುತಿ ಕಿರತ್ಪುಷ್ಪಾಂಜಲಿಕ್ಷೇಪ ವಕ್ಷೋರಂಗಸ್ಥಿತೆ'ಯನ್ನು ಹೊರತಂದ. ಲಕ್ಷ್ಮೀನಾರಾಯಣ ಕವಿಯು ಸೂಚಿಸಿದ ಮಾರ್ಗವು ಸರ್ವಜನಾದರಣೀಯವೆಂದು ತೋರುತ್ತದೆ. 'ಕರ್ಮಣಿ ಸರದೊಳ್ ಚೆಂಬವಳಮುಂಕೋದಂ'ತಿರಬೇಕು ಕನ್ನಡ ಗ್ರಂಥಗಳಲ್ಲಿ ಸಂಸ್ಕೃತ. ಎಲ್ಲಿಯೋ ಅಲ್ಲೊಂದು ಇಲ್ಲೊಂದು ಹವಳ ಅಲಂಕಾರಕ್ಕೆ: ಸರವೇನೊ ಕರ್ಮಣಿಯದೇ."[1] ಸಂಸ್ಕೃತ ಪ್ರಯೋಗಗಳು ಇಲ್ಲವೆಂದಲ್ಲ "ಅಲ್ಲಲ್ಲಿ ಇವೆ ನಾಲ್ಕಾರು ಕಮಲ ಅರಳಿದಂತೆ. ಆದರೆ ಸುತ್ತಲೂ ಶುದ್ಧ ಕನ್ನಡದ ಮಲ್ಲಿಗೆಗಳು. ಸಂಸ್ಕೃತ ಪ್ರಯೋಗಗಳು ಕೂಡಾ ಕನ್ನಡದ ದೀಕ್ಷೆಪಡೆದು ಇವನಲ್ಲಿ ನಿಂತಿವೆ."[8] ಹೀಗೆ 'ಕನ್ನಡಂ ಕತ್ತುರಿ' ಎಂಬ ಅಭಿಮಾನದ ಜೊತೆಗೆ ಅದು ಬೆಳೆಯ ಬೇಕಾದರೆ ಒಂದು ಮಿತಿಯಲ್ಲಿ ಹೊರಗಿನ ನೆರವನ್ನು ಪಡೆದುಕೊಳ್ಳ ಬೇಕೆಂದೂ ಆ ನೆರವು ಅತಿಯಾಗಿ ಅತಿಥಿ ಮನೆಯವನನ್ನೇ ಹೊರದೂಡುವ ಪರಿಸ್ಥಿತಿಯಾಗಬಾರದೆಂದೂ ಮುಂದಿನವರಿಗೊಂದು ಮಧ್ಯಮಾರ್ಗವನ್ನು ಹಾಕಿ ಕೊಟ್ಟ ಶ್ರೇಯಸ್ಸು ಕವಿವರ ಮುದ್ದಣನದು.

ಮೂಲಕಥೆಯನ್ನು ತನ್ನ ಕಾವ್ಯಕ್ಕೆ ಅಳವಡಿಸಿಕೊಳ್ಳುವಾಗಲೂ ಅತ್ಯಂತ ಕುಶಲತೆಯನ್ನು ತೋರಿದ್ದಾನೆ ಮುದ್ದಣ. ಕೆಲವೆಡೆಯ "ಕಥಾಚಮತ್ಕಾರವೂ ಮಾತಿನ ಮೆರುಗೂ ಮುದ್ದಣನ ಸ್ವಂತ ಸೃಷ್ಟಿ......ಆತನು ಪುರಾಣದ ಕಥೆಗಳಲ್ಲಿ ಕೆಲವನ್ನು ಹ್ರಸ್ವಮಾಡಿದ್ದಾನೆ; ಹಲವನ್ನು ಲೋಪಮಾಡಿದ್ದಾನೆ; ಒಂದೆರಡು ಕಡೆ ಇರುವ ಕಥೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವನ್ನು ಮಾಡಿದ್ದಾನೆ. ಕಥೆಯ ಓರೆ ಕೋರೆಗಳನ್ನು ತಿದ್ದಿ, ಹೊಸ ಬಣ್ಣವನ್ನು ಬಳಿದು ರಂಗುರಂಗಾಗಿ ಮಾಡಿದ್ದಾನೆ."[1] ಇನ್ನು ಕೆಲವೆಡೆ "ಕಳೆಗಳನ್ನೆಲ್ಲಾ ಕಿತ್ತುಹಾಕಿ, ತನಗೆ ಬೇಕಾದ ಬೆಳೆಯನ್ನು

---

1. ಟಿ. ಎಸ್. ಶ್ಯಾಮರಾವ್ ಎಂ. ಎ. ಅವರ "ಮುದ್ದಣ" ಪುಸ್ತಕದಿಂದ (ಮೈ. ವಿ. ಪ್ರ. ಪು. ಮಾಲೆ.)

8. ಪ್ರೊ. ರಾ. ಯ. ಧಾರವಾಡಕರರ "ಸಾಹಿತ್ಯ—ಸಮೀಕ್ಷೆ" ಪುಸ್ತಕದಿಂದ.

ಮಾತ್ರ ಸುಂದರವಾಗಿ ಹಬ್ಬಿಸಿದ."[1] ಬೇರೆ ಕೆಲವೆಡೆಯ "ಭಾಗವನ್ನು ಹೊಸ ದಾಗಿ ಸೃಷ್ಟಿಸಿದ್ದಾನೆ. ಆತನ ಪ್ರತಿಭೆಯ ಫಲವಾಗಿ ಕಾವ್ಯ ರಸಮಯವಾಗಿದೆ."[1] ಹೀಗೆ "ಈ ಕವಿಯ ರಾಮಪಟ್ಟಾಭಿಷೇಕವನ್ನೂ ರಾಮಾಶ್ವಮೇಧವನ್ನೂ ಕಾವ್ಯ ದೃಷ್ಟಿಯಿಂದ ನೋಡಿದಲ್ಲಿ ಇವು ಸಂಸ್ಕೃತ ರಾಮಾಶ್ವಮೇಧವನ್ನು ಮೀರಿರುವುವೆಂದು ಹೇಳಬಹುದು."[9]

"ಹಿಂದೆಂದೂ ಪುರಾಣ ಕಥೆಗಳಲ್ಲಿ ಕಾಣಬರದ ನವೀನತೆ ಈತನ ಕಥಾ ನಿರೂಪಣೆಯಲ್ಲಿ ಕಂಡು ಬರುತ್ತದೆ. ಕಥೆಯನ್ನು ಪ್ರಾರಂಭಿಸುವುದೇ ಒಂದು ಕಾದಂಬರಿಯ ಬೆಡಗುಗೊಳಿಸುವ ಸುಂದರ ಶೈಲಿಯಿಂದ. 'ಓವೊ! ಕಾಲಪುರುಷಂಗೆ ಗುಣಮಣಮಿಲ್ಲಂ ಗಡ! ಜಡಂ ಗಡ! ಒಡಲೊಳ್ ಗುಡುಗುಟ್ಟುಗುಂ ಗಡ!' ಇತ್ಯಾದಿ ವಾಕ್ಯಗಳು ನಮ್ಮನ್ನು ಸಂಮೋಹನಾಸ್ತ್ರದಂತೆ ಕಾವ್ಯ ಪ್ರಪಂಚಕ್ಕೆ ಸೆಳೆದೊಯ್ಯುತ್ತವೆ. ಕಾವ್ಯವೆಂದರೆ ಸಾಗರದ ವರ್ಣನೆ, ಮೇರುಪರ್ವತದ ವರ್ಣನೆ, ಜಂಬೂದ್ವೀಪದ ವರ್ಣನೆ, ಇತ್ಯಾದಿ ವರ್ಣನೆಗಳ ಪಟ್ಟಿಯನ್ನು ಕೇಳಿ ಕೇಳಿ ತಲೆ ಚಿಟ್ಟುಹಿಡಿದ ಜನ, ಇದೇನೋ ನವೀನತೆಯೆಂದು ಇತ್ತ ಹೊರಳುವುದು ಸಹಜ. ಹೀಗೆ ಜನರನ್ನು ಬುಟ್ಟಿಗೆ ಹಾಕಿಕೊಂಡು ಅವರಿಗೆ ವರ್ಷಾ ಕಾಲದ ವರ್ಣನೆಯನ್ನು ರಮ್ಯವಾಗಿ ಮಾಡಿ ತೋರಿಸುತ್ತಾನೆ"[1] ಮುದ್ದಣ. ಈ ಭವ್ಯ ಆಕರ್ಷಕವಾದ ಬೆಡಗು ಮೂಲಕಥೆಯ ಅರಮನೆಯ ಹೊರ ಆವರಣದ ಹೆಬ್ಬಾಗಿಲಿನದು ಮಾತ್ರ. ಈ ಹೆಬ್ಬಾಗಿಲನ್ನು ಬೆರಗು ಬೆರೆತ ಆನಂದೋನ್ಮತ್ತತೆಯೊಡನೆ ದಾಟಿದ ನಮ್ಮನ್ನು ಮಧುರವೂ, ಪ್ರಿಯವೂ, ಮೋಹಕವೂ ಆದ ಸತಿ-ಪತಿಯರ ಸುಂದರ ಸಂವಾದದ ಹೂತೋಟದ ಮೂಲಕ ನಡೆಯಿಸಿಕೊಂಡು ಹೋಗುತ್ತಾನೆ ಮುದ್ದಣ. ನಾವು ಇಂದ್ರನ ನಂದನದಲ್ಲಿ ನಡೆದು ಹೋಗುತ್ತಿಲ್ಲವಷ್ಟೇ ಎಂದು ವಿಸ್ಮಯಮೂಕರಾಗುವಷ್ಟು ದಿವ್ಯವಾಗಿದೆ ಇಲ್ಲಿನ ಸೊಗಸು. ನಮ್ಮ ಪ್ರತಿನಿಧಿಯಾಗಿರುವ ಮಾತಿನ ಮಲ್ಲಿ ಮನೋರಮೆಯ ಮಾತಿನ ಚೆಲುವು ಚೆಲ್ಲಾಟಗಳೂ, ಅದಕ್ಕೆ ಕವಿ ಮುದ್ದಣ ಕೊಡುವ ಮಾರುತ್ತರದ ಅಂದ ಚೆಂದಗಳೂ ಕೊನೆತನಕವೂ ನಮ್ಮ ಚೇತನವನ್ನು ಜಾಗೃತ

---

9. ಪಂಡಿತ ಮಹಾದೇವ ಪ್ರಭಾಕರ ಪೂಜಾರರು "ಮುದ್ದಣ" (ಬೆ. ಸೆ. ಕಾ. ಪ್ರಕಟಿತ) ಗ್ರಂಥದಲ್ಲಿ ಬರೆದ "ಶ್ರೀರಾಮಪಟ್ಟಾಭಿಷೇಕ" ಲೇಖನದಿಂದ.

1. ಟಿ. ಎಸ್. ಶ್ಯಾಮರಾವ್ ಎಂ. ಎ. ಇವರ "ಮುದ್ದಣ" ಗ್ರಂಥದಿಂದ (ಮೈ. ವಿ. ಪ್ರ. ಪು. ಮಾ.).

ವಾಗಿಡುತ್ತವೆ. ಮುಕ್ತಾಯವಂತೂ ಅತುಲನೀಯವಾದುದು. ಆ ತನಕ ಸಾಹಿತ್ಯಲೋಕ ಕಂಡು ಕೇಳದ್ದು!

"ನಿಜವಾಗಿಯೂ ಮುದ್ದಣ ಮನೋರಮಾ ಸಂವಾದರೂಪದ ಹಂಚಿಕೆಯಲ್ಲಿ ಕಥೆಯನ್ನು ಹರಿಯಿಸಿಕೊಂಡು ಹೋಗುವ ಚಿತ್ತವು ಆತನಿಗೆ ಸರಸ್ವತಿಯ ವರದಹಸ್ತದಿಂದಲೇ ಒದಗಿರಬೇಕು. ಆದರೆ ಮೇಲಿನ ಸಂದೇಶ ಬಂದಮಾತ್ರಕ್ಕೆ ಯಾಚಿತಫಲ ಸಂದಂತಾಗಲಿಲ್ಲ. ಹಾಳತವಾದ ಬಣ್ಣಬಣ್ಣದ ವಿವರಗಳನ್ನು ಆರಿಸಿತಂದು ಎಲ್ಲವನ್ನೂ ಹವಣಾಗಿ ಪೋಣಿಸಿ ದಿವ್ಯಪ್ರೇರಣೆಯನ್ನು ಸಮಗ್ರಗೈದಿರುವುದು ಮುದ್ದಣನ ಹೃದಯರಸಿಕತೆ ಸಾಹಿತ್ಯಸತ್ವಗಳಿಗೆ ಸಾಕ್ಷಿ. ಅವನೆಸಗಿರುವ ಈ ಕವಿಸೃಷ್ಟಿಯಲ್ಲ–ಕಲಾಚೋದ್ಯವನ್ನು ಕುರಿತು ನಾವು ಎಷ್ಟು ಕೊಂಡಾಡಿದರೂ ತಡೆಯಿಲ್ಲ; ಕಡೆಯಿಲ್ಲ. ಕನ್ನಡದ ಲೇಖನರಾಶಿಯಲ್ಲಿ ಅದು ಶುದ್ಧನವೀನಮಾರ್ಗ. ವ್ಯಕ್ತಿವಿಶಿಷ್ಟವಾದ ಏಕಮಾರ್ಗ. ಪ್ರತಿಭಾಗಗನದಲ್ಲಿ ಎಲ್ಲಿಯೊ ಮಬ್ಬುಮಬ್ಬಾಗಿ ಮಿಣುಕುತ್ತಿದ್ದ ಒಂದು ವಿಚಿತ್ರ ಸಣ್ಣ ತಾರೆಯ ನೆಲೆಯನ್ನು ಕಂಡುಹಿಡಿದು ಅದರ ಕುರುಹು, ದೂರ, ವರ್ಣ, ವೇಗ, ಅಳತೆ, ತೂಕವೆಲ್ಲವನ್ನೂ ಚೆಚ್ಚರದಿಂದ ಲೆಕ್ಕಿಸಿ ಪಟ್ಟಿಮಾಡಿಟ್ಟಿರುವುದು ಅವನ ಕೊರಳಲ್ಲಿ ಎಂದಿಗೂ ಬಾಡದ ವಿಜಯಮಾಲೆ. . . . ಶೃಂಗಾರ ಹಾಸ್ಯಗಳಲ್ಲಿ ಹೊಚ್ಚಹೊಸ ಚಿಹ್ನೆ, ಹಸನು, ಸಭ್ಯ ಸುರಸತ್ವ, ಬಗೆಬಗೆಯ ಬೆಡಗು, ಸೊಂಪು, ನಿಷ್ಕಳಂಕ ಮೃದುತ್ವ — ಇವು ನಮಗೆ ಬೇಕಾದರೆ ಕನ್ನಡದ ಕವಿವೀಥಿಯಲ್ಲಿ ಮುದ್ದಣನದೊಂದೇ ಅಂಗಡಿ."[7] ಹೀಗೆ ಮೂಲಕಥೆಯನ್ನು ಹಿಡಿದಿಟ್ಟಿರುವ ಮುದ್ದಣ—ಮನೋರಮಾ ಸಂವಾದದ ಸುಂದರವಾದ ಈ "ಚೌಕಟ್ಟು ಶಿವನಾಣೆ ಸುವರ್ಣ."[7] ಓದಿ ದಣಿಯದ, ಕೇಳಿ ತಣಿಯದ, ಕಂಡು ಕಡೆಗಾಣದ ಚೆಲುವಿನ ಈ ವ್ಯಕ್ತರೂಪಕ್ಕೆ ಅಂದು ಎಂದಲ್ಲ ಇಂದು ಕೂಡಾ ಮುದ್ದಣನೊಬ್ಬನಿಗೇ ಶರಣಾಗಬೇಕಾಗಿದೆ.

ಮೇಲೆ ನೋಡಿದಂತೆ ಇಷ್ಟೆಲ್ಲ ನಾವೀನ್ಯಗಳನ್ನು ಪಡೆದಿದೆ ಎಂದೇ ರಾಮಾಶ್ವಮೇಧ ಮುಂದಿನವರಿಗೊಂದು ದಾರಿದೀಪವಾಯಿತು. ಕವಲು ಹಾದಿಯ ಕೈಮರವಾಯಿತು! ಇದನ್ನು ರಚಿಸಿದ ಕವಿ ಹೊಸಗನ್ನಡ ಸಾಹಿತ್ಯದ ಯುಗ ಪ್ರವರ್ತಕನಾದ!

ಹಿರಿಯ ಪಂಡಿತ ವಿಮರ್ಶಕರೊಬ್ಬರು ಇದೆಲ್ಲಕ್ಕಿಂತಲೂ ಹೆಚ್ಚಿನ ವಿಚಾರ

---

7. ಎಸ್. ವಿ. ರಂಗಣ್ಣ ಅವರು ಪ್ರಬುದ್ಧ "ಕರ್ಣಾಟಕದಲ್ಲಿ" ಬರೆದ "ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಎಂಬ ಲೇಖನದಿಂದ.

ವೊಂದನ್ನು ರಾಮಾಶ್ವಮೇಧದಲ್ಲಿ ಕಂಡರು. "ಪೂರ್ವ ಪದ್ಧತಿಯ ನಾಟಕಕ್ಕೆ ಪೂರ್ವರಂಗವಿರುವಂತೆ, ಕವಿ ರಾಮಾಶ್ವಮೇಧಕ್ಕೆ ಈ ಕಥಾಮುಖವನ್ನು ಕಲ್ಪಿಸಿರಬೇಕೆಂದು ತೋರುತ್ತದೆ. ನಾಟಕದೊಳಗಣ ನಾಂದಿಗೆ ಸರಿಯಾಗಿ ಇಲ್ಲಿ ಮಳೆಗಾಲದ ವರ್ಣನೆ; ನಟೀಸೂತ್ರಧಾರರ ಸಂಭಾಷಣೆಗೆ ಪ್ರತಿಯಾಗಿ ಮನೋರಮಾ ಮುದ್ದಣರ ಸಲ್ಲಾಪ; ನಾಟಕದ ಕತೆಯಂತೆ ರಾಮಾಶ್ವಮೇಧ ಕಾವ್ಯವು. ಹೀಗೆ ಎಣಿಸಿದರೆ ನಾಂದಿಯ ಲಕ್ಷಣವೂ ಪ್ರಕೃತದ ವರ್ಷಾಕಾಲದ ವರ್ಣನೆಯಲ್ಲಿಯೂ ಇರಬೇಕಷ್ಟೆ"[2] ಎಂದು ಅದು ಅಲ್ಲಿ ಇರುವುದನ್ನು ಎತ್ತಿ ತೋರಿಸಿಕೊಟ್ಟರು ಅವರು!

ಮುದ್ದಣನು ಎಂದೂ ಶ್ರುತಿಗೆ ಮತಿಯನ್ನು ತಲೆಬಾಗಿಸಿದವನಲ್ಲ. ಆತ ಪರಂಪರೆಯಿಂದ ಬಂದುದೆಂದು ಯಾವುದನ್ನೂ ಕಣ್ಣುಮುಚ್ಚಿ ಒಪ್ಪಿಕೊಳ್ಳಲಿಲ್ಲ. ಅಷ್ಟು ಮಾತ್ರವಲ್ಲ ತನ್ನ ನಿಶಿತಮತಿಗೆ ಒಪ್ಪಿದ—ಅದು ಎಷ್ಟೇ ನವೀನವಾಗಿರಲಿ—ಹಾದಿಯಲ್ಲಿ ಮುಂದುವರಿಯುವುದಕ್ಕೂ, ಒಪ್ಪದುದನ್ನು ಖಂಡಿಸಲಿಕ್ಕೂ ಹಿಂದು ಮುಂದು ನೋಡಿದವನಲ್ಲವೆಂಬುದನ್ನು ಈ ಹಿಂದೆ ಅನೇಕ ವಿಚಾರಗಳಲ್ಲಿ ನಾವು ನೋಡಿದೆವು. ಅದು ಮಾತ್ರವಲ್ಲದೆ ಆತನ ಕಾಲಕ್ಕೆ ಅತ್ಯಂತ ಕೋಲಾಹಲಕಾರಕವಾದ ಇನ್ನೂ ಒಂದೆರಡು ವಿಚಾರಗಳನ್ನು ಆತ ರಾಮಾಶ್ವಮೇಧದಲ್ಲಿ ಪ್ರಕಟಮಾಡಿದ್ದಾನೆ. ರಾಮನೆಂದರೆ ಪರಮಾತ್ಮನ ಪ್ರತ್ಯಕ್ಷ ಅವತಾರ. ಆತ ಮಾಡಿದುದೆಲ್ಲವೂ ಸರಿ. ಅದರಲ್ಲಿ ತಪ್ಪು ಹುಡುಕುವುದು ನಮ್ಮಂತಹ ಪಾಮರರ ಕೆಲಸವಲ್ಲ. ತಪ್ಪು ಕಂಡವ ನಾಸ್ತಿಕ; ಪಾಷಂಡಿ. ಇಂತಹ ಅಂಧಶ್ರದ್ಧೆಯ ದಿನಗಳಲ್ಲಿ ಮುದ್ದಣ, ರಾಮ ಸೀತೆಯನ್ನು ಅಗಸನ ಮಾತು ಕೇಳಿ ಕಾಡಿಗಟ್ಟುವ ಸಂದರ್ಭದಲ್ಲಿ ಮನೋರಮೆಯ ಬಾಯಿಯಿಂದ 'ಅಪ್ಪೊಡಿನ್ನಾಕಲ್ಲೆರ್ದೆಯಂ ರಾಮನೊ ಭೀಮನೊ? ಏನ್?', 'ಏಂ ತಾನೆ ತಲೆವೊಯ್ದುಂ ಮರುಗಿದನೆ', 'ಏಂ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ?' ಎಂದು ಆಡಿಸಿ ಕ್ರಾಂತಿಯ ಕಹಳೆಯೂದಿದ. ಆದರೂ ಅಲ್ಲಿ ಸಂಸ್ಕೃತಿಯ ಸಯವಿದೆ; ಕಲೆಯ ಮಿರುಗಿದೆ. ಇದು ಮಾತ್ರವಲ್ಲ ಆತನ ಕಾವ್ಯದ ಕೊನೆಯ ವಿನೂತನವೆನಿಸುವ ಕಂದ ಪದ್ಯವೂ ನಮ್ಮನ್ನು ಬೆರಗುಗೊಳಿಸುತ್ತಿಲ್ಲವೇ?

---

2. ಪಂಡಿತ ಮುಳಿಯ ತಿಮ್ಮಪ್ಪಯ್ಯ ಅವರು ಜಯಕರ್ನಾಟಕದಲ್ಲಿ ಬರೆದ "ಮುದ್ದಣನ ಜಾಣ್ಮೆ" ಎಂಬ ಲೇಖನದಿಂದ.

'ಧರೆಯರಿಯೆ ಜೀವರಾಶಿಗೆ ।
ಪಿರಿಯಂ ನರನಾದಮಾದನಾತ್ಮಂ ತನ್ನೊಳ್ ॥
ದೊರೆಕೊಂಡಿರ್ಪಿನಮಂತದು ।
ಪರಿನಿರ್ಮಲಮಾಗೆ ಪೆರ್ಮೆಯಿರ್ಮೆಯ್ವಡೆಗುಂ' ॥

ಪುರುಷಸಾಹಸಕ್ಕೆ ಪ್ರೇರಕವಾದ ಈ ಕಂದ ಪದ್ಯ ಮಾನವನ ಮೇಲ್ಮೆಯನ್ನೇ ಎತ್ತಿ ಹಾಡುತ್ತಿದೆ ತಾನೇ! ಮಾನವ್ಯದ ಪರಿಪೂರ್ಣತೆಯೇ, ಪರಿಶುದ್ಧತೆಯೇ ದೇವತ್ವ ಎಂದು ಧ್ವನಿಸುತ್ತಿಲ್ಲವೆ ಆ ಪದ್ಯ? ಪರಮ ಆತ್ಮನೇ ಪರಮಾತ್ಮ ಎಂಬ ಅರ್ಥ ಹೊರಡುತ್ತಿಲ್ಲವೇ ಅಲ್ಲಿ!

ಪದ್ಮಪುರಾಣದ ಶೇಷರಾಮಾಯಣವೇ ರಾಮಾಶ್ವಮೇಧದ ಕಥಾವಸ್ತುವಾಗಿದೆ. ಆದರೂ ಇದು ನಿರೂಪಿತವಾದುದು "ಕಲಿಮಲದ ದೋಷಸಿಂಧುವನುತ್ತರಿಪಡಾಯಾಸವಿಲ್ಲದ ಪಥ"[10] ಎಂದಲ್ಲ. ಮತ್ತೇಕೆ? 'ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿಂ' ಬೇಸತ್ತ ಮುದ್ದಿನ ಮಡದಿಯ ಮನದ ಬೇಸರ ಕಳೆಯಲೆಂದು! ಮನೋರಮೆಯ ಮನರಂಜಿಸಲೆಂದು! ಇದು ಪುರಾಣದ ಪುಣ್ಯಕಥೆಯೇನೋ ನಿಜ. ಆದರೂ ಇಲ್ಲಿ 'ನಲ್ಗತೆ' ಮಾತ್ರ! ಈ ಕಾವ್ಯವನ್ನು ಓದಬೇಕಾದರೆ, ಕೇಳಬೇಕಾದರೆ "ಕಬ್ಬಿನೊಳು ರಸವನೆ ಸವಿವ ಗಜದಂತೆ ಭಕ್ತಿಯ ತೆರನ ತಿಳಿದಾಚರಿಸಬೇಕೆಂದರಿದವರು ಲಾಲಿಪುದು"[11] ಎಂಬ ಕಟ್ಟುನಿಟ್ಟುಗಳಿಲ್ಲ.

"ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ, ಪದವಿಟ್ಟಳಿಪದೊಂದಗ್ಗಳಿಕೆ, ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ"[12] ಎಂಬ ಹೆಮ್ಮೆ ಹೆಗ್ಗಳಿಕೆಗಳಿಲ್ಲ ಇಲ್ಲಿ. "ರತ್ನಪರೀಕ್ಷಕನಾಂ ಕೃತಿರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾರತ್ನಮುಮಂ ರನ್ನನ ಕೃತಿರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ"[13] ಎಂಬ ಹಮ್ಮು ಬಿಮ್ಮುಗಳಿಲ್ಲ ಮುದ್ದಣನಲ್ಲಿ. "ಪರರ ಬಗೆ ಪರರುಕ್ತಿ ಪರರುತ್ಕರುಷ ಪರರುನ್ನತಿಯ ಕೃತಿಯಪಹರಣೆ ಪರರುಪಮಾನ ಪರರೊಡ್ಡವದ ಪರುಟವದ ಹರಹುಹೊಗದಗ್ಗಳಿಕೆ ಪದಸಂಚರಣೆಯಲಿ ಲಿಪಿ ತಿರುಗಿ ನೋಡದ ಬಿರುದು ಬೇರೆ"[14] ಎಂಬ ಸ್ವಪ್ರಶಂಸಾಲಾಪನೆಯೂ ಇಲ್ಲಿಲ್ಲ. "ಮುನ್ನಿನ ಕಬ್ಬಮನೆಲ್ಲ

---

10. ಚಾಟುವಿಠಲನಾಥನ ಭಾಗವತದಿಂದ.
11. ಚಾಮರಸನ ಪ್ರಭುಲಿಂಗ ಲೀಲೆಯಿಂದ.
12. ಕುಮಾರವ್ಯಾಸನ ಗದುಗು ಭಾರತದಿಂದ.
13. ರನ್ನನ ಗದಾಯುದ್ಧದಿಂದ.
14. ಕುಮಾರ ವಾಲ್ಮೀಕಿಯ ತೊರವೆ ರಾಮಾಯಣದಿಂದ.

ಮಿಕ್ಕಿ ಮೆಟ್ಟಿದುವು"[15] ಎಂಬ ಅಭಿಮಾನಾತಿರೇಕತೆಗೂ ಇಲ್ಲಿ ಇಂಬಿಲ್ಲ. "ಚಂದ್ರನಂತೆನ್ನ ಕಾವ್ಯದ ರಸಂ ಸುಮನಸರ್ಗೆ ಇಷ್ಟಮಾಗದೆ ಮಾಣದಿನ್ನಾವ ನಾದೊಡಂ ಕಷ್ಟಮುಂ ಬಗೆವವಂ ಚೋರಂಗೆ ವಿರಹಿಗಂ ದೃಷ್ಟಾಂತವಾಗಿ ಸಲ್ವಂ"[16] ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು, ಆ ಮೇಲೆಯೂ ವಿಮರ್ಶಕರಾರಾದರೂ ಬಂದಾರೊ ಎಂದು ಹೆದರಿ ಅವರು ಬರುವ ಹಾದಿ ಯಲ್ಲೇ ನಖವೆತ್ತಿ ಕಾದಿರುವ ಮನೋಭಾವಕ್ಕೂ ಇಲ್ಲಿ ಎಡೆಯಿಲ್ಲ. ಅದು ಬಿಟ್ಟು ಮನೋರಮೆ ನಿನ್ನ ಈ ಕೃತಿ 'ನಾಡೊಳೆಲ್ಲರ್ಗಂ' ಮೆಚ್ಚುಗೆಯಾದೀತೆಂದು ಹೇಳಿದಾಗ, ಈ ಮಾತನ್ನು ಮಡದಿ 'ಎನ್ನೊಳೊಂದಭಿಮಾನದಿನಿಂತುಸಿರ್ವ'ಳೋ ಎಂದು ಸಂದೇಹ ಬಂದಿದೆ ಮುದ್ದಣನಿಗೆ! ನಾಡಜನರ ಮೆಚ್ಚುಗೆ ಆತನ ಚರಮ ಗುರಿಯೂ ಅಲ್ಲ. ಮತ್ತಾವುದು ಆತನ ಇಚ್ಛೆ? ಬೇರಾವುದರಿಂದ ಆತನಿಗೆ ಆನಂದ? ಇದನ್ನು ಆತನೇ ಮೆಚ್ಚಿನ ಮಡದಿಯೊಡನೆ ಮನಬಿಚ್ಚಿ ಹೇಳುತ್ತಿದ್ದಾನೆ 'ಎಂತುಂ ನಿನಗೆ ಸೊಗಸಾಯ್ತುಲೇ! ಇದುವೆ ಪರಮಾನಂದಮೆನಗೆ.' ಎಂತಹ ಸರಳವಾದ ಬಗೆ! ನಾಡಜನರು ಮೆಚ್ಚುತ್ತಾರೊ ಮೆಚ್ಚಲಿ, ಸಂತೋಷ. ಆದರೆ ಆತನಿಗೆ ಪರಮಾನಂದವಿರುವುದು ಮುದ್ದಿನ ಮಡದಿ ಮನೋರಮೆಯ ಮೆಚ್ಚಿಗೆ ಯಲ್ಲಿ! ಪರಮತೃಪ್ತಿ ಅದರಿಂದಲೇ!

ಇಲ್ಲಿ ಕವಿ ಪೀಠದಲ್ಲಿ ಕುಳಿತು ಕಿರಿಯರಿಗೆ ಉಪದೇಶ ಹೇಳುವ ಗುರು ವಾಗಿಲ್ಲ. "ಪಾಪಮಿದು ಪುಣ್ಯಮಿದು ಹಿತರೂಪಮಿದಹಿತಪ್ರಕಾರಮಿದು"[17] ಎಂದು ನೀತಿಹೇಳಿ ಸಮಾಜವನ್ನು ತಿದ್ದುವ ಆಚಾರ್ಯನಾಗಿಲ್ಲ. ವೇದಿಕೆಯ ಮೇಲೆ ನಿಂತು ಪಾಂಡಿತ್ಯ ಪ್ರದರ್ಶನ ಮಾಡಿ ಜನರನ್ನು ದಂಗುಗೊಳಿಸಲೆಳಸುವ ರಸವಿಹೀನ ವಿದ್ವಾಂಸನೂ ಆಗಿಲ್ಲ. ಕೆಲವೆಡೆ ಮುದ್ದಣ ಕವಿಸಹಜವಾದ ಪಾಂಡಿತ್ಯ ಪ್ರದರ್ಶನಕ್ಕೆ ಹೊರಟಾಗ ಶ್ರೋತೃ ಮನೋರಮೆಯ ವಿಮರ್ಶೆ ಚಾಟಿಯೇಟಿನಂತೆ ಬೀಳುತ್ತಿದೆ. ಆಗ ಈ ಸಾಮಾನ್ಯ ಶ್ರೋತೃ ತನ್ನಂತಹ ಕಬ್ಬಿಗರ ಬಲ್ಲಹನನ್ನು ತಿದ್ದುವ ದಾರ್ಢ್ಯ ತೋರುತ್ತಿದ್ದಾಳಲ್ಲಾ ಎಂದು ಕವಿ ಮುನಿದು ಬಿದ್ದಿಲ್ಲ. ಬದಲು ಪಾಂಡಿತ್ಯಕ್ಕೆ ಮೆರುಗು ಕೊಡುವಂತಹ ವಿನಯ ದಿಂದ ಸರಿಕಂಡಲ್ಲಿ ಆ ವಿಮರ್ಶೆಯನ್ನು ಅಂಗೀಕರಿಸಿ ತಿದ್ದಿಕೊಂಡು ಮುಂದೆ

---

15. ಪಂಪನ ವಿಕ್ರಮಾರ್ಜುನ ವಿಜಯದಿಂದ.
16. ಲಕ್ಷ್ಮೀಶನ ಜೈಮಿನಿ ಭಾರತದಿಂದ.
17. ನೃಪತುಂಗನ ಕವಿರಾಜಮಾರ್ಗದಿಂದ.

ಸಾಗಿದ್ದಾನೆ. ಹೀಗೆ ಕವಿ ನಿರಹಂಕಾರಿಯಾಗಿ ಕೈಗೆ ಕೈ ಜೋಡಿಸಿ ಜೊತೆಗೆ ನಡೆಯುತ್ತಿರುವ ಸಂಗಾತಿಯಾಗಿದ್ದಾನೆ. ಇಲ್ಲಿ ಕಾಂತಾಸಮ್ಮಿತಿಯು ಪರಿಪೂರ್ಣತೆ ಪಡೆದು ಧನ್ಯವಾಗಿದೆ. ಅಷ್ಟೇಕೆ ಕನ್ನಡ ಸಾಹಿತ್ಯಲೋಕದಲ್ಲೇ ಮೊತ್ತಮೊದಲು ಕಾಂತಾಸಮ್ಮಿತಿಯು 'ಮೂರ್ತರೂಪವನ್ನೇ' ಪಡೆದು ಮನೋರಮೆಯ ರೂಪಿನಿಂದ ಪ್ರತ್ಯಕ್ಷವಾಗಿದೆ ನಮ್ಮೆದಿರು ಕಾವ್ಯ ರಾಮಾಶ್ವಮೇಧದಲ್ಲಿ! ಹೀಗೆಂದೇ ಕಾವ್ಯವು ನಮ್ಮನ್ನು ಸೂರೆಗೊಂಡು ಹೃದಯವನ್ನು ಸೆರೆಹಿಡಿಯುತ್ತದೆ.

ಮುದ್ದಣನಲ್ಲಿ ಇನಿತು ಗುಣವಿಶೇಷಗಳಿವೆ, ನಾವೀನ್ಯಗಳಿವೆ. ನಿಜ, ಆದರೂ ಈ ಮಂಗಳೂರು ಮಲ್ಲಿಗೆಯನ್ನು ಅವಂತಿಯ ಅರವಿಂದದೊಡನಾಗಲೀ ಆಂಗ್ಲ ಗುಲಾಬಿಯೊಡನಾಗಲೀ ತೂಗಿ ತುಲನೆಮಾಡಿ ನೋಡುವುದು ನಮ್ಮ ಕೆಲಸವಲ್ಲ, ಆ ಗುಣ ಇಲ್ಲಿಲ್ಲ, ಈ ರೀತಿ ಅಲ್ಲಿಲ್ಲ ಎಂದು ಲೆಕ್ಕಿಸಿ ಹೇಳುವುದನ್ನು ನಾವು ಮಾಡುತ್ತಿಲ್ಲ. "ಆಕಾಶದಲ್ಲಿ ಸಾವಿರಾರು ಮೋಡಗಳಿವೆ; ಎಲ್ಲದರಲ್ಲಿಯೂ ಮಳೆಯ ನೀರಿಲ್ಲ; ಒಂದೊಂದು ತನ್ನ ರೂಪಿನಿಂದ, ಒಂದೊಂದು ತನ್ನ ರಂಗಿನಿಂದ ನಮ್ಮನ್ನು ಒಲಿಸಿಕೊಳ್ಳುವುದು. ಹಾಗಾಗಬಾರದೇತಕ್ಕೆ? ಮುದ್ದಣನು ಈಯಬಲ್ಲ ಒಂದು ವಿಶೇಷ ದಾನಕ್ಕೆ ಕೈಯೊಡ್ಡಿ ನಲಿಯೋಣ."[7] ಇಲ್ಲಿ ನಾನು ಈ ಮಾತನ್ನು ಎತ್ತಿಕೊಂಡಾಗ "ಒಂದು" ಎಂಬುದಕ್ಕೆ ಹಲವು ವೈಶಿಷ್ಟ್ಯಗಳು ಮಿಳಿತವಾದ "ಒಂದು" ಎಂಬ ಭಾವವನಿಟ್ಟುಕೊಂಡಿದ್ದೇನೆ. ಏಕೆಂದರೆ ಮುದ್ದಣನಲ್ಲಿ ಒಂದು ಮಾತ್ರವಲ್ಲ ಹಲವಾರು ಚೇತೋಹಾರಿಯಾದ, ಮಾರ್ಗಪ್ರವರ್ತಕವಾದ ನಾವೀನ್ಯಗಳಿವೆ ಎಂಬುದನ್ನು ನಾವು ಈ ಹಿಂದೆಯೇ ನೋಡಿದ್ದೇವೆ.

ಮುದ್ದಣನಿಗೆ ಆರ್ಥಿಕ ದಾರಿದ್ರ್ಯವಿತ್ತು, ಗ್ರಂಥಭಂಡಾರದ ಕೊರತೆಯಿತ್ತು, ವಿದ್ಯಾಭ್ಯಾಸದ ಮಿತಿಯಿತ್ತು, ಒಬ್ಬಿಬ್ಬರನ್ನು ಬಿಟ್ಟು ಸಹೃದಯ ವಿದ್ವಾಂಸರ ಸಹಾಯದ ನ್ಯೂನತೆಯಿತ್ತು, ದೈಹಿಕ ಆರೋಗ್ಯದ ಅಭಾವವಿತ್ತು—ಹೀಗೆ ಈ ಎಲ್ಲಾ ಅಭಾವಗಳ ಮಧ್ಯೆಯೂ ಮೂವತ್ತೊಂದರ ಅಲ್ಪಾಯುಷ್ಯದಲ್ಲೇ ಹೊಳೆದು ಬೆಳಗಿರುವ ಈ ಪ್ರತಿಭೆಯ ರಮ್ಯೋಜ್ಜ್ವಲ ವಿಲಾಸವನ್ನು ಕಾಣುವಾಗ ನಾವು ದಂಗಾಗಿ ಹೋಗುತ್ತೇವೆ. ಇದು ಕಟ್ಟುಕತೆ ಎನ್ನುವಷ್ಟು ಆಶ್ಚರ್ಯ ಚಕಿತರಾಗುತ್ತೇವೆ. ಇದನ್ನು ಭಾವಿಸುವಾಗ ಬೇಡಬೇಡವೆಂದರೂ ಊಹೆ

---

7. ಎಸ್. ವಿ. ರಂಗಣ್ಣ ಅವರು ಪ್ರಬುದ್ಧ ಕರ್ನಾಟಕದಲ್ಲಿ ಬರೆದ "ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಲೇಖನದಿಂದ.

ತನ್ನ ಕೆಲಸವನ್ನು ಮಾಡಿಯೇ ತೀರುತ್ತದೆ. ಮುದ್ದಣನಿಗೆ ಅನುಕೂಲತೆಗಳೆಲ್ಲಾ ಇದ್ದು ಆಯುಷ್ಯವಿರುತ್ತಿದ್ದರೆ ತಾನು "ಕಾಳಿದಾಸ ಷೇಕ್ಸ್‌ಪಿಯರರಿಗಿಂತ ಬಹಳ ಕಡಿಮೆಯಾದವನಲ್ಲ"[18] ಎಂಬುದನ್ನು ಸಿದ್ಧಮಾಡಿ ತೋರಿಸುತ್ತಿದ್ದನೆಂಬುದನ್ನು ನಿಸ್ಸಂದೇಹವಾಗಿ, ನಿರ್ಭಯವಾಗಿ ಹೇಳಬಹುದು. ರಾಮಾಶ್ವಮೇಧದಲ್ಲಿ "ಈ ವರ್ಣನೆಯು ಭಾವನೆಯಲ್ಲಿಯೂ, ಊಹೆಯುಲ್ಲಿಯೂ, ಶೈಲಿಯಲ್ಲಿಯೂ ಸಾಹಿತ್ಯಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು"[18] ಎಂದು ಬೊಟ್ಟಿಟ್ಟು ತೋರಿಸುವಂತಹುದನ್ನು ಅಲ್ಲವಾದರೂ ಆ ಎಲ್ಲೆಯನ್ನು ಮುಟ್ಟಲೆಳಸುವ ದೈತ್ಯಸಾಹಸವನ್ನು ಪ್ರಕಟಪಡಿಸಿದ ಎಷ್ಟೋ ಉದಾಹರಣೆಗಳನ್ನು ಎತ್ತಿ ತೋರಿಸಬಹುದಾಗಿದೆ. ಬೆಳೆಯ ಗುಣ ಮೊಳೆಯಲ್ಲಿ ಎಂಬುದು ಸತ್ಯವಾದರೆ ಮೂವತ್ತರ ಈ ಮೊಳೆಯಲ್ಲಿ ಕಂಡುಬಂದ ಈ ಶಕ್ತಿ, ಈ ಸೌಂದರ್ಯ, ಈ ಸಿರಿ, ಅರುವತ್ತರ ಬೆಳೆಯಲ್ಲಿ ಎಂತಾಗುತ್ತಿತ್ತು ಎಂಬುದನ್ನು ಊಹಿಸುವುದೂ ಅಸಾಧ್ಯವಾಗುತ್ತದೆ. ತನ್ನ ಭವಿಷ್ಯದ ಉಜ್ವಲತೆಯ ಕುರಿತು ಸ್ವತಃ ಕವಿಗೇ ಅನಂತ ವಿಶ್ವಾಸವಿತ್ತು. ಒಮ್ಮೆ ಶ್ರೀ ಬೆನಗಲ್ ರಾಮರಾಯರು ಕವಿಯೊಡನೆ ಆತನ ಕೃತಿಗಳ ಅನ್ಯಕರ್ತೃಕತ್ವದ ಕುರಿತು ಪ್ರಶ್ನಿಸಿದ್ದಾಗ ಆತ ಉತ್ತರಿಸಿದ್ದ "ಏನೋ ಆದುದು ಆಗಿಹೋಯಿತು, ಅದಕ್ಕಾಗಿ ನಾನು ಚಿಂತಿಸುತ್ತಿಲ್ಲ. ಮುಂದೆ ಒಂದಲ್ಲ ಒಂದು ದಿನ ಅದರ ನಿಜಾಂಶವು ಪ್ರಕಟವಾಗಿಯೇ ಆಗುವುದು. ಒಂದು ವೇಳೆ ಆಗದಿದ್ದರೂ ಅದೇನು ದೊಡ್ಡ ಮಾತು? ಅಂಥ ನೂರಾರು ಗ್ರಂಥಗಳನ್ನು ಬರೆಯಬಲ್ಲೆನು"[19] ಎಂದಿದ್ದ. ಎಂದರೇನು? ದೈವಗತಿ ಬೇರಿತ್ತು. ಆ ಭವಿಷ್ಯ ಸತ್ಯವಾಗುವಷ್ಟು ನಾಡು ಭಾಗ್ಯ ಪಡೆದಿರಲಿಲ್ಲ!

"ಅವನ ಅಲ್ಪಾಯುಷಿಯಾದ ಬಾಳಿನಲ್ಲಿ, ದಿನದಿನದ ಜೀವನ ಕಲಹದಲ್ಲಿ ಅವನು ಈ ನೆಲೆಯನ್ನು ಮುಟ್ಟಿ ಮೆರೆದುದು ಸೋಜಿಗವೇ ಸರಿ"[6] ಎಂದು ಪಂಡಿತ ಶ್ರೇಷ್ಠರೂ ಸಾಮಾನ್ಯಜನರೂ ಕೂಡಿಯೇ ಮೂಗಿನ ಮೇಲೆ ಬೆರಳಿಟ್ಟು ಆನಂದಾಶ್ಚರ್ಯಗಳಿಂದ ಮೂಕರಾಗುವಂತೆ ಮಾಡಿದ ಕವಿಯ ಹೆಚ್ಚಳವನ್ನು ಕಂಡು ವಿಧಿ ಕರುಬಿತೊ ಏನೊ! ಅಂದು ೧೯೦೧ನೆಯ ಇಸವಿ ಫೆಬ್ರವರಿ ೧೫ನೇ

---

18. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂ. ಎ. ಇವರು "ಮುದ್ದಣ" (ಸ. ಕಾ. ಕ. ಸ. ಪ್ರ) ದಲ್ಲಿ ಬರೆದ "ಶ್ರೀ ರಾಮಾಶ್ವಮೇಧ" ಎಂಬ ಲೇಖನದಿಂದ.

19. ಬೆನಗಲ್ ರಾಮರಾವ್ ಎಂ. ಎ., ಎಲ್. ಎಲ್ ಬಿ. ಇವರು "ಮುದ್ದಣ" ಗ್ರಂಥದಲ್ಲಿ ಬರೆದ "ಶ್ರೀ ಲಕ್ಷ್ಮೀನಾರಾಯಣ ಕವಿ" ಎಂಬ ಲೇಖನದಿಂದ. (ಬೆ. ಸ. ಕಾ. ಕ. ಸಂ. ಪ್ರ.)

6. ರಂ. ಶ್ರೀ. ಮುಗಳಿಯವರ "ಕನ್ನಡ ಸಾಹಿತ್ಯ ಚರಿತ್ರೆ"ಯಿಂದ.

ಶಾರ್ವರಿ ಸಂ॥ದ ಮಾಘ ಬಹುಳ ೧೨ ಶುಕ್ರವಾರ. ಕವಿಗೆ ಆಗತಾನೇ ೩೧ ವರ್ಷಗಳು ಕಳೆದಿದ್ದುವು. ಅಂದು ನಿರ್ಘೃಣ ವಿಧಿ ತನ್ನ ಕರಾಳ ಕೈಗಳಿಂದ ಕವಿಯನ್ನು ನಮ್ಮ ಮಧ್ಯದಿಂದ ಕಾಣದ ನಾಡಿಗೆ ಎತ್ತಿಕೊಂಡು ಹೋಯಿತು. ಕನ್ನಡದ ಪುಣ್ಯನಿಧಿ ಸೂರೆಹೋಯಿತು! ಬೇನೆ, ಬಡತನ, ಬಳಲಿಕೆಗಳಿಂದ ಬಡವಾಗಿ ಬಾಳೇ ಬೇಸರವಾದ ಜೀವವೊಂದು ಬಿಡುಗಡೆ ಪಡೆಯಿತು!

ಕನ್ನಡ ಸಾಹಿತ್ಯದ ಭಾಗ್ಯಾಕಾಶದ ನವ ಅರುಣೋದಯದಲ್ಲಿ ಉಜ್ವಲವಾಗಿ ಪ್ರಜ್ವಲಿಸಿದ ಈ ಶುಕ್ರನಕ್ಷತ್ರ ಅರೆಗಳಿಗೆಯಲ್ಲಿ ಮರೆಯಾಯಿತು. ಆದರೆ ಅದು ಬೆಳಗಿದ ಬೆಳಕು ಮಾತ್ರ ಮುಂದಿನ ಮಂಗಲಮಯ ಮಹಾಸೂರ್ಯೋದಯಕ್ಕೆ ಪೀಠಿಕೆಯಾಯಿತು. ಹೀಗೆ ನಾಡಿನ ಮುದ್ದುಕವಿ—'ಕಬ್ಬಿಗರ ಬಲ್ಲಹಂ' "ಉಳಿಸಿದನು ಕನ್ನಡದ ಹೆಸರನ್ನು ಕಡೆತನಕ, ಗಳಿಸಿದನು ಸತ್ಕೀರ್ತಿಯನ್ನು ಕವಿಕುಲದೊಳಗೆ, ಕಳಿಸಿದನು ವೀರಮುದ್ದಣನು ನವಕೃತಿಯನ್ನು ಜಗದೊಳಗೆ 'ಜನ್ನಗುದುರೆ.'[19]

ಕೊನೆಯದಾಗಿ ನಾಡಿನ ಇನ್ನೊಬ್ಬ ಹಿರಿಯ ಕವಿ ಮುದ್ದಣನ ಕುರಿತು ಕೊರಳೆತ್ತಿ ಹಾಡಿರುವ ಹಾಡಿನೊಡನೆ ನನ್ನ ಕಿರುದನಿಯನ್ನೂ ಸೇರಿಸುತ್ತೇನೆ—

"ಕರೆನಾಡಿನ ಕನ್ನಡ ಕುವರರ ಕೊಂಡಾಟದ ಬೊಂಬೆಯೆ
ತುಳುಮಲ್ಲಿಗೆ ಬಳ್ಳಿಯೊಳರಳಿದ ಕನ್ನಡದರಳೇ
ಉಡುಪಿಯ ಕೊಳಲೇ ಕವಿರತ್ನಗಳಲಿ ಮುತ್ತಿನ ಹರಳೇ
ತಲೆಬಾಗುವೆ ನಿನಗಣ್ಣಾ ಹೊಸಗನ್ನಡದಣ್ಣಾ".[20]

19. ಅಂಬಿಕಾತನಯದತ್ತರ "ಗರಿ" ಕವನ ಸಂಗ್ರಹದ "ಮುದ್ದಣ" ಕವನದಿಂದ.

20. ಸೇಡಿಯಾಪು ಕೃಷ್ಣಭಟ್ಟರು ಕವಿ ಮುದ್ದಣನ ಕುರಿತು ಬರೆದಿರುವ ಒಂದು ಕವನದಿಂದ.

ಪರಾಮರ್ಶೆಗಾಗಿ